ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಹನಿ ಹನಿ ನೀರಿಗೆ ಬೆಲೆ ಬಂದಾಗ ನೆನಪಾದ ಜಲಯೋಧರು

ಬಿಜೆಪಿಯಿಂದ ರಘುಪತಿ ಭಟ್ ಉಚ್ಚಾಟನೆ 4
ಅರಣ್ಯ ಇಲಾಖೆಗೆ ಹೋಟೆಲ್ ಅಧಿಕಾರಿಗಳಿಂದ ಪತ್ರ
ಒಳನೋಟ ಕುರಿಗಾಹಿಗಳ ಜಗತ್ತಿನಲ್ಲಿ... 6
ಮೋದಿ ವಾಸ್ತವ್ಯ: ₹80 ಲಕ್ಷ ಬಿಲ್ ಬಾಕಿ! 4

5 ಹಂತಗಳ ನಿಖರ ಅಂಕಿ–ಅಂಶ ಬಿಡುಗಡೆ • 50.72 ಕೋಟಿ ಜನರಿಂದ ಹಕ್ಕು ಚಲಾವಣೆ

ಮತದಾನದ ಲೆಕ್ಕ ನೀಡಿದ ಆಯೋಗ

• ಶೆಮಿನ್ ಜಾಯ್

ನವದೆಹಲಿ: ಲೋಕಸಭಾ ಚುನಾವಣೆಯ ಮೊದಲ ಐದು ಹಂತಗಳ ಮತದಾನದ ಸಂದರ್ಭದಲ್ಲಿ ಚಲಾವಣೆ ಆಗಿರುವ ಮತಗಳ ನಿಖರ ಲೆಕ್ಕವನ್ನು ಕೇಂದ್ರ ಚುನಾವಣಾ ಆಯೋಗವು ಶನಿವಾರ ಬಿಡುಗಡೆ ಮಾಡಿದೆ.

ಈ ಅಂಕಿ-ಅಂಶಗಳ ಅನ್ವಯ, ಈ ಐದು ಹಂತಗಳಲ್ಲಿ ಮತದಾನ ಮಾಡಲು ಅರ್ಹರಾಗಿದ್ದ 76.4 ಕೋಟಿ ಮತದಾರರ ಪೈಕಿ 50.72 ಕೋಟಿ, ಅಂದರೆ ಸರಾಸರಿ ಶೇಕಡ 66.39ರಷ್ಟು ಮಂದಿ ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ನಾಲ್ಕನೆಯ ಹಂತದ ವರೆಗೆ ಶೇಕಡ 66.95ರಷ್ಟು ಮಂದಿ ಮತ ಚಲಾಯಿಸಿದ್ದಾರೆ ಎಂದು ಆಯೋಗವು ಈ ಮೊದಲು ಹೇಳಿತ್ತು. ಅಂದರೆ, 67.45 ಕೋಟಿ ಮತದಾರರ ಪೈಕಿ 45.1 ಕೋಟಿ ಮಂದಿ ಮತ ಚಲಾಯಿಸಿದ್ದರು.

427 ಕ್ಷೇತ್ರಗಳ ಪೈಕಿ 97 ಕ್ಷೇತ್ರಗಳಲ್ಲಿ (ಸೂರತ್ ಹೊರತುಪಡಿಸಿ, ಇಲ್ಲಿ ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ) ಮತದಾರರ ಸಂಖ್ಯೆ 20 ಲಕ್ಷಕ್ಕಿಂತ ಹೆಚ್ಚಿದೆ ಎಂಬುದನ್ನು ಅಂಕಿ-ಅಂಶಗಳು ಹೇಳಿವೆ.

9ನೇ ಪುಟ ನೋಡಿ

ಲೋಕಸಭಾ ಚುನಾವಣೆ: ಚಲಾವಣೆಯಾದ ಮತಗಳು

ಹಂತ	ಮತದಾರರ ಒಟ್ಟು ಸಂಖ್ಯೆ	ಚಲಾವಣೆಯಾದ ಮತಗಳು	ಪ್ರಮಾಣ (%)
ಒಂದು	16,63,86,344	11,00,52,103	66.14
ಎರಡು	15,86,45,484	10,58,30,572	66.71
ಮೂರು	17,24,04,907	11,32,34,676	65.68
ನಾಲ್ಕು	17,70,75,629	12,24,69,319	69.16
ಐದು	8,95,67,973	5,57,10,618	62.20

ಅತಿಹೆಚ್ಚು ಮತದಾರರು ಇರುವ ಕ್ಷೇತ್ರಗಳು

ಮಲ್ಕಾಜ್ಗಿರಿ	37,79,596
ಬೆಂಗಳೂರು ಉತ್ತರ	32,14,496
ಗಾಜಿಯಾಬಾದ್	29,45,487

ಅತಿಹೆಚ್ಚು ಸಂಖ್ಯೆಯಲ್ಲಿ ಮತದಾನ ಆಗಿರುವ ಕ್ಷೇತ್ರಗಳು

ಧುಬ್ರಿ	24,50,041
ಮಲ್ಕಾಜ್ಗಿರಿ	19,19,131
ಬೆಂ.ಗ್ರಾಮಾಂತರ	19,14030

‘ಮಾಹಿತಿ ಬಿಡುಗಡೆ ವಿಳಂಬ ಆಗಿಲ್ಲ’

ನವದೆಹಲಿ (ಪಿಟಿಐ): ಚುನಾವಣಾ ಪ್ರಕ್ರಿಯೆಯನ್ನು ಹಾಳುಮಾಡಲು ಕುಚೋದ್ಯದ ಸಂಚು ನಡೆದಿದೆ ಎಂದು ಚುನಾವಣಾ ಆಯೋಗವು ಹೇಳಿದೆ. ಚುನಾವಣಾ ಪ್ರಕ್ರಿಯೆ ಕುರಿತು ಸುಳ್ಳು ಸಂಕಥನ ಸೃಷ್ಟಿಸುವ ಕೆಲಸವನ್ನು ನಿರ್ದಿಷ್ಟ ಸ್ವರೂಪದಲ್ಲಿ ನಡೆಸಲಾಗುತ್ತಿದೆ ಎಂದು ಅದು ಆರೋಪಿಸಿದೆ.

ಚಲಾವಣೆಯಾದ ಮತಗಳ ಸಂಖ್ಯೆಯನ್ನು ಬದಲಾಯಿಸುವುದಕ್ಕೆ ಅವಕಾಶವೇ ಇಲ್ಲ ಎಂದು ಅದು ಸ್ಪಷ್ಟಪಡಿಸಿದೆ. ಮೊದಲ ಐದು ಹಂತಗಳ ಮತದಾನದ ವೇಳೆ ಚಲಾವಣೆ ಆಗಿರುವ ಮತಗಳ ಲೆಕ್ಕ ನೀಡುವ ಜೊತೆಯಲ್ಲೇ ಆಯೋಗವು ಈ ಮಾತುಗಳನ್ನು ಹೇಳಿದೆ.

ಪ್ರತಿ ಮತಗಟ್ಟೆಯಲ್ಲಿ ಚಲಾವಣೆಯಾದ ಮತಗಳ ಸಂಖ್ಯೆಯನ್ನು ಪ್ರಕಟಿಸುವಂತೆ ಆಯೋಗಕ್ಕೆ ಸೂಚಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದ ಮಾರನೆಯ ದಿನವೇ ಆಯೋಗವು ಈ ಲೆಕ್ಕವನ್ನು ತಾನಾಗಿಯೇ ನೀಡಿದೆ.

9ನೇ ಪುಟ ನೋಡಿ

6ನೇ ಹಂತ: ಶೇ 61.20ರಷ್ಟು ಮತದಾನ

ನವದೆಹಲಿ: ಲೋಕಸಭಾ ಚುನಾವಣೆಯ 6ನೇ ಹಂತದ ಮತದಾನ ಶನಿವಾರ ಮುಕ್ತಾಯವಾಗಿದ್ದು, ರಾತ್ರಿ 12 ಗಂಟೆಗೆ ಲಭ್ಯವಾದ ಮಾಹಿತಿ ಪ್ರಕಾರ ಒಟ್ಟು ಶೇ 61.20ರಷ್ಟು ಮತದಾನ ಆಗಿದೆ. ದೇಶದ ಏಳು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ 58 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ನಡೆಯಿತು. ಹಿಂಸಾಚಾರದ ವರದಿಗಳ ನಡುವೆಯೂ ಪಶ್ಚಿಮ ಬಂಗಾಳದ ಲೋಕಸಭಾ ಕ್ಷೇತ್ರಗಳಲ್ಲಿ ಶೇ 79.78ರಷ್ಟು ಮತದಾನವಾಗಿದೆ. ಜಮ್ಮು ಮತ್ತು ಕಾಶ್ಮೀರದ ಅನಂತನಾಗ್– ರಜೌರಿ ಲೋಕಸಭಾ ಕ್ಷೇತ್ರದಲ್ಲಿ ಶೇ 54.46ರಷ್ಟು ಮತದಾನ ಆಗಿದ್ದು, ಹಲವು ದಶಕಗಳಲ್ಲಿ ನಡೆದ ಅತ್ಯಧಿಕ ಮತದಾನ ಪ್ರಮಾಣ ಇದಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಸೇರಿದಂತೆ ಹಲವು ಪ್ರಮುಖರು ತಮ್ಮ ಮತದಾನದ ಹಕ್ಕನ್ನು ದೆಹಲಿಯಲ್ಲಿ ಚಲಾಯಿಸಿದರು.

ಚೆನ್ನೈನಲ್ಲಿ ಐಪಿಎಲ್ ಫೈನಲ್ ಇಂದು

ಕೋಲ್ಕತ್ತ–ಹೈದರಾಬಾದ್ ಹಣಾಹಣಿ

ಚೆನ್ನೈ: ಶ್ರೇಯಸ್ ಅಯ್ಯರ್ ನಾಯಕತ್ವದ ಕೋಲ್ಕತ್ತ ನೈಟ್‌ರೈಡರ್ಸ್ ಮತ್ತು ಪ್ಯಾಟ್ ಕಮಿನ್ಸ್ ಮುನ್ನಡೆಸುತ್ತಿರುವ ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಭಾನುವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.



ಶ್ರೇಯಸ್ ಅಯ್ಯರ್ ಪಿಟಿಐ ಚಿತ್ರ ಪ್ಯಾಟ್ ಕಮಿನ್ಸ್

ಬಲಾಬಲ
ಪಂದ್ಯಗಳು 27

ಜಯ	
ನೈಟ್‌ರೈಡರ್ಸ್	18
ಸನ್‌ರೈಸರ್ಸ್	9

ಸಾಧನೆಗಳು

ಕೋಲ್ಕತ್ತ ನೈಟ್ ರೈಡರ್ಸ್		ಸನ್‌ರೈಸರ್ಸ್ ಹೈದರಾಬಾದ್	
ಚಾಂಪಿಯನ್	2012, 2014	ಚಾಂಪಿಯನ್	2016
ರನ್ನರ್ಸ್ ಅಪ್	2021	ರನ್ನರ್ಸ್ ಅಪ್	2018

ಪಂದ್ಯ ಆರಂಭ ರಾತ್ರಿ 7.30
ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ರಾಜ್‌ಕೋಟ್ ಅಗ್ನಿ ದುರಂತ: 27 ಸಾವು

ರಾಜ್‌ಕೋಟ್ (ಗುಜರಾತ್, ಪಿಟಿಐ): ಇಲ್ಲಿನ ಮನರಂಜನಾ ಕೇಂದ್ರ ‘ಟಿಆರ್‌ಪಿ ಗೇಮ್ ಝೋನ್’ನಲ್ಲಿ ಶನಿವಾರ ಸಂಜೆ ಸಂಭವಿಸಿದ ಅಗ್ನಿ ದುರಂತದಲ್ಲಿ ನಾಲ್ವರು ಮಕ್ಕಳು ಸೇರಿದಂತೆ 27 ಮಂದಿ ಸಾವಿಗೀಡಾಗಿದ್ದಾರೆ.

ವಿಚಾರಣೆ ನಡೆಸಲು ಮನರಂಜನಾ ಕೇಂದ್ರದ ಮಾಲೀಕ ಮತ್ತು ವ್ಯವಸ್ಥಾಪಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅವಘಡದ ತನಿಖೆಗಾಗಿ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡವನ್ನು ರಚಿಸಿದೆ.

‘ಆಟದ ಚಟುವಟಿಕೆಗಳಿಗೆ ನಿರ್ಮಿಸಲಾಗಿದ್ದ ಫೈಬರ್ ಗೊಮ್ಮಟದಲ್ಲಿ ಸಂಜೆ ಸುಮಾರು 4.30 ಗಂಟೆಗೆ ಬೆಂಕಿ ಹೊತ್ತಿಕೊಂಡಿತು. ಬೆಂಕಿ ಕಾರಣಕ್ಕೆ ಕಟ್ಟಡ ಕುಸಿಯಿತು. ಈ ವೇಳೆ ಮಕ್ಕಳು ಸೇರಿ ಹಲವರು ಆ ಸ್ಥಳದಲ್ಲಿದ್ದರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸ್ಥಳದಲ್ಲಿ ರಕ್ಷಣಾ ಕಾರ್ಯಗಳು ಭರದಿಂದ ಸಾಗಿವೆ. ಗುರುತು ಪತ್ತೆ ಮಾಡಲು ಸಾಧ್ಯವಾಗದೆ ಇರುವಷ್ಟು ಮೃತದೇಹಗಳು ಸುಟ್ಟು ಕರಕಲು ಆಗಿವೆ.

ಗುಜರಾತ್‌ನ ರಾಜ್‌ಕೋಟ್‌ನ ಗೇಮ್ ಝೋನ್‌ನಲ್ಲಿ ಶನಿವಾರ ಸಂಜೆ ಅಗ್ನಿ ದುರಂತ ಸಂಭವಿಸಿದ್ದು, ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು – ಪಿಟಿಐ ಚಿತ್ರ

ಬೇಸಿಗೆ ರಜೆ ಕಾರಣ ಗೇಮ್‌ಝೋನ್‌ನಲ್ಲಿ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಹೀಗಾಗಿ, ಸಾವಿನಸಂಖ್ಯೆ ಹೆಚ್ಚಾಗುವ ಸಾಧ್ಯತೆಯಿದೆ’ ಎಂದಿದ್ದಾರೆ.

’ಅಗ್ನಿ ಅವಘಡ ಸಂಭವಿಸಿದ ಸ್ಥಳದಲ್ಲಿ ಕೂಡಲೇ ರಕ್ಷಣಾ ಮತ್ತು ಪರಿಹಾರ ಕಾರ್ಯ ಕೈಗೊಳ್ಳುವಂತೆ ನಗರಾಡಳಿತಕ್ಕೆ ಸೂಚನೆ ನೀಡಲಾಗಿದೆ. ಗಾಯಾಳುಗಳಿಗೆ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ದುರ್ಘಟನೆ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಲಾಕಪ್ ಡೆತ್ ಆರೋಪ: ಉದ್ರಿಕ್ತ ಗುಂಪಿನಿಂದ ಚನ್ನಗಿರಿ ಠಾಣೆಯ ಮೇಲೆ ದಾಳಿ

ಪೊಲೀಸ್ ವಶದಲ್ಲಿ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮಟ್ಕಾ ಜೂಜು ಆಡಿಸುತ್ತಿದ್ದ ದೂರಿನ ಮೇರೆಗೆ ಜಿಲ್ಲೆಯ ಚನ್ನಗಿರಿ ಪೊಲೀಸರು ವಿಚಾರಣೆಗಾಗಿ ಠಾಣೆಗೆ ಕರೆದೊಯ್ದ ಸಂದರ್ಭದಲ್ಲಿ ಸ್ಥಳೀಯ ನಿವಾಸಿ ಆದಿಲ್

ಆದಿಲ್

ಖಲಿಂ ಉಲ್ಲಾ (32) ಎಂಬವರು ಮೃತಪಟ್ಟಿದ್ದು, ಇದೊಂದು ‘ಲಾಕಪ್ ಡೆತ್’ ಎಂದು ಸಂಬಂಧಿಗಳು ದೂರಿದ್ದರಿಂದ ನ್ಯಾಯಾಧೀಶರ ಸಮ್ಮುಖದಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

‘ಆದಿಲ್ ಅವರದ್ದು ಸಹಜ ಸಾವಲ್ಲ. ಬದಲಿಗೆ, ಲಾಕಪ್ ಡೆತ್’ ಎಂದು ಆರೋಪಿಸಿ ಮೃತನ ಕುಟುಂಬ ಸದಸ್ಯರು, ಸಂಬಂಧಿಕರು ಹಾಗೂ ನೆರೆಹೊರೆಯವರು ಶುಕ್ರವಾರ ತಡರಾತ್ರಿ ಚನ್ನಗಿರಿ ಪೊಲೀಸ್ ಠಾಣೆ ಎದುರು ಅಪಾರ ಸಂಖ್ಯೆಯಲ್ಲಿ ಜಮಾಯಿಸಿ ಪ್ರತಿಭಟನೆ ನಡೆಸಿದರು. ಈ ವೇಳೆ ಉದ್ರಿಕ್ತರ ಗುಂಪು ಠಾಣೆಯ ಮೇಲೆ ಕಲ್ಲು ತೂರಾಟ ನಡೆಸಿದ್ದಲ್ಲದೇ, ಠಾಣೆ ಎದುರು ನಿಲ್ಲಿಸಿದ್ದ 5 ಪೊಲೀಸ್ ವಾಹನಗಳನ್ನು ಜಖಂಗೊಳಿಸಿದರು.

ಈ ಸಂದರ್ಭ ಸ್ಥಳದಲ್ಲಿದ್ದ 11 ಜನ ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದಾರೆ. ಪೊಲೀಸರು ಉದ್ರಿಕ್ತರನ್ನು



ದಾವಣಗೆರೆ ಜಿಲ್ಲೆ ಚನ್ನಗಿರಿ ಪೊಲೀಸ್ ಠಾಣೆಯ ಎದುರು ಉದ್ರಿಕ್ತರು ಶುಕ್ರವಾರ ತಡರಾತ್ರಿ ವಾಹನವನ್ನು ಉರುಳಿಸಿದರು

ಚದುರಿಸಲು ಲಾಠಿಪ್ರಹಾರ ನಡೆಸಿದರು. ಆದರೂ ಪರಿಸ್ಥಿತಿ ನಿಯಂತ್ರಣಕ್ಕೆ ಬಾರದ್ದರಿಂದ ಅಶ್ರುವಾಯು ಸಿಡಿಸಿದರು.

ಪ್ರಕರಣ ಗಂಭೀರ ಸ್ವರೂಪ ಪಡೆದಿದ್ದರಿಂದ ಚನ್ನಗಿರಿ ಆಸ್ಪತ್ರೆಯ ಬದಲಿಗೆ, ದಾವಣಗೆರೆ ಜಿಲ್ಲಾ ಆಸ್ಪತ್ರೆಯಲ್ಲಿ ಶನಿವಾರ ಮಧ್ಯಾಹ್ನ ಆದಿಲ್ ಅವರ ಮರಣೋತ್ತರ ಪರೀಕ್ಷೆ ನಡೆಸಲು ಸೂಚಿಸಲಾಯಿತು.

5ನೇ ಪುಟ ನೋಡಿ

ಡಿವೈಎಸ್ಪಿ, ಪಿ.ಐ ಅಮಾನತು– ಸಿ.ಎಂ

ಮೈಸೂರು: ‘ದಾವಣಗೆರೆ ಜಿಲ್ಲೆಯ ಚನ್ನಗಿರಿಯಲ್ಲಿ ಪೊಲೀಸರ ವಶದಲ್ಲಿದ್ದ ವ್ಯಕ್ತಿ ಮೂರ್ಛೆ ರೋಗದಿಂದ ಮೃತಪಟ್ಟಿದ್ದಾನೆಯೇ ಹೊರತು, ಅದು ಲಾಕಪ್ ಡೆತ್ ಅಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

‘ಪೊಲೀಸರು ಆ ವ್ಯಕ್ತಿಯನ್ನು ಎಫ್‌ಐಆರ್ ಇಲ್ಲದೆ ಠಾಣೆಗೆ ಕರೆ ತಂದಿದ್ದು ತಪ್ಪು. ಅದಕ್ಕಾಗಿ ಸಂಬಂಧಿಸಿದ ಇನ್‌ಸ್ಪೆಕ್ಟರ್ ಮತ್ತು ಡಿವೈಎಸ್ಪಿಯನ್ನು ಅಮಾನತುಗೊಳಿಸುವಂತೆ ಆದೇಶಿಸಿದ್ದೇನೆ. ಆ ಘಟನೆಯು ಲಾಕಪ್ ಡೆತ್ ಅಲ್ಲ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾಗ ಸತ್ತಿದ್ದಾನೆ. ಇದೆಲ್ಲವೂ ತನಿಖೆ ಆಗಬೇಕಾಗಿದೆ’ ಎಂದರು.

ಪ್ರಧಾನಿ ವಿರುದ್ಧ ದೂರು ದಾಖಲು

ಬೆಂಗಳೂರು: ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಅದು ದೇಶದ ಜನರ ಸಂಪತ್ತನ್ನು ಮುಸ್ಲಿಮರಿಗೆ ಮರು ಹಂಚಿಕೆ ಮಾಡುತ್ತದೆ’ ಎಂಬ ಪ್ರಚೋದನಾಕಾರಿ ಮತ್ತು ದ್ವೇಷಪೂರಿತ ಚುನಾವಣಾ ಭಾಷಣ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಜನಪ್ರತಿನಿಧಿಗಳ ವಿಶೇಷ (ಮ್ಯಾಜಿಸ್ಟ್ರೇಟ್) ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಾಗಿದೆ.

4ನೇ ಪುಟ ನೋಡಿ

ಒಳಪುಟಗಳಲ್ಲಿ

ಆನ್‌ಲೈನ್: ಮಾವು ಮಾರಾಟ 8
ಮಂಜುನಾಥನ ದರ್ಶನ ಪಡೆದ ಸಿ.ಎಂ 4

ಚಿನಕುರುಳಿ

ಪ್ರಕಾಶ್ ಶೆಟ್ಟಿ

ನಗರ, ಗ್ರಾಮಾಂತರ ಜಿಲ್ಲೆ: ಧಾರಾಕಾರ ಮಳೆಯಿಂದ ವಾತಾವರಣ ತಂಪು

ವಾಡಿಕೆಗಿಂತ ದುಪ್ಪಟ್ಟು ಮಳೆ

ಬಿಳೇಕಹಳ್ಳಿ ಜಂಕ್ಷನ್‌ನಲ್ಲಿ ಸಂಗ್ರಹಗೊಂಡಿದ್ದ ಮಳೆ ನೀರು

ನಗರದ ರಸ್ತೆಯೊಂದರಲ್ಲಿ ಸಂಗ್ರಹವಾಗಿದ್ದ ಮಳೆನೀರು (ಸಂಗ್ರಹ ಚಿತ್ರಗಳು)

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಚ್ ಹಾಗೂ ಏಪ್ರಿಲ್‌ನಲ್ಲಿ ಮಳೆಯ ತೀವ್ರ ಅಭಾವ ಎದುರಿಸಿದ್ದ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಮೇ ತಿಂಗಳಿನಲ್ಲಿ ವಾಡಿಕೆಗಿಂತಲೂ ದುಪ್ಪಟ್ಟು ಮಳೆಯಾಗಿದೆ.

ಬೆಂಗಳೂರು ನಗರದಲ್ಲಿ ಏಪ್ರಿಲ್‌ನಲ್ಲಿ ಶೇ 96ರಷ್ಟು ಮಳೆ ಕೊರತೆ ಕಾಣಿಸಿತ್ತು. ಈ ಪ್ರದೇಶದಲ್ಲಿ ಮೇ 1ರಿಂದ 24ರ ಅವಧಿಯಲ್ಲಿ ಶೇ 105ರಷ್ಟು ಅಧಿಕ ಮಳೆಯಾಗಿದೆ. ವಾಡಿಕೆ 7 ಸೆಂ.ಮೀ ಇದ್ದು, 14.3 ಸೆಂ.ಮೀ ಮಳೆಯಾಗಿದೆ.

ಬೆಂಗಳೂರು ಗ್ರಾಮಾಂತರದಲ್ಲಿ ಶೇ 91ರಷ್ಟು (ಏಪ್ರಿಲ್) ಕೊರತೆ ಎದುರಾಗಿತ್ತು. ಈಗ ಅಲ್ಲಿ ಶೇ 92ರಷ್ಟು ಅಧಿಕ ಮಳೆಯಾಗಿದೆ. ಜನವರಿ 1ರಿಂದ ಮೇ 24ರವರೆಗೆ ಬೆಂಗಳೂರು ನಗರದ ವಾಡಿಕೆ ಮಳೆ ಪ್ರಮಾಣ 12.8 ಸೆಂ.ಮೀ ಆಗಿತ್ತು. ಆದರೆ, 14.5 ಸೆಂ.ಮೀ ಮಳೆಯಾಗಿ, ಶೇ 13ರಷ್ಟು ಅಧಿಕ ಮಳೆಯಾದಂತೆ ಆಗಿದೆ.

ಗ್ರಾಮಾಂತರ ಜಿಲ್ಲೆಯಲ್ಲಿ ಜನವರಿ 1ರಿಂದ ಮೇ 14ಕ್ಕೆ ವಾಡಿಕೆ ಮಳೆ ಪ್ರಮಾಣ 11.8 ಸೆಂ.ಮೀ. ಅಲ್ಲೀಗ 13.2 ಸೆಂ.ಮೀ ಮಳೆಯಾಗಿದೆ. ಶೇ 12ರಷ್ಟು ಅಧಿಕ ಮಳೆ ಸುರಿದಿದೆ.

ಏಳು ದಿನಗಳ ಅವಧಿಯಲ್ಲೇ ಹೆಚ್ಚು: ಈ ತಿಂಗಳ ಆರಂಭದಲ್ಲಿ ಜೋರು ಮಳೆ ಇರಲಿಲ್ಲ. ಆದರೆ, ಕಳೆದ ಏಳು ದಿನಗಳ ಅವಧಿಯಲ್ಲಿ ಈ ಎರಡು ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಸುರಿದು ವಾತಾವರಣ ತಂಪಾಗಿಸಿದೆ.

ಇನ್ನೂ ಐದು ದಿನ ಮಳೆ

ನಗರ ಹಾಗೂ ಗ್ರಾಮಾಂತರ ಜಿಲ್ಲೆಯಲ್ಲಿ ಭಾನುವಾರದಿಂದ ಐದು ದಿನ ಅಲ್ಲಲ್ಲಿ ಮಳೆ ಆಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.ಹಗಲು ವೇಳೆಯಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ಮೇನಲ್ಲಿ ಅಧಿಕ ಮಳೆ ಸುರಿದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಪ್ರದೇಶಗಳು (ಸೆಂ.ಮೀಗಳಲ್ಲಿ)

ಹೋಬಳಿ	ವಾಡಿಕೆ	ಸುರಿದ ಮಳೆ
ದೇವನಹಳ್ಳಿ ತಾಲ್ಲೂಕು		
ದೇವನಹಳ್ಳಿ	6.2	15.7
ಚನ್ನರಾಯಪಟ್ಟಣ	6.1	16.3
ವಿಜಯಪುರ	6.1	10.6
ದೊಡ್ಡಬಳ್ಳಾಪುರ		
ದೊಡ್ಡಬಳ್ಳಾಪುರ	7.5	11.8
ಮಧುರೆ	7.1	16.1
ಸಾಸಲು	6	12.4
ಹೊಸಕೋಟೆ		
ಅನುಗೊಂಡಹಳ್ಳಿ	5.7	8.9
ಸುಲಿಬೆಲೆ	6.1	16
ನೆಲಮಂಗಲ		
ನೆಲಮಂಗಲ–1	8.6	13.8
ಸೋಂಪುರ	7	7.2
ನೆಲಮಂಗಲ–2	7.6	11.6

ಮೇನಲ್ಲಿ ಅಧಿಕ ಮಳೆ ಸುರಿದ ಬೆಂಗಳೂರು ನಗರ ಜಿಲ್ಲೆಯ ಪ್ರದೇಶಗಳು (ಸೆಂ.ಮೀಗಳಲ್ಲಿ)

ಹೋಬಳಿ	ವಾಡಿಕೆ	ಸುರಿದ ಮಳೆ
ಆನೇಕಲ್ ತಾಲ್ಲೂಕು		
ಆನೇಕಲ್–1	8.5	15.2
ಅತ್ತಿಬೆಲೆ–1	7.2	10.8
ಆನೇಕಲ್–2	8	14.1
ಸರ್ಜಾಪುರ–3	6.6	9.1
ಬೆಂಗಳೂರು ಉತ್ತರ ತಾಲ್ಲೂಕು		
ಬೆಂ. ಉತ್ತರ–1	7.8	14.3
ಯಶವಂತಪುರ–2	6.9	19.9
ದಾಸನಪುರ–2	7.2	17.7
ಬೆಂಗಳೂರು ದಕ್ಷಿಣ ತಾಲ್ಲೂಕು		
ಉತ್ತರಹಳ್ಳಿ–4	7.1.	22.2
ಕೆಂಗೇರಿ–3	6.6	22.1
ಬೆಂಗಳೂರು ಪೂರ್ವ ತಾಲ್ಲೂಕು		
ಮಹದೇವಪುರ–2	6.6	13.1
ಮಾರತಹಳ್ಳಿ	7.2	14.4
ಯಲಹಂಕ ತಾಲ್ಲೂಕು		
ಯಲಹಂಕ–1	5.3	13.2
ಹೆಸರಘಟ್ಟ–2	6.7	16.6

ಸುದ್ದಿ 2 ನಿಮಿಷ

ಬೆಂಗಳೂರು ಕೃಷಿ ವಿ.ವಿಯಲ್ಲಿ ಜಂಟಿ ಪದವಿಗೆ ಅವಕಾಶ

ಬೆಂಗಳೂರು: ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಕೇಂದ್ರ ಸರ್ಕಾರವು ಆಯ್ಕೆ ಮಾಡಿರುವ ವಿಶ್ವವಿದ್ಯಾಲ ಯಗಳಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯವೂ ಸೇರಿದೆ.

ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ಭಾರತೀಯ ಉನ್ನತ ಶಿಕ್ಷಣ ಸಂಸ್ಥೆಗಳು ಮತ್ತು ವಿದೇಶಿ ಉನ್ನತ ಶಿಕ್ಷಣ ಸಂಸ್ಥೆಗಳ ನಡುವೆ ಶೈಕ್ಷಣಿಕ ಸಹಯೋಗ ಬೆಳೆಸುವ ನಿಟ್ಟಿನಲ್ಲಿ ಜಂಟಿ ಪದವಿ, ಅವಳಿ ಪದವಿ, ಉಭಯ ಪದವಿಗಳನ್ನು ನೀಡಲು ಒಪ್ಪಂದ ಮಾಡಿಕೊಳ್ಳಲಾಗಿದೆ. ದೇಶದ 234 ಸರ್ಕಾರಿ, ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳನ್ನು ಗುರುತಿಸಲಾಗಿದೆ. ಅದರಲ್ಲಿ ಕರ್ನಾಟಕದ 12 ಖಾಸಗಿ ವಿಶ್ವ ವಿದ್ಯಾಲಯಗಳು ಮತ್ತು 9 ಸರ್ಕಾರಿ ವಿಶ್ವವಿದ್ಯಾಯಗಳು ಒಳಗೊಂಡಿದೆ.

ದೇಶದಲ್ಲಿ 4 ಕೃಷಿ ವಿಶ್ವ ವಿದ್ಯಾಲಯಗಳಷ್ಟೇ ಈ ಪಟ್ಟಿ ಯಲ್ಲಿದ್ದು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಅದರಲ್ಲಿ ಒಂದಾಗಿದೆ.

‘ವಿದ್ಯಾರ್ಥಿಗಳು ಕಲಿಕೆಯ ಅರ್ಧಭಾಗವನ್ನು ಭಾರತದಲ್ಲಿ, ಅರ್ಧಭಾಗವನ್ನು ವಿದೇಶದಲ್ಲಿ ಪೂರ್ಣಗೊಳಿಸಬಹುದು. ಒಂದೇ ವಿಷಯದಲ್ಲಿ ವಿದೇಶಿ, ಭಾರತದ ವಿವಿಗಳು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಪದವಿ ಪ್ರಮಾಣಪತ್ರ ನೀಡಬಹುದು. ಭಾರತದಲ್ಲೇ ಪ್ರವೇಶ ಪಡೆದು ವಿದೇಶದಲ್ಲಿ ಕಲಿಯುವ ಅವಕಾಶ ದೊರೆಯುತ್ತದೆ’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅನಧಿಕೃತ ಸ್ವಾಗತ ಕಮಾನು ತೆರವು

ಕೆ.ಆರ್.ಪುರ: ರಾಜಕಾಲುವೆ ಅಂಚಿನಲ್ಲಿ ಬಫರ್ ವಲಯದ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಿರುವ ಸ್ವಾಗತ ಕಮಾನು ಅನ್ನು ಬಿಬಿಎಂಪಿ ಅಧಿಕಾರಿಗಳು ತೆರವುಗೊಳಿಸಿದರು.

ಎ.ನಾರಾಯಣಪುರ ವಾರ್ಡ್‌ನ ಟಿನ್ ಫ್ಯಾಕ್ಟರಿ ಮುಖ್ಯರಸ್ತೆಯಿಂದ ಉದಯನಗರಕ್ಕೆ ಪ್ರವೇಶಿಸುವ ಮುಖ್ಯದ್ವಾರದಲ್ಲಿ ರಾಜಕಾಲುವೆ ಅಂಚಿನಲ್ಲಿ ಉದಯನಗರಕ್ಕೆ ಸ್ವಾಗತ ಕೋರುವ ಕಮಾನು ಅನ್ನು ಅನಧಿಕೃತವಾಗಿ ನಿರ್ಮಾಣ ಮಾಡಲಾಗಿತ್ತು.

ಉದಯನಗರಕ್ಕೆ ಒಳ ಪ್ರವೇಶಿಸುವ ಬಫರ್ ವಲಯ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಕಮಾನು ತೆರವು ಮಾಡುವಂತೆ ಹೈಕೋರ್ಟ್ ಅದೇಶದ ಮೇರೆಗೆ ಪೊಲೀಸರ ನೆರವಿನೊಂದಿಗೆ ತೆರವುಗೊಳಿಸಲಾಯಿತು.

ಒಳಚರಂಡಿಗೆ ಮಳೆನೀರು: ಕ್ರಮಕ್ಕೆ ಅಧಿಕಾರಿಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಚರಂಡಿಗೆ ಮಳೆನೀರು ನೇರವಾಗಿ ಸೇರುತ್ತಿರುವ ಪ್ರದೇಶಗಳನ್ನು ಗುರುತಿಸುವ ಕಾರ್ಯವನ್ನು ಚುರುಕುಗೊಳಿಸಬೇಕು ಎಂದು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ‘ಮಳೆಗಾಲದಲ್ಲಿ ಒಳಚರಂಡಿ ವ್ಯವಸ್ಥೆಯ ಮೇಲೆ ಒತ್ತಡ ಹೆಚ್ಚಲಿದ್ದು, ಸಮಸ್ಯೆಗಳು ಎದುರಾಗುತ್ತವೆ. ಇದನ್ನು ಸಮರ್ಪಕವಾಗಿ ನಿಭಾಯಿಸಬೇಕು ಎಂದು ಉಪ ಮುಖ್ಯಮಂತ್ರಿಯವರು ನಿರ್ದೇಶನ ನೀಡಿದ್ದಾರೆ. ಈ ಬಗ್ಗೆ ಅಧಿಕಾರಿಗಳು ಕಾರ್ಯನಿರತರಾಗಬೇಕು’ ಎಂದರು.

ಮ್ಯಾನ್‌ಹೋಲ್ ಡಿಸಿಲ್ಟಿಂಗ್, ಒಳಚರಂಡಿ ಸ್ವಚ್ಛತೆಯ ಕಾರ್ಯ ಕೈಗೊಳ್ಳಲಾಗುತ್ತಿದೆ. ಆದರೂ ಕೆಲವು ಕಡೆಗಳಿಂದ ದೂರುಗಳು ಬರುತ್ತಿವೆ. ಮಳೆ ನೀರು ನೇರವಾಗಿ ಒಳಚರಂಡಿಗೆ ಸೇರ್ಪಡೆ ಆಗುತ್ತಿರುವುದನ್ನು ಪರಿಶೀಲನೆ ನಡೆಸಬೇಕು. ಮಳೆ ನೀರು ಸಮರ್ಪಕವಾಗಿ ಹರಿದುಹೋಗಲು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ನಾಗರಿಕರು ಕೂಡಾ ಸಹ ಜಲಸಾಕ್ಷರರಾಗಿ ನೀರಿನ ಸಂರಕ್ಷಣೆಗೆ ನೆರವಾಗಬೇಕು. ಅಲ್ಲದೆ, ಮನೆಗಳಲ್ಲಿ ಮಳೆ ನೀರು ಸಂಗ್ರಹ ಪದ್ಧತಿ ಅಳವಡಿಸಿಕೊಳ್ಳುವಂತೆ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯವನ್ನು ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಿದರು.

ಕುಡಿಯುವ ನೀರಿನ ಗುಣಮಟ್ಟದ ಬಗ್ಗೆ ನಿಗಾ ವಹಿಸಬೇಕು. ನೀರು ಕಲುಷಿತಗೊಳ್ಳದಂತೆ ನೋಡಿಕೊಳ್ಳಬೇಕು. ಹಾಗೆಯೇ, ಪ್ರಸ್ತುತ ನೀರಿನ ಪರೀಕ್ಷೆ ಮಾಡುತ್ತಿರುವ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ನೀರಿನ ಪರೀಕ್ಷೆ ಮಾಡಬೇಕು ಎಂದು ಅಧ್ಯಕ್ಷರು ಸೂಚಿಸಿದರು.

ಸಭೆಯಲ್ಲಿ ಪ್ರಧಾನ ಮುಖ್ಯ ಎಂಜಿನಿಯರ್ ಸುರೇಶ, ಮುಖ್ಯ ಎಂಜಿನಿಯರ್‌ಗಳಾದ ಎಲ್.ಕುಮಾರ ನಾಯ್ಕ್, ಕೆ.ಎನ್.ಪರಮೇಶ, ಎಸ್.ವಿ. ವೆಂಕಟೇಶ, ಎ. ರಾಜಶೇಖರ್, ಮಹೇಶ ಕೆ.ಎನ್., ರಾಜೀವ್ ಕೆ.ಎನ್., ಗಂಗಾಧರ್ ಬಿ.ಸಿ., ದೇವರಾಜು ಎಂ., ಜಯಶಂಕರ್ ಉಪಸ್ಥಿತರಿದ್ದರು.

ಸೃಷ್ಟಿ–2024: ತಂತ್ರಜ್ಞಾನಗಳ ಆಧಾರಿತ ಮಾದರಿಗಳ ಪ್ರದರ್ಶನ

‘ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯ’

ಪ್ರಜಾವಾಣಿ ವಾರ್ತೆ

ಯಲಹಂಕ: ಹೆಬ್ಬಾಳದ ಏಟ್ರಿಯಾ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ (ಎಬಿವಿಪಿ) ಸಹಯೋಗದಲ್ಲಿ ಸೃಷ್ಟಿ–2024ರಲ್ಲಿ ತಂತ್ರಜ್ಞಾನಗಳ ಆಧಾರಿತ ಮಾದರಿಗಳ ಪ್ರದರ್ಶನ, ಸ್ಪರ್ಧಾ ಕಾರ್ಯಕ್ರಮ ನಡೆಯಿತು.

ಚಾಲನೆ ನೀಡಿದ ವಿಶ್ವವಿದ್ಯಾಲಯ ಧನಸಹಾಯ ಆಯೋಗದ (ಯುಜಿಸಿ) ಉಪಾಧ್ಯಕ್ಷ ದೀಪಕ್ ಕುಮಾರ್ ಶ್ರೀವಾಸ್ತವ ಅವರು, ‘ವಿದ್ಯಾರ್ಥಿಗಳು ದೃಢ ಮನಸ್ಸು ಮತ್ತು ಕಠಿಣ ಪರಿಶ್ರಮದಿಂದ ಯಾವುದೇ ಸಾಧನೆ ಮಾಡಲು ಸಾಧ್ಯವಿದೆ’ಎಂದು ಹೇಳಿದರು.

‘ನೀವು ಕೈಗೊಳ್ಳುವ ಸಂಶೋಧನೆಗಳಿಗೆ ಹೆಚ್ಚಿನ ವೆಚ್ಚ ಭರಿಸಬೇಕಾದ ಅವಶ್ಯಕತೆಯಿಲ್ಲ. ಕಡಿಮೆ ಖರ್ಚಿನಲ್ಲಿಯೂ ಸಹ ಉತ್ತಮ ಸಂಶೋಧನೆ ಮತ್ತು ಅನ್ವೇಷಣೆಗಳನ್ನು ಮಾಡಲು ಸಾಧ್ಯವಿದೆ ಎಂದರು.

ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ತಂತ್ರಜ್ಞಾನ ಆಧಾರಿತ ಮಾದರಿಗಳ ಪ್ರದರ್ಶನವನ್ನು ಗಣ್ಯರು ವೀಕ್ಷಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಎಸ್. ವಿದ್ಯಾಶಂಕರ್ ಅವರು, ‘ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳಿಂದ ಹೆಚ್ಚಿನ ಅವಕಾಶಗಳನ್ನು ಪಡೆದು ಭಾರತದ ಅಭಿವೃದ್ಧಿಗೆ ಕೊಡುಗೆ ನೀಡಲು ಸಹಕಾರಿ ಆಗಲಿದೆ. ಹೊಸ ಸ್ಟಾರ್ಟ್ ಅಪ್‌ಗಳನ್ನು ಉತ್ತೇಜಿಸುವುದರ ಜೊತೆಗೆ ನೂತನ ತಂತ್ರಜ್ಞಾನ ಮತ್ತು ಕೌಶಲಗಳ ಮಹತ್ವ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮರ್ಸಿಡಿಸ್ ಬೆಂಜ್ ರಿಸರ್ಚ್ ಆ್ಯಂಡ್ ಡೆವಲಪ್‌ಮೆಂಟ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮನು ಸಾಲೆ, ಏಟ್ರಿಯಾ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸಿ.ಎಸ್.ಸುಂದರ್ ರಾಜು, ಎಬಿವಿಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಆಶಿಶ್ ಚೌಹಾಣ್, ಎಎಸ್‌ಕೆಬಿ ಚಾರಿಟಬಲ್ ಟ್ರಸ್ಟ್‌ನ ಟ್ರಸ್ಟಿ ಕೆ.ನಾಗರಾಜು, ಪ್ರಾಂಶುಪಾಲ ರಾಜೇಶ್. ಎಸ್, ಉಪ ಪ್ರಾಂಶುಪಾಲ ಎನ್. ನಳಿನಾಕ್ಷಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ 100ಕ್ಕೂ ಹೆಚ್ಚು ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅಂತಿಮ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಿದ್ಧಪಡಿಸಿರುವ 350ಕ್ಕೂ ಹೆಚ್ಚು ಉತ್ತಮ ಪ್ರಾಜೆಕ್ಟ್‌ಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ಕಾನೂನು ವಿ.ವಿಗೆ ದಿನೇಶ್ ಗೂಳಿಗೌಡ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವಿದ್ಯಾವಿಷಯಕ ಪರಿಷತ್ ಸದಸ್ಯರಾಗಿ ನಾಮನಿರ್ದೇಶನ ಗೊಂಡಿದ್ದಾರೆ.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಶಿಫಾರಸಿನ ಮೇರೆಗೆ ರಾಜ್ಯಪಾಲರಾದ ಥಾವರಚಂದ್ ಗೆಹಲೋತ್ ಅವರು ನಾಮನಿರ್ದೇಶನ ಮಾಡಿ, ಆದೇಶ ಹೊರಡಿಸಿದ್ದಾರೆ.

ಕುಣಿಕೇನಹಳ್ಳಿ: ದೇಗುಲ ಪ್ರವೇಶಿಸಿದ ದಲಿತರು

ಪ್ರಜಾವಾಣಿ ವಾರ್ತೆ

ತುರುವೇಕೆರೆ: ತಾಲ್ಲೂಕಿನ ಕಸಬಾ ವ್ಯಾಪ್ತಿಯ ಕುಣಿಕೇನಹಳ್ಳಿ ಕೆಂಪಮ್ಮ ದೇವಿ ದೇವಸ್ಥಾನದೊಳಗೆ ದಲಿತರು ಶುಕ್ರವಾರ ರಾತ್ರಿ ಪ್ರವೇಶ ಮಾಡಿ ದೇವಿಗೆ ಪೂಜೆ ಸಲ್ಲಿಸಿದರು.

ತುರುವೇಕೆರೆ ತಾಲ್ಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸಿಬ್ಬಂದಿ ಸಮ್ಮುಖದಲ್ಲಿ ನಡೆದ ಈ ಬೆಳವಣಿಗೆಗೆ ಗ್ರಾಮಸ್ಥರು ಸಾಕ್ಷಿಯಾದರು. ಈ ಬೆಳವಣಿಗೆಯ ನಂತರ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಗ್ರಾಮದಲ್ಲಿ 110 ದಲಿತ ಕುಟುಂಬಗಳಿವೆ. ಇಲ್ಲಿನ ಕೆಂಪಮ್ಮದೇವಿ ದೇಗುಲ ಪ್ರಾರಂಭ ಆದಂದಿನಿಂದ ದಲಿತರು ದೇವಸ್ಥಾನಕ್ಕೆ ಸಂಬಂಧಿಸಿದ ಜಾತ್ರೆಯ ಖರ್ಚುವೆಚ್ಚಗಳನ್ನು ನೀಡಿ, ಪೂಜೆಯಲ್ಲಿ ಪಾಲ್ಗೊಂಡಿದ್ದರು. ಆದರೆ ದೇವಸ್ಥಾನದ ಒಳಗೆ ಪ್ರವೇಶ ಮಾಡಿರಲಿಲ್ಲ.

ದೇವಾಲಯದ ಒಳಗೆ ಹೋಗಿ ಪೂಜೆ ಮಾಡಿಸಬೇಕು ಎಂಬ ಯುವಕರ ಹಂಬಲವನ್ನು ಗ್ರಾಮದ ಪ್ರಮುಖರ ಬಳಿ ಪ್ರಸ್ತಾಪಿಸಿದ್ದೆವು. ಗ್ರಾಮಸ್ಥರು ಆಕ್ಷೇಪ ವ್ಯಕ್ತಪಡಿಸಲಿಲ್ಲ ಎಂದು ತಾಲ್ಲೂಕು ಛಲವಾದಿ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಎಚ್.ಕೆ.ಜಗದೀಶ ಹೇಳಿದರು.

ಅಧಿಕಾರಿಗಳು ಮತ್ತು ಪೊಲೀಸರ ಸಮ್ಮುಖದಲ್ಲಿ ಶುಕ್ರವಾರ ದೇಗುಲ ಪ್ರವೇಶಿಸಲಾಯಿತು ಎಂದು ತಿಳಿಸಿದರು.

ವಿನಾಕಾರಣ ಗೊಂದಲ ಸೃಷ್ಟಿ: ಅಸಮಾಧಾನ

‘ಕೆಂಪಮ್ಮದೇವಿ ದೇವಾಲಯ ಪ್ರವೇಶಕ್ಕೆ ದಲಿತರಿಗೆ ನಿರಾಕರಣೆ ಮಾಡಿಲ್ಲ. ಊರ ದೇವತೆ ಎಲ್ಲರೂ ಹೋಗಬಹುದು ತಪ್ಪಿಲ್ಲ ಎಂದಿದ್ದೆವು. ಹೀಗಿದ್ದರೂ ಕೆಲ ದಲಿತ ಮುಖಂಡರು ಅಧಿಕಾರಿಗಳು, ಪೊಲೀಸರನ್ನು ಕರೆಸಿಕೊಳ್ಳುವ ಅವಶ್ಯಕತೆ ಏನಿತ್ತು? ಇದರಿಂದ ಗ್ರಾಮಕ್ಕೆ ಕೆಟ್ಟ ಹೆಸರು ಬಂದಂತೆ ಆಗಿದೆ’ ಎಂದು ಬಾಣಸಂದ್ರ ಗ್ರಾಮ ಪಂಚಾಯಿತಿ ಸದಸ್ಯ ಆನಂದ ಮರಿಯಾ ಪ್ರತಿಕ್ರಿಯಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೆಂಪಮ್ಮದೇವಿಯ ಪಕ್ಕದಲ್ಲಿಯೇ ದಲಿತರ ಚಿಕ್ಕಮ್ಮ ದೇವಿ ದೇವಾಲಯ ನಿರ್ಮಾಣಕ್ಕೆ ಗ್ರಾಮದವರೆಲ್ಲರೂ ಸಹಕಾರ ನೀಡಿದ್ದರು. ಉದ್ಘಾಟನೆಯಲ್ಲಿ ಭಾಗವಹಿಸಿ, ಅವರು ಕೊಟ್ಟ ಪ್ರಸಾದ ಸೇವಿಸಿದ್ದೇವೆ. ನಾವೆಲ್ಲ ಸಾಮರಸ್ಯದಿಂದ ಇದ್ದೇವೆ. ಹೀಗಿರುವಾಗ ಸುಮ್ಮನೇ ಗ್ರಾಮದಲ್ಲಿ ಗೊಂದಲ ಸೃಷ್ಟಿಸಿರುವುದು ಗ್ರಾಮಸ್ಥರಿಗೆ ನೋವು ತಂದಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಶಸ್ತಿ ಪ್ರದಾನ

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಶ್ವತ್ಥ ನಾರಾಯಣ ಕಂಟನಕುಂಟೆ ಮತ್ತು ಪೂಜಾ ರಂಗನಾಥ್ ಅವರಿಗೆ ಪುನೀತ್ ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ, ಬರಹಗಾರರಾದ ಸದಾಶಿವ ಡಿ.ಓ. ಮತ್ತು ಮಧು ಕಾರಗಿ ಅವರಿಗೆ ಪುನೀತ್ ರಾಜ್‌ಕುಮಾರ್ ಯುವ ಸಾಹಿತ್ಯ ದತ್ತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಎಸ್. ರಾಮಲಿಂಗೇಶ್ವರ, ಗಾಯಕ ವಾಸುದೇವ್ ಹೊಸಹಳ್ಳಿ, ಶಿಕ್ಷಣ ತಜ್ಞೆ ಗೀತಾ ರಾಮಾನುಜಂ, ಉದ್ಯಮಿ ಶಶಿಕಾಂತ್ ರಾವ್, ಚಿಂತಕ ಲಕ್ಷ್ಮೀಪತಯ್ಯ, ಲೇಖಕಿ ಜಯಶ್ರೀ ರಾಜು ಮತ್ತು ಭರವಸೆ ತಂಡದ ಸುನಿಲ್ ಭಾಗವಹಿಸಿದ್ದರು - ಪ್ರಜಾವಾಣಿ ಚಿತ್ರ

COFFEE DAY ENTERPRISES LTD.

Coffee Day — Brewing new possibilities.

Registered Office: 165, R.V. Road, Near Minerva Circle, Bengaluru - 560 004, Karnataka, India.
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter/Year ended 31st March, 2024

(₹ in Crores except per share data)

Particulars	Quarter ended 31st March, 2024 (Audited)	Year ended 31st March, 2024 (Audited)	Quarter ended 31st March, 2023 (Audited)	Year ended 31st March, 2023 (Audited)
Total income from operations (net)	257.69	1,117.91	301.19	1,028.91
Net Profit from ordinary activities after tax	(296.40)	(307.43)	34.98	(387.17)
Net Profit for the period after tax (after Extraordinary items)	(296.40)	(307.43)	34.98	(387.17)
Equity Share Capital	211.25	211.25	211.25	211.25
Reserves (excluding Revaluation Reserve as shown in the Balance Sheet of previous year)		2,645.28		3,006.60
Earnings Per Share (before extraordinary items) (of ₹ 10/- each)				
Basic :	(14.33)	(15.27)	1.58	(17.98)
Diluted :	(14.33)	(15.27)	1.58	(17.98)
Earnings Per Share (after extraordinary items) (of ₹ 10/- each)				
Basic :	(14.33)	(15.27)	1.58	(17.98)
Diluted :	(14.33)	(15.27)	1.58	(17.98)

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 24th May, 2024 and have been subjected to Audit by the Statutory Auditors of the Company.
3. **Audited financial results of Coffee Day Enterprises Limited (Standalone Information)**

(₹ in Crores)

Particulars	Quarter ended 31st March, 2024 (Audited)	Year ended 31st March, 2024 (Audited)	Quarter ended 31st March, 2023 (Audited)	Year ended 31st March, 2023 (Audited)
Total income from operations (net)	4.82	19.67	4.84	18.81
Loss before tax and exceptional items	(1,181.34)	(1,204.85)	(1.25)	(3.08)
Loss/Profit after tax and exceptional items	(1,181.34)	(1,204.85)	(1.25)	(3.08)

For and Behalf of Board of Directors
S.V Ranganath
Interim Chairman and Independent Director

Place : Bengaluru
Date : 24 May, 2024

ನಗರದಲ್ಲಿ ಇಂದು

ಮಧುಮೇಹ ಜಾಗೃತಿ ವಾಕಥಾನ್: ಮುಖ್ಯ ಅತಿಥಿ: ನವೀನ್ ನಾಗಪ್ಪ, ಆಯೋಜನೆ ಹಾಗೂ ಸ್ಥಳ: ಫ್ರೂಟ್ ಸ್ಕ್ವೇರ್, 11ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 7.15

ರಾಮಚಂದ್ರ ಯಾವಗಲ್ ಸ್ಮರಣಾರ್ಥ ನಾದ ನಮನ ವಾರ್ಷಿಕ ಸಂಗೀತ ಉತ್ಸವ: ಸಿತಾರ್ ವಾದನ: ಪ್ರಥಮ್ ಚಟರ್ಜಿ, ತಬಲಾ: ಯೋಗೇಶ್ ಭಟ್, ಪ್ರಹ್ಲಾದ್ ದೇಶಪಾಂಡೆ, ಕಿರಣ್ ಯಾವಗಲ್, ಗಾಯನ: ಫಯಾಜ್ ಖಾನ್, ಶುಭಾಂಗಿ ಜಾಧವ್, ಹಾರ್ಮೋನಿಯಂ: ಶ್ರೀರಕ್ಷಾ ಶಾನಭೋಗ್, ಸಾರಂಗಿ: ಸರ್ಫರಾಜ್ ಖಾನ್, ‘ಕಲಾಶೃಂಗ’ ಪ್ರಶಸ್ತಿ: ಲಲಿತಾ ಜೆ. ರಾವ್, ಓಂಕಾರ್ ಗುಲ್ವಾಡಿ, ಆಯೋಜನೆ: ಶ್ರೀರಾಮ ಕಲಾ ವೇದಿಕೆ, ಸ್ಥಳ: ಇವಿಎಸ್ ಸಭಾಂಗಣ, ಭಾರತೀಯ ವಿದ್ಯಾಭವನ, ಬೆಳಿಗ್ಗೆ 9.30

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಮುಖ್ಯ ಅತಿಥಿ: ಕುವರ ಯಲ್ಲಪ್ಪ, ಉಪಸ್ಥಿತಿ: ಆರ್. ಸತೀಶ್, ಆಯೋಜನೆ ಹಾಗೂ ಸ್ಥಳ: ಸಹಮತ, ನಂ 323, ಹೇಮ ಸದನ, 7ನೇ ಮುಖ್ಯರಸ್ತೆ, ಸಹಕಾರನಗರ, ಬೆಳಿಗ್ಗೆ 10

ವಾಗ್ಗೇಯ ನೃತ್ಯ ವೈಭವ: ಉಪನ್ಯಾಸ: ಸುಕನ್ಯಾ ಪ್ರಭಾಕರ್, ಗೌರವ ಅತಿಥಿಗಳು: ಆರ್.ಎನ್. ತ್ಯಾಗರಾಜನ್, ಶುಭಾ ಧನಂಜಯ್, ಆಯೋಜನೆ: ಕೇಶವ ಕಾಲೇಜ್ ಆಫ್ ಡ್ಯಾನ್ಸ್ ಆ್ಯಂಡ್ ಮ್ಯೂಸಿಕ್, ಕೇಶವ ನೃತ್ಯ ಶಾಲೆ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಎಚ್ಚೆಸ್ಕೆ ಬೆಳಕು ಒಂಬತ್ತನೆ ಆವೃತ್ತಿ: ಉದ್ಘಾಟನೆ: ಕ್ರಿಶನ್ ಶರ್ಮ, ಶಾಂತಾರಾಂ ಪೈ, ಆಯೋಜನೆ: ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ, ಸ್ಥಳ: ಭಾರತೀಯ ಸ್ಟೇಟ್ ಬ್ಯಾಂಕ್ ಸಭಾಂಗಣ, ಸೇಂಟ್ ಮಾರ್ಥಾಸ್ ರಸ್ತೆ, ಬೆಳಿಗ್ಗೆ 10

ಹರಿದಾಸ ಸಾಹಿತ್ಯ ಎರಡನೇ ವಿಚಾರ ಸಂಕಿರಣ: ಅಧ್ಯಕ್ಷತೆ: ಅರಳುಮಲ್ಲಿಗೆ ಪಾರ್ಥಸಾರಥಿ, ಉಪಸ್ಥಿತಿ: ಎಚ್.ಬಿ. ಲಕ್ಷ್ಮೀನಾರಾಯಣ, ಎಸ್.ಎಲ್. ಮಂಜುನಾಥ್, ವಾದಿರಾಜು ಆರ್., ವಾಸುದೇವ ಅಗ್ನಿಹೋತ್ರಿ, ಆಯೋಜನೆ: ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆ ಟ್ರಸ್ಟ್, ಸ್ಥಳ: ಶ್ರೀಪಾದರಾಜ ಸಭಾ ಭವನ, ರಾಘವೇಂದ್ರ ಕಾಲೊನಿ, ಚಾಮರಾಜಪೇಟೆ, ಸಂಜೆ 4



ಅರಳುಮಲ್ಲಿಗೆ ಪಾರ್ಥಸಾರಥಿ

ಸುನಿಧಿ ಮಂಜುನಾಥ್ ಭರತನಾಟ್ಯ ರಂಗಪ್ರವೇಶ: ಅತಿಥಿಗಳು: ಕಮಲಾ ಹಂಪನಾ, ಹಂ.ಪ. ನಾಗರಾಜಯ್ಯ, ದೊಡ್ಡರಂಗೇಗೌಡ, ಜೆ.ಬಿ.ಸರವಣನ್ ಪಿಳ್ಳೈ, ಆಯೋಜನೆ: ಮಹಾವೀರ ಲಲಿತಕಲಾ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಸಕಲಮಾ ಅವರ ‘ಹಿಮಾಲಯ ಋಷಿಗಳ ದಿವ್ಯ ಸಂದೇಶಗಳು: ಸಕಾಲಿಕ ಮತ್ತು ಕಾಲಾತೀತ’ ಪುಸ್ತಕದ ಮುಖಪುಟ ಅನಾವರಣ: ಮುಖ್ಯ ಅತಿಥಿಗಳು: ತೇಜಸ್ವಿ ಸೂರ್ಯ, ಜೋಗಿ, ಸಪ್ತಮಿ ಗೌಡ, ಆಯೋಜನೆ: ಗುರು ಸಕಲಮಾ ಶಿಷ್ಯ ಬಳಗ, ಸ್ಥಳ: ಸುಚಿತ್ರಾ ಫಿಲಂ ಸೊಸೈಟಿ, ಬನಶಂಕರಿ, ಬೆಳಿಗ್ಗೆ 10.30

‘ದಿ ಇಂಡಿಯನ್ ರಿಯಾಲಿಟಿ’ ಪುಸ್ತಕ ಬಿಡುಗಡೆ ಮತ್ತು ಚರ್ಚೆ: ರಾಮ್ ಮಾಧವ್, ಎಸ್.ಎನ್.ವಿ.ಎಲ್. ನರಸಿಂಹ ರಾಜು, ಆಯೋಜನೆ: ಮಂಥನ, ಸ್ಥಳ: ದಿ ಆಕ್ಸ್‌ಫರ್ಡ್ ಕಾಲೇಜ್ ಆಫ್ ಸೈನ್ಸ್, ಆರ್ಟ್ಸ್ ಆ್ಯಂಡ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಎಚ್‌ಎಸ್‌ಆರ್ ಲೇಔಟ್, ಬೆಳಿಗ್ಗೆ 10.30

ರಿಯಾಜ್ ಪಾಷ ಅವರ ‘ನಿಮ್ಮೊಡನಿದ್ದೂ...’ ಪುಸ್ತಕ ಬಿಡುಗಡೆ: ವೆಂಕಟೇಶ್ ನೆಲ್ಲುಕುಂಟೆ, ಕೃತಿ ಬಗ್ಗೆ ಮಾತು: ಭಾರತೀದೇವಿ ಪಿ., ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಉಪಸ್ಥಿತಿ: ಬಾಲಾಜಿ ಎಸ್., ಆಯೋಜನೆ: ಅನ್ನಪೂರ್ಣ ಪಬ್ಲಿಷಿಂಗ್ ಹೌಸ್, ಸ್ಥಳ: ಕುವೆಂಪು ಸಭಾಂಗಣ, ಸರ್ಕಾರಿ ಆರ್.ಸಿ. ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 10.30

‘ನಿವೃತ್ತ ಐಎಎಸ್ ಅಧಿಕಾರಿ ಟಿ. ತಿಮ್ಮೇಗೌಡರ ಬಹುಮುಖಿ ಚಿಂತನೆಗಳು’ ವಿಚಾರಸಂಕಿರಣ: ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಸಾಹಿತ್ಯ ಮತ್ತು ಸಾಂಸ್ಕೃತಿಕ ಚಿಂತನೆ: ಹಿ.ಚಿ.ಬೋರಲಿಂಗಯ್ಯ, ಅಧ್ಯಕ್ಷತೆ: ಡಿ.ಎನ್.ಮುನಿಕೃಷ್ಣ, ಉಪಸ್ಥಿತಿ: ಟಿ. ತಿಮ್ಮೇಗೌಡ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ವಿಶ್ವ ಅಮ್ಮಂದಿರ ದಿನಾಚರಣೆ ಪ್ರಯುಕ್ತ ಪಂಡರೀಬಾಯಿ ಅವರ ನೆನಪಿನಲ್ಲಿ ಕವಿಗೋಷ್ಠಿ, ಗೀತಗಾಯನ, ಹಾಗೂ ರಸಪ್ರಶ್ನೆ: ಅಧ್ಯಕ್ಷತೆ: ಬಿ.ಶಾಂತಕುಮಾರ್, ಮುಖ್ಯ ಅತಿಥಿ: ಉಪೇಂದ್ರ ಕುಮಾರ್ ಎಂ.ಆರ್., ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

‘ಸಾವರ್ಕರ್ ಸಮಗ್ರ’ ಸಂಪುಟ 1 ಪುಸ್ತಕ ಬಿಡುಗಡೆ: ಮುಖ್ಯ ಅತಿಥಿಗಳು: ವಿ. ನಾಗರಾಜ್, ಎಸ್.ಎನ್. ಸೇತುರಾಂ, ಉಪಸ್ಥಿತಿ: ಜಿ.ಬಿ. ಹರೀಶ್, ಎಸ್. ಆರ್. ಲೀಲಾ, ನಾಗ ಎಚ್. ಹುಬ್ಳಿ, ಆಯೋಜನೆ: ಸಾವರ್ಕರ್ ಸಾಹಿತ್ಯ ಸಂಘ, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಏಂಗೆಲ್ಸ್ 200 ಮಾಲಿಕೆಯ ‘ಪ್ರಕೃತಿಯ ಗತಿತಾರ್ಕಿಕತೆ’ ಪುಸ್ತಕ ಬಿಡುಗಡೆ: ಸಿ. ಯತಿರಾಜು, ಅಧ್ಯಕ್ಷತೆ: ಪಾಲಹಳ್ಳಿ ವಿಶ್ವನಾಥ್, ಪುಸ್ತಕ ಪರಿಚಯ: ಬಿ.ಆರ್. ಮಂಜುನಾಥ್, ಆಯೋಜನೆ: ಕ್ರಿಯಾ ಮಾಧ್ಯಮ, ನವಕರ್ನಾಟಕ ಪ್ರಕಾಶನ: ಸ್ಥಳ: ಕ್ರಿಯಾ ಮಾಧ್ಯಮ, #70, ಸುಬ್ಬರಾಮಚೆಟ್ಟಿ ರಸ್ತೆ, ನೆಟ್ಟಕಲ್ಲಪ್ಪ ಸರ್ಕಲ್, ಬೆಳಿಗ್ಗೆ 11

‘ಚಿಗುರು’ ಮಕ್ಕಳ ರಂಗಶಿಬಿರದ ಸಂತೆ, ಸಮಾರೋಪ ಮತ್ತು ನಾಟಕ ಪ್ರದರ್ಶನ: ಮುಖ್ಯ ಅತಿಥಿಗಳು: ಅರುಣ್ ಸಾಗರ್, ಪ್ರಮೋದ್ ಶಿಗ್ಗಾಂವ್, ಅಧ್ಯಕ್ಷತೆ: ನರಸಿಂಹ ನಾಯ್ಕ, ಉಪಸ್ಥಿತಿ: ಮಧು ಎಂ., ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಮಧ್ಯಾಹ್ನ 2.3

ವಸಂತೋತ್ಸವ ಸಾಂಸ್ಕೃತಿಕ ಹಬ್ಬ: ‘ಕೋಗಿಲೆ ಹಾಡಿತು’ ಸಂಗೀತ ಕಛೇರಿ: ಪ್ರವೀಣ್ ಡಿ. ರಾವ್ ಮತ್ತು ತಂಡ, ಗಾಯಕರು: ಅನುರಾಧಾ ಭಟ್, ಮಂಗಳಾ ರವಿ, ಅರುಂಧತಿ ವಸಿಷ್ಠ, ಕೀರ್ತನ್ ಹೊಳ್ಳ, ನಿತಿನ್ ರಾಜಾರಾಮ್ ಶಾಸ್ತ್ರಿ, ವಾದ್ಯ ಸಹಕಾರ: ಮಧುಸೂದನ್, ಮಧುಸೋಹನ್, ಶ್ರೀನಿವಾಸ್ ಆಚಾರ್, ಭರತ್ ಆತ್ರೇಯ, ಸೆಲೆಸ್ಟಿನ್ ಜೆರಾಲ್ಡ್, ಆಯೋಜನೆ: ಇನ್ಫೊಸಿಸ್ ಪ್ರತಿಷ್ಠಾನ, ಭಾರತೀಯ ವಿದ್ಯಾಭವನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6



ಪ್ರವೀಣ್ ಡಿ. ರಾವ್

26ನೇ ವಾರ್ಷಿಕ ಒಕ್ಕೂಟ ದಿನ: ಮುಖ್ಯ ಅತಿಥಿ: ನ್ಯಾ.ಎನ್. ಸಂತೋಷ್ ಹೆಗ್ಡೆ, ಗೌರವ ಅತಿಥಿ: ಕೆ.ಜೆ. ಜಾರ್ಜ್, ಜೆ.ಆರ್. ಲೋಬೊ, ಅಧ್ಯಕ್ಷತೆ: ಫೌಸ್ಟಿನ್ ಲುಕಾಸ್ ಲೋಬೊ, ಪ್ರಶಸ್ತಿ ಪುರಸ್ಕೃತರು: ಮಾರ್ಗರೇಟ್ ಆಳ್ವ, ಫೆಯಾ ಡಿಸೋಜ, ರೋಹನ್ ಮೊಂತೆರೊ, ಆಂತೋನಿ ಲೂಕಸ್, ಆಯೋಜನೆ: ಕೊಂಕಣಿ ಕ್ಯಾಥೋಲಿಕ್ ಸಂಘಗಳ ಒಕ್ಕೂಟ, ಸ್ಥಳ: ಅನಂತ್ಯ, ಗೇಟ್ ನಂ. 9, ಅರಮನೆ ಮೈದಾನ, ಸಂಜೆ 5.30

ಎನ್‌.ಸಂತೋಷ್ ಹೆಗ್ಡೆ

‘ಪುಕ್ಕಟೆ ಸಲಹೆ’ ನಾಟಕ ಪ್ರದರ್ಶನ: ರಚನೆ: ಎಚ್. ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಡಾ.ಸಿ. ಅಶ್ವತ್ಥ್ ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 5 ಹಾಗೂ ಸಂಜೆ 7.30

‘ರುಕ್ಮಿಣಿ ಕಲ್ಯಾಣ’ ತಾಳಮದ್ದಳೆ: ಆಯೋಜನೆ: ನಿರ್ಮಾಣ್ ಯಕ್ಷ ಬಳಗ, ಸ್ಥಳ: #951, ನಿರ್ಮಾಣ್ ಬಡಾವಣೆ, ಕೊಪ್ಪ ಗ್ರಾಮ, ಆನೇಕಲ್, ಸಂಜೆ 4

ಸಮರ್ಪಣ: ಟಿ. ಕೃಷ್ಣಮೂರ್ತಿ ಅವರಿಂದ ವಿಶೇಷ ಪ್ರವಚನ, ಆಯೋಜನೆ ಹಾಗೂ ಸ್ಥಳ: ಶ್ರೀ ಸತ್ಯಸಾಯಿ ಆಶ್ರಮ, ಸಾಯಿ ರಮೇಶ್ ಹಾಲ್, ಬೃಂದಾವನ, ಕಾಡುಗೋಡಿ, ಸಂಜೆ 4.25

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಹೆಬ್ಬಗೋಡಿ ಬಳಿ ರೇವ್ ಪಾರ್ಟಿ ಪ್ರಕರಣ: ಮತ್ತಿಬ್ಬರು ಸಿಸಿಬಿ ವಶಕ್ಕೆ

ನಟಿ ಸೇರಿ 8 ಮಂದಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಗೋಡಿ ಬಳಿಯ ಜಿ.ಆರ್.ಫಾರ್ಮ್‌ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದಿರುವ ಸಿಸಿಬಿ ಪೊಲೀಸರು, ತೆಲುಗು ಚಿತ್ರನಟಿ ಹೇಮಾ ಸೇರಿದಂತೆ ಎಂಟು ಮಂದಿಗೆ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡಿದ್ದಾರೆ.

'ಸನ್‌ಸೆಟ್ ಟು ಸನ್‌ರೈಸ್ ವಿಕ್ಟರಿ' ಹೆಸರಿನಲ್ಲಿ ಮೇ 19ರಂದು ಪಾರ್ಟಿ ಆಯೋಜಿಸಲಾಗಿತ್ತು. ನಟ–ನಟಿಯರು, ಉದ್ಯಮಿಗಳು, ಅವರ ಮಕ್ಕಳು ಹಾಗೂ ಗಣ್ಯ ವ್ಯಕ್ತಿಗಳು ಸೇರಿ ಆಂಧ್ರಪ್ರದೇಶದ 100ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

'ದಾಳಿ ಸಂದರ್ಭದಲ್ಲಿ ಹಲವರನ್ನು ವಶಕ್ಕೆ ಪಡೆಯಲಾಗಿತ್ತು. ಕೆಲವರು ತಪ್ಪಿಸಿಕೊಂಡು ಹೋಗಿದ್ದರು. ಇದೀಗ, ಎಲ್ಲರನ್ನೂ ವಿಚಾರಣೆ ನಡೆಸಲಾಗುತ್ತಿದೆ. ನಟಿ ಹೇಮಾ ಸೇರಿ ಎಂಟು ಮಂದಿಗೆ ನೋಟಿಸ್ ನೀಡಲಾಗಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ಹಾಜರಾಗದಿದ್ದರೆ, ಮುಂದಿನ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ವಿಚಾರಣೆಗೆ ಹಾಜರಾಗದಿದ್ದರೆ ಕಾನೂನು ಕ್ರಮದ ಎಚ್ಚರಿಕೆ
- ಆಂಧ್ರಪ್ರದೇಶ ಸಚಿವರ ಆಪ್ತನ ವಶ, ವಿಚಾರಣೆ
- ಹಣದ ವಹಿವಾಟು ಕುರಿತು ಮಾಹಿತಿ ಸಂಗ್ರಹಕ್ಕೆ ಒತ್ತು

ಅಪರಾಧ ಸುದ್ದಿ

'ಫಾರ್ಮ್‌ಹೌಸ್‌ನಲ್ಲಿ ನಿಂತಿದ್ದ ಕಾರೊಂದರ ಮೇಲೆ, ಆಂಧ್ರಪ್ರದೇಶದ ಸಚಿವ ಕಾಕನಿ ಗೋವರ್ಧನ್ ರೆಡ್ಡಿ ಹೆಸರಿನ ಪಾಸ್ ಅಂಟಿಸಲಾಗಿತ್ತು. ಈ ಬಗ್ಗೆ ಮಾಹಿತಿ ಕಲೆಹಾಕಿದಾಗ, ಸಚಿವರ ಆಪ್ತನೊಬ್ಬ ಪಾಸ್ ಪಡೆದಿದ್ದ ಸಂಗತಿ ತಿಳಿಯಿತು. ಆಪ್ತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಜೊತೆಗೆ, ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಮತ್ತೊಬ್ಬನನ್ನೂ ವಶಕ್ಕೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಬಂಧಿತರ ಖಾತೆಗಳಲ್ಲಿ ಹಣ: 'ರೇವ್ ಪಾರ್ಟಿ ಪ್ರಕರಣದಲ್ಲಿ ಆರೋಪಿಗಳಾದ ವಿ. ರಣಧೀರ್ (43), ವೈ.ಎಂ. ಅರುಣ್ ಕುಮಾರ್ (35), ಎಲ್. ವಾಸು (35), ನಾಗಬಾಬು (32) ಹಾಗೂ ಮಹಮ್ಮದ್ ಅಬೂಬಬ್ಕರ್ ಸಿದ್ದಿಕ್ಕಿಯನ್ನು (29) ಈಗಾಗಲೇ ಬಂಧಿಸಲಾಗಿದೆ. ಇವರ ಬ್ಯಾಂಕ್ ಖಾತೆಗಳಲ್ಲಿ ಲಕ್ಷಾಂತರ ರೂಪಾಯಿ ಹಣವಿರುವುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

'ಪಾರ್ಟಿ ಆಯೋಜನೆಯಿಂದ ಆರೋಪಿಗಳು ಹಣ ಗಳಿಸಿದ್ದರೆಂಬ ಅನುಮಾನವಿದೆ. ಹಣದ ವಹಿವಾಟು ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ನಿವೃತ್ತ ಐಪಿಎಸ್ ಅಧಿಕಾರಿ, ಇನ್‌ಸ್ಪೆಕ್ಟರ್ ವಿರುದ್ಧ ಎಫ್‌ಐಆರ್

ಬೆಂಗಳೂರು: ಐಎಎಸ್ ಅಧಿಕಾರಿ ಡಾ. ಎಸ್. ಆಕಾಶ್ ಅವರ ವೈಯಕ್ತಿಕ ಮೊಬೈಲ್ ಫೋನ್ ಕರೆಗಳ ವಿವರಗಳನ್ನು (ಸಿಡಿಆರ್) ಅಕ್ರಮವಾಗಿ ಸಂಗ್ರಹಿಸಿದ್ದ ಆರೋಪದಡಿ ನಿವೃತ್ತ ಐಪಿಎಸ್ ಅಧಿಕಾರಿ ಹಾಗೂ ಹೆಬ್ಬಗೋಡಿ ಠಾಣೆ ಇನ್‌ಸ್ಪೆಕ್ಟರ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಆಕಾಶ್ ಅವರು ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಪತ್ನಿ ವಂದನಾ, ಅವರ ತಂದೆಯಾದ ನಿವೃತ್ತ ಐಪಿಎಸ್ ಅಧಿಕಾರಿ ಟಿ.ಆರ್. ಸುರೇಶ್, ಗಾಯತ್ರಿ, ಜಗದೀಶ್ ಹಾಗೂ ಕೃತ್ಯಕ್ಕೆ ಸಹಕರಿಸಿದ್ದ ಹೆಬ್ಬಗೋಡಿ ಠಾಣೆಯ ಇನ್‌ಸ್ಪೆಕ್ಟರ್ ಐಯ್ಯಣ್ಣ ರೆಡ್ಡಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಬೆಂಗಳೂರು ಸೈಬರ್ ಕ್ರೈಂ ಠಾಣೆ ಮೂಲಗಳು ಹೇಳಿವೆ.

'ಡಾ. ಆಕಾಶ್ ಹಾಗೂ ಪತ್ನಿ ವಂದನಾ ನಡುವೆ ಕೌಟುಂಬಿಕ ವ್ಯಾಜ್ಯವಿದೆ. ಈ ಸಂಬಂಧ ವಿವಿಧ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ. ನ್ಯಾಯಾಲಯದಲ್ಲೂ ವಿಚಾರಣೆ ನಡೆಯುತ್ತಿವೆ. ಇದರ ನಡುವೆಯೇ ಆರೋಪಿಗಳು, ಡಾ. ಆಕಾಶ್ ಅವರ ಮೊಬೈಲ್ ಕರೆಗಳ ವಿವರಗಳನ್ನು ಅಕ್ರಮವಾಗಿ ಸಂಗ್ರಹಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ರೇವ್ ಪಾರ್ಟಿ ಪ್ರಕರಣದಲ್ಲಿ ನೋಟಿಸ್: ಹೆಬ್ಬಗೋಡಿಯ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಸಿಸಿಬಿ ಪೊಲೀಸರು ಇತ್ತೀಚೆಗೆ ದಾಳಿ ಮಾಡಿದ್ದರು. ಇದೇ ಪ್ರಕರಣದಲ್ಲಿ ಠಾಣೆಯ ಇನ್‌ಸ್ಪೆಕ್ಟರ್ ಐಯ್ಯಣ್ಣ ರೆಡ್ಡಿ ಅವರಿಗೆ ಕರ್ತವ್ಯ ಲೋಪದ ಬಗ್ಗೆ ಕಾರಣ ಕೇಳಿ ನೋಟಿಸ್ ನೀಡಲಾಗಿದ್ದು, ಇಲಾಖೆ ವಿಚಾರಣೆ ಪ್ರಗತಿಯಲ್ಲಿದೆ.

ಹಣ ದುಪ್ಪಟ್ಟು ಆಮಿಷ: ₹ 30 ಕೋಟಿ ವಂಚನೆ

ಕಲಬುರಗಿ: ವರ್ಷದಲ್ಲಿ ಹಣ ದುಪ್ಪಟ್ಟು ಆಮಿಷವೊಡ್ಡಿ ಶಿಕ್ಷಕ ಸೇರಿ ಹಲವರಿಂದ ₹ 30 ಕೋಟಿ ಪಡೆದು ಪರಾರಿಯಾದ ಆರೋಪದಡಿ ರೋಜಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ಕ್ಯಾಪಿಟಲ್ ಗ್ರೋ ಲರ್ನ್' ಟ್ರೇಡಿಂಗ್ ಕಂಪನಿ ಮಾಲೀಕರಾದ ಉತ್ಕರ್ಷ ವರ್ಧಮಾನೆ ಸಾವಿತ್ರಿ ವರ್ಧಮಾನೆ, ಪರಾರಿಗೆ ಸಹಕರಿಸಿದ ಆರೋಪದಡಿ ಸುಧಾ ಠಾಕೂರ ಮತ್ತು ಸಂಬಂಧಿ ವಿಜಯಸಿಂಗ್ ವಿರುದ್ಧ ದೂರು ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರೋಗಿ ಮೇಲೆ ಹಲ್ಲೆ ಆರೋಪ

ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಘಟನೆ • ದೂರು ಬಂದಿಲ್ಲ– ಪೊಲೀಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಸಿ. ಜನರಲ್ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದ ವೆಂಕಟೇಶ್ ಎಂಬುವವರ ಮೇಲೆ ಹಲ್ಲೆ ನಡೆದಿರುವ ಆರೋಪ ವ್ಯಕ್ತವಾಗಿದ್ದು, ಘಟನೆ ಬಗ್ಗೆ ಪೊಲೀಸರು ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ.

'ನೆಲಮಂಗಲದ ವೆಂಕಟೇಶ್ ಮೇಲೆ ಹಲ್ಲೆ ನಡೆದಿರುವುದಾಗಿ ಸಂಬಂಧಿಕರು ಆರೋಪಿಸುತ್ತಿದ್ದಾರೆ. ಆಸ್ಪತ್ರೆಯಲ್ಲಿ ಪರಿಶೀಲಿಸಲಾಗಿದೆ. ಹಲ್ಲೆ ಬಗ್ಗೆ ಪುರಾವೆಗಳು ಸಿಕ್ಕಿಲ್ಲ. ಸಂಬಂಧಿಕರು ಯಾವುದೇ ದೂರು ಸಹ ನೀಡಿಲ್ಲ' ಎಂದು ಮಲ್ಲೇಶ್ವರ ಠಾಣೆ ಪೊಲೀಸರು ಹೇಳಿದರು.

ಸಿಬ್ಬಂದಿಯಿಂದ ಹಲ್ಲೆ: 'ವಿಷ ಕುಡಿದು ಅಸ್ವಸ್ಥಗೊಂಡಿದ್ದ ವೆಂಕಟೇಶ್ ಅವರನ್ನು ಕೆ.ಸಿ.ಜನರಲ್ ಆಸ್ಪತ್ರೆಗೆ ಇದೇ ತಿಂಗಳ 22ರಂದು ದಾಖಲಿಸಲಾಗಿತ್ತು. ಇದೇ ಸಂದರ್ಭದಲ್ಲಿ ಆಸ್ಪತ್ರೆ ಸಿಬ್ಬಂದಿ ವೆಂಕಟೇಶ್ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಸಂಬಂಧಿಕರು ಆರೋಪಿಸಿದ್ದಾರೆ.

ಹಲ್ಲೆ ಆರೋಪದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿರುವ ಆಸ್ಪತ್ರೆ ವೈದ್ಯರು, 'ಐಸಿಯುದಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುವುದು ಕಷ್ಟ. ಪ್ರಾಣಸಂಕಟದಿಂದ ಒದ್ದಾಡುವ ರೋಗಿಗಳು, ಚಿಕಿತ್ಸೆಗೆ ಅಡ್ಡಿಪಡಿಸುತ್ತಾರೆ. ಇಂಥ ರೋಗಿಗಳನ್ನು ನಿಯಂತ್ರಣ ಅಗತ್ಯ. ವೆಂಕಟೇಶ್ ವಿಚಾರದಲ್ಲೂ ಅವರನ್ನು ನಿಯಂತ್ರಿಸಿ ಚಿಕಿತ್ಸೆ ನೀಡಲಾಗಿದೆ. ಹಲ್ಲೆ ಮಾಡಿಲ್ಲ' ಎಂದಿದ್ದಾರೆ.

'ಹಲ್ಲೆ ಬಗ್ಗೆ ಇದುವರೆಗೆ ಯಾವುದೇ ರೀತಿಯ ಪುರಾವೆಗಳು ಸಿಕ್ಕಿಲ್ಲ. ಅಲ್ಲದೆ, ಘಟನೆಯ ಬಗ್ಗೆ ಸಂಬಂಧಿಕರೂ ಪೊಲೀಸರಿಗೆ ದೂರು ನೀಡಿಲ್ಲ. ಸದ್ಯಕ್ಕೆ ಯಾವುದೇ ಕ್ರಮ ಜರುಗಿಸಿಲ್ಲ. ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಮದ್ಯ ಕುಡಿದು ವಾಹನ ಚಾಲನೆ 386 ಚಾಲಕರ ವಿರುದ್ಧ ಪ್ರಕರಣ

ಬೆಂಗಳೂರು: ಮದ್ಯ ಕುಡಿದು ವಾಹನ ಚಲಾಯಿಸುವವರ ಪತ್ತೆಗೆ ನಗರದ ಸಂಚಾರ ಪೊಲೀಸರು ಶನಿವಾರ ರಾತ್ರಿ ವಿಶೇಷ ಕಾರ್ಯಾಚರಣೆ ನಡೆಸಿದ್ದು, 386 ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

'17,361 ವಾಹನಗಳನ್ನು ತಡೆದು ಸವಾರರು, ಚಾಲಕರನ್ನು ಪರಿಶೀಲಿಸಲಾಯಿತು. 'ಮದ್ಯ ಕುಡಿದು ವಾಹನ ಚಾಲನೆಯಿಂದ ಅಪಘಾತಗಳು ಸಂಭವಿಸುತ್ತಿವೆ. ಇದನ್ನು ತಡೆಯಲು ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

'ಶನಿವಾರ ಮದ್ಯ ಕುಡಿದು ವಾಹನ ಚಲಾಯಿಸಿ ಸಿಕ್ಕಿಬಿದ್ದಿರುವ ಚಾಲಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವಾಹನಗಳನ್ನು ಜಪ್ತಿ ಮಾಡಲಾಗಿದೆ. ಕೋರ್ಟ್‌ನಲ್ಲಿ ದಂಡ ಪಾವತಿಸಿದ ಬಳಿಕ ವಾಹನ ಬಿಡುಗಡೆ ಮಾಡಲಾಗುವುದು' ಎಂದು ತಿಳಿಸಿದರು.

ಬಿಟ್ ಕಾಯಿನ್ ಕಳವು: ರಾಬಿನ್ ಬಂಧನ

ಬೆಂಗಳೂರು: ಯೂನೊಕಾಯಿನ್ ಟೆಕ್ನಾಲಜೀಸ್ ಕಂಪನಿಯ ಸರ್ವರ್ ಹ್ಯಾಕ್ ಮಾಡಿ 60.6 ಬಿಟ್ ಕಾಯಿನ್ (ಸದ್ಯದ ಮಾರುಕಟ್ಟೆ ಮೌಲ್ಯ ₹34.82 ಕೋಟಿ ಮೌಲ್ಯ) ಕಳ್ಳತನ ಮಾಡಿದ್ದ ಪ್ರಕರಣದಲ್ಲಿ ಆರೋಪಿ ರಾಬಿನ್ ಖಂಡೇನ್‌ವಾಲ ಅವರನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸಿದ್ದಾರೆ.

'ಪಶ್ಚಿಮ ಬಂಗಾಳದ ರಾಬಿನ್ ಖಂಡೇನ್‌ವಾಲ, ಕರೆನ್ಸಿ ವಿನಿಮಯ ಕೆಲಸ ಮಾಡುತ್ತಿದ್ದರು. 'ರಾಬಿನ್ ಆನ್‌ಲೈನ್ ಸರ್ವೀಸ್' ಹೆಸರಿನಲ್ಲಿ ಕಂಪನಿ ಸಹ ನಡೆಸುತ್ತಿದ್ದ. ಪ್ರಮುಖ ಆರೋಪಿಯಾದ ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ (29) ಕಡೆಯಿಂದ ಬಿಟ್ ಕಾಯಿನ್‌ಗಳನ್ನು ಪಡೆದು, ರೂಪಾಯಿಗೆ ವಿನಿಮಯ ಮಾಡಿಕೊಟ್ಟಿದ್ದ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'2017ರಲ್ಲಿ ತುಮಕೂರಿನಲ್ಲಿರುವ ಯೂನೊಕಾಯಿನ್ ಟೆಕ್ನಾಲಜೀಸ್ ಕಂಪನಿಯ ಸರ್ವರ್ ಹ್ಯಾಕ್ ಮಾಡಿ 60.6 ಬಿಟ್ ಕಾಯಿನ್ ಕಳ್ಳತನ ಮಾಡಲಾಗಿತ್ತು. ಈ ಸಂಬಂಧ ಕಂಪನಿ ನಿರ್ದೇಶಕ ಬಿ.ವಿ. ಹರೀಶ್ ದೂರು ನೀಡಿದ್ದರು. ಪ್ರಕರಣದ ತನಿಖೆ ಕೈಗೆತ್ತಿಕೊಂಡು ತಾಂತ್ರಿಕ ಪುರಾವೆಗಳನ್ನು ಆಧರಿಸಿ ಶ್ರೀಕಿಯನ್ನು ಇತ್ತೀಚೆಗಷ್ಟೇ ಬಂಧಿಸಲಾಗಿತ್ತು' ಎಂದು ತಿಳಿಸಿವೆ.

'ಕಳ್ಳತನ ಮಾಡಿದ್ದ ಬಿಟ್ ಕಾಯಿನ್‌ಗಳಲ್ಲಿ ಕೆಲ ಬಿಟ್ ಕಾಯಿನ್‌ಗಳನ್ನು ಆರೋಪಿ ಶ್ರೀಕಿ, ರಾಬಿನ್‌ಗೆ ನೀಡಿದ್ದ ನೆಂಬುದು ತನಿಖೆಯಿಂದ ಗೊತ್ತಾಗಿತ್ತು. ರಾಜಸ್ಥಾನದಲ್ಲಿ ತಲೆಮರೆಸಿಕೊಂಡಿದ್ದ ರಾಬಿನ್‌ನನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಮೂಲಗಳು ತಿಳಿಸಿವೆ.

'ಶ್ರೀಕಿ ಹಾಗೂ ರಾಬಿನ್ ಹಲವು ವರ್ಷಗಳ ಸ್ನೇಹಿತರು. ಶ್ರೀಕಿ ನೀಡುತ್ತಿದ್ದ ಬಿಟ್ ಕಾಯಿನ್‌ಗಳನ್ನು ವಿನಿಮಯ ಮಾಡುತ್ತಿದ್ದ ರಾಬಿನ್, ಹವಾಲಾ ಮೂಲಕ ವಿವಿಧ ಖಾತೆಗಳಿಗೆ ಹಣ ಜಮೆ ಮಾಡುತ್ತಿದ್ದ. ಇದಕ್ಕಾಗಿ ಕಮಿಷನ್ ಪಡೆಯುತ್ತಿದ್ದ' ಎಂದು ಹೇಳಿವೆ.

ಕೋಕಾ ಕಾಯ್ದೆ: 'ಆರೋಪಿಗಳಾದ ಶ್ರೀಕಿ, ರಾಬಿನ್ ಹಾಗೂ ಇತರರು, ಸಂಘಟಿತರಾಗಿ ಕೃತ್ಯ ಎಸಗಿರುವುದಕ್ಕೆ ಪುರಾವೆಗಳು ಲಭ್ಯವಾಗಿವೆ. ಎಲ್ಲರ ವಿರುದ್ಧ ಕೋಕಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಈ ಇಬ್ಬರು ಹಲವು ಕರೆನ್ಸಿ ವಿನಿಮಯ ಏಜೆನ್ಸಿಗಳ ಸರ್ವರ್ ಹ್ಯಾಕ್ ಮಾಡಿ ಹಣ ಗಳಿಸಿರುವ ಮಾಹಿತಿ ಇದೆ. ಈ ಬಗ್ಗೆ ತನಿಖೆ ಮುಂದುವರಿಸಲಾಗಿದೆ' ಎಂದಿವೆ.

'ಅಪ್ರಾಪ್ತರಿಗೆ ವಾಹನ ನೀಡಿದರೆ ಪೋಷಕರ ವಿರುದ್ಧ ಕಠಿಣ ಕ್ರಮ'

ಬೆಂಗಳೂರು: 'ಅಪ್ರಾಪ್ತ ಮಕ್ಕಳಿಗೆ ಚಲಾಯಿಸಲು ವಾಹನ ನೀಡಿದರೆ, ಪೋಷಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಎಚ್ಚರಿಕೆ ನೀಡಿದರು.

ಎಲೆಕ್ಟ್ರಾನಿಕ್ ಸಿಟಿ ಬಳಿಯ ಐಐಐಟಿ ಕಾಲೇಜು ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಮಾಸಿಕ ಜನಸಂಪರ್ಕ ಸಭೆ'ಯಲ್ಲಿ ಮಾತನಾಡಿ, 'ಅಪ್ರಾಪ್ತರು ವಾಹನ ಚಲಾಯಿಸುವುದು ಅಪರಾಧ. ಇಂಥ ಪ್ರಕರಣಗಳಲ್ಲಿ ಬಾಲಕರನ್ನು ವಶಕ್ಕೆ ಪಡೆದು, ವಾಹನ ಜಪ್ತಿ ಮಾಡಲಾಗುತ್ತದೆ. ಅಪ್ರಾಪ್ತರ ವಿರುದ್ಧ ಬಾಲ ನ್ಯಾಯ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು, ಪೋಷಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಳ್ಳಲು ಅವಕಾಶವಿದೆ' ಎಂದರು.

RAMRAJ COTTON SHOWROOMS

BANGALORE : KG ROAD • SHIVAJI NAGAR • ULSOOR • GANDHI BAZAR • MALLESHWARAM • JAYANAGAR : 30TH CROSS ROAD SS PLAZA, 10TH B MAIN ROAD • KORAMANGALA • RAJAJI NAGAR • R.T. NAGAR • VIJAYANAGAR • BANASHANKARI YESHWANTHPUR • YELACHENAHALLI • UTTARAHALLI • HSR LAYOUT • RAMAMURTHY NAGAR • J.P. NAGAR • RR NAGAR MARATHAHALLI • KR PURAM • KENGERI • HESARAGATTA • YELHANKA • NELAMANGALA • DEVANAHALLI CHINTAMANI • KANAKAPURA • RAMNAGARA • TUMKUR • CHANDAPURA • CHAMBENAHALLI (SARJAPURA MAIN ROAD)

Available at Ramraj Cotton Showrooms and All Leading Textile Shops | shop online @ www.ramrajcotton.in

MBBS

Ministry Of Health Of Russia

SMOLENSK STATE MEDICAL UNIVERSITY, RUSSIA

Invites Indian students for direct Government Admissions
Recognized by India, WHO, USA & UK, Min. Qual. 50% in XII in PCB
Satisfies all requirements of NMC of India

UNIVERSITY - 104 years old University, Smolensk is 380 km west of Moscow, Very high standards of education, strict disciplinary system. **2050** Indian students (**900** Girls) studying, **330** getting degree in **2024.** Duration 6 years including internship and License. English Medium in all years, Closed type campus system, **8** attached hospitals (**9000** Beds).

MCI SCREENING TEST – Our graduates of **2008** to **2023** have given **BEST** results among graduates of all foreign medical colleges (Official web sites of Indian Embassy, Moscow and NBE conducting Screening Test confirm this).

SPECIAL HOSTELS ONLY FOR INDIAN STUDENTS WITH INDIAN MESS

Fee (Tuition+Hostel+Med.Ins.) – **USD 6000** (Approx. Rs. 4,94,000/-) per year and one time payment of Rs.1,50,000/- (By Bank Draft only) which includes – Admission procedure, invitation letter, student visa, air ticket Delhi - Moscow.

Scholarship to all Indian students. Bank loans from Indian banks are available.
Contact Foreign advisor to Chancellor: Dr.Alok Aeron+79605805555(Russia)

Official web site: www.sgmu.info
DM us on insta: @sgmu.info
Admission details: admission.sgmu.live

INFORMATION CENTERS (Parents of Students or Our Graduates):
Hubli-Dharwad & Belgavi: Dr. Suchita Halli - 9916187559
Bellary: Mr. N. Thirumala Reddy – 9441071440

2, 3 & 4-BHK APARTMENTS FOR SALE IN VARIOUS LOCATIONS

PRM/KA/RERA/1251/310/PR/210324/006724 BEGUR NEAR SINGASANDRA METRO STN. ₹ 71.36 L - 1.16 Cr*	PRM/KA/RERA/1251/309/PR/060923/006244 OFF TUMKUR RD NEAR HIMALAYA FACTORY ₹ 45.81 - 64.12 Lakhs*	PRM/KA/RERA/1251/446/PR/210312/004002 K R PURAM NEAR GARDEN CITY UNIVERSITY ₹ 60.15 - 87.72 Lakhs*	PRM/KA/RERA/1251/308/PR/290122/004660 SARJAPURA SARJAPUR - ATTIBELE ROAD ₹ 38.72 - 49.80 Lakhs*	PRM/KA/RERA/1250/304/PR/150224/006622 WHITEFIELD 10 MINS. HOPEFARM METRO STN. ₹ 50.71 - 99.55 Lakhs*	PRM/KA/RERA/1251/309/PR/181122/002151 KOGILU CROSS NR. YELAHANKA METRO STATION ₹ 61.74 - 84.72 Lakhs*
PRM/KA/RERA/1251/308/PR/201201/003733 HOSA ROAD JN. 5 MINS. BOSCH-ELECTRONIC CITY ₹ 54.10 L - 1.15 Cr*	PRM/KA/RERA/1251/309/PR/220223/005748 THANISANDRA 10 MINS. MANYATA TECH PARK ₹ 59.56- 86.79 Lakhs*	PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO ₹ 37.60 - 49.60 Lakhs*	PRM/KA/RERA/1251/310/PR/150223/005721 MYSORE ROAD NEAR RR DENTAL COLLEGE ₹ 49.63 - 79.66 Lakhs*	PRM/KA/RERA/1251/309/PR/211209/004576 YELAHANKA NEAR RAJANAKUNTE TOLL ₹ 37.52 - 88.58 Lakhs*	PRM/KA/RERA/1251/309/PR/030524/006841 HENNUR ROAD 5 MINS. HENNUR DECATHLON ₹ 53.40 - 87.10 Lakhs*

*T & C Apply

ಡಿಎಸ್ ಮ್ಯಾಕ್ಸ್ FOR PROJECT SPECIFIC INFORMATION 7022 791 222 www.dsmaxproperties.com

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in

WANTED DEALERS

Midwest Granite Pvt. Ltd. (Diamond Tools Division)

"We are diamond tools manufacturing company with an annual turnover of 600 Crores, based in Hyderabad, inviting applications from interested companies or individuals, who are in the businesses related to granite quarry and processing industry machines / Material suppliers in Karnataka, to become our dealers.

REQUIREMENTS
1. Security Deposit of Rs.20 Lakhs.
2. Establish of small outlets in Chikballapur, Tumkur, Chamraj Nagar & ilkal.

Interested parties are requested to submit details including their current business, operations, team size, annual turnover and any branch offices".

pvs.prasad@midwestgranite.com
ravikumar.vvrs@midwestgranite.com
Ph: +91-7337285852

SMT. PUSHPA SHAMANUR MAHALINGAPPA
CBSE / ICSE RESIDENTIAL SCHOOL, & PU SCIENCE COLLEGE DAVANGERE / BATHI
#5335, 1st Main, Swami Vivekananda Badavane, Near BIET College, Davangere - 4

SPSM NEET LONG-TERM COACHING - 2025

ನಿಮ್ಮ ನೀಟ್ - 2024 ಅಂಕಗಳ ಮೇಲೆ ಟ್ಯೂಷನ್ ಫೀ ನಲ್ಲಿ ಶೇ.100% ವರೆಗೂ ಸ್ಕಾಲರ್‌ಶಿಪ್ ಪಡೆಯಬಹುದು

2024ರ ನಮ್ಮ ನಿರೀಕ್ಷಿತ ನೀಟ್ ಟಾಪರ್‌ಗಳು

Limited Seats
Limited Hostel Facility

Above 500+ MARKS — Get 1 lakh Cash Award* WITH FREE COACHING & HOSTEL

Above 400+ MARKS FREE COACHING INCLUDING HOSTEL
50% Scholarship 375-400 Marks
30% Scholarship 350-375 Marks
20% Scholarship 300-350 Marks

ಪ್ರತಿ ವರ್ಗದಲ್ಲಿ ಮೊದಲು ಬಂದ 25 ವಿದ್ಯಾರ್ಥಿಗಳಿಗೆ ಮಾತ್ರ ಈ ಸ್ಕಾಲರ್‌ಶಿಪ್ ಸಿಗುತ್ತದೆ

1ST Batch Starts from 17 June, 2024

* CONDITIONS APPLICABLE

For Registration : 8050222171 / 8970068800 / 8970071100 / 7259222250

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED TEACHERS to Teach MATHS, SOCIAL, KANNADA, COMPUTERS. Contact: ABDUL BARI'S ENGLISH HIGH SCHOOL, Haines Road, Near ColesPark. WhatsApp:9353111888

Jyoti Nivas College Autonomous
Koramangala Bengaluru -560 095
Ph: 25530137 Fax: 25533886
www.jyotinivas.org

REQUIRES

Assistant Professors in Computer Science, Zoology, Psychology, Commerce and Management
Qualification: PG first Class with NET / KSET.
Preferred Ph.D from a reputed University.
Eligible Candidates walk in for interview with your Curriculum Vitae/ Original Documents on the following date / time

Interview	Date	Time
Computer Science	28.05.2024	10.00 am to 12.30 noon
Psychology	28.05.2024	2.00 pm to 4.30pm
Commerce and Management	29.05.2024	10.00 am to 12.30 noon
Zoology	29.05.2024	2.00 pm to 4.30 pm

Non-Teaching Staff:
1. Accounts Assistant: MBA / M.Com Finance, Computer knowledge with Tally and Taxation.
2. Data Operator : BCA / BSc Computer Science

Apply to the Principal:
Jyoti Nivas College Autonomous
info@jyotinivas.org

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Email: recruitdrsmce2211@gmail.com Website: www.drsmce.org

Faculty Positions for Engineering & Polytechnic

Applications are invited for the posts of Professors, Associate Professors and Asst. Professors in the following Disciplines...

- Computer Science & Engineering
- Information Science & Engineering
- Electronics & Communication Engineering
- Electrical & Electronics Engineering
- Basic Science Department : Physics, Chemistry and Mathematics
- Kannada, English
- MBA (Marketing, Finance, HR)
- Physical Education Director
- Librarian and Asst. Librarian

Non Teaching Posts
- Accountants, FDA, SDA.
- Typists (Kannada & English)
- Wardens : Boys Hostel & Girls Hostel
- Receptionist, Drivers
- Foremen, Instructors and attenders in the above departments

Qualification and Pay Scale: As per AICTE norms

Note: For the posts of Professor & Associate Professor, Candidates having Ph.D are only eligible. Apply Via email and hard copy so as to reach before 7 days from the date of advertisement along with your detailed CV & supporting documents.

Dr. H.D. Ramesh, Principal
98806 58861 / 77602 68213

Sri D.C. Venugopal
Chairman

JANATHA EDUCATION SOCIETY (R) Est. 1972
Dr.Rajkumar Road, 2nd Stage, Rajajinagar, Bengaluru-55
Phone: 080 - 23371952 /6366733434

Applications are Invited

VIVEKANANDA INSTITUTE OF TECHNOLOGY
- **PROFESSOR:** Dept. of CS /E&C/IS/AIML
- **ASSOCIATE PROFESSOR:** Dept. of CS/E&C/IS/ AIML
- **ASSISTANT PROFESSOR:** CS /E&C/I&S/ AIML
  Qualification – As per AICTE norms.
- **Physical Education Director:** M.PEd, 2-5 years' exp - 2 posts
- **Lady Warden:** Any degree with 2-5 years' exp, proficient in Kannada, English and Hindi – 2 Posts

VIVEKANANDA INSTITUTE OF MANAGEMENT
- **Assistant Professor:** BCA Dept. - MCA /M.Sc/ BE in CS with 0-5 years' exp - 2 posts
- **Assistant Professor - MBA Dept.** - Masters in Finance & Accounts with 0-5 years' exp -2 posts
- **Lab Assistant:** BCA with 1-3 years' exp -2 posts

VIVEKANANDA PU COLLEGE FOR WOMEN
LECTURER:
- Economics — MA, B.Ed in Economics with 3 yrs. exp
- Commerce — M.Com B.Ed with 3 yrs. exp
- Kannada — MA, B.Ed in Kannada with 3 yrs. exp
- Mathematics — M.Sc. B.Ed. Mathematics with 3 year exp

VIVEKANANDA PU COLLEGE –RAJAJINAGARA
LECTURER: FULL TIME
- **Computer Science:** MCA /M.Sc/ BE in CS with min 1-3 yrs exp
- **Biology:** M.Sc, B.Ed in Biology with 3-4 yrs exp
- **English:** MA. B.Ed in English with min 3-4 yrs exp.

LECTURER: PART TIME
- **Commerce:** M.Com. B. Ed with min 3-4 yrs exp
- **English:** MA. B.Ed in English with min 3-4 yrs exp.
- **Economics:** MA. B.Ed in Economics with min 3-4 yrs exp

VIVEKANANDA PUBLIC SCHOOL, KUMBALAGODU
- **Primary Hindi Teacher:** Any Degree with Hindi, D.Ed
- **Music & Dance Teacher:** Senior Bharatanatyam

Eligible candidates may send their BIODATA along with 2 passport size photos through registered post or in person to the Hon. Secretary to reach him within 10 days or email to jobs@jes-edu.in.

Sri.H.C.Balakrishna, President — Sri H.G.Balagopal, Hon..Secretary

BLUEMOON PUBLIC SCHOOL
REQUIRED TEACHERS
Experienced B.Ed Graduate, MA, M.Ed, Post Graduate
Subject: English & Social Science for the High School.
Contact: 080 – 29706092, Mob: 8971427322
N R Palya, Nagarur Road near Arshinakunte, Dasanpura Hobli, Bengaluru North.

WANTED POST Graduate Teachers for English medium school with fluency in English, minimum 5years Experience for high school, primary and nursery with NTT & B.ed for Mathematics, Social Science (History,Geography) Hindi ,Kannada and 1st Language English Wanted Assistant headmistress with 10 years' Experience & Administrator Fresher's and Retd Teachers can also apply.Walk in interview between 10am to 1.00pm {31-05-2024 & 3-06-2024}Apply to The Principal / Secretary Pandit Jawaharlal Nehru Memorial High School 6/23/1,4th main 9th cross Chamrajpet Bengaluru-560018 Contact :9632315392,/9964116443

WANTED FRESHER/ Experience Teachers/ Assistant Head Master/ Academic Co-ordinators English/ Science/ Maths/ Social Science/ Hindi/ Computer Teachers/ Computer Data Entry Operator. Salary Rs. 20000 to 35000/- PM ESI, PF, Attender Rs. 15000/- per month. Walk-In Interview All Working Days Between 10.30 AM To 4.00 PM MATHA'S INTERNATIONAL SCHOOLICSE Affiliation Code KA470, Matha's English High School ® State Syllabus English Medium #55/2B, 11th K.M. Hosur Main Road, Garuve Bhavi Palya, Bommanahalli Post, Bangalore-560068 M: 9449814917/ 8277258609

HERITAGE PUBLIC SCHOOL Srinidhi Layout, J.P.Nagar 8th Phase Konanakunte Bengaluru-62. Requires: High School Co-Ordinator, English and Social Teachers for Middle School, PE Teachers, Kindergarten Co Ordinator and Teachers. Attractive Salary Graduates can also apply.Call: 080-26322111 9901733776.

WANTED FRESHER/ Experience Teachers/ Assistant Head Master/ Academic Co-ordinators English/ Science/ Maths/ Social Science/ Hindi/ Computer Teachers/ Computer Data Entry Operator. Salary Rs. 20000 to 35000/- PM ESI, PF, Attender Rs. 15000/- per month. Walk-In Interview All Working Days Between 10.30 AM To 4.00 PM MATHA'S INTERNATIONAL SCHOOLICSE Affiliation Code KA470, Matha's English High School ® State Syllabus English Medium #55/2B, 11th K.M. Hosur Main Road, Garuve Bhavi Palya, Bommanahalli Post, Bangalore-560068 M: 9449814917/ 8277258609

TUNBRIDGE HIGH SCHOOL Requires 1.Kannada Teacher 2.School Bus Driver 3.Housekeeping Staff: Male and Female 080-29501011/ 9448151364/ 9980157598 Email Resume to: careers@tunbridgehs.com

TEACHERS WANTED To Teach all Subjects for English Medium high School and LKG to 7th Std. Qualification: any degree, D.Ed/ B.Ed, C.PEd/ B.PEd, with good fluency in English. Contact immediately. NBN Vidyamandira, Weaves Colony, Bannerugatta Road. Phone:- 9341247744.

FLORENCE HIGH SCHOOL, Viviani Road, Richards Town, Bangalore-560005 and THE BEST HIGH SCHOOL, HBR Layout, V'Block, Bangalore-43 REQUIRES LADY TEACHERS, TRAINED GRADUATES, POST-GRADUATES WITH 5'years experience to teach SCIENCE, ENGLISH, SOCIAL SCIENCE, COMPUTERS and PHYSICAL EDUCATION for PRIMARY and HIGH SCHOOL. Salary according to merit. Apply/ walk-in/ Contact Principal 10:00AM to 3:00PM. Phone: 9845583297/ 8904474400 slflorence@yahoo.co.in

TEACHERS WANTED for Kannada Medium CBZ: B.Sc, B.Ed, Physical Education: B.P.Ed. For English Medium: Computer Science- BCA/ B.Sc (CS), Drawing: BVA/ BFA and MVA/ MFA, Physical Education- B.P.Ed. Principal: Loyala High School, Bannerghatta Road, Bangalore-76. 9538730271. Email: loyolablr@gmail.com

REQUIRED EXPERIENCED Female Academic Supervisor having 5 years experience as a teacher. Contact Max Muller Public School, Mahalakshmi Layout, B'lore-96. Ph: 23376049/50. E.mail- maxmullerpublicschool.mlayout@gmail.com

REQUIRED TEACHERS for 1. Primary Hindi,English,Coding and Computer Science 2.Smart and young Accountant. Royal Public School. Call:9035033560

"WANTED LADY TEACHERS B.Sc,`B.Ed (Maths,Science) BA,`B.Ed (Kannada, English)`D.Ed. "Good Hope High School", Chinnappa Garden, Bangalore-46, Phone:080 23331008, Contact with Originals-10am-1pm"

RMS INSTITUTE of Management & Science Applications are invited for the following posts. PRINCIPAL- PG in Commerce/ Management/ Science with Ph.D. 3 to 5 years of experience as Principal in Degree College is preferred. LECTURERS- for B.Com.,B.B.A and B.C.A. PG with 3-5 years of teaching experience in Degree college is preferred. ACCOUNTANT- 3-5 years. Apply immediately. Forward resume to: rmsinstitution@gmail.comor Contact: 9845900062

WANTED QUALIFIED Mathematics and Science Teacher for High School with B.Sc. B.Ed. (PCM), with a minimum of 2 years Teaching Experience for Immediate Appointment. 'The Colonel Hill English High-School' No.3 Colonel Hill Road, Shivajinagar, Bangalore-560051. Please send your resume to chehs1964@gmail.com OR Contact: 080-22868856, 8618161419

VIJAYA BHARATHI SCHOOL, T-Dasarahalli, Bengaluru-560057 Immediately Required LADY TEACHERS Maths for High School & Social for Primary. Contact:9481664735

WANTED: HEAD MASTER/ MISTRESS, TEACHERS: English & for all subjects, Physical training, administrative skills preferred for S.S.K. Convent and English High School. Apply with photograph to: S.S.K. Sangha, 2, K.V. Temple Street, Near Balepet Circle, Bengaluru-53. Phone: 8867002323, 9341332200. E-Mail: ssksangha@gmail.com

WANTED EXPERIENCED Teachers for Nursery, Primary and High School (Science). Vijayanagar, Bangalore. Contact: 8431812577/ 080-23306496.

GE KAY Convent High School Judges Colony 3rd Stage, 2nd Block, Basaveshwaranagar Bengaluru, Required Teachers for H.S, Kannada, English and Primary Teachers, experienced elderly teachers also preferred Contact Immediately Principal: 9880800758

WALK-IN INTERVIEW. Carmel Garden High School, Nandini Layout, Bangalore. MSC B.Ed. CBZ. Phone: 8618293621.

WANTED TEACHERS English, Hindi, Computer, Social, Maths, Kannada. SANS PUBLIC SCHOOL, Nandini Layout: 9448228407/ 8867832191

WANTED TEACHERS English, Social Science, Maths,'PT. Part-Time Yoga, Primary/High School. Good Salary. 3rd Phase, J.P.Nagar. 9845042249, 26590773

TRAINED POST-GRADUATE TEACHERS for HIGH SCHOOL. ENGLISH, MATHS, SCIENCE, SOCIAL SCIENCE, HINDI. NAVODAYA VIDYANIKETHANA #19- Dinnur Main Road RT.-Nagar Bangalore-32 Whatsapp:9343247885 navodayavidyanikethna222@gmail.com

TEACHERS WANTED: Experienced, Qualified and Trained Teachers to Teach High School and PU College for Computers, Mathematics and Physics. Contact:- Principal: S.D.A. High School & PU College. Phone:- 9845606243. Email- sdapucollege@gmail.com

PERUMAL VIDHYA Nikethan Little Flower High School No. 47, 2nd Cross, Saibabanagar, Bangalore- 21 Mail Id: pvnlittleflower1987@gmail.com Contact: 080- 23126330 Wanted Maths & Science Lady Teachers for Higher Primary & High School Apply Immediately

DH Classifieds — More value, more impact — ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036 | +91 9731810277 | +91 9886213331 | 080- 45557163/164

MORE Classifieds Ads on Subsequent Pages

ಕ್ಲಾಸಿಫೈಡ್ಸ್ EDUCATION CORNER

ಸ್ಥಾಪನೆ : 1957 — ದೂ : 080–22421797

ಚಾಮರಾಜಪೇಟೆ ಶ್ರೀರಾಮಮಂದಿರ ಅಸೋಸಿಯೇಷನ್ (ನೋಂ)
ಲಕ್ಷ್ಮೀದೇವಿ ರಾಮಣ್ಣ ಪ್ರೌಢಶಾಲೆ
5ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು–560018

2023–24ನೇ ಸಾಲಿನ ಎಸ್.ಎಸ್.ಎಲ್.ಸಿ. ಫಲಿತಾಂಶ 100%

Vikas M. 87% | Anil Kumar G.S. 83% | Gangothri 81% | Lakshmi N. 79% | Navya R. 79% | Pallavi E. B. 77% | Pramod S.P. 75%

Dileep C. 75% | Sheeba Angela 74% | Nayana K. 74% | Sharanya A. 73% | Adarsh N.V. 73% | Gopi G. 70% | Aishwarya R. 70%

ಶುಭ ಕೋರುವವರು : ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು ಹಾಗೂ ಸಹಶಿಕ್ಷಕರು

Chamarajapet Sri Rama Mandira Association (Regd.)
LRHS CENTRAL SCHOOL
(Recognised by the Government of Karnataka)
6th Cross, 5th Main, Chamarajapet, BENGALURU - 560 018.
Phone : 2242 1797 / 2661 5966

We are proud of our Students' Excellent Results in Class 10 Examination of the year 2023-24.

The following are the School toppers.

Divya V. 88% | Nandan R. 86% | Kushal S. 83% | Mallikarjun K. 77% | Sharmila V. 70% | Kiran S. 67% | S. Siddartha 60%

The Management of CSRMA
Heartily Congratulates
The Students and the Staff for this outstanding Achievement

ವಿ.ವಿ.ಎನ್ ಪಿ.ಯು. ಕಾಲೇಜು
V.V.N P.U. COLLEGE
(A unit of Vasavi Vidyanikethan Trust) Awarded "A" Grade by PUE Department

Admissions open for I & II PUC COMMERCE Exclusively for Girls
Eligible Candidates Belonging to SC/ST/OBC Category can avail the Scholarship benefits provided by the State Government.

State Rank Holders

State 19th Rank — ANANYA S, SEBA, 581– 96.83%
State 20th Rank — KUSUMA NAGARAJU, SEBA, 578 – 96.33%

TOPPERS OF V.V.N PU

SANGEETHA J SEBA 577 – 96.17% | SPOORTHI M SEBA 574 – 95.67% | TANISHA S SEBA 568– 94.67% | P H NAGA MANOGNA SEBA 559 – 93.17%
KAVYASHREE Y A SEBA 557 – 92.83% | PALLAVI T CEBA 555 – 92.50% | PREETHI S CEBA 555 – 92.50% | DHANALAKSHMI C M SEBA 554 – 92.33%
H BRUNDHA SEBA 547– 91.17% | SHREYA M TAGADAGAR CEBA 543 – 90.50% | BHARGAVI N CEBA 542 – 90.33% | ASHWINI B K SEBA 539 – 89.83%

Combinations Offered
- SEBA - Statistics, Economics, Business Studies, Accountancy.
- GEBA- Geography, Economics, Business Studies, Accountancy.
- CEBA- Computer Science, Economics, Business Studies, Accountancy.
- MSBA- Basic Maths, Statistics, Business Studies, Accountancy.

Attractive Scholarship for Meritorious Students
No.3, Vani Vilas Road, V.V Puram, Bangalore-560004
Email : info@vvnpucollege.in Website : vvnpucollege.in
For Details Contact: 080-26613534 / 7411093008
For Admission Scan

RAMAN POLYTECHNIC
12, Magadi Main Road, Kamakshipalya, (Near Sumanahalli Bus Stop) Bengaluru-560079
Mobile: 80500 66771, 63609 03500
Website: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
ASC - RAMAN P.U. COLLEGE
Science ♦ Commerce | CONTACT: 6360127984
RAMAN I.T.I. COLLEGE
♦ Fitter ♦ Electronic Mechanic ♦ Electrician
RAMAN DEGREE COLLEGE
BBA — CONTACT: 80500 66771 / 63609 03500 — BCA
CALIFORNIA PUBLIC SCHOOL
ICSE & State Syllabus. Nursery to X std | CONTACT: 9481305504
RMN-24501

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-24502

Engg/ Production Technical

REQUIRE: 1.DIPLOMA Mechanical Engineers 2.BE Mechanical Engineers 3.ITI- Fitters/Welders/ Turners/Drillers 4.Store-Assistant, for our Motor and special pumps Manufacturing Unit at Devarachikkanahalli, Bannergatta Road, Bangalore. Email:flowoilpumps@hotmail.com, Ph:080-26484068/ 26482095

URGENT REQUIRED 1) ITI Electrician, Wireman or other electrical related ITI holder: 40, 2) Require Diploma Electrical Engineer: 10, 3) Require BTec/ BE Electricals: 2, At Banglore area, Tumkur, Mandaya, Hosur for Railway contract work. Contact: ZK Enterprise 9019059341/ 8200504015

Multiple Vacancy

OPPORTUNITY OF CAREER & INCOME FOR RETIRED OFFICIALS, BANKERS, TEACHERS, CA's, PROFESSIONALS, HOMEMAKERS. CALL: 8095301555

General

***SDS* KENGERI,** Bangalore. WANTED Field Executives salary:15,000/-,2 wheeler,Mobile must,all over Bangalore and Tele-callers. Contact: 9686469799

Marketing & Sales

ADVERTISING AGENCY REQUIRED MARKETING EXECUTIVES-2Nos. Male Candidates 2-Wheeler Must. Good Communication Skills, Computer Knowledge, Freshers also welcome. Call: 9845597155/ enquiry@spoorthiads.com

Graphic Designers

ADVERTISING AGENCY REQUIRED GRAPHIC DESIGNER-Good knowledge in CoralDraw, Photoshop. Kannada, English Typing speed. Call: 9845597155/ enquiry@spoorthiads.com

EDUCATION
To Place your Classified Ads Contact:
9845114560

OTHERS

Medical

RUNNING NEW Modern NABH Ready 50 Bed Hospital South Bangalore, Longterm Rental Partnership WhatsApp: 00447868727506

Four Wheelers Selling

Hyundai

FOR SALE: SANTRO XING 2005 Dec XK MODEL SINGLE OWNER. AC POWER STEERING. Contact: 9916936893.

AUTOMOTIVE

Four Wheelers Selling

Others

MG EV Nov 23 For Sale Run 350 KM Expecting 7 Lakhs Call 9341371412.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಪ್ರಜ್ವಲ್ ಪ್ರಕರಣ: 'ಯಾರಿಗೂ ಅಂಜದೇ ಸಿದ್ದರಾಮಯ್ಯ ಹಾಸನಕ್ಕೆ ಭೇಟಿ ನೀಡಲಿ': ಸಾಹಿತಿಗಳ ಆಗ್ರಹ

'ಸಂತ್ರಸ್ತರಿಗೆ ಧೈರ್ಯ ಹೇಳದ ಮುಖ್ಯಮಂತ್ರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆಯರಿಗೆ ಧೈರ್ಯ ತುಂಬುವ ಒಂದು ಹೇಳಿಕೆಯನ್ನೂ ನೀಡದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಅಸಮಾಧಾನ ಇದೆ' ಎಂದು ಲೇಖಕಿ ವಿಜಯಾ ಹೇಳಿದರು.

ನಗರದಲ್ಲಿ ಶನಿವಾರ ಪ್ರಗತಿಪರ ಚಿಂತಕರ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೇ 30ರ 'ಹೋರಾಟದ ನಡಿಗೆ ಹಾಸನದ ಕಡೆಗೆ' ಜಾಥಾದ ಭಿತ್ತಿಪತ್ರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ಸಿದ್ದರಾಮಯ್ಯ ಅವರು ಹಾಸನಕ್ಕೆ ಭೇಟಿ ನೀಡದಿರುವುದಕ್ಕೆ ವೈಯಕ್ತಿಕ ಕಾರಣವೂ ಇರಬಹುದು. ಧೈರ್ಯವಾಗಿ ಇರಿ; ಸರ್ಕಾರ ನಿಮ್ಮನ್ನು (ಸಂತ್ರಸ್ತ ಮಹಿಳೆಯರನ್ನು) ರಕ್ಷಿಸುತ್ತದೆ ಎಂಬುದನ್ನೂ ಹೇಳದ ಮುಖ್ಯಮಂತ್ರಿ ಕರ್ತವ್ಯ ಮರೆತಿದ್ದಾರೆ' ಎಂದರು.

'ಸಮಾಜವಾದಿ ಹಿನ್ನೆಲೆಯ ಸಿದ್ದರಾಮಯ್ಯ ಅವರು ನೊಂದವರಿಗೆ ನ್ಯಾಯ ಕಲ್ಪಿಸುತ್ತಾರೆ ಎನ್ನುವ ಭರವಸೆ ಇತ್ತು. ಅದು ಆಗುತ್ತಿಲ್ಲ' ಎಂದು ಹೇಳಿದರು.

ಬೆಂಗಳೂರಿನಲ್ಲಿ ಶನಿವಾರ ಪ್ರಗತಿಪರ ಚಿಂತಕರ ವೇದಿಕೆ ಆಯೋಜಿಸಿದ್ದ ಭಿತ್ತಿಪತ್ರ ಬಿಡುಗಡೆ ಸಮಾರಂಭದಲ್ಲಿ ಸಾಹಿತಿಗಳು ಹಾಗೂ ಹೋರಾಟಗಾರರು ಪಾಲ್ಗೊಂಡಿದ್ದರು. – ಪ್ರಜಾವಾಣಿ ಚಿತ್ರ

ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ ಮಾತನಾಡಿ, 'ಎಚ್.ಡಿ.ಕುಮಾರಸ್ವಾಮಿ ಅವರನ್ನು ಮೊದಲು ಬಂಧಿಸಬೇಕು. ಶಾಸಕ ಎಚ್.ಡಿ.ರೇವಣ್ಣ ಅವರ ಬಂಧನದ ಬಳಿಕ ಕುಮಾರಸ್ವಾಮಿ ಏನೇನೋ ಮಾತನಾಡುತ್ತಿದ್ದಾರೆ. ಕುಮಾರಸ್ವಾಮಿ ಅವರು ಈ ಪ್ರಕರಣದಲ್ಲಿ ಆರೋಪಿಗಳ ರಕ್ಷಣೆಗೆ ಇಳಿದಿರುವ ಅನುಮಾನ ಕಾಡುತ್ತಿದೆ' ಎಂದು ಹೇಳಿದರು.

ಸಾಹಿತಿ ಕೆ.ಮರುಳಸಿದ್ದಪ್ಪ ಮಾತನಾಡಿ, 'ಅಧಿಕಾರ, ವಂಶ ಹಾಗೂ ಜಾತಿ ಮದದಿಂದ ಆತ ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದ್ದಾನೆ. ಇಂತಹ ವ್ಯಕ್ತಿಗೆ ಶಿಕ್ಷೆ ಆಗಬೇಕು' ಎಂದು ಆಗ್ರಹಿಸಿದರು.

ಮುಖ್ಯಾಂಶಗಳು

- ಅಧಿಕಾರ, ವಂಶ ಹಾಗೂ ಜಾತಿ ಮದದಿಂದ ಸಂಸದನಿಂದ ದೌರ್ಜನ್ಯ
- ಪ್ರಕರಣದ ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸಬೇಕು
- ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಒಯ್ದು, ಸಂತ್ರಸ್ತರಿಗೆ ನ್ಯಾಯ ಕಲ್ಪಿಸಬೇಕು

ಸಾಹಿತಿ ಬಂಜಗೆರೆ ಜಯಪ್ರಕಾಶ್ ಮಾತನಾಡಿ, 'ಅಧಿಕಾರವನ್ನು ಅಭಿವೃದ್ಧಿಗೆ ಬಳಕೆ ಮಾಡಿಕೊಳ್ಳದೇ ಹೀನ ಕೃತ್ಯಕ್ಕೆ ಬಳಸಿದ್ದು ಖಂಡನೀಯ' ಎಂದು ಹೇಳಿದರು.

ಪತ್ರಕರ್ತ ದಿನೇಶ್ ಅಮಿನ್‌ಮಟ್ಟು ಮಾತನಾಡಿ, 'ರಾಜ್ಯದಲ್ಲಿ ಕಳೆದ ಹತ್ತು ವರ್ಷದಲ್ಲಿ ಈ ರೀತಿಯ ಮೂರನೇ ಘಟನೆ ನಡೆಯುತ್ತಿದೆ. ಇಬ್ಬರು ಸ್ವಾಮೀಜಿಗಳ ಮೇಲೆ ಇಂತಹದ್ದೇ ಆರೋಪವಿದೆ. ಈ ಬಾರಿ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು. ಸಂತ್ರಸ್ತರಿಗೆ ನ್ಯಾಯ ಸಿಗುವಂತೆ ಮಾಡಬೇಕು' ಎಂದು ಹೇಳಿದರು.

ನ್ಯಾಯ ಸಿಗುವಂತೆ ಮಾಡಲು 'ವಿಶೇಷ ನ್ಯಾಯಾಲಯ' ಸ್ಥಾಪಿಸಬೇಕು. ಎಸ್ಐಟಿ ತನಿಖೆಯ ಅಂತಿಮ ವರದಿಯನ್ನು ಹೈಕೋರ್ಟ್ ನ್ಯಾಯಾಧೀಶರೊಬ್ಬರ ಉಸ್ತುವಾರಿ ಹಾಗೂ ಪರಿಶೀಲನೆಯಲ್ಲಿ ಅಂತಿಮ ಮಾಡಬೇಕು. ನಂತರ ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ತಕ್ಷಣವೇ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿದ್ದ ಸಾಹಿತಿಗಳು ಹಾಗೂ ಹೋರಾಟಗಾರರು ಆಗ್ರಹಿಸಿದರು.

ಜಿ.ರಾಮಕೃಷ್ಣ, ಎಲ್.ಎನ್. ಮುಕುಂದರಾಜ್, ಎಸ್.ಜಿ. ಸಿದ್ದರಾಮಯ್ಯ, ಕೆ.ಎಸ್. ವಿಮಲಾ, ಶೂದ್ರ ಶ್ರೀನಿವಾಸ್, ಬಿ.ಸುರೇಶ್, ಪತ್ರಕರ್ತ ಲಕ್ಷ್ಮಣ್ ಕೊಡಸೆ, ಕಾ.ತ. ಚಿಕ್ಕಣ್ಣ, ಕೆ.ವಿ.ನಾಗರಾಜಮೂರ್ತಿ, ಗೋವಿಂದನಾಯಕ್, ಟಿ.ಆರ್. ಚಂದ್ರಶೇಖರ್, ಭಾರತಿ ಹೆಗಡೆ, ದಯಾನಂದ ಪಾಟೀಲ, ಆರ್. ನಾಗೇಶ್ ಅರಳಕುಪ್ಪೆ, ಜಯಲಕ್ಷ್ಮಿ ಪಾಟೀಲ ಪಾಲ್ಗೊಂಡಿದ್ದರು.

ಉತ್ತರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಕೆಎಸ್ಆರ್‌ಟಿಸಿಯ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್‌ನಿಲ್ದಾಣಕ್ಕೆ ಭೇಟಿ ನೀಡಿದರು

ಕೆಎಸ್ಆರ್‌ಟಿಸಿ ಅಧ್ಯಯನ, ಯು.ಪಿ. ನಿಯೋಗ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಕೆಎಸ್ಆರ್‌ಟಿಸಿ) ನಿರ್ವಹಣೆ ಕುರಿತು ಅಧ್ಯಯನ ಮಾಡಲು ಉತ್ತರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅಧಿಕಾರಿಗಳ ನಿಯೋಗವು ಭೇಟಿ ನೀಡಿದೆ.

ನಿಯೋಗವು ಎರಡು ದಿನ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್‌ನಿಲ್ದಾಣ, ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಭೇಟಿ ನೀಡಿ ನಿಯಂತ್ರಣ ಕೊಠಡಿಯ ಕಾರ್ಯನಿರ್ವಹಣೆ ಹಾಗೂ ಬಸ್ಸುಗಳ ಕಾರ್ಯಾಚರಣೆ ಪರಿಶೀಲಿಸಿತು. ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಇ.ವಿ. ಪವರ್ ಚಾರ್ಜಿಂಗ್ ಕೇಂದ್ರ, ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಹಾಗೂ ನಿರ್ವಹಣೆ ಕುರಿತು ತಾಂತ್ರಿಕ ಮಾಹಿತಿಯನ್ನು ಪಡೆದರು.

ವಾಹನಗಳ ತಾಂತ್ರಿಕ ನಿರ್ವಹಣೆ ಮತ್ತು ಕಾರ್ಯಾಚರಣೆ, ಡ್ಯೂಟಿ ರೋಟಾ ವ್ಯವಸ್ಥೆ, ಮುಂಗಡ ಆಸನ ಕಾಯ್ದಿರಿಸುವಿಕೆ, ಕಾರ್ಮಿಕರ ಕಲ್ಯಾಣಕ್ಕಾಗಿ ಕೈಗೊಂಡಿರುವ ವಿನೂತನ ಕ್ರಮಗಳು, ಮಾಹಿತಿ ತಂತ್ರಜ್ಞಾನ ಉಪಕ್ರಮಗಳು, ಬಸ್ ನಿಲ್ದಾಣ/ ಘಟಕಗಳ ಕಾಮಗಾರಿ ಪದ್ಧತಿ ಕುರಿತು ಕೆಎಸ್ಆರ್‌ಟಿಸಿ ನಿರ್ದೇಶಕಿ (ಸಿಬ್ಬಂದಿ ಮತ್ತು ಜಾಗೃತೆ) ನಂದಿನಿದೇವಿ ಮಾಹಿತಿ ನೀಡಿದರು.

ಬೆಂಗಳೂರು ಕೇಂದ್ರೀಯ ವಿಭಾಗದ ಘಟಕ-2ಕ್ಕೆ ಭೇಟಿ ನೀಡಿದ್ದ ನಿಯೋಗವು ಐರಾವತ ಕ್ಲಬ್ ಕಾಸ್, ಅಂಬಾರಿ ಡ್ರೀಮ್ ಕ್ಲಾಸ್, ಪಲ್ಲಕ್ಕಿ, ಅಂಬಾರಿ ಉತ್ಸವ, ಫ್ಲೈ ಬಸ್ ಹಾಗೂ ಅಶ್ವಮೇಧ ವಾಹನಗಳ ಬ್ರ್ಯಾಂಡಿಂಗ್ ಕಾರ್ಯವನ್ನು ಪರಿಶೀಲಿಸಿದರು. ನಿಗಮವು ಅಳವಡಿಸಿರುವ ಲೋಗೊ, ಟ್ಯಾಗ್‌ಲೈನ್ ಹಾಗೂ ಗ್ರಾಫಿಕ್ಸ್‌ಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಯುಪಿಎಸ್ಆರ್‌ಟಿಸಿ ಹೆಚ್ಚುವರಿ ವ್ಯವಸ್ಥಾಪಕಿ ಪ್ರಣತ ಐಶ್ವರ್ಯ, ಮುಖ್ಯ ಪ್ರಧಾನ ವ್ಯವಸ್ಥಾಪಕ (ತಾಂತ್ರಿಕ) ರಾಜೀವ್ ಆನಂದ, ಪ್ರಾದೇಶಿಕ ವ್ಯವಸ್ಥಾಪಕ ಕೇಶ್ರಿ ನಂದನ್ ಚೌದ್ರಿ, ವ್ಯವಸ್ಥಾಪಕ ಅನುರಾಗ್ ಯಾದವ್, ಕೆಎಸ್ಆರ್‌ಟಿಸಿ ಮುಖ್ಯ ತಾಂತ್ರಿಕ ಶಿಲ್ಪಿ ಎನ್.ಕೆ.ಬಸವರಾಜು, ಮುಖ್ಯ ಸಂಚಾರ ವ್ಯವಸ್ಥಾಪಕ ಜೆ.ಅಂತೋನಿ ಜಾರ್ಜ್, ವಿಭಾಗೀಯ ನಿಯಂತ್ರಣಾಧಿಕಾರಿ ಲಕ್ಷಣ್ ಇದ್ದರು.

'ತಂಬಾಕು ಉತ್ಪನ್ನಗಳಿಗೆ ತೆರಿಗೆ ಏರಿಕೆಗೆ ಆಗ್ರಹ'

ಬೆಂಗಳೂರು: 'ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಲು ಕಾನೂನು ಬಲಗೊಳಿಸುವ ಜತೆಗೆ ತಂಬಾಕು ಉತ್ಪನ್ನಗಳ ಮೇಲಿನ ತೆರಿಗೆ ಹೆಚ್ಚಳದಂತಹ ಕ್ರಮಕೈಗೊಳ್ಳಬೇಕು' ಎಂದು ತಂಬಾಕು ಮುಕ್ತ ಕರ್ನಾಟಕ ಒಕ್ಕೂಟ ಆಗ್ರಹಿಸಿದೆ.

ಶನಿವಾರ ಮಾತನಾಡಿದ ಒಕ್ಕೂಟದ ಸಂಚಾಲಕ ಎಸ್.ಜೆ. ಚಂದರ್, 'ತಂಬಾಕು ಕಂಪನಿಗಳು ಮಕ್ಕಳನ್ನೇ ಗುರಿಯಾಗಿಸಿಕೊಂಡಿವೆ. ಈ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ತಂಬಾಕು ರಹಿತ ದಿನವಾದ ಇದೇ 31ರಂದು ವೆಬಿನಾರ್ ಹಮ್ಮಿಕೊಂಡಿದ್ದು, ವಿವಿಧ ಸುಮಾರು 15 ವಿಶ್ವವಿದ್ಯಾಲಯಗಳು ಪಾಲ್ಗೊಳ್ಳಲಿವೆ' ಎಂದು ಹೇಳಿದರು.

'ಆಕರ್ಷಕ ಜಾಹೀರಾತುಗಳ ಮೂಲಕ ತಂಬಾಕು ಉತ್ಪನ್ನಗಳ ಬಳಕೆಗೆ ಯುವಜನರು, ಮಕ್ಕಳಿಗೆ ಪ್ರಚೋದಿಸಲಾಗುತ್ತಿದೆ. ಮಕ್ಕಳು ಹಾಗೂ ಯುವಜನರು ವ್ಯಸನಿಗಳಾಗುವುದನ್ನು ತಡೆಯಲು ತಂಬಾಕು ಉತ್ಪನ್ನಗಳಿಗೆ ತೆರಿಗೆ ಹೆಚ್ಚಳ ಅನಿವಾರ್ಯ' ಎಂದರು.

'ದೇಶದಲ್ಲಿ ವರದಿಯಾಗುತ್ತಿರುವ ಕ್ಯಾನ್ಸರ್ ಪ್ರಕರಣಗಳಲ್ಲಿ ಶೇ 50ರಷ್ಟು ಪ್ರಕರಣಗಳು ತಂಬಾಕು ಸಂಬಂಧಿತ ಕ್ಯಾನ್ಸರ್ ಪ್ರಕರಣಗಳಾಗಿವೆ ಎನ್ನುವುದು ಅಧ್ಯಯನದಿಂದ ದೃಢಪಟ್ಟಿದೆ' ಎಂದು ಅವರು ಉಲ್ಲೇಖಿಸಿದರು.

ಕ್ರೈಸ್ಟ್ ವಿಶ್ವವಿದ್ಯಾಲಯದ ವಿದ್ಯಾರ್ಥಿನಿ ಪ್ರೇರಣಾ, 'ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ತಂಬಾಕು ಉತ್ಪನ್ನಗಳ ಮಾರಾಟವನ್ನು ಕಟ್ಟುನಿಟ್ಟಾಗಿ ನಿಷೇಧ ಮಾಡಲು ಸರ್ಕಾರ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಬೆಂಗಳೂರಿನ ಬಸವೇಶ್ವರನಗರದ ಡಾ. ಅರವಿಂದ ಡಯಾಬಿಟೀಸ್ ಸೆಂಟರ್ ಆಯೋಜಿಸಿದ್ದ ಸಕ್ಕರೆ ಕಾಯಿಲೆ ತಡೆ ಸಮ್ಮೇಳನವನ್ನು ಡಾ. ಬನ್ಸಿ ಸಾಬ್ ಶನಿವಾರ ಉದ್ಘಾಟಿಸಿದರು. ಸೆಂಟರ್‌ನ ಅಧ್ಯಕ್ಷ ಡಾ. ಅರವಿಂದ ಜಗದೀಶ್ ಭಾಗವಹಿಸಿದ್ದರು

ಚಿಕ್ಕಮಕ್ಕಳಲ್ಲೂ ಸಕ್ಕರೆ ಕಾಯಿಲೆ ಗೋಚರ

ಬೆಂಗಳೂರು: ಚಿಕ್ಕಮಕ್ಕಳಲ್ಲೂ ಸಕ್ಕರೆ ಕಾಯಿಲೆಯು ಕಾಣಿಸಿಕೊಳ್ಳುತ್ತಿದೆ ಎಂದು ಅಹಮದಾಬಾದ್‌ನ ಆರ್‌ಎಸ್‌ಎಸ್‌ಡಿಐ ಮಾಜಿ ಅಧ್ಯಕ್ಷ ಡಾ. ಬನ್ಸಿ ಸಾಬ್ ಅವರು ಆತಂಕ ವ್ಯಕ್ತಪಡಿಸಿದರು.

ಬಸವೇಶ್ವರನಗರದ ಡಾ. ಅರವಿಂದ ಡಯಾಬಿಟೀಸ್ ಸೆಂಟರ್ ಏರ್ಪಡಿಸಿದ್ದ ಸಕ್ಕರೆ ಕಾಯಿಲೆ ಕುರಿತ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

ಚಿಕ್ಕಮಕ್ಕಳಲ್ಲಿ ಸಕ್ಕರೆ ಕಾಯಿಲೆ ಕಾಣಿಸಿಕೊಂಡಾಗ ಪಾಲಕರು ಮಗುವಿನ ಆಹಾರ ಪದ್ಧತಿ ಹಾಗೂ ಬೆಳವಣಿಗೆ ಬಗ್ಗೆ ಹೆಚ್ಚಿನ ನಿಗಾ ವಹಿಸುವುದು ಸೂಕ್ತ ಎಂದರು.

ಅರವಿಂದ್ ಡಯಾಬಿಟೀಸ್ ಸೆಂಟರ್‌ನ ಅಧ್ಯಕ್ಷ ಡಾ.ಅರವಿಂದ ಜಗದೀಶ್ ಮಾತನಾಡಿ, 'ಸಂಸ್ಥೆ ಕೆಲವು ವರ್ಷಗಳಿಂದ ಜಾಗೃತಿ ಮೂಡಿಸುತ್ತಿದ್ದು, ಸಕ್ಕರೆ ಕಾಯಿಲೆ ತಡೆಗೆ ಹೊಸಹೊಸ ಆವಿಷ್ಕಾರಗಳನ್ನು ತಿಳಿಸುವುದು ಸೆಂಟರ್‌ನ ಉದ್ದೇಶ' ಎಂದು ಹೇಳಿದರು.

ಮೊದಲ ದಿನ 300 ತಜ್ಞ ವೈದ್ಯರು ಭಾಗವಹಿಸಿದ್ದರು.

'ಆಲ್ಟರ್ನೆಟಿವ್' ರೀಲ್ಸ್ ಸ್ಪರ್ಧೆ ಫಲಿತಾಂಶ ಜೂನ್ 1ಕ್ಕೆ

ಬೆಂಗಳೂರು: ವಿಶ್ವ ಪರಿಸರ ದಿನ ನಿಮಿತ್ತ ಇಲ್ಲಿನ ವಿಮೊವ್ ಫೌಂಡೇಶನ್ 'ಆಲ್ಟರ್ನೆಟಿವ್ 24' ಶೀರ್ಷಿಕೆಯಡಿ ಪರಿಸರ ಸಂರಕ್ಷಣೆ ಕುರಿತು ಏರ್ಪಡಿಸಿದ್ದ ವಿಡಿಯೊ ರೀಲ್ಸ್ ಸ್ಪರ್ಧೆ ಫಲಿತಾಂಶ ಘೋಷಣೆ ಸಮಾರಂಭ ಜೂನ್ 1ರಂದು ಬೆಳಿಗ್ಗೆ 10ಕ್ಕೆ ರಾಮಯ್ಯ ವೈದ್ಯಕೀಯ ಕಾಲೇಜಿನಲ್ಲಿ ನಡೆಯಲಿದೆ.

'ಯೂತ್ ಫಾರ್ ಗ್ರೀನ್ ಆ್ಯಂಡ್ ವೈಬ್ರಂಟ್ ಬೆಂಗಳೂರು' ಪರಿಕಲ್ಪನೆಯಡಿ 'ಆಲ್ಟರ್ನೆಟಿವ್ 24' ಹಮ್ಮಿಕೊಳ್ಳಲಾಗಿದೆ. ನಗರದ ಕಾಲೇಜುಗಳ ಹಾಗೂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, 30 ವರ್ಷದೊಳಗಿನವರು ಏಕವ್ಯಕ್ತಿಯಾಗಿ ಅಥವಾ ಗುಂಪಾಗಿ ಈ ರೀಲ್ಸ್ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗಿತ್ತು.

ತಜ್ಞರ ಸಮಿತಿ ಪ್ರತಿ ವಿಭಾಗದಲ್ಲಿ ಮೂರು ವಿಡಿಯೊ ರೀಲ್ಸ್ ಆಯ್ಕೆ ಮಾಡುತ್ತದೆ. ಪರಿಸರ ರಕ್ಷಣೆ ಜಾಗೃತಿ ಇದರ ಉದ್ದೇಶವಾಗಿತ್ತು ಎಂದು ಫೌಂಡೇಶನ್‌ನ ಸಂಸ್ಥಾಪಕ ವಿನಯ್ ಶಿಂಧೆ ಹೇಳಿದ್ದಾರೆ.

ನಿಧನ ವಾರ್ತೆ

ಜಯಕುಮಾರ್



ಬೆಂಗಳೂರು: ಪತ್ರಕರ್ತ ಆರ್.ಜಯಕುಮಾರ್ (64)ಅವರು ಅನಾರೋಗ್ಯದಿಂದ ಶನಿವಾರ ಮಧ್ಯಾಹ್ನ ನಿಧನರಾದರು.

ಕೊಡಗಿನವರಾದ ಜಯಕುಮಾರ್, ಚಳವಳಿ ಮೂಲಕವೇ ಪತ್ರಕರ್ತರಾಗಿ ರೂಪುಗೊಂಡವರು. ಸಂಯುಕ್ತ ಕರ್ನಾಟಕ, ವಿಜಯ ಕರ್ನಾಟಕ ಪತ್ರಿಕೆ, ಉದಯ ಟಿ.ವಿ ಸೇರಿದಂತೆ ಮೂರು ದಶಕ ಪತ್ರಕರ್ತರಾಗಿ ಕಾರ್ಯನಿರ್ವಹಿಸಿದ್ದರು. ಅವರಿಗೆ ಪತ್ನಿ ಡಾ.ಲೀಲಾ ಸಂಪಿಗೆ, ಪುತ್ರಿ ದೀಪಿಕಾ ಇದ್ದಾರೆ.

ರವೀಂದ್ರ ಕಲಾಕ್ಷೇತ್ರದಲ್ಲಿನ ಸಂಸ ಬಯಲು ರಂಗ ಮಂದಿರದಲ್ಲಿ ಶನಿವಾರ ಸಂಜೆ ಜಯಕುಮಾರ್ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಸಂಗೀತ ನಿರ್ದೇಶಕ ಹಂಸಲೇಖ, ಕವಿ ಎಸ್.ಜಿ. ಸಿದ್ದರಾಮಯ್ಯ, ಪತ್ರಕರ್ತ ದಿನೇಶ್ ಅಮೀನ್‌ಮಟ್ಟು, ಜಿ.ಸಿ. ಬಯ್ಯಾರೆಡ್ಡಿ, ಮಾವಳ್ಳಿ ಶಂಕರ್, ಬಿ.ಕೆ. ಶಿವರಾಂ ಅಂತಿಮ ನಮನ ಸಲ್ಲಿಸಿದರು.

ಜಯಕುಮಾರ್ ಅವರ 'ಗಾಂಧಿ ಮರೆತ ನಾಡಿನಲ್ಲಿ' ಮತ್ತು 'ಕಾಡು ಹಾದಿಯ ಬೆಳಕಿನ ಜಾಡಿನಲ್ಲಿ' ಪುಸ್ತಕಗಳು ಇತ್ತೀಚೆಗೆ ಬಿಡುಗಡೆಯಾಗಿದ್ದವು. ಜಯಕುಮಾರ್ ದೇಹವನ್ನು ಬೆಂಗಳೂರು ಮೆಡಿಕಲ್ ಕಾಲೇಜಿಗೆ ದಾನ ಮಾಡಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ರಾಮಕೃಷ್ಣ ರೆಡ್ಡಿ

ಬೆಂಗಳೂರು: ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್.ಹಿತೇಂದ್ರ ಅವರ ತಂದೆ ರಾಮಕೃಷ್ಣ ರೆಡ್ಡಿ (86) ಅವರು ನಗರದಲ್ಲಿ ಶನಿವಾರ ನಿಧನರಾದರು.

ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ರಾಗುಟ್ಟಹಳ್ಳಿಯ ರಾಮಕೃಷ್ಣ ಅವರಿಗೆ ಹಿತೇಂದ್ರ ಸೇರಿದಂತೆ ಮೂವರು ಪುತ್ರರಿದ್ದಾರೆ.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ, ರಾಮಕೃಷ್ಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ನಿಧನರಾದರು. ಹುಟ್ಟೂರು ರಾಗುಟ್ಟಹಳ್ಳಿಯಲ್ಲಿ ಶನಿವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಕೌಸಲ್ಯಾ

ಬೆಂಗಳೂರು: ಸಿನಿಮಾ ಛಾಯಾಗ್ರಾಹಕ ದಿ. ವಿ.ಕೆ.ಮೂರ್ತಿಯವರ ಸಹೋದರಿ ಕೌಸಲ್ಯಾ (100) ಅವರು ವಯೋಸಹಜ ಅನಾರೋಗ್ಯದಿಂದಾಗಿ ಶುಕ್ರವಾರ ರಾತ್ರಿ ನಿಧನರಾದರು.

ಮೃತರಿಗೆ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ಚಾಮರಾಜಪೇಟೆಯ ಚಿತಾಗಾರದಲ್ಲಿ ಶನಿವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದವರು ತಿಳಿಸಿದರು.

Govt. of Uttarakhand

Devbhoomi Uttarakhand

A heartiest welcome and greetings to all the visiting devotees of Chardham Yatra

Appeal

- Pilgrims coming to Char Dham are requested to do mandatory registration online.
- Permission for Chardham Yatra will not be given without registration.
- After registration, visit to the Dham will be allowed only on the day mentioned in registration
- Offline registration of Char Dham Yatra has been closed till May 31, 2024. Only online registration is being done.
- Do not use single use plastic during yatra.

Means of registration

GET IT ON Google Play

registrationandtouristcare.uk.gov.in | +91-8394833833 (Type 'yatra' on WhatsApp)
Toll Free Number 0135 1364 | Download App: touristcareuttarakhand

Download on the App Store

Contact for more information:
Phone No. 0135-1364, 0135-2559898, 0135-2552627 | E-mail : touristcare.uttarakhand@gmail.com

Issued in Public Interest by Information & Public Relations Department, Uttarakhand
www.uttarainformation.gov.in | DIPR_UK | UttarakhandDIPR | UttarakhandDIPR

ಯಾವುದು ದೊಡ್ಡ ಅಪರಾಧ: ಸಿ.ಎಂ ಪ್ರಶ್ನೆ

ಅತ್ಯಾಚಾರಕ್ಕಿಂತ ವಿಡಿಯೊ ಹಂಚಿದ್ದು ದೊಡ್ಡ ಅಪರಾಧ ಎಂದು ಯಾವ ಕಾನೂನಿನಲ್ಲಿದೆ: ಎಚ್‌ಡಿಕೆಗೆ ತಿರುಗೇಟು

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಮೈಸೂರು: 'ಅತ್ಯಾಚಾರಕ್ಕಿಂತ ಅದರ ವಿಡಿಯೊ ಹಂಚಿದ್ದು ದೊಡ್ಡ ಅಪರಾಧ ಎಂದು ಯಾವ ಕಾನೂನಿನಲ್ಲಿದೆ ಹೇಳಿ? ಕುಮಾರಸ್ವಾಮಿ ಸೆಕ್ಷನ್ ಹೇಳಿದ್ದಾರಾ? ಅದು ಭಾರತೀಯ ದಂಡ ಸಂಹಿತೆಯಲ್ಲಿ ಇದೆಯಾ ಅಥವಾ ಅವರೇ ಬರೆದುಕೊಂಡ ಕಾನೂನಿನಲ್ಲಿ ಇದೆಯಾ, ಹೇಳಿ?' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಳಿದರು.

'ಅತ್ಯಾಚಾರ ಅಮಾನುಷ ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಆದರೆ, ಆ ಅಮಾನುಷಕ್ಕೆ ತುತ್ತಾದ ಹೆಣ್ಮಕ್ಕಳ ವಿಡಿಯೊಗಳನ್ನು ಹಂಚುವುದು ಸರಿಯೇ?' ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿಕೆಗೆ ಇಲ್ಲಿ ಶನಿವಾರ ಅವರು ತಿರುಗೇಟು ನೀಡಿದರು.

'ಹಾಗೆಂದು, ವಿಡಿಯೊ ಹಂಚಿದ್ದನ್ನು ನಾನು ಸಮರ್ಥಿಸಿಕೊಳ್ಳುತ್ತಿಲ್ಲ. ಆದರೆ, ವಿಡಿಯೊ ಹಂಚಿದ್ದು ಅತ್ಯಾಚಾರಕ್ಕಿಂತಲೂ ಮಹಾ ಅಪರಾಧ ಎಂದು ಹೇಳುವುದು ಸರಿಯಲ್ಲ. ದಿಕ್ಕು ತಪ್ಪಿಸುವುದು ಸರಿಯಲ್ಲ' ಎಂದರು.

'ಪ್ರಜ್ವಲ್ ರೇವಣ್ಣ ಪೆನ್‌ಡ್ರೈವ್ ಪ್ರಕರಣದಲ್ಲಿ ರಾಜ್ಯ ಸರ್ಕಾರದಿಂದ ಕೇಂದ್ರಕ್ಕೆ ತಡವಾಗಿ ಪತ್ರ ಬಂತು' ಎಂಬ ಬಿಜೆಪಿಯವರ ಸಮರ್ಥನೆಗೆ ಪ್ರತಿಕ್ರಿಯಿಸಿದ ಅವರು, 'ಇದು ಮೊಸರಲ್ಲಿ ಕಲ್ಲು ಹುಡುಕುವ ಕೆಲಸವಷ್ಟೆ. ನಾನು 15 ದಿನಗಳ ಹಿಂದೆಯೇ ಪತ್ರ ಬರೆದಿದ್ದೇನೆ. ಅದಕ್ಕೆ ಪ್ರತಿಕ್ರಿಯೆಯೇ ಬಂದಿಲ್ಲ. ನಾನು ಪತ್ರ ಬರೆದದ್ದು ತಡವೇ ಆಗಿದೆ ಎಂದುಕೊಳ್ಳೋಣ, ಬರೆದ ಮೇಲಾದರೂ ಕ್ರಮ ಕೈಗೊಂಡಿಲ್ಲವೇಕೆ? ಸುಮ್ಮನೆ ಕಾಲ ಹರಣ ಮಾಡುವುದನ್ನು ಬಿಡಬೇಕು' ಎಂದು ಹೇಳಿದರು.

ರಾಕೇಶ್ ಸಿದ್ದರಾಮಯ್ಯ ಸಾವಿನ ವಿಚಾರ ಪ್ರಸ್ತಾಪಿಸಿರುವ ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದ ಸಿದ್ದರಾಮಯ್ಯ, 'ನನ್ನ ಮಗ ಸತ್ತು 8 ವರ್ಷಗಳಾಗಿವೆ. ಈಗ ಆ ವಿಚಾರವನ್ನು ಬೇರ್ಯಾವುದಕ್ಕೋ ಜೋಡಿಸಿ ಮಾತನಾಡುವುದು ಮೂರ್ಖತನ. ಕುಮಾರಸ್ವಾಮಿ ಅಣ್ಣನ ಮಗ ಅತ್ಯಾಚಾರ ಮಾಡಿ ಓಡಿ ಹೋಗಿದ್ದಾನೆ. ಅದಕ್ಕೂ- 2016ರಲ್ಲಿ ಸತ್ತು ಹೋದ ರಾಕೇಶ್ ವಿಚಾರಕ್ಕೂ ಏನು ಸಂಬಂಧ' ಎಂದು ಆಕ್ರೋಶದಿಂದ ಪ್ರಶ್ನಿಸಿದರು.

ರಾಕೇಶ್ ಸಾವಿನ ಬಗ್ಗೆ ಏಕೆ ತನಿಖೆಯಾಗಿಲ್ಲ: ಎಚ್‌ಡಿಕೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ ರಾಕೇಶ್ ವಿದೇಶಕ್ಕೆ ಹೋಗಿ, ಅಲ್ಲಿಯೇ ಮೃತಪಟ್ಟ ಕುರಿತು ಏಕೆ ತನಿಖೆಯಾಗಿಲ್ಲ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

'ಅತ್ಯಾಚಾರದ ಆರೋಪ ಎದುರಿಸುತ್ತಿರುವ ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರೇ ವಿದೇಶಕ್ಕೆ ಕಳಿಸಿದ್ದಾರೆ' ಎಂಬ ಸಿದ್ದರಾಮಯ್ಯ ಹೇಳಿಕೆ ಕುರಿತು ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಅವರ ಮಗ ಯಾವ ಕೆಲಸಕ್ಕಾಗಿ ವಿದೇಶಕ್ಕೆ ಹೋಗಿದ್ದರು? ಯಾರ ಅನುಮತಿ ಪಡೆದಿದ್ದರು? ರಾಕೇಶ್ ಜತೆ ಆಗ ಯಾರ್ಯಾರು ಇದ್ದರು' ಎಂದು ಕೇಳಿದರು.

'ಮಕ್ಕಳು ಎಲ್ಲವನ್ನೂ ತಂದೆ, ತಾಯಿ, ಕುಟುಂಬದವರ ಬಳಿ ಹೇಳಿಯೇ ಹೋಗುತ್ತಾರಾ? ಯಾರಿಗೆ ಆದರೂ ನೋವು ನೋವೇ. ನೋವಿನಲ್ಲೂ ರಾಜಕೀಯ ಮಾಡಬಾರದು' ಎಂದರು.

'ರಾಜತಾಂತ್ರಿಕ ಪಾಸ್‌ಪೋರ್ಟ್ ಬಗ್ಗೆ ಇವರೆಲ್ಲರೂ ಮಾತನಾಡುತ್ತಿದ್ದಾರೆ. ಆದರೆ ಇವರಿಗೆ ಕಾನೂನಿನ ತಿಳಿವಳಿಕೆಯೇ ಇಲ್ಲ. ಈಗ ಪ್ರಜ್ವಲ್ ವಾಪಸ್ ಕರೆದುಕೊಂಡು ಬರಲು ರಾಜತಾಂತ್ರಿಕ ಪಾಸ್ ಪೋರ್ಟ್ ರದ್ದು ಮಾಡುವಂತೆ ಕೋರಿ ಪತ್ರ ಬರೆದಿದ್ದಾರೆ. ತಕ್ಷಣಕ್ಕೆ ಅದು ಸಾಧ್ಯವಿಲ್ಲ' ಎಂದು ಹೇಳಿದರು.

'ಈ ಪ್ರಕ್ರಿಯೆಗಳು ತಡ ಆಗಬಹುದು ಎನ್ನುವ ಕಾರಣಕ್ಕೆ ತಕ್ಷಣ ವಾಪಸ್ ಬಂದು ತನಿಖೆಗೆ ಹಾಜರಾಗುವಂತೆ ಪ್ರಜ್ವಲ್‌ಗೆ ಸಂದೇಶ ಕೊಟ್ಟಿದ್ದೇವೆ. ದೇವೇಗೌಡರು ಕೂಡ ಕೊನೆಯ ಎಚ್ಚರಿಕೆ ಕೊಟ್ಟಿದ್ದಾರೆ. ಆದರೆ ದೇವೇಗೌಡರು ಮಾಧ್ಯಮದ ಮೂಲಕ ನೀಡಿದ ಎಚ್ಚರಿಕೆ ಕುರಿತು ಸಿದ್ದರಾಮಯ್ಯ ಹಗುರವಾಗಿ ಮಾತನಾಡಿದ್ದಾರೆ. ದೀರ್ಘ ಕಾಲ ದೇವೇಗೌಡರ ಜತೆ ಇದ್ದ ಸಿದ್ದರಾಮಯ್ಯ ಅವರಿಗೆ ಅವರು ಏನು ಎಂಬುದು ಗೊತ್ತಿಲ್ಲವೆ' ಎಂದು ಪ್ರಶ್ನಿಸಿದರು.

ದಲ್ಲಾಳಿ ಜತೆ ಮಾತನಾಡಿದ್ದು ಏಕೆ?: 'ಸಿ.ಡಿ ಶಿವು ತನ್ನ ಪಾತ್ರ ಇಲ್ಲ ಎನ್ನುತ್ತಾರೆ. ಆದರೆ, ದಲ್ಲಾಳಿ ಶಿವರಾಮೇಗೌಡ ಜತೆ ಮಾತನಾಡಿದ್ದು ಏಕೆ? ದೇವರಾಜೇಗೌಡ, ಶಿವರಾಮೇಗೌಡ, ಡಿ.ಕೆ. ಶಿವಕುಮಾರ್ ಏಕೆ ಮಾತನಾಡಿದರು. ತನ್ನ ಪಾತ್ರವೇ ಇಲ್ಲ ಎನ್ನುವವರು ಏನಾದರೂ ಸಾಕ್ಷ್ಯ ಇದೆಯಾ ಎಂದು ಕೇಳಿದ್ದು ಏಕೆ' ಎಂದು ಹರಿಹಾಯ್ದರು.

'ಎಕ್ಸ್‌'ನಲ್ಲೂ ವಾಗ್ದಾಳಿ: 'ಪೆನ್ ಡ್ರೈವ್ ಹಂಚಿದ್ದು ದೊಡ್ಡ ಅಪರಾಧವಾ' ಎಂಬ ಸಿದ್ದರಾಮಯ್ಯ ಪ್ರಶ್ನೆ ಕುರಿತು 'ಎಕ್ಸ್' ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಕುಮಾರಸ್ವಾಮಿ, 'ಮೊದಲು ಕಾನೂನು ಓದಿ. ನಿಮ್ಮದೇ ಸರ್ಕಾರ ರಚಿಸಿದ ವಿಶೇಷ ತನಿಖಾ ತಂಡದ ಪತ್ರಿಕಾ ಪ್ರಕಟಣೆಯನ್ನು ಗಮನಿಸಿ. ದಯವಿಟ್ಟು ವಕೀಲಿಕೆ ಮಾಡುವುದನ್ನು ಬಿಟ್ಟುಬಿಡಿ' ಎಂದು ವಾಗ್ದಾಳಿ ನಡೆಸಿದ್ದಾರೆ.

ರಾಕೇಶ್ ಸಿದ್ದರಾಮಯ್ಯ ತಪ್ಪು ಮಾಡಿ ವಿದೇಶಕ್ಕೆ ಹೋಗಿರಲಿಲ್ಲ. ರಾಕೇಶ್ ಪ್ರಕರಣವನ್ನು ಪ್ರಜ್ವಲ್ ರೇವಣ್ಣ ಪ್ರಕರಣಕ್ಕೆ ಹೋಲಿಸಬೇಡಿ

ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರೇ ಪೆನ್ ಡ್ರೈವ್ ಪಿತಾಮಹ. ಮೊದಲು ಜೇಬಿನಿಂದ ಪೆನ್ ಡ್ರೈವ್ ತೆಗೆದು ತೋರಿಸಿದ್ದು ಅವರೇ

ಕೆ.ಎನ್. ರಾಜಣ್ಣ, ಸಹಕಾರ ಸಚಿವ

ಲಿಂಗೇಶ್–ನವೀನ್‌ಗೌಡ ಆಡಿಯೊ: ಚರ್ಚೆ

ಹಾಸನ: ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವಿಡಿಯೊ ಹಂಚಿಕೆ ಪ್ರಕರಣದ ಆರೋಪಿ ನವೀನ್‌ಗೌಡ ಹಾಗೂ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್. ಲಿಂಗೇಶ್ ಅವರು ಕಳೆದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಮಾತನಾಡಿರುವ ಆಡಿಯೊ ಇದೀಗ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಲಿಂಗೇಶ್ ಅವರು ಚುನಾವಣೆಯಲ್ಲಿ ಬೇಲೂರು ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಸೋತಿದ್ದರು. 'ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಆರೋಪಿ ನವೀನ್ ಗೌಡನನ್ನು ಬಂಧಿಸಬೇಕು' ಎಂದು ಈಚೆಗೆ ಅವರು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದ್ದರು. ಅದರ ಬೆನ್ನಲ್ಲೇ ಆಡಿಯೊ ಹೊರಬಿದ್ದಿದೆ.

ಕಾಂಗ್ರೆಸ್ ಕಾರ್ಯಕರ್ತ ಎನ್ನಲಾಗಿರುವ ನವೀನ್‌ಗೌಡ, ಜೆಡಿಎಸ್ ನಾಯಕರ ಜೊತೆ ಸಂಬಂಧ ಹೊಂದಿದ್ದ ಎನ್ನುವ ಬಗ್ಗೆ ಇದೀಗ ಚರ್ಚೆ ನಡೆಯುತ್ತಿದೆ. ಈ ಆಡಿಯೊದಲ್ಲಿ ವಿಧಾನಸಭೆ ಚುನಾವಣೆ ಬಳಿಕ ಸೋಲಿನ ಬಗ್ಗೆ ನವೀನ್‌ಗೌಡ-ಲಿಂಗೇಶ್ ಸಂಭಾಷಣೆ ನಡೆದಿದೆ ಎನ್ನಲಾಗಿದೆ.

'ಅಣ್ಣಾ ನಿಮಗಾಗಿ ಈ ಪಕ್ಷದಲ್ಲಿದ್ದೇವೆ. ಸಂಸದ ಪ್ರಜ್ವಲ್ ನಿಮ್ಮ ವಿರುದ್ಧವಿರುವ ನಟರಾಜ್ ಎಂಬುವವರ ಜೊತೆ ಓಡಾಡುತ್ತಿದ್ದಾರೆ' ಎಂದು ನವೀನ್ ಗೌಡ, ಲಿಂಗೇಶ್ ಅವರಿಗೆ ದೂರು ಹೇಳಿದ್ದಾನೆ.

ಅದಕ್ಕೆ ಉತ್ತರಿಸಿರುವ ಕೆ.ಎಸ್. ಲಿಂಗೇಶ್, 'ಹೌದು, ನಾನು ಮತ್ತೆ ಗೆದ್ದರೆ ನಾನೇ ಇರ್ತೀನಿ. ಹಾಗಾಗಿ ಸೋಲಲಿ ಎಂದು ಕೆಲವರು ಓಡಾಡಿದ್ರು. ನಾನು ಎಂಪಿಗೆ ಹೇಳಿದ್ರೂ ಕೇಳಲಿಲ್ಲ. ಅವರಿಗೆ ನಟರಾಜೇ ಬೇಕಂತೆ' ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕೋವಿಡ್ ಭ್ರಷ್ಟಾಚಾರ: ವಿಚಾರಣಾ ಆಯೋಗದ ಅವಧಿ ವಿಸ್ತರಣೆ

ಬೆಂಗಳೂರು: ಕೋವಿಡ್–19 ನಿವಾರಣೆ ಮತ್ತು ನಿಯಂತ್ರಣ ಚಟುವಟಿಕೆಗಳಿಗಾಗಿ ವಿವಿಧ ಇಲಾಖೆಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ಕುರಿತು ವಿಚಾರಣೆ ನಡೆಸುತ್ತಿರುವ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ನೇತೃತ್ವದ ಆಯೋಗದ ಅವಧಿಯನ್ನು ಆಗಸ್ಟ್ 31ರವರೆಗೆ ವಿಸ್ತರಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ ಸೇರಿದಂತೆ ವಿವಿಧ ಇಲಾಖೆಗಳು ಹಾಗೂ ಅವುಗಳ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಔಷಧಿ, ಉಪಕರಣ ಮತ್ತು ಇತರ ಸಾಮಗ್ರಿಗಳ ಖರೀದಿ, ಆಮ್ಲಜನಕ ನಿರ್ವಹಣೆ, ಆಮ್ಲಜನಕದ ಕೊರತೆಯಿಂದ ಸಂಭವಿಸಿದ ಸಾವುಗಳ ಕುರಿತು ಆಯೋಗವು ವಿಚಾರಣೆ ನಡೆಸುತ್ತಿದೆ.

2023ರ ಅಕ್ಟೋಬರ್ 7ರಂದು ಆಯೋಗವನ್ನು ನೇಮಿಸಲಾಗಿತ್ತು. ನವೆಂಬರ್ 22ಕ್ಕೆ ಆಯೋಗದ ಅವಧಿ ಕೊನೆಗೊಳ್ಳಬೇಕಿತ್ತು. ವಿಚಾರಣೆ ಬಾಕಿ ಇರುವುದರಿಂದ ಈ ಅವಧಿಯನ್ನು 2024ರ ಮೇ 24ರವರೆಗೆ ವಿಸ್ತರಿಸಲಾಗಿತ್ತು. ಆಯೋಗದ ಅಧ್ಯಕ್ಷರ ಕೋರಿಕೆಯಂತೆ ಆಗಸ್ಟ್ 31ರವರೆಗೂ ಅವಧಿ ವಿಸ್ತರಿಸಿ ಗೃಹ ಇಲಾಖೆ ಶುಕ್ರವಾರ ಅಧಿಸೂಚನೆ ಹೊರಡಿಸಿದೆ.

ಸಮಾನತೆ ಆಶಯಕ್ಕೆ ತದ್ವಿರುದ್ಧದ ಆಡಳಿತ: ವಿ.ಗೋಪಾಲಗೌಡ

ಕೊಪ್ಪಳ: 'ಸಂವಿಧಾನಬದ್ಧವಾಗಿ ಸಮಸ್ತ ಜನರಿಗೆ ರಾಜಕೀಯ, ಆರ್ಥಿಕ, ಸಾಮಾಜಿಕ ನ್ಯಾಯ ಕೊಡುವುದಾಗಿ ಪ್ರತಿಜ್ಞೆ ಸ್ವೀಕರಿಸಿದವರು ಹತ್ತು ವರ್ಷಗಳ ಕಾಲ ಆಡಳಿತ ನಡೆಸಿದರೂ ಮಹಿಳೆಯರಿಗೆ ಶೇ 33ರಷ್ಟು ಮೀಸಲು ಕೊಡಲು ಸಾಧ್ಯವಾಗಿಲ್ಲ. ಇದು ಅವರ ಗೋಸುಂಬೆತನಕ್ಕೆ ಸಾಕ್ಷಿಯಾಗಿದ್ದು, ಸಂವಿಧಾನದ ಪ್ರಸ್ತಾವನೆಯಲ್ಲಿರುವ ಸಮಾನತೆಯ ಆಶಯಕ್ಕೆ ತದ್ವಿರುದ್ಧವಾದ ಆಡಳಿತ ನಡೆಯುತ್ತಿದೆ' ಎಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಅವರು ಆರೋಪಿಸಿದರು.

ನಗರದಲ್ಲಿ ಶನಿವಾರ ಆರಂಭವಾದ 10ನೇ ಮೇ ಸಾಹಿತ್ಯ ಮೇಳದ ಉದ್ಘಾಟನಾ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು 'ಸಂವಿಧಾನ ಅಳಿಸುತ್ತೇವೆ ಎನ್ನುವ ಜನವಿರೋಧಿಗಳಿಗೆ ಮೇಳ ಸ್ಪಷ್ಟ ಎಚ್ಚರಿಕೆಯ ಮಹಾಸಂದೇಶ ನೀಡುತ್ತಿದೆ. ಗೋಮುಖ ವ್ಯಾಘ್ರಗಳಾಗಿ ಮುಖವಾಡ ಧರಿಸಿರುವವರ ದುರಾಡಳಿತ ನಿಲ್ಲಿಸಬೇಕಾಗಿದೆ. ಸಂವಿಧಾನ ಇಂದು ಅಪಾಯದಲ್ಲಿದೆ' ಎಂದು ಆತಂಕ ಪಡಿಸಿದರು.

ರೈತ ಹೋರಾಟಗಾರ ರಾಕೇಶ್ ಟಿಕಾಯತ್ ಮಾತನಾಡಿ 'ನಾಗಪುರದ (ಆರ್‌ಎಸ್‌ಎಸ್ ಕೇಂದ್ರ ಕಚೇರಿ ಇರುವ ನಗರ) ನಿರ್ದೇಶನದಲ್ಲಿ ಹೊಸ ಹಿಂದುತ್ವವಾದವನ್ನು ಅನುಸರಿಸುತ್ತಿರುವ ಹಿಂದುಗಳನ್ನು ಸೃಷ್ಟಿಸುವ ಪ್ರಯತ್ನದೊಂದಿಗೆ ಅದರ ನಾಯಕರು ದಕ್ಷಿಣದತ್ತ ಬರುತ್ತಿದ್ದಾರೆ. ಇಂಥ ಹುನ್ನಾರಗಳನ್ನು ತಡೆಯುವ ತಾಕತ್ತು ಜನಪರ ಚಳವಳಿಗಳು ಹೊಂದಿವೆ' ಎಂದರು. ಮುಂದೆ ಯಾರೇ ಅಧಿಕಾರಕ್ಕೂ ಬಂದರೂ ರೈತರ ಹೋರಾಟ ಸದಾ ಜಾರಿಯಲ್ಲಿರುತ್ತದೆ' ಎಂದು ಘೋಷಿಸಿದರು.

ಉತ್ತಮ ಮಳೆ, ಬೆಳೆಗೆ ಪ್ರಾರ್ಥನೆ ಸಲ್ಲಿಸಿದ್ದೇವೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಮಂಜುನಾಥನ ದರ್ಶನ ಪಡೆದ ಸಿ.ಎಂ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಧರ್ಮಸ್ಥಳ ಕ್ಷೇತ್ರಕ್ಕೆ ಶನಿವಾರ ಭೇಟಿ ನೀಡಿ ಮಂಜುನಾಥ ಸ್ವಾಮಿಯ ದರ್ಶನ ಪಡೆದರು.

ಸಾಂಪ್ರದಾಯಿಕ ಉಡುಗೆ ಧರಿಸಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ ಅವರು ಬಳಿಕ ಸನ್ನಿಧಿಯಲ್ಲಿ ತೀರ್ಥ ಪ್ರಸಾದ ಸ್ವೀಕರಿಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಡಿ.ಕೆ.ಶಿವಕುಮಾರ್, 'ಮುಖ್ಯಮಂತ್ರಿಯವರು, ನಾನು ಹಾಗೂ ಕೆಲವು ಸಚಿವರು ಮಂಜುನಾಥ ಸ್ವಾಮಿ, ಅಣ್ಣಪ್ಪ ಸ್ವಾಮಿ ಹಾಗೂ ಅಮ್ಮನವರ ದರ್ಶನ ಪಡೆದೆವು. ರಾಜ್ಯದಲ್ಲಿ ಉತ್ತಮ ಮಳೆ, ಬೆಳೆಯಾಗಲಿ. ಜನರು ಶಾಂತಿ, ನೆಮ್ಮದಿಯಿಂದ ಇರಲಿ ಎಂಬುದಾಗಿ ಪ್ರಾರ್ಥಿಸಿದ್ದೇವೆ' ಎಂದರು.

'ದೇವರ ದರ್ಶನದ ವೇಳೆ ಅನೇಕ ಮಹಿಳಾ ಭಕ್ತರು ತಮಗೆ ಪ್ರತಿ ತಿಂಗಳು ₹2 ಸಾವಿರ ಹಣ ಬರುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು. ಅವರ ಪ್ರಾರ್ಥನೆ ಹಾಗೂ ಆಶೀರ್ವಾದ ನಮಗೆ ಹೆಚ್ಚಿನ ಶಕ್ತಿ ನೀಡುತ್ತದೆ. ಅವರ ಮನೆಯಲ್ಲಿ ಗೃಹಜ್ಯೋತಿ ಬೆಳಗುತ್ತಿದೆ. ಅನ್ನಭಾಗ್ಯ ಸಿಗುತ್ತಿದೆ. ಈ ಯೋಜನೆಗಳನ್ನು ಜಾರಿ ಮಾಡಿರುವುದಕ್ಕೆ ಮಂಜುನಾಥ ನಮಗೆ ಆಶೀರ್ವಾದ ಮಾಡಲಿದ್ದಾನೆ ಎಂದು ನಂಬಿದ್ದೇವೆ' ಎಂದರು.

'ಸರ್ಕಾರದ ಶಕ್ತಿ ಯೋಜನೆಯಿಂದ ರಾಜ್ಯದ ಮೂಲೆ ಮೂಲೆಯಿಂದ ಹೆಚ್ಚಿನ ಭಕ್ತರು ಧರ್ಮಸ್ಥಳಕ್ಕೆ ಆಗಮಿಸಿ ಮಂಜುನಾಥನ ದರ್ಶನ ಪಡೆಯುತ್ತಿದ್ದಾರೆ ಎಂದು ಕ್ಷೇತ್ರದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರೂ ತಿಳಿಸಿದರು' ಎಂದರು.

ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರಿಗೆ ವೀರೇಂದ್ರ ಹೆಗ್ಗಡೆ ಅವರು ಸ್ಮರಣಿಕೆಯನ್ನಾಗಿ ಬೆಳ್ಳಿದೀಪಗಳನ್ನು ನೀಡಿ ಗೌರವಿಸಿದರು.

ಸಚಿವರಾದ ಎಚ್‌.ಸಿ.ಮಹದೇವಪ್ಪ, ಬೈರತಿ ಸುರೇಶ್, ಕೆ.ವೆಂಕಟೇಶ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಮಾಜಿ ಸಚಿವರಾದ ರಮಾನಾಥ ರೈ, ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಮತ್ತಿತರರು ಜೊತೆಯಲ್ಲಿದ್ದರು.

ಮೋದಿ ಪರ ಘೋಷಣೆ: ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ದೇವರ ದರ್ಶನ ಪಡೆಯಲು ಬಂದಾಗ, ದರ್ಶನ ಪಡೆಯಲು ಸರತಿ ಸಾಲಿನಲ್ಲಿ ನಿಂತಿದ್ದ ಕೆಲ ಭಕ್ತರು ಪ್ರಧಾನಿ ನರೇಂದ್ರ ಮೋದಿ ಪರ ಘೋಷಣೆ ಕೂಗಿದರು. ಇನ್ನು ಕೆಲವರು ಜೈಶ್ರೀರಾಂ ಘೋಷಣೆ ಕೂಗಿದರು ಎಂದು ಮೂಲಗಳು ತಿಳಿಸಿವೆ.

ಧರ್ಮಸ್ಥಳ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಶೇಷ ಪೂಜೆ ನೆರವೇರಿಸಿದ ಬಳಿಕ ಶನಿವಾರ ಆರತಿ ಸ್ವೀಕರಿಸಿದರು

ಗಲಾಟೆ ಮಾಡಿದ್ದು ಯಾರ ಪರವಾಗಿ?

ಮಂಗಳೂರು: ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ವಿರುದ್ಧ ಪೊಲೀಸರು ಕೈಗೊಂಡ ಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಸಮರ್ಥಿಸಿಕೊಂಡರು.

ಶಾಸಕ ಪೂಂಜ ಬಂಧನಕ್ಕೆ ಕಾಂಗ್ರೆಸ್ ಒತ್ತಡ ಹೇರುತ್ತಿದೆ ಎಂಬ ಬಿಜೆಪಿ ಮುಖಂಡರ ಆರೋಪದ ಕುರಿತು ಸುದ್ದಿಗಾರರಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, 'ಒತ್ತಡ ಎಂದರೆ ಏನು? ಶಾಸಕನಾದವನು ಪೊಲೀಸರ ವಿರುದ್ಧ ಗಲಾಟೆ ಮಾಡಬಹುದೇ. ಅವರು ಗಲಾಟೆ ಮಾಡಿದ್ದು ಯಾರ ಪರವಾಗಿ. ಕಾನೂನು ಎಲ್ಲರಿಗೂ ಒಂದೇ ಅಲ್ಲವೇ' ಎಂದು ಪ್ರಶ್ನಿಸಿದರು.

'ಶಾಸಕ ಪೂಂಜ ವಿರುದ್ಧ ದಾಖಲಾಗಿದ್ದು ಜಾಮೀನುರಹಿತ ಪ್ರಕರಣವಾಗಿದ್ದು, ಇಂತಹ ಸಂದರ್ಭದಲ್ಲಿ ಪೊಲೀಸರು ಕ್ರಮಕೈಗೊಳ್ಳದೇ ಮತ್ತೇನು ಮಾಡಬೇಕು?' ಎಂದರು.

ಬಿಜೆಪಿಯಿಂದ ರಘುಪತಿ ಭಟ್ ಉಚ್ಚಾಟನೆ

ಉಡುಪಿ: ವಿಧಾನ ಪರಿಷತ್ ನೈರುತ್ಯ ಪದವೀಧರರ ಕ್ಷೇತ್ರದಿಂದ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಾಜಿ ಶಾಸಕ ಕೆ. ರಘುಪತಿ ಭಟ್ ಅವರನ್ನು ಬಿಜೆಪಿಯಿಂದ ಉಚ್ಚಾಟಿಸಲಾಗಿದೆ.

'ಪಕ್ಷದ ಅಧಿಕೃತ ಅಭ್ಯರ್ಥಿಯ ವಿರುದ್ಧ ಸ್ಪರ್ಧಿಸಿ ಪಕ್ಷಕ್ಕೆ ಮುಜುಗರವನ್ನುಂಟು ಮಾಡಿರುವುದರಿಂದ ತಕ್ಷಣದಿಂದ ಜಾರಿಗೆ ಬರುವಂತೆ ಪಕ್ಷದ ಎಲ್ಲ ಜವಾಬ್ದಾರಿಗಳಿಂದ ಮುಕ್ತಿಗೊಳಿಸಿ 6 ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ' ಎಂದು ಬಿಜೆಪಿ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ್ ಪಾಟೀಲ ತಿಳಿಸಿದ್ದಾರೆ.

ಬಿಜೆಪಿ: ಜಿ.ವಿ. ರಾಜೇಶ್ ದಿಢೀರ್ ಎತ್ತಂಗಡಿ!

ಪ್ರಜಾವಾಣಿ ವಾರ್ತೆ

ಜಿ.ವಿ.ರಾಜೇಶ್

ಬೆಂಗಳೂರು: ಬಿಜೆಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ಹುದ್ದೆಯಿಂದ ಜಿ.ವಿ. ರಾಜೇಶ್ ಅವರನ್ನು ದಿಢೀರ್ ಎತ್ತಂಗಡಿ ಮಾಡಲಾಗಿದ್ದು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸಂಸ್ಥೆ 'ಸಾಮರಸ್ಯ'ದ ಹೊಣೆ ವಹಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನವರಾದ ರಾಜೇಶ್, ಆರ್‌ಎಸ್‌ಎಸ್ ಪ್ರಚಾರಕರಾಗಿ ಹಲವು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಿದ್ದರು. 2022ರ ಜುಲೈನಲ್ಲಿ ಅವರನ್ನು 'ಸಂಘ'ವು ಪಕ್ಷದ ಕೆಲಸಕ್ಕೆ ನಿಯೋಜಿಸಿತ್ತು. ಪ್ರಚಾರಕ ಹುದ್ದೆಯಿಂದ ಸಂಘಟನಾ ಕಾರ್ಯದರ್ಶಿಯಂತಹ ಅತ್ಯಂತ ಜವಾಬ್ದಾರಿಯ, ಮಹತ್ವದ ಹುದ್ದೆಗೆ ಬಂದವರ ಅವಧಿ ಸಾಮಾನ್ಯವಾಗಿ ಮೂರು ವರ್ಷ ಇರುತ್ತದೆ. ಅವಧಿಪೂರ್ಣವೇ ಅವರನ್ನು ಬದಲಾವಣೆ ಮಾಡಿರುವುದು ಪಕ್ಷದೊಳಗೆ ಹಲವು ಚರ್ಚೆಯನ್ನು ಹುಟ್ಟುಹಾಕಿದೆ.

ಜವಾಬ್ದಾರಿಯಿಂದ ಬಿಡುಗಡೆ ಮಾಡುವಂತೆ ರಾಜೇಶ್ ಅವರೇ ಸಂಘದ ಪ್ರಮುಖರನ್ನು ಕೇಳಿಕೊಂಡಿದ್ದರು ಎಂಬ ಚರ್ಚೆಯೂ ನಡೆದಿದೆ.

ಪಕ್ಷದ ಹಿರಿಯರು, ಹಲವು ಮಾಜಿ ಮುಖ್ಯಮಂತ್ರಿಗಳ ಜತೆಗೆ ಸಮನ್ವಯ ಸಾಧಿಸುವುದರ ಜತೆಗೆ ಸಂಘ ಮತ್ತು ಪಕ್ಷದ ಮಧ್ಯೆ ಸೇತುವೆಯಾಗಿ ಕಾರ್ಯನಿರ್ವಹಿಸುವ ಹೊಣೆ ಅವರದ್ದಾಗಿತ್ತು. ವಿಧಾನಸಭೆ ಚುನಾವಣೆಯಲ್ಲಿ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿಯಂತಹ ಮೂಲ ಬಿಜೆಪಿಗರು ಪಕ್ಷ ಬಿಟ್ಟು ಹೋದರು. ದಕ್ಷಿಣ ಕನ್ನಡದ ಪುತ್ತೂರಿನಲ್ಲಿ ಅರುಣ್ ಕುಮಾರ ಪುತ್ತಿಲ ಅವರು 'ಪುತ್ತಿಲ ಪರಿವಾರ' ರಚಿಸಿಕೊಂಡು ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಪಕ್ಷದ ಅಭ್ಯರ್ಥಿಯ ಸೋಲಿಗೆ ಕಾರಣರಾದರು. ಲೋಕಸಭೆ ಚುನಾವಣೆಯಲ್ಲಿ ಪಕ್ಷದ ಅಧ್ಯಕ್ಷನ ಅಣ್ಣನೇ ಸ್ಪರ್ಧಿಸಿದ್ದ ಶಿವಮೊಗ್ಗದಲ್ಲಿ ಕೆ.ಎಸ್. ಈಶ್ವರಪ್ಪ ಬಂಡಾಯ ಸ್ಪರ್ಧೆ, ನೈರುತ್ಯ ಪದವೀಧರ ಕ್ಷೇತ್ರದಲ್ಲಿ ಬಂಡಾಯ ಅಭ್ಯರ್ಥಿಯಾಗಿ ರಘುಪತಿ ಭಟ್ ಸ್ಪರ್ಧೆ ಇವೆಲ್ಲ ಬೆಳವಣಿಗೆಗಳು ನಡೆಯುತ್ತಿದ್ದರೂ, ಗಮನಿಸದೇ ಇದ್ದುದು ರಾಜೇಶ್ ಅವರ ವೈಫಲ್ಯ ಎಂದೇ ಹೇಳಲಾಗುತ್ತಿದೆ.

ಸಂಘ ನಿಷ್ಠರಾಗಿದ್ದ ಅನೇಕರು ಪಕ್ಷ ತೊರೆಯುವ, ಬಂಡಾಯ ಏಳುವುದರ ಬಗ್ಗೆ ಮುಂಜಾಗ್ರತೆ ವಹಿಸಿ, ಹಿರಿಯರ ಜತೆ ಚರ್ಚಿಸಿ ಮಾತುಕತೆ ಮೂಲಕ ಬಗೆಹರಿಸುವ, ರಾಜಕೀಯ ಸವಾಲುಗಳನ್ನು ಪರಿಹರಿಸುವ ಹೊಣೆಯೂ ಸಂಘಟನಾ ಕಾರ್ಯದರ್ಶಿ ಅವರ ಮೇಲಿತ್ತು. ಅದನ್ನು ಸಮರ್ಥವಾಗಿ ನಿಭಾಯಿಸದೇ ಇರುವುದು ರಾಜೇಶ್ ಬದಲಾವಣೆಗೆ ಕಾರಣ ಎನ್ನಲಾಗುತ್ತಿದೆ.

ರಾಜ್ಯ ಸಂಘಟನಾ ಕಾರ್ಯದರ್ಶಿಯ ವೈಫಲ್ಯವು ಪಕ್ಷದಲ್ಲಿ ಹಲವು ಸಮಸ್ಯೆಗಳಿಗೆ ಕಾರಣವಾಗಿದೆ. ಜಿಲ್ಲಾ ಮಟ್ಟದಲ್ಲೂ ಸಂಘಟನಾ ಕಾರ್ಯದರ್ಶಿ ಹುದ್ದೆ ಸೃಷ್ಟಿಸಿ ಕಿರಿಯರನ್ನು ನಿಯೋಜಿಸಲಾಗಿದೆ. ಜಿಲ್ಲಾ ಘಟಕದ ಅಧ್ಯಕ್ಷರ ಜತೆಗೆ ಕಿರಿಯರು ಸಮನ್ವಯದಿಂದ ಕೆಲಸ ಮಾಡುವ ಬದಲಿಗೆ, ಹಿರಿಯರನ್ನೇ ನಿಯಂತ್ರಿಸುತ್ತಿದ್ದಾರೆ. ಈ ಬಗ್ಗೆ ದೂರುಗಳ ಬಂದರೂ ಅದನ್ನು ನಿವಾರಿಸುವಲ್ಲಿ ಆಸ್ಥೆ ವಹಿಸದೇ ಇರುವುದು ಸಮಸ್ಯೆಗೆ ಕಾರಣ. ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳ ಬದಲಾವಣೆ ಮಾಡಬೇಕು ಎಂಬ ಕೂಗು ಪಕ್ಷದಲ್ಲಿದೆ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್‌ನಲ್ಲಿ ಬಿರುಸಿನ ಚಟುವಟಿಕೆ

ಪರಿಷತ್ ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ನ 11 ಸ್ಥಾನಗಳಿಗೆ ನಡೆಯುವ ಚುನಾವಣೆಗೆ ಆಡಳಿತಾರೂಢ ಕಾಂಗ್ರೆಸ್ ಬಿರುಸಿನ ತಯಾರಿ ಆರಂಭಿಸಿದೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಚಿವರ ಜತೆ ಶನಿವಾರ ಚರ್ಚಿಸಿದ್ದು, ಸಮುದಾಯ, ಪ್ರಾದೇಶಿಕತೆ ಆಧಾರದಲ್ಲಿ ಬೇಡಿಕೆಯೂ ಹೆಚ್ಚುತ್ತಿದೆ.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ವಸತಿ ಸಚಿವ ಬಿ.ಜೆಡ್. ಜಮೀರ್ ಅಹಮದ್ ಖಾನ್, ಕಂದಾಯ ಸಚಿವ ಕೃಷ್ಣ ಬೈರೇಗೌಡ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಜಮೀರ್ ಅಹಮದ್ ನೇತೃತ್ವದಲ್ಲಿ ಶಿವಕುಮಾರ್ ಅವರನ್ನು ಶುಕ್ರವಾರ ಭೇಟಿಮಾಡಿದ್ದ ಮುಸ್ಲಿಂ ಮುಖಂಡರ ನಿಯೋಗ, ಈ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಲಭ್ಯವಾಗುವ ಏಳು ಸ್ಥಾನಗಳ ಪೈಕಿ ಎರಡನ್ನು ತಮ್ಮ ಸಮುದಾಯಕ್ಕೆ ನೀಡುವಂತೆ ಬೇಡಿಕೆ ಮಂಡಿಸಿತ್ತು.

ಶನಿವಾರ ಭೇಟಿಮಾಡಿದ ನಾಲ್ವರು ಸಚಿವರೂ ಪ್ರತ್ಯೇಕವಾಗಿ ಕೆಪಿಸಿಸಿ ಅಧ್ಯಕ್ಷರ ಜತೆ ಚರ್ಚಿಸಿದ್ದಾರೆ. ಕೊನೆಯಲ್ಲಿ ಎಲ್ಲ ಸಚಿವರ ಜತೆಗೂ ಒಟ್ಟಾಗಿ ಒಂದು ಸುತ್ತಿನ ಚರ್ಚೆ ನಡೆಸಲಾಗಿದೆ. ಕೆಲವು ನಿರ್ದಿಷ್ಟ ಸಮುದಾಯಗಳಿಗೆ ಪ್ರಾತಿನಿಧ್ಯ ಕಲ್ಪಿಸುವುದು, ಪ್ರದೇಶವಾರು ಪ್ರಾತಿನಿಧ್ಯದ ಕುರಿತು ಚರ್ಚೆ ನಡೆದಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಶಾಸಕರ ನಿಯೋಗದ ಭೇಟಿ: ರಾಯಚೂರು ಜಿಲ್ಲೆಯ ಕಾಂಗ್ರೆಸ್ ಶಾಸಕರಾದ ಬಸನಗೌಡ ದದ್ದಲ್, ಹಂಪನಗೌಡ ಬಾದರ್ಲಿ ಮತ್ತು ಬಸವನಗೌಡ ತುರವೀಹಾಳ ಅವರನ್ನೊಳಗೊಂಡ ನಿಯೋಗವು ಶಿವಕುಮಾರ್ ಅವರನ್ನು ಶನಿವಾರ ಭೇಟಿಮಾಡಿ, ಕೆಪಿಸಿಸಿ ಕಾರ್ಯಾಧ್ಯಕ್ಷ ವಸಂತಕುಮಾರ್ ಅವರಿಗೆ ಪರಿಷತ್ ಸದಸ್ಯ ಸ್ಥಾನ ನೀಡುವಂತೆ ಆಗ್ರಹಿಸಿತು.

ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಯ್‌ಬರೇಲಿ ಲೋಕಸಭಾ ಕ್ಷೇತ್ರದ ಚುನಾವಣಾ ಪ್ರಚಾರದಲ್ಲಿ ಸಕ್ರಿಯರಾಗಿದ್ದರು. ಅಲ್ಲಿ ಮತದಾನ ಮುಗಿದಿರುವುದರಿಂದ ರಾಜ್ಯದ ವಿಧಾನ ಪರಿಷತ್ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಕುರಿತು ಚರ್ಚಿಸಲು ಅವಕಾಶವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಅವರು ಸಂಭವನೀಯ ಅಭ್ಯರ್ಥಿಗಳ ಪಟ್ಟಿಯೊಂದಿಗೆ ತಿಂಗಳಾಂತ್ಯದಲ್ಲಿ ದೆಹಲಿಗೆ ತೆರಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ನೇರ ಚುನಾವಣೆಗೆ ಸ್ಪರ್ಧಿಸಿ ಗೆಲ್ಲಲು ಸಾಧ್ಯವಾಗದ ಸಮುದಾಯಗಳಿಗೆ ಹೆಚ್ಚಿನ ಅವಕಾಶ ನೀಡುವಂತೆ ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೇರಿದಂತೆ ಕೆಲವರು ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರನ್ನು ಒತ್ತಾಯಿಸಿದ್ದಾರೆ.

'ಯತೀಂದ್ರ ಪರಿಷತ್ ಪ್ರವೇಶ ಖಚಿತ'

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ವಿಧಾನ ಪರಿಷತ್ ಸದಸ್ಯರಾಗುವುದು ಖಚಿತ. ಸರ್ಕಾರ ರಚನೆ ಸಂದರ್ಭದಲ್ಲೇ ಅದು ನಿರ್ಧಾರವಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಶನಿವಾರ ಭೇಟಿಮಾಡಿ ಚರ್ಚಿಸಿದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು.

'ವಿಧಾನ ಪರಿಷತ್ ಚುನಾವಣೆ ಕುರಿತು ಚರ್ಚಿಸಿದ್ದೇವೆ. ಪರಿಷತ್ ಸದಸ್ಯ ಸ್ಥಾನಗಳು ಬೆಂಗಳೂರಿಗೆ ಸೀಮಿತ ಆಗಬಾರದು ಎಂಬುದನ್ನು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇವೆ. ಪಕ್ಷಕ್ಕಾಗಿ ದುಡಿದಿರುವ ಬಹಳಷ್ಟು ಮಂದಿ ಇದ್ದು, ಅಂತಹವರಿಗೆ ಅವಕಾಶ ನೀಡುವಂತೆ ಕೇಳಿದ್ದೇವೆ' ಎಂದು ಹೇಳಿದರು.

'ಕೆಲವರನ್ನು ಅನಿವಾರ್ಯವಾಗಿ ಮುಂದುವರಿಸಬೇಕಾಗುತ್ತದೆ. ಉಳಿದಂತೆ ಜಾತಿವಾರು ಪ್ರಾತಿನಿಧ್ಯ ನೀಡುವಂತೆ ಕೇಳಿದ್ದೇವೆ. ಲಂಬಾಣಿ ಹಾಗೂ ಅಲ್ಪಸಂಖ್ಯಾತ ಸಮುದಾಯದವರಿಗೆ ಪ್ರಾತಿನಿಧ್ಯ ಕಲ್ಪಿಸುವಂತೆ ಒತ್ತಾಯಿಸಿದ್ದೇವೆ' ಎಂದರು.

'ಅಧ್ಯಕ್ಷನಾದರೆ ಸಚಿವ ಸ್ಥಾನ ತ್ಯಾಗಕ್ಕೆ ಸಿದ್ಧ'

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವುದಾದರೆ ಸಚಿವ ಸ್ಥಾನ ತ್ಯಾಗಕ್ಕೆ ನಾನು ಸಿದ್ಧ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಕೆಪಿಸಿಸಿ ಅಧ್ಯಕ್ಷರನ್ನು ಬದಲಾವಣೆ ಮಾಡುವುದಾದರೆ ನಾನೂ ಕೂಡ ಆಕಾಂಕ್ಷಿ. ಅದಕ್ಕಾಗಿ ಮಂತ್ರಿ ಸ್ಥಾನ ಬಿಟ್ಟು ಕೆಲಸ ಮಾಡಲು ಸಿದ್ಧನಾಗಿದ್ದೇನೆ' ಎಂದರು.

'ಕೆಪಿಸಿಸಿ ಅಧ್ಯಕ್ಷನಾದರೆ ಮುಂದೆ ವಿಧಾನಸಭೆ ಸೇರಿದಂತೆ ಯಾವುದೇ ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಪೂರ್ಣ ಪ್ರಮಾಣದಲ್ಲಿ ಪಕ್ಷದ ಸಂಘಟನೆಗೆ ಸಮಯ ಮೀಸಲಿಡುವೆ. ಯಾವ ರಾಜಕೀಯ ಅಧಿಕಾರವೂ ನನಗೆ ಬೇಕಿಲ್ಲ. ತನು, ಮನ ಅರ್ಪಿಸಿ ಪಕ್ಷಕ್ಕಾಗಿ ದುಡಿಯುವೆ' ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಷಯ ಕುರಿತು ಪ್ರತಿಕ್ರಿಯಿಸಿದ ಗೃಹ ಸಚಿವ ಜಿ. ಪರಮೇಶ್ವರ, 'ಅಧ್ಯಕ್ಷರ ಬದಲಾವಣೆ ಕುರಿತು ನನಗೆ ಗೊತ್ತಿಲ್ಲ. ಅದನ್ನು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುತ್ತದೆ' ಎಂದರು.

ಅರಣ್ಯ ಇಲಾಖೆಗೆ ಹೋಟೆಲ್ ಅಧಿಕಾರಿಗಳಿಂದ ಪತ್ರ

ಮೋದಿ ವಾಸ್ತವ್ಯ: ₹80 ಲಕ್ಷ ಬಿಲ್ ಬಾಕಿ!

ಪ್ರಜಾವಾಣಿ ವಾರ್ತೆ


ನರೇಂದ್ರ ಮೋದಿ

ಮೈಸೂರು: ಪ್ರಧಾನಿ ನರೇಂದ್ರ ಮೋದಿ 2023ರ ಏಪ್ರಿಲ್‌ನಲ್ಲಿ ಮೈಸೂರಿಗೆ ಆಗಮಿಸಿದ್ದ ವೇಳೆ ವಾಸ್ತವ್ಯ ಹೂಡಿದ್ದ ಇಲ್ಲಿನ ರಾಡಿಸನ್ ಬ್ಲ್ಯೂ ಹೋಟೆಲ್‌ಗೆ ಆತಿಥ್ಯ ವೆಚ್ಚವಾಗಿ ₹80.6 ಲಕ್ಷ ಬಾಕಿ ಉಳಿಸಿಕೊಂಡಿದ್ದು, ಬಿಲ್ ಪಾವತಿಸದಿದ್ದರೆ ಕಾನೂನು ಸಮರ ನಡೆಸಲು ಹೋಟೆಲ್ ಮುಂದಾಗಿದೆ.

ಈ ಸಂಬಂಧ ಹೋಟೆಲ್‌ನ ಹಣಕಾಸು ವಿಭಾಗದ ಪ್ರಧಾನ ವ್ಯವಸ್ಥಾಪಕರು ಮೇ 21ರಂದು ಮೈಸೂರಿನ ಉಪ ಅರಣ್ಯ ಸಂರಕ್ಷಣಾಧಿಕಾರಿ ಗೆ ಪತ್ರ ಬರೆದಿದ್ದು, 'ಬಾಕಿ ಇರುವ ಬಿಲ್‌ನ ಮೊತ್ತವನ್ನು ಜೂನ್ 1ರ ಒಳಗೆ ಪಾವತಿಸಬೇಕು. ಇಲ್ಲವಾದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

ಏನಿದು ಕಾರ್ಯಕ್ರಮ?: ಬಂಡೀಪುರ ಹುಲಿ ಯೋಜನೆಗೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ 2023ರ ಏಪ್ರಿಲ್ 9ರಿಂದ 11ರವರೆಗೆ ಬಂಡೀಪುರದಲ್ಲಿ ಏರ್ಪಡಿಸಿದ್ದ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಬಂದಿದ್ದ ಪ್ರಧಾನಿ ಮೋದಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಹಾಗೂ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ ಸಹಯೋಗದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಆರಂಭದಲ್ಲಿ ಕಾರ್ಯಕ್ರಮಕ್ಕೆ ₹3 ಕೋಟಿ ವೆಚ್ಚ ಅಂದಾಜಿಸಲಾಗಿತ್ತು. ನಂತರ ₹6.3 ಕೋಟಿ ವೆಚ್ಚವಾಗಿದೆ. ಎನ್‌ಟಿಸಿಎ ₹3 ಕೋಟಿ ಪಾವತಿಸಿದ್ದು, ಉಳಿದ ಬಾಕಿ ₹3.3 ಕೋಟಿ ಪಾವತಿ ಆಗಿಲ್ಲ. ಅದರಲ್ಲಿ ಹೋಟೆಲ್‌ಗೆ ನೀಡಬೇಕಾದ ₹80.6 ಲಕ್ಷವೂ ಸೇರಿದೆ.

'ಕಾರ್ಯಕ್ರಮ ಸಂಪೂರ್ಣ ಎನ್‌ಟಿಸಿಎ ಹಾಗೂ ಕೇಂದ್ರ ಅರಣ್ಯ ಇಲಾಖೆ ಸಹಯೋಗದಲ್ಲಿ ನಡೆದಿತ್ತು. ಹೀಗಾಗಿ ಕೇಂದ್ರವೇ ಸಂಪೂರ್ಣ ವೆಚ್ಚ ಭರಿಸಬೇಕು' ಎನ್ನುವುದು ರಾಜ್ಯ ಅರಣ್ಯ ಇಲಾಖೆಯ ವಾದ. ಬಾಕಿ ಹಣ ಪಾವತಿಗೆ ರಾಜ್ಯ ಹಾಗೂ ಕೇಂದ್ರ ಅರಣ್ಯ ಇಲಾಖೆ ನಡುವೆ ಅನೇಕ ಬಾರಿ ಪತ್ರ ಸಮರ ನಡೆದಿದೆ. ಈ ವರ್ಷ ಮಾರ್ಚ್ 22ರಂದು ಅರಣ್ಯ ಇಲಾಖೆಯ ಪ್ರಧಾನ ಮುಖ್ಯ ಸಂರಕ್ಷಣಾ ಅಧಿಕಾರಿ (ಪಿಸಿಸಿಎಫ್) ಎನ್‌ಟಿಸಿಎ ಡಿಐಜಿಗೆ ಪತ್ರ ಬರೆದಿದ್ದು, 'ಬಾಕಿ ಹಣ ಬಿಡುಗಡೆಗೆ ಕ್ರಮ ಕೈಗೊಳ್ಳಬೇಕು. ಹೋಟೆಲ್‌ಗೆ ನೀಡಬೇಕಾದ ₹80.6 ಲಕ್ಷವನ್ನು ಅವರ ಖಾತೆಗೆ ನೇರವಾಗಿ ಪಾವತಿಸಬೇಕು' ಎಂದು ಕೋರಿದ್ದರು. ಉತ್ತರಿಸಿದ್ದ ಎನ್‌ಟಿಸಿಎ, 'ರಾಜ್ಯ ಸರ್ಕಾರವೇ ಹಣ ಬಿಡುಗಡೆ ಮಾಡಬೇಕು' ಎಂದು ಹೇಳಿ ಸುಮ್ಮನಾಗಿದೆ.

₹3.33 ಕೋಟಿ ಬಾಕಿ : ಸಚಿವ ಖಂಡ್ರೆ

ಬೆಂಗಳೂರು: ಹುಲಿ ಯೋಜನೆ–50 ಕಾರ್ಯಕ್ರಮಕ್ಕಾಗಿ 2023ರ ಏಪ್ರಿಲ್‌ನಲ್ಲಿ ಮೈಸೂರಿಗೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಆತಿಥ್ಯದ ವೆಚ್ಚ ಸೇರಿದಂತೆ ₹ 3.33 ಕೋಟಿ ಬಾಕಿ ಮೊತ್ತವನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಇದುವರೆಗೂ ಪಾವತಿಸಿಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಕಾರ್ಯಕ್ರಮ ನಡೆದಾಗ ವಿಧಾನಸಭಾ ಚುನಾವಣೆಯ ನೀತಿ ಸಂಹಿತೆ ಜಾರಿಯಲ್ಲಿತ್ತು. ಹಾಗಾಗಿ, ರಾಜ್ಯ ಸರ್ಕಾರ ಅದರಲ್ಲಿ ಭಾಗಿಯಾಗಿರಲಿಲ್ಲ. ರಾಜ್ಯ ಲಾಂಛನದ ಬಳಕೆಯೂ ಆಗಿರಲಿಲ್ಲ. ಇದು ಸಂಪೂರ್ಣ ಎನ್‌ಟಿಸಿಎ ಕಾರ್ಯಕ್ರಮ. ಆತಿಥ್ಯ ನಿರ್ವಹಣೆಗಾಗಿ ರಚಿಸಲಾಗಿದ್ದ ಸಮಿತಿಯಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳೂ ಇದ್ದರು. ಕಾರ್ಯಕ್ರಮದ ವೆಚ್ಚವನ್ನು ಭರಿಸುವುದಾಗಿ ಎನ್‌ಟಿಸಿಎ ಹೇಳಿತ್ತು ಎಂದರು.

ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ₹6.33 ಕೋಟಿ. ₹3 ಕೋಟಿ ಈಗಾಗಲೇ ಪಾವತಿಯಾಗಿದೆ. ರಾಡಿಸನ್ ಬ್ಲೂ ಆತಿಥ್ಯ ವೆಚ್ಚ ಸುಮಾರು ₹80 ಲಕ್ಷ ಸೇರಿ ₹3.33 ಕೋಟಿ ಬಾಕಿ ಬರಬೇಕಿದೆ. ರಾಜ್ಯ ಅರಣ್ಯಾಧಿಕಾರಿಗಳು ಹಲವು ಬಾರಿ ಪತ್ರ ಬರೆದಿದ್ದರೂ, ಬಾಕಿ ಹಣ ನೀಡಿಲ್ಲ. ಸಮಸ್ಯೆಯನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಲಾಗುವುದು ಎಂದು ಹೇಳಿದರು.

ಮದ್ಯಸೇವನೆ: 5 ಎಂಜಿನಿಯರ್‌ಗಳ ಅಮಾನತು

ಬಾಗಲಕೋಟೆ: ಜಿಲ್ಲೆಯ ಜಮಖಂಡಿ ಲೋಕೋಪಯೋಗಿ ಇಲಾಖೆಯ 'ರಮಾ ನಿವಾಸ' ನಿರೀಕ್ಷಣಾ ಮಂದಿರ (ಐಬಿ) ಕಚೇರಿ ವೇಳೆಯಲ್ಲಿ ಜಿಲ್ಲಾ ಪಂಚಾಯಿತಿ ಅಧಿಕಾರಿಗಳು, ಗುತ್ತಿಗೆದಾರರೊಂದಿಗೆ ಮದ್ಯ ಸೇವಿಸುತ್ತ ಮೋಜು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಅಧಿಕಾರಿಗಳನ್ನು ಜಿಲ್ಲಾ ಚುನಾವಣಾಧಿಕಾರಿ ಕೆ.ಎಂ. ಜಾನಕಿ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಮೋಜು ಮಾಡಿದ ವಿಡಿಯೊದಲ್ಲಿ ಇದ್ದ ಪಂಚಾಯತ್ ರಾಜ್ ಜಮಖಂಡಿ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಸ್‌.ಎಂ. ನಾಯಕ, ಸಹಾಯಕ ಎಂಜಿನಿಯರ್‌ಗಳಾದ ಜಗದೀಶ ನಾಡಗೌಡ, ರಾಮಪ್ಪ ರಾಠೋಡ, ಕಿರಿಯ ಎಂಜಿನಿಯರ್ ಗಜಾನನ ಪಾಟೀಲ ಅವರನ್ನು ಅಮಾನತು ಮಾಡಲಾಗಿದೆ.

ನಿರೀಕ್ಷಣಾ ಮಂದಿರದ ಬೀಗಗಳನ್ನು ಪಂಚಾಯತ್ ರಾಜ್ ಎಂಜಿನಿಯರ್‌ಗಳಿಗೆ ನೀಡಲು ನಿರ್ದೇಶನ ನೀಡಿದ ಲೋಕೋಪಯೋಗಿ ಇಲಾಖೆ ಸಹಾಯಕ ಎಂಜಿನಿಯರ್ ಎಸ್‌.ಆರ್. ಜಂಬಗಿ ಅವರನ್ನು ಅಮಾನತುಗೊಳಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ವಿರುದ್ಧ ದೂರು ದಾಖಲು

ಒಂದನೇ ಪುಟದಿಂದ...

ಈ ಸಂಬಂಧ ಹೆಬ್ಬಾಳದ ಜಿಯಾವುರ್ ರಹಮಾನ್ ನೊಮಾನಿ, 42ನೇ ಎಸಿಎಂಎಂ ನ್ಯಾಯಾಲಯಕ್ಕೆ ಇದೇ 23ರಂದು ದೂರು ಸಲ್ಲಿಸಿದ್ದಾರೆ.

'ಪ್ರಧಾನಿಯವರ ಭಾಷಣವು ಮುಸ್ಲಿಮರನ್ನು ನಿಂದಿಸುವಂತಿದೆ. ಈ ದೇಶದ ಸಂಪತ್ತನ್ನು ಲೂಟಿ ಹೊಡೆದ ನುಸುಳುಕೋರರ ಜೊತೆ ಅವರನ್ನು ಹೋಲಿಕೆ ಮಾಡುವಂತೆ ಪ್ರೇರೇಪಿಸುತ್ತದೆ. ಆದಕಾರಣ ದ್ವೇಷ ಹರಡಿದ, ಶಾಂತಿಭಂಗ ಉಂಟು ಮಾಡಿದ ಆರೋಪದಡಿ ಮೋದಿ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು' ಎಂದು ದೂರಿನಲ್ಲಿ ವಿವರಿಸಲಾಗಿದೆ.

ವಿಚಾರಣೆ ಮೇ 28ಕ್ಕೆ ನಿಗದಿಯಾಗಿದೆ. ಫಿರ್ಯಾದುದಾರರ ಪರ ವಕೀಲ ಮುರ್ತಜಾ ಅಲಿ ಬೇಗ್ ವಕಾಲತ್ತು ವಹಿಸಿದ್ದಾರೆ.

ಪ್ರಕರಣವೇನು?: 'ಮೋದಿಯವರು ರಾಜಸ್ಥಾನದ ಬಾಂಸ್ವಾಡದಲ್ಲಿ ಏಪ್ರಿಲ್ 21 ರಂದು ಚುನಾವಣಾ ಪ್ರಚಾರ ಭಾಷಣದ ವೇಳೆ ದ್ವೇಷ ಭಾಷಣದ ನುಡಿಗಳನ್ನಾಡಿದ್ದಾರೆ. ಈ ಆರೋಪಕ್ಕೆ ಸಂಬಂಧಿಸಿದಂತೆ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 153ಎ, 153ಬಿ, 295ಎ, 503, 504, 505(2)ರ ಅಡಿಯಲ್ಲಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅಮೃತಹಳ್ಳಿ ಠಾಣಾ ಪೊಲೀಸರಿಗೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

'ಮೋದಿಯವರ ವಿರುದ್ಧ ಏಪ್ರಿಲ್ 26ರಂದು ಅಮೃತಹಳ್ಳಿ ಠಾಣೆಗೆ ದೂರು ನೀಡಲಾಗಿತ್ತು. ಆದರೆ, ಇದು ಚುನಾವಣಾ ಆಯೋಗದ ವ್ಯಾಪ್ತಿಗೆ ಒಳಪಡುವುದರಿಂದ ಎಫ್‌ಐಆರ್ ದಾಖಲಿಸಲಾಗದು ಎಂದು ಪೊಲೀಸರು, ಹಿಂಬರಹ ನೀಡಿದ್ದರು. ಏಪ್ರಿಲ್ 27ರಂದು ಇ-ಮೇಲ್ ಮೂಲಕ ಬೆಂಗಳೂರು ಪೊಲೀಸ್ ಆಯುಕ್ತರಿಗೆ ದೂರು ನೀಡಲಾಗಿತ್ತು. ಅವರಿಂದಲೂ ಸೂಕ್ತ ಸ್ಪಂದನೆ ದೊರೆಯದ ಕಾರಣ ಖಾಸಗಿ ದೂರು ಸಲ್ಲಿಸಲಾಗುತ್ತಿದೆ' ಎಂದರು.

ನಾಯಕನಹಟ್ಟಿ ಪೊಲೀಸ್ ಠಾಣೆ ಜಲಾವೃತ, ಮಲೆನಾಡಿನಲ್ಲಿ ಧುಮ್ಮಿಕ್ಕುತ್ತಿವೆ ಜಲಧಾರೆಗಳು

ಮುಂದುವರಿದ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕರಾವಳಿ, ಮಲೆನಾಡು ಹಾಗೂ ಕಲ್ಯಾಣ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಶುಕ್ರವಾರ ತಡರಾತ್ರಿ ಮತ್ತು ಶನಿವಾರ ಧಾರಾಕಾರ ಮಳೆಯಾಗಿದೆ. ಹಲವೆಡೆ ಮನೆ, ಗೋಡೆಗಳು ಕುಸಿದಿವೆ. ಮರಗಳು, ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಅಲ್ಲಲ್ಲಿ ಆಸ್ತಿಗೂ ಹಾನಿಯಾಗಿದೆ. ಹಳ್ಳ-ಕೊಳ್ಳಗಳು ತುಂಬಿ ಹರಿಯುತ್ತಿದ್ದು, ಕೆಲವು ಕಡೆಗಳಲ್ಲಿ ತಗ್ಗು ಪ್ರದೇಶಗಳು ಜಲಾವೃತವಾಗಿವೆ.

ಮೈಸೂರು ಭಾಗದ ಮೈಸೂರು, ಕೊಡಗು, ಹಾಸನ, ಚಾಮರಾಜನಗರ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಶುಕ್ರವಾರ ರಾತ್ರಿ ಧಾರಾಕಾರ ಮಳೆ ಸುರಿಯಿತು. ಮಧ್ಯ ಕರ್ನಾಟಕದ ದಾವಣಗೆರೆ, ಚಿತ್ರದುರ್ಗ ಜಿಲ್ಲೆಯ ವಿವಿಧೆಡೆ ಶನಿವಾರ ಬೆಳಗಿನ ಜಾವ ಉತ್ತಮ ಮಳೆ ಸುರಿದಿದೆ. ಶಿವಮೊಗ್ಗ ಜಿಲ್ಲೆಯ ಹಲವೆಡೆ ಸಾಧಾರಣ ಮಳೆಯಾಗಿದೆ.

ಮಂಗಳೂರು ವರದಿ: ಮಂಗಳೂರು ನಗರದಲ್ಲಿ ಶುಕ್ರವಾರ ರಾತ್ರಿ ಶುರುವಾದ ಧಾರಾಕಾರ ಮಳೆ ಶನಿವಾರ ಬೆಳಿಗ್ಗೆ ವರೆಗೂ ಮುಂದುವರಿದಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಭಾರಿ ಮಳೆ ಆಗಿದೆ. ಬಪ್ಪನಾಡು ದುರ್ಗಾಪರಮೇಶ್ವರಿ ದೇವಸ್ಥಾನ ಜಲಾವೃತವಾಗಿದ್ದರಿಂದ ಪೂಜೆ ಹಾಗೂ ದೇವರ ಬಲಿ ಪ್ರದಕ್ಷಿಣೆಗೆ ಅಡಚಣೆ ಉಂಟಾಯಿತು.

ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮೂಲ್ಕಿ ತಾಲ್ಲೂಕಿನ ಪಡುಪಣಂಬೂರಿನಲ್ಲಿ 19 ಸೆಂ.ಮೀ., ಕಿಲ್ಪಾಡಿ- 13, ಕೆಮ್ರಾಲ್- 9, ಮಂಗಳೂರು ತಾಲ್ಲೂಕಿನ ಚೇಳಾಯ್ರುವಿನಲ್ಲಿ 13, ಬಾಳ-13, ಶಿರ್ತಾಡಿ-10, ಪಡುಮಾರ್ನಾಡು-10, ಬೆಳುವಾಯಿ-10 ಸೆಂ.ಮೀ ಮಳೆಯಾಗಿದೆ.

ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಉತ್ತಮ ಮಳೆ ಪರಿಣಾಮ ಕಾರ್ಕಳ ತಾಲ್ಲೂಕಿನಲ್ಲಿರುವ ಮುಂಡ್ಲಿ ಅಣೆಕಟ್ಟೆಗೆ ಒಳಹರಿವು ಹೆಚ್ಚಿದೆ. ಮುಂಡ್ಲಿ ಜಲಾಶಯದ 2 ಗೇಟುಗಳ ಮೂಲಕ ಸ್ವರ್ಣ ನದಿಗೆ ನೀರು ಬಿಡಲಾಗಿದೆ. ಉಡುಪಿ ನಗರಕ್ಕೆ ನೀರು ಪೂರೈಸುವ ಬಜೆ ಡ್ಯಾಂನಲ್ಲಿ ಸಾಕಷ್ಟು ಪ್ರಮಾಣದ ನೀರು ಸಂಗ್ರಹವಾಗುತ್ತಿರುವುದರಿಂದ ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ರೇಷನಿಂಗ್ ಪದ್ಧತಿಯಲ್ಲಿ ನೀರು ಪೂರೈಕೆ ರದ್ದುಪಡಿಸಲಾಗಿದೆ. ನಿರಂತರವಾಗಿ ನಗರಕ್ಕೆ ನೀರು ಪೂರೈಸಲಾಗುವುದು ಎಂದು ಪೌರಾಯುಕ್ತ ರಾಯಪ್ಪ ತಿಳಿಸಿದ್ದಾರೆ. ಬ್ರಹ್ಮಾವರದಲ್ಲಿ ಒಂದೇ ದಿನ 9 ಸೆಂ.ಮೀ ಮಳೆ ಸುರಿದಿದ್ದು, ಕೃಷಿ ಭೂಮಿಗಳಲ್ಲಿ ನೀರು ನಿಂತಿರುವ ದೃಶ್ಯ ಕಂಡುಬಂತು.

ಚಿಕ್ಕಮಗಳೂರು ಜಿಲ್ಲೆಯ ಎಲ್ಲೆಡೆ ರಾತ್ರಿಯಿಡಿ ಬಿರುಗಾಳಿ ಸಹಿತ ಜೋರು ಮಳೆಯಾಗಿದೆ. ಮುಳ್ಳಯ್ಯನಗಿರಿ ಸೇರಿ ಚಂದ್ರದ್ರೋಣ ಪರ್ವತ ಶ್ರೇಣಿ, ಕೆಮ್ಮಣ್ಣುಗುಂಡಿ, ಚಾರ್ಮಾಡಿ ಘಾಟಿ, ಎತ್ತಿನಭುಜ, ದೇವರಮನೆ ಪ್ರವಾಸಿ ತಾಣಗಳಲ್ಲಿ ಮೋಡದ ನಡುವೆ ಓಡಾಡಿದ ಅನುಭವ ಪ್ರವಾಸಿಗರಿಗೆ ಆಯಿತು.

ದಾವಣಗೆರೆ ವರದಿ: ಜಿಲ್ಲೆಯ ಬಹುತೇಕ ಕಡೆಗಳಲ್ಲಿ ನಸುಕಿನಲ್ಲಿ ಮೂರು ತಾಸು ಮಳೆ ಸುರಿಯಿತು. ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಸಾಸ್ವೆಹಳ್ಳಿ ಹೋಬಳಿಯಲ್ಲಿ ಮಳೆಯಿಂದಾಗಿ ಬೆಳೆಹಾನಿ ಸಂಭವಿಸಿದೆ. ಲಿಂಗಾಪುರ ಗ್ರಾಮದ ರೈತರು ಬೆಳೆದ ಭತ್ತ ಸಂಪೂರ್ಣ ಜಲಾವೃತವಾಗಿದೆ.

ಚಿತ್ರದುರ್ಗ ವರದಿ: ಜಿಲ್ಲೆಯಲ್ಲಿ ಶುಕ್ರವಾರ ತಡರಾತ್ರಿಯಿಂದ ಶನಿವಾರ ಬೆಳಗಿನ ಜಾವದವರೆಗೂ ಉತ್ತಮ ಮಳೆ ಸುರಿದಿದೆ. ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿಯ ಪೊಲೀಸ್ ಠಾಣೆಯ ಕಟ್ಟಡ ಮಳೆಯಿಂದ ಜಲಾವೃತವಾಗಿತ್ತು. ಗ್ರಾಮದಲ್ಲಿ ಮನೆಗಳಿಗೆ ನೀರು ನುಗ್ಗಿದ್ದು, 34 ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಹುಬ್ಬಳ್ಳಿ ವರದಿ: ಬಳ್ಳಾರಿ, ವಿಜಯನಗರ ಜಿಲ್ಲೆಯ ವಿವಿಧೆಡೆ ಶುಕ್ರವಾರ ಮಧ್ಯರಾತ್ರಿಯಿಂದ ಶನಿವಾರ ಬೆಳಗಿನ ಜಾವದವರೆಗೆ ಉತ್ತಮ ಮಳೆಯಾಗಿದೆ. ಧಾರವಾಡ ನಗರ ಮತ್ತು ಸುತ್ತಲಿನ ಪ್ರದೇಶದಲ್ಲಿ ಶನಿವಾರ ತುಂತುರು ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ದಾಂಡೇಲಿ, ಹೊನ್ನಾವರ, ಬೆಳಗಾವಿ, ಕೌಜಲಗಿ, ಸವದತ್ತಿಯಲ್ಲಿ ಸಾಧಾರಣ ಮಳೆಯಾಯಿತು.

ಚಿಕ್ಕಮಗಳೂರಿನ ಮುಳ್ಳಯ್ಯನಗಿರಿಯಲ್ಲಿ ಶನಿವಾರ ಮೋಡದ ನಡುವೆ ಪ್ರವಾಸಿಗರು ಸಂಭ್ರಮಿಸಿದರು

ಚಿತ್ರದುರ್ಗದ ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿಯ ಪೊಲೀಸ್ ಠಾಣೆ ಆವರಣ ಶನಿವಾರ ಜಲಾವೃತಗೊಂಡಿತ್ತು

ಕೊಚ್ಚಿ ಹೋಗಿ ರಿಕ್ಷಾ ಚಾಲಕ ಸಾವು

ಮಂಗಳೂರು: ನಗರದಲ್ಲಿ ಶುಕ್ರವಾರ ರಾತ್ರಿ ಕೊಟ್ಟಾರಚೌಕಿ ಪ್ರದೇಶದಲ್ಲಿ ರಾಜಕಾಲುವೆಯಲ್ಲಿ ಕೊಚ್ಚಿಹೋಗಿ ರಿಕ್ಷಾ ಚಾಲಕ ಕೊಟ್ಟಾರ ನಿವಾಸಿ ದೀಪಕ್ ಆಚಾರ್ಯ (44) ಮೃತಪಟ್ಟಿದ್ದಾರೆ. ಕೊಟ್ಟಾರ ಪ್ರದೇಶದಲ್ಲಿ ಮಳೆ ನೀರಿನಿಂದಾಗಿ ಕಾಲುವೆ ಉಕ್ಕಿ ಹರಿದಿತ್ತು. ನೀರು ರಸ್ತೆಯ ಮೇಲೂ ಹರಿಯುತ್ತಿದ್ದ ವೇಳೆ ದೀಪಕ್ ಅವರ ರಿಕ್ಷಾ ಕಾಲುವೆಗೆ ಉರುಳಿತ್ತು. ಅವರ ಮೃತ ದೇಹವು ಕಾಲುವೆಯಲ್ಲಿ ಪತ್ತೆಯಾಗಿದೆ. ಕಾಲುವೆಗೆ ಸರಿಯಾದ ತಡೆಗೋಡೆ ನಿರ್ಮಿಸದೇ ನಿರ್ಲಕ್ಷ್ಯ ವಹಿಸಿದ್ದಕ್ಕಾಗಿ ಪೊಲೀಸರು ಮಹಾನಗರ ಪಾಲಿಕೆಯ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಂಗಳೂರು ತಗ್ಗು ಪ್ರದೇಶದ 20 ಕ್ಕೂ ಅಧಿಕ ಮನೆಗಳಿಗೆ ನೀರುನುಗ್ಗಿತ್ತು. ಸಾಗರ ಕೋರ್ಟ್ ಪ್ರದೇಶದಲ್ಲಿ ಜಲಾವೃತವಾಗಿದ್ದ ಮನೆಯೊಂದರಿಂದ ವೃದ್ದೆಯೊಬ್ಬರನ್ನು ಅಗ್ನಿ ಶಾಮಕ ಠಾಣೆಯವರು ರಕ್ಷಿಸಿದ್ದಾರೆ. ಉಳ್ಳಾಲ ಸಮೀಪದ ದೇರಳಕಟ್ಟೆ ಯೆನೆಪೋಯ ಆಸ್ಪತ್ರೆ ಬಳಿ ಮರದ ಮಿಲ್‌ನ ಆವರಣ ಗೋಡೆ ಕುಸಿದು, ಅಲ್ಲಿ ನಿಲ್ಲಿಸಿದ್ದ ಎರಡು ಕಾರುಗಳು ಜಖಂಗೊಂಡಿವೆ.

ಮೈಸೂರು ಭಾಗದಲ್ಲೂ ಮಳೆ ಅಬ್ಬರ

ಮೈಸೂರು: ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ಸೋಮವಾರಪೇಟೆ ತಾಲ್ಲೂಕು ವ್ಯಾಪ್ತಿಯಲ್ಲಿ 6 ಸೆಂ.ಮೀ, ವಿರಾಜಪೇಟೆ ತಾಲ್ಲೂಕಿನಲ್ಲಿ 5 ಸೆಂ.ಮೀನಷ್ಟು ಮಳೆಯಾಗಿದೆ.

ಮೈಸೂರು,ಮಂಡ್ಯ, ಹಾಸನದ ಕೆಲವೆಳೆ ಸತತ ಮಳೆಯಿಂದ ಮನೆ, ಗೋಡೆಗಳು ಕುಸಿದಿವೆ. ಮರಗಳು, ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. ಕಿಕ್ಕೇರಿಯ ಹೆಗ್ಗಡಹಳ್ಳಿ ಗ್ರಾಮದ ರೇಖಾಚಂದ್ರು ಎಂಬವರ ಕೊಟ್ಟಿಗೆಯ ಚಾವಣಿಯ ಸಿಮೆಂಟು ಶೀಟ್‌ಗಳು ಹಾರಿ ಹೋಗಿವೆ.

ಹಾಸನ ಜಿಲ್ಲೆಯ ಹಳೇಬೀಡು ತಾಲ್ಲೂಕಿನ ಸಿದ್ದಾಪುರ ಗ್ರಾಮದಲ್ಲಿ ಮರ ಬಿದ್ದ ಪರಿಣಾಮ ಎರಡು ಮನೆಗಳಿಗೆ ಹಾನಿಯಾಗಿದೆ.

ಸಾವುಕಾರ್ ರಾಜಣ್ಣ ಅವರ ತೋಟದಲ್ಲಿ ಫಸಲು ಬಿಡುತ್ತಿದ್ದ 15 ಅಡಿಕೆ ಮರ, ಪಟೇಲ್ ಸಿದ್ದಬಸವೇಗೌಡರ ತೋಟದ 11 ಮರ ನೆಲಕಚ್ಚಿವೆ. ಗ್ರಾಮದಲ್ಲಿ 50ಕ್ಕೂ ಹೆಚ್ಚು ಅಡಿಕೆ ಮರ ಬಿದ್ದಿವೆ. ಕಟ್ಟೆಸೋಮನಹಳ್ಳಿ ರಸ್ತೆಯ ಸುರೇಶ್ ಜಮೀನಿನಲ್ಲಿ 12 ಗುಂಟೆ ಶುಂಠಿ ಬೆಳೆಗೆ ಹಾನಿಯಾಗಿದೆ.

ಹಳೇಬೀಡು-ಹಾಸನ ನಡುವಿನ ಹಗರೆ ರಸ್ತೆಯಲ್ಲಿ ಕಂಬಗಳು ಮುರಿದು ಬಿದ್ದು, ಭಾರಿ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಹೊಯ್ಸಳೇಶ್ವರ ದೇವಾಲಯದ ಉದ್ಯಾನದ ಕಾಡು ಜಾತಿಯ ದೊಡ್ಡ ಮರ ಕಾಂಪೌಂಡ್ ಮೇಲೆ ಬಿದ್ದು ಹಾನಿಯಾಗಿದೆ. ಕಾಂಪೌಂಡ್ ಪಕ್ಕದ ಮೂರು ಗೂಡಂಗಡಿಗಳು ಜಖಂ ಆಗಿವೆ.

ತುಮಕೂರು ವರದಿ: ಜಿಲ್ಲೆಯ ಕುಣಿಗಲ್ ತಾಲ್ಲೂಕು ಹಾಗೂ ತುಮಕೂರು ತಾಲ್ಲೂಕಿನ ಕೆಲವು ಭಾಗಗಳನ್ನು ಹೊರತುಪಡಿಸಿ ಉಳಿದೆಡೆಗಳಲ್ಲಿ ಉತ್ತಮ ಮಳೆಯಾಗಿದೆ. ತಿಪಟೂರು ತಾಲ್ಲೂಕಿನ ಹಾಲ್ಕುರಿಕೆಯಲ್ಲಿ 8 ಸೆಂ.ಮೀ ಮಳೆಯಾಗಿದೆ.

ಗುಬ್ಬಿ ಪಟ್ಟಣದಲ್ಲಿ ಹೆದ್ದಾರಿಗೆ ಹೊಂದಿಕೊಂಡಿರುವ ರಂಗಕರ್ಮಿ ಗುಬ್ಬಿ ವೀರಣ್ಣ ಹಾಗೂ ಅವರ ಪತ್ನಿಯ ಸಮಾಧಿಗಳು ನೀರಿನಲ್ಲಿ ಮುಳುಗಿವೆ.

ಮೂಲ್ಕಿಯಲ್ಲಿ 19 ಸೆಂ.ಮೀ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯಲ್ಲಿ 19, ಉಡುಪಿಯಲ್ಲಿ 13 ಸೆಂ.ಮೀನಷ್ಟು ಮಳೆಯಾಗಿದೆ.

ಇದೇ ಅವಧಿಯಲ್ಲಿ, ಕೊಡಗಿನ ಕುಶಾಲನಗರದಲ್ಲಿ 10, ಚಿಕ್ಕಮಗಳೂರಿನ ಕಳಸದಲ್ಲಿ 9, ದಕ್ಷಿಣ ಕನ್ನಡ ಜಿಲ್ಲೆಯ ಪಣಂಬೂರಿನಲ್ಲಿ 8, ಉಡುಪಿಯ ಸಿದ್ದಾಪುರದಲ್ಲಿ 7 ಸೆಂ.ಮೀ ಮಳೆಯಾಗಿದೆ.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಇನ್ನೂ ಆರು ದಿನ ಗುಡುಗು ಸಹಿತ ಧಾರಾಕಾರ ಮಳೆ ಮುಂದುವರಿಯಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕನ್ನಡ, ಉಡುಪಿ, ಬೆಂಗಳೂರು ನಗರ, ರಾಮನಗರ, ಚಾಮರಾಜನಗರ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಹಾವೇರಿ, ಕಲಬುರಗಿ, ರಾಯಚೂರು, ವಿಜಯಪುರ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ ಜಿಲ್ಲೆಯಲ್ಲಿ ಭಾನುವಾರ ಮಳೆ ಆಗಲಿದೆ. ಗಾಳಿ ವೇಗವು ಪ್ರತಿ ಗಂಟೆಗೆ 40ರಿಂದ 50 ಕಿ.ಮೀ ವೇಗದಲ್ಲಿ ಬೀಸಲಿದೆ ಎಂದು ಇಲಾಖೆ ಸೂಚಿಸಿದೆ.

ಸುಂಟಿಕೊಪ್ಪ ಸಮೀಪದ ಏಳನೇ ಹೊಸಕೋಟೆಯ ತೊಂಡೂರು ಗ್ರಾಮದ ತೋಟದಲ್ಲಿ ಕಾಡಾನೆಯೊಂದು ಮೃತಪಟ್ಟಿದೆ

ವಿದ್ಯುತ್ ತಂತಿ ಸ್ಪರ್ಶಿಸಿ ಕಾಡಾನೆ ಸಾವು

ಪ್ರಜಾವಾಣಿ ವಾರ್ತೆ

ಸುಂಟಿಕೊಪ್ಪ (ಕೊಡಗು ಜಿಲ್ಲೆ): ಇಲ್ಲಿಗೆ ಸಮೀಪದ ಏಳನೇ ಹೊಸಕೋಟೆ ಗ್ರಾಮ ಪಂಚಾಯಿತಿಗೆ ಸೇರಿದ ತೊಂಡೂರು ಗ್ರಾಮದ ಕಾಫಿತೋಟದಲ್ಲಿ ವಿದ್ಯುತ್ ಸ್ಪರ್ಶಿಸಿ 18 ವರ್ಷ ವಯಸ್ಸಿನ ಗಂಡಾನೆ ಶನಿವಾರ ಸ್ಥಳದಲ್ಲೇ ಮೃತಪಟ್ಟಿತು.

'ರಘು ಎಂಬುವವರಿಗೆ ಸೇರಿದ ಕಾಫಿ ತೋಟದ ಬೇಲಿಗೆ ನೇರವಾಗಿ ವಿದ್ಯುತ್ ಸಂಪರ್ಕ ನೀಡಿದ್ದರಿಂದ ದುರ್ಘಟನೆ ನಡೆಯಿತು. ಮಾಲೀಕರ ವಿರುದ್ಧ ಪ್ರಕರಣ ದಾಖಲಾಗಿದ್ದು, ಅವರು ಪರಾರಿಯಾಗಿದ್ದಾರೆ' ಎಂದು ಡಿಸಿಎಫ್ ಭಾಸ್ಕರ್ 'ಪ್ರಜಾವಾಣಿ'ಗೆ ತಿಳಿಸಿದರು.

ಸ್ಥಳಕ್ಕೆ ಡಿಸಿಎಫ್ ಭಾಸ್ಕರ್, ಎಸಿಎಫ್ ಗೋಪಾಲ್, ಆರ್‌ಎಫ್‌ಒ ರತನ್, ಡಿಆರ್‌ಎಫ್‌ಒ ದೇವಯ್ಯ ಭೇಟಿ ನೀಡಿದ್ದರು.

ಎರಡು ದಿನಗಳಲ್ಲಿ ಜಿಲ್ಲೆಯಲ್ಲಿ ಮೃತಪಟ್ಟ ಕಾಡಾನೆಗಳ ಸಂಖ್ಯೆ 3ಕ್ಕೆ ಏರಿದೆ. ಶುಕ್ರವಾರ ಮತ್ತೊಂದು ಆನೆಯೊಂದಿಗೆ ಕಾದಾಡುವಾಗ ಒಂದು ಆನೆ, ಗಾಯಗೊಂಡಿದ್ದ ಮತ್ತೊಂದು ಆನೆ ಮೃತಪಟ್ಟಿತ್ತು.

'ರಜೆ ರಹಿತ' ಪಿಯು ಶಿಕ್ಷಣಕ್ಕೆ ಆಗ್ರಹ

ಘೋಷಣೆಗಾಗಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಅಭಿಯಾನ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಬೋಧನೆ, ಮೂರು ಪರೀಕ್ಷೆಗಳು ಹಾಗೂ ಮೌಲ್ಯಮಾಪನ ಕಾರ್ಯಗಳಿಂದಾಗಿ ವರ್ಷ ಪೂರಾ ಕೆಲಸ ಮಾಡುತ್ತಿರುವ ಉಪನ್ಯಾಸಕರು ಪದವಿಪೂರ್ವ ಶಿಕ್ಷಣವನ್ನು 'ರಜೆ ರಹಿತ'ವೆಂದು ಘೋಷಿಸಲು ಆಗ್ರಹಿಸಿ ಅಭಿಯಾನವನ್ನೇ ಆರಂಭಿಸಿದ್ದಾರೆ.

ಶೈಕ್ಷಣಿಕ ವೇಳಾಪಟ್ಟಿಯಂತೆ ಪ್ರತಿ ವರ್ಷವೂ ಜೂನ್‌ನಿಂದ ಆರಂಭವಾಗುವ ಪಿಯು ಕಾಲೇಜುಗಳು ಮಾರ್ಚ್ 31ಕ್ಕೆ ಕೊನೆಗೊಳ್ಳುತ್ತವೆ. ನಾಗರಿಕ ಸೇವಾ ನಿಯಮ (ಕೆಸಿಎಸ್‌ಆರ್) 113ರ ಅನ್ವಯ ಉಪನ್ಯಾಸಕರಿಗೆ ಬೇಸಿಗೆ ಹಾಗೂ ದಸರಾ ರಜೆ ಸೇರಿ ವರ್ಷಕ್ಕೆ 60 ದಿನಗಳ ರಜೆ ಸೌಲಭ್ಯ ಕಲ್ಪಿಸಲಾಗಿದೆ. ಆದರೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಸಕ್ತ ವರ್ಷದಿಂದ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಮೂರು ಪರೀಕ್ಷೆಗಳನ್ನು ಪರಿಚಯಿಸಿದೆ. ಪ್ರತಿ ಪರೀಕ್ಷೆಗೂ ಕೊಠಡಿ ಮೇಲ್ವಿಚಾರಣೆ, ನಂತರ ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಬೇಕಿದೆ. ಹೀಗೆ, ಮೂರು ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯಗಳನ್ನು ನಿರಂತರವಾಗಿ ನಿಭಾಯಿಸುವುದರಿಂದ ಉಪನ್ಯಾಸಕರ ರಜಾ ಸೌಲಭ್ಯಗಳು ಕಡಿತವಾಗಿವೆ.

'ಹಿಂದಿನ ವರ್ಷದವರೆಗೂ ದಸರಾ ಹಾಗೂ ಬೇಸಿಗೆ ರಜೆಯ ಸೌಲಭ್ಯದ ಸಮಸ್ಯೆ ಇರಲಿಲ್ಲ. ಆಯಾ ವಿಷಯಗಳ ಉಪನ್ಯಾಸಕರು ಆದ್ಯತೆಯ ಮೇಲೆ ಮೌಲ್ಯಮಾಪನ ಕಾರ್ಯಕ್ಕೆ ತೆರಳುತ್ತಿದ್ದೆವು. ಚುನಾವಣಾ ಸಮಯದಲ್ಲಿ ಒಂದಷ್ಟು ರಜೆ ತ್ಯಾಗ ಮಾಡುತ್ತಿದ್ದೆವು. ಉಳಿದ ಅವಧಿ ಕುಟುಂಬಗಳ ಜತೆ ಕಳೆಯಲು ಸಾಧ್ಯವಾಗುತ್ತಿತ್ತು. 2023-24ನೇ ಸಾಲಿನಿಂದ ದ್ವಿತೀಯ ಪಿಯುಗೆ ಮೂರು ಪರೀಕ್ಷೆಗಳನ್ನು ನಡೆಸುತ್ತಿರುವ ಕಾರಣ ರಜೆಗಳೇ ಇಲ್ಲವಾಗಿದೆ. ಹಾಗಾಗಿ, ಆರೋಗ್ಯ ಇಲಾಖೆ, ಗೃಹ ಇಲಾಖೆ ಮತ್ತಿತರ ತುರ್ತು ಸೇವಾ ಇಲಾಖೆಗಳಂತೆ ಪದವಿ ಪೂರ್ವ ಶಿಕ್ಷಣವನ್ನು ರಜೆ ರಹಿತ ಎಂದು ಘೋಷಿಸಬೇಕು' ಎಂದು ಆಗ್ರಹಿಸಿದ್ದಾರೆ.

'ದ್ವಿತೀಯ ಪಿಯುಗೆ ನಡೆಯುವ ಮೂರು ಪರೀಕ್ಷೆಗಳಲ್ಲಿ ಮೊದಲನೆಯದು ಶೈಕ್ಷಣಿಕ ವರ್ಷದ ಅಂತ್ಯದ ಮಾರ್ಚ್‌ನಲ್ಲಿ, ಮೂರನೆಯದು ಮುಂದಿನ ಶೈಕ್ಷಣಿಕ ವರ್ಷದ ಆರಂಭದ ಜೂನ್‌ನಲ್ಲಿ ನಡೆಯುತ್ತದೆ. ಈ ಎರಡೂ ಪರೀಕ್ಷೆಗಳು ಬೇಸಿಗೆ ರಜೆಯ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ. ಆದರೆ, ಮೊದಲ ಪರೀಕ್ಷೆಯ ಮೌಲ್ಯಮಾಪನ ಹಾಗೂ ಎರಡನೇ ಪರೀಕ್ಷೆ ಹಾಗೂ ಅದರ ಮೌಲ್ಯಮಾಪನಗಳಿಂದ ತೊಂದರೆಯಾಗಿದೆ. ಬೇಸಿಗೆ ರಜೆ ಸಂಪೂರ್ಣ ಇಲ್ಲವಾಗಿದೆ. ಹಾಗಾಗಿ, ರಜೆ ರಹಿತ ಎಂದು ಘೋಷಿಸುವ ಜತೆಗೆ 30 ದಿನಗಳ ಗಳಿಕೆ ರಜೆ, ಅರ್ಧ ವೇತನ ಸಹಿತ ರಜೆ ಸೌಲಭ್ಯ ಮಂಜೂರು ಮಾಡಬೇಕು' ಎನ್ನುತ್ತಾರೆ ಕರ್ನಾಟಕ ರಾಜ್ಯ ಪಿಯು ಕಾಲೇಜುಗಳ ಉಪನ್ಯಾಸಕರ ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ ಮತ್ತು ಪ್ರಧಾನ ಕಾರ್ಯದರ್ಶಿ ಶಿವರಾಜ್ ಬಿ. ಮಾಲಿಪಾಟೀಲ.

2024ರ ಮೂರು ಪರೀಕ್ಷೆಗಳು	ಅವಧಿ
ದ್ವಿತೀಯ ಪಿಯು ಪರೀಕ್ಷೆ-1	ಮಾರ್ಚ್ 1ರಿಂದ 22ರವರೆಗೆ
ದ್ವಿತೀಯ ಪಿಯು ಪರೀಕ್ಷೆ-2	ಏ.29ರಿಂದ ಮೇ 16
ದ್ವಿತೀಯ ಪಿಯು ಪರೀಕ್ಷೆ-3	ಜೂನ್ 24ರಿಂದ ಜುಲೈ 5ರವರೆಗೆ

ಪ್ರವೇಶ ಪ್ರಕ್ರಿಯೆಯೂ ಬೋಧಕರ ಹೊಣೆ

ಪಿಯು ಉಪನ್ಯಾಸಕರು ಈ ಬಾರಿ ಮೂರು ಪರೀಕ್ಷೆ, ಮೌಲ್ಯಮಾಪನದ ಜತೆಗೆ, ಲೋಕಸಭಾ ಚುನಾವಣಾ ಕೆಲಸದಲ್ಲೂ ತೊಡಗಿಸಿಕೊಂಡಿದ್ದಾರೆ.

'ಈಗ ಪ್ರಥಮ ಪಿಯು ಕೋರ್ಸ್‌ಗಳಿಗೆ ಪ್ರವೇಶ ಆರಂಭವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಳ ಮಾಡುವ ಹೊಣೆಯನ್ನು ಉಪನ್ಯಾಸಕರಿಗೆ ವಹಿಸಲಾಗಿದೆ. ಹಾಗಾಗಿ, ಮೇ 11ರಿಂದಲೇ ಸರದಿ ಮೇಲೆ ಪ್ರತಿ ದಿನ ಒಬ್ಬೊಬ್ಬ ಉಪನ್ಯಾಸಕರು ಕಾಲೇಜಿಗೆ ತೆರಳಿ ಪ್ರವೇಶ ಪ್ರಕ್ರಿಯೆಯ ಕಾರ್ಯಗಳಲ್ಲೂ ಭಾಗಿಯಾಗುತ್ತಿದ್ದೇವೆ. ಮನೆಮನೆಗೆ ತೆರಳಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಮಕ್ಕಳನ್ನು ಕಾಲೇಜಿಗೆ ಸೇರಿಸಲು ಪ್ರಯತ್ನ ನಡೆಸುತ್ತಿದ್ದೇವೆ' ಎಂದು ರಾಯಚೂರಿನ ಗ್ರಾಮೀಣ ಪ್ರದೇಶದ ಸರ್ಕಾರಿ ಪಿಯು ಕಾಲೇಜಿನ ಉಪನ್ಯಾಸಕ ರಾಜಪ್ಪ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ದಸರಾ, ಬೇಸಿಗೆ ವೇಳೆ ಉಪನ್ಯಾಸಕರಿಗೆ ಸಿಗುತ್ತಿದ್ದ ರಜೆ 60 ದಿನಗಳು
- 3 ಪರೀಕ್ಷೆ, ಮೌಲ್ಯಮಾಪನ ಕಾರ್ಯಗಳಿಂದ ರಜೆ ಸೌಲಭ್ಯ ಕಡಿತ

ಬೇಸಿಗೆ ರಜೆಗಳನ್ನು ಗಣನೀಯವಾಗಿ ಕಡಿತ ಮಾಡಲಾಗಿದೆ. ಉಪನ್ಯಾಸಕರ ನ್ಯಾಯ ಸಮ್ಮತ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು.

ಎ.ಎಚ್. ನಿಂಗೇಗೌಡ
ಅಧ್ಯಕ್ಷ, ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ

ಪೊಲೀಸ್ ವಶದಲ್ಲಿ ವ್ಯಕ್ತಿ ಸಾವು

ಒಂದನೇ ಪುಟದಿಂದ

ಸಿವಿಲ್ ನ್ಯಾಯಾಧೀಶ ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಪ್ರಶಾಂತ್ ಜಿ.ಸಿ. ಹಾಗೂ ಆದಿಲ್ ಅವರ ಕುಟುಂಬದವರ ಸಮ್ಮುಖದಲ್ಲಿಯೇ ಮರಣೋತ್ತರ ಪರೀಕ್ಷೆ ನಡೆಸಿ ಬಳಿಕ ಮೃತದೇಹವನ್ನು ಆಂಬುಲೆನ್ಸ್‌ನಲ್ಲಿ ತೆಗೆದುಕೊಂಡು ಹೋಗಿ ಚನ್ನಗಿರಿಯಲ್ಲಿ ಭಾರಿ ಪೊಲೀಸ್ ಭದ್ರತೆಯ ನಡುವೆ ಅಂತ್ಯಕ್ರಿಯೆ ನಡೆಸಲಾಯಿತು.

ಅಂತ್ಯಕ್ರಿಯೆ ವೇಳೆ ಮುನ್ನೆಚ್ಚರಿಕೆ ಕ್ರಮವಾಗಿ ಪಟ್ಟಣದಲ್ಲಿ 600ಕ್ಕೂ ಅಧಿಕ ಸಂಖ್ಯೆಯ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

ಸೂಕ್ತ ತನಿಖೆ- ಎಸ್‌.ಪಿ: 'ಆದಿಲ್ ಅವರದ್ದು ಲಾಕಪ್ ಡೆತ್ ಎಂದು ಕೆಲವರು ದೂರಿದ್ದಾರೆ. ಠಾಣೆಯಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾಗಳಿವೆ. ಅವುಗಳಲ್ಲಿನ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ. ಸೂಕ್ತ ತನಿಖೆ ನಡೆಸಲಾಗುವುದು' ಎಂದು ಚನ್ನಗಿರಿ ಠಾಣೆಗೆ ಶನಿವಾರ ಬೆಳಿಗ್ಗೆ ಭೇಟಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ತಿಳಿಸಿದರು.

'ಮಟ್ಕಾ ದೂರಿನ ಹಿನ್ನೆಲೆಯಲ್ಲಿ ಆದಿಲ್ ಅವರನ್ನು ಸಿಬ್ಬಂದಿಯು ವಿಚಾರಣೆಗಾಗಿ ಪೊಲೀಸ್ ಠಾಣೆಗೆ ಕರೆತಂದ ಆರೇಳು ನಿಮಿಷಗಳ ಅಂತರದಲ್ಲೇ ಅವರು ಕುಸಿದು ಬಿದ್ದಿದ್ದಾರೆ. ಕೂಡಲೇ ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ವೈದ್ಯರು ಪರಿಶೀಲಿಸಿದ ಬಳಿಕ ಮೃತಪಟ್ಟಿದ್ದಾಗಿ ಗೊತ್ತಾಗಿದೆ' ಎಂದು ಹೇಳಿದರು.

'ಉದ್ರಿಕ್ತ ಗುಂಪು ಠಾಣೆ ಮೇಲೆ, ಪೊಲೀಸ್ ಸಿಬ್ಬಂದಿ ಮೇಲೆ ದಾಳಿ ನಡೆಸಿದ ಬಗ್ಗೆ ಹಾಗೂ ಪೊಲೀಸ್ ವಾಹನಗಳನ್ನು ಜಖಂಗೊಳಿಸಿದ ಬಗ್ಗೆ ಪ್ರತ್ಯೇಕವಾಗಿ 6 ಪ್ರಕರಣಗಳು ಹಾಗೂ ಆದಿಲ್ ಅವರ ತಂದೆ ಖಲೀಂ ಉಲ್ಲಾ ಅವರು ನೀಡಿದ ದೂರು ಆಧರಿಸಿ 'ಅಸಹಜ ಸಾವು' ಪ್ರಕರಣ ದಾಖಲಾಗಿದ್ದು, ತನಿಖೆ ನಡೆಸಲಾಗುತ್ತಿದೆ' ಎಂದರು.

ಕಾಂಗ್ರೆಸ್ ಅಲ್ಪಸಂಖ್ಯಾತರ ತುಷ್ಟೀಕರಣ ರಾಜಕಾರಣ ಮಾಡುತ್ತಿರುವ ಪರಿಣಾಮ ಚನ್ನಗಿರಿ ಪೊಲೀಸ್ ಠಾಣೆ ಮೇಲೆ ದಾಳಿ ನಡೆಸಲಾಗಿದೆ

ಬಿ.ವೈ. ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಆದಿಲ್ ಕಡಿಮೆ ರಕ್ತದ ಒತ್ತಡದಿಂದ ಬಳಲುತ್ತಿದ್ದುದು ನಿಜ. ಆದರೆ, ಠಾಣೆಯಲ್ಲಿ ಏನಾಗಿದೆಯೋ ಗೊತ್ತಾಗಿಲ್ಲ. ಮಗನ ದೇಹದ ಮೇಲೆ ಗಾಯಗಳು ಕಂಡುಬಂದಿಲ್ಲ

ಖಲೀಮುಲ್ಲಾ, ಮೃತ ಆದಿಲ್ ತಂದೆ

ಠಾಣೆಗೆ ಬಂದ ಏಳು ನಿಮಿಷದೊಳಗೆ ಸಾವು: ಸಚಿವ ಪರಮೇಶ್ವರ

ಜಿ.ಪರಮೇಶ್ವರ

ಬೆಂಗಳೂರು: 'ಆದಿಲ್ ಎಂಬ ಯುವಕನನ್ನು ಪ್ರಕರಣವೊಂದರ ಸಂಬಂಧ ವಿಚಾರಣೆಗಾಗಿ ಚನ್ನಗಿರಿ ಪೊಲೀಸ್ ಠಾಣೆಗೆ ಕರೆ ತರಲಾಗಿತ್ತು. ಕರೆತಂದ ಏಳು ನಿಮಿಷದೊಳಗೆ ಆ ಯುವಕ ಮೃತಪಟ್ಟಿದ್ದಾನೆ. ಸಾವಿನ ನಿಖರ ಕಾರಣ ಮರಣೋತ್ತರ ಪರೀಕ್ಷೆ ಬಳಿಕ ತಿಳಿಯಲಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಮೃತನ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಆ ಬಗ್ಗೆ ವಿಚಾರಣೆ ನಡೆಸಲು ಆತನನ್ನು ಪೊಲೀಸರು ಠಾಣೆಗೆ ಕರೆತಂದಿದ್ದರು. ಅಲ್ಲಿ ಮೃತಪಟ್ಟಿರುವುದರಿಂದ ಪೊಲೀಸರೇ ಸಾವಿಗೆ ಕಾರಣ ಎಂದು ಆರೋಪಿಸಿ ಆತನ ಕುಟುಂಬದವರು ಪ್ರತಿಭಟನೆ ನಡೆಸಿ, ಗಲಾಟೆ ಮಾಡಿದ್ದಾರೆ' ಎಂದರು.

'ಪೊಲೀಸ್ ಠಾಣೆ ಮೇಲೆ ದಾಳಿ ಮಾಡುವವರು, ಹಲ್ಲೆ ನಡೆಸುವವರು, ತಲೆ ಕತ್ತರಿಸುತ್ತೇವೆ ಎನ್ನುವವರನ್ನು ಸುಮ್ಮನೆ ಬಿಡುವುದಿಲ್ಲ. ಧಮಕಿ ಹಾಕುವವರ ಬಗ್ಗೆ ಮೃದು ಧೋರಣೆ ತಳೆಯುವ ಪ್ರಶ್ನೆ ಇಲ್ಲ. ಪೊಲೀಸರು ಕಾನೂನಿನ ಪ್ರಕಾರ ಕ್ರಮ ಜರುಗಿಸುತ್ತಾರೆ ಎಂದು ಹೇಳಿದರು.

ಪೊಲೀಸ್ ಠಾಣೆಗೆ ನುಗ್ಗಲು ಜನರು ಪ್ರಯತ್ನಿಸಿದ್ದರು. ಕಲ್ಲು ತೂರಾಟದಿಂದ ಪೊಲೀಸರು ಗಾಯಗೊಂಡಿದ್ದಾರೆ. ಅಶ್ರುವಾಯು ಸಿಡಿಸಿ ಪರಿಸ್ಥಿತಿ ನಿಯಂತ್ರಣಕ್ಕೆ ತಂದಿದ್ದಾರೆ ಎಂದರು.

'ಏನು ಬೇಕಾದರೂ ಮಾಡಬಹುದು ಎನ್ನುವ ಧೋರಣೆಯನ್ನು ಸಹಿಸುವುದಿಲ್ಲ. ಪೊಲೀಸ್ ಠಾಣೆಗೆ ಬಂದು ಧಮಕಿ ಹಾಕುವವರನ್ನು, ತಲೆ ಕಡಿತೀವಿ ಎನ್ನುವವರನ್ನು ಬಿಡಲು ಆಗುತ್ತದೆಯೆ? ಡಿ.ಜೆ. ಹಳ್ಳಿ, ಕೆ.ಜಿ. ಹಳ್ಳಿ ಮಾದರಿ ಗಲಾಟೆ ಮಾಡುತ್ತಾರೆಂಬ ಮಾಹಿತಿ ನನಗೂ ಬಂದಿತ್ತು. ಅಂತಹವರ ವಿರುದ್ಧ ಮುಲಾಜಿಲ್ಲದೆ ಕ್ರಮ ಜರುಗಿಸುತ್ತೇವೆ' ಎಂದು ಹೇಳಿದರು.

ಎಸ್‌ಎಸ್‌ಎಲ್‌ಸಿ ಮೌಲ್ಯಮಾಪಕರ ಎಡವಟ್ಟು ಈಗ ಬಹಿರಂಗ

ಅಂಕಪಟ್ಟಿಯಲ್ಲಿ 30, ಛಾಯಾಪ್ರತಿಯಲ್ಲಿ 75 ಅಂಕ!

• ಮಂಜುನಾಥ ಎನ್ ಬಳ್ಳಾರಿ

ಮಹಿಮೂದಾ

ಕವಿತಾಳ: ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆಯ ಛಾಯಾ ಪ್ರತಿಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಮೌಲ್ಯಮಾಪನ ಎಡವಟ್ಟು ಬಯಲಾಗಿದೆ.

ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ಮಹಿಮೂದಾ ಅವರ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯಲ್ಲಿ ಕನ್ನಡಕ್ಕೆ 30 ಅಂಕ ನಮೂದಿಸಲಾಗಿದೆ. ಆದರೆ, ಉತ್ತರ ಪತ್ರಿಕೆಯ ಛಾಯಾಪ್ರತಿಯಲ್ಲಿ 75 ಅಂಕ ಇರುವುದು ಈಗ ಬಹಿರಂಗಗೊಂಡಿದೆ.

ಇಂಗ್ಲಿಷ್ (60), ಹಿಂದಿ (75), ಗಣಿತ (45), ವಿಜ್ಞಾನ (48), ಸಮಾಜ ವಿಜ್ಞಾನ (45) ಮತ್ತು ಕನ್ನಡ ವಿಷಯದಲ್ಲಿ (30) ಅಂಕ ಪಡೆದ ಮಹಿಮೂದಾ ಕಡಿಮೆ ಅಂಕ ಬಂದಿದ್ದಕ್ಕೆ ಬೇಸರಗೊಂಡಿದ್ದಳು. ಪಾಲಕರು, ವಿದ್ಯಾರ್ಥಿನಿಯ ಶಿಕ್ಷಕರ ಸಲಹೆಯಂತೆ ಉತ್ತರ ಪತ್ರಿಕೆಯ ಛಾಯಾಪ್ರತಿ ತರಿಸಿದ್ದಾರೆ. ಛಾಯಾಪ್ರತಿಯಲ್ಲಿ 75 ಅಂಕ ನಮೂದಿಸಿದ್ದು ಆಂತರಿಕ ಅಂಕ ಸೇರಿಸಿದಲ್ಲಿ ಬಾಲಕಿ ಒಟ್ಟು 100 ಅಂಕ ಪಡೆದಿದ್ದಾಳೆ.

ಉತ್ತರ ಪತ್ರಿಕೆಯ 16 ಪುಟಗಳಲ್ಲಿ ಸರಿ ಉತ್ತರಕ್ಕೆ ಅಂಕ ನೀಡಿದ ಮೌಲ್ಯಮಾಪಕರು ಆಯಾ ಪುಟದ ಕೊನೆಯಲ್ಲಿ ಅಂಕ ಒಟ್ಟುಗೂಡಿಸಿದ್ದಾರೆ. ಮೌಲ್ಯಮಾಪಕರ ಉಪಯೋಗಕ್ಕೆ ಇರುವ ಮೊದಲ ಪುಟದಲ್ಲಿ ಪ್ರಶ್ನೆಗಳ ಕ್ರಮ ಸಂಖ್ಯೆ ಮುಂದೆ ಕೆಂಪು ಶಾಹಿಯಲ್ಲಿ ಅಂಕ ಹಾಕಿದ್ದು ಕೊನೆ ಸಾಲಿನಲ್ಲಿ ಒಟ್ಟು 13 ಅಂಕದ ಬದಲಿಗೆ 11 ಅಂಕ ಎಂದು ನಮೂದಿಸಿದ್ದಾರೆ. ಒಟ್ಟು 76 ಅಂಕ ಎಂದು ಅಂಕಿ ಹಾಗೂ ಅಕ್ಷರದಲ್ಲಿ ಬರೆದು ಬಳಿಕ ಅದನ್ನು ಹೊಡೆದುಹಾಕಿ 75 ಎಂದು ಸರಿಯಾಗಿ ಒಟ್ಟುಗೂಡಿಸಿದ್ದಾರೆ. ಪ್ರಕಟಿತ ಫಲಿತಾಂಶದಲ್ಲಿ ಬಾಲಕಿಗೆ 30 ಅಂಕ ಮಾತ್ರ ದಕ್ಕಿವೆ.

'ಮೌಲ್ಯಮಾಪನದ ಬಳಿಕ ಎರಡು ಹಂತದ ಪರಿಶೀಲನೆ ನಡೆಯುತ್ತದೆ. 3ನೇ ಹಂತದಲ್ಲಿ 10 ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಒಟ್ಟಾಗಿಸಿ ಒಂದು ಒಎಂಆರ್ ಶೀಟ್ ಲಗತ್ತಿಸಲಾಗುತ್ತದೆ. ಅದರಲ್ಲಿ ಹತ್ತು ಮಕ್ಕಳ ಅಂಕಗಳನ್ನು ಹಾಕಲಾಗುತ್ತದೆ. ಮತ್ತೆ ಎರಡು ಹಂತದ ಪರಿಶೀಲನೆ ನಡೆದ ಬಳಿಕ ಕಂಪ್ಯೂಟರ್‌ಗೆ ಎಂಟ್ರಿ ಮಾಡಲಾಗುವುದು. ಈ ಹಂತದಲ್ಲಿ ಅಂಕದಲ್ಲಿ ವ್ಯತ್ಯಾಸ ಕಂಡು ಬಂದರೆ ಸರಿಹೊಂದುತ್ತಿಲ್ಲ ಎಂದು ಕಂಪ್ಯೂಟರ್ ತೋರಿಸುತ್ತದೆ. ಆಗ ಹಿರಿಯ ಅಧಿಕಾರಿಯ ಲಾಗಿನ್ ಬಳಸಿ ಒಟ್ಟಾರೆ ತಪ್ಪುಗಳನ್ನು ಸರಿಪಡಿಸಲಾಗುವುದು. ಈ ಪ್ರಕರಣದಲ್ಲಿ ಮೌಲ್ಯಮಾಪಕ ಸರಿಯಾಗಿ ಅಂಕ ಒಟ್ಟುಗೂಡಿಸಿದ್ದರೂ ಕೊನೆಯಲ್ಲಿ ಕಡಿಮೆ ಅಂಕ ನಮೂದು ಮಾಡಿದ್ದು ಅದೇ ಮುಂದುವರಿದಂತೆ ಕಂಡು ಬರುತ್ತಿದೆ' ಎಂದು 25 ವರ್ಷಗಳಿಂದ ಮೌಲ್ಯಮಾಪಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರೊಬ್ಬರು ತಿಳಿಸಿದರು.

ಅಂಕಪಟ್ಟಿ ಕಂಪ್ಯೂಟರ್ ಪ್ರತಿ

ಉತ್ತರ ಪತ್ರಿಕೆ ಛಾಯಾಪ್ರತಿಯ ಮೊದಲ ಪುಟ

ಪೋಷಕರು, ವಿದ್ಯಾರ್ಥಿಗಳ ಆಕ್ರೋಶ

ಬೆಂಗಳೂರು: 'ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪನದಲ್ಲಿ ಸಾಕಷ್ಟು ಲೋಪವಾಗಿದ್ದು, ಸರಿ ಉತ್ತರಗಳಿಗೂ ಅಂಕ ಕಡಿತ ಮಾಡಲಾಗಿದೆ. ಉತ್ತರ ಪತ್ರಿಕೆಯ ಛಾಯಾ ಪ್ರತಿ ಪರಿಶೀಲನೆಯಿಂದ ಇದು ದೃಢಪಟ್ಟಿದೆ' ಎಂದು ವಿದ್ಯಾರ್ಥಿಗಳು ಹಾಗೂ ಪೋಷಕರು ದೂರಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪೋಷಕ ವೇಣುಗೋಪಾಲ್, 'ನನ್ನ ಮಗ ಆಕಾಶ್‌ಗೆ ಎಸ್‌ಎಸ್‌ಎಲ್‌ಸಿ ವಿಜ್ಞಾನ ವಿಷಯದಲ್ಲಿ ಕೇವಲ 5 ಅಂಕ ನೀಡಲಾಗಿತ್ತು. ಉಳಿದ ವಿಷಯಗಳಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದನು. ಉತ್ತರ ಪತ್ರಿಕೆಯ ಛಾಯಾಪ್ರತಿ ತರಿಸಿದಾಗ ಅದರಲ್ಲಿ 70 ಅಂಕ ನಮೂದಿಸಲಾಗಿತ್ತು. ಅಂತಿಮ ಫಲಿತಾಂಶ ಪಟ್ಟಿಯಲ್ಲಿ 5 ಅಂಕ ದಾಖಲಿಸಿ, ಅನುತ್ತೀರ್ಣ ಎಂದು ನಮೂದಿಸಲಾಗಿದೆ. ಈ ನಡುವೆ ಮಗ ಮಾನಸಿಕವಾಗಿ ಕುಗ್ಗಿ ಹೋಗಿದ್ದಾನೆ. ಈ ಪ್ರಮಾದ ಎಸಗಿದವರ ವಿರುದ್ಧ ಶಿಕ್ಷಣ ಇಲಾಖೆ ಸೂಕ್ತ ಕ್ರಮಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಖಾಸಗಿ ಶಾಲೆಯೊಂದರ ವಿದ್ಯಾರ್ಥಿ ಕುಶಾಲ್ ಆರ್., 'ಉತ್ತರ ಪತ್ರಿಕೆಯ ಛಾಯಾಪ್ರತಿಯನ್ನು ಕೀ ಉತ್ತರ ಪತ್ರಿಕೆ ಜತೆಗೆ ಹೋಲಿಸಿ ನೋಡಿದಾಗ ಗಣಿತ ವಿಷಯದಲ್ಲಿ ನನಗೆ 51 ಅಂಕಗಳು ಬರಬೇಕಿದೆ. ಆದರೆ, ಉತ್ತರ ಪತ್ರಿಕೆಯಲ್ಲಿ 41 ಅಂಕ ಎಂದು ನಮೂದಿಸಲಾಗಿದೆ. ಅನಗತ್ಯವಾಗಿ 10 ಅಂಕಗಳನ್ನು ಕಡಿಮೆ ಮಾಡಿರುವುದು ನನ್ನ ಮುಂದಿನ ವಿದ್ಯಾಭ್ಯಾಸಕ್ಕೆ ತೊಡಕಾಗಲಿದೆ. ನಾನು ಬಯಸಿದ ಶಾಲೆಯಲ್ಲಿ ದಾಖಲಾತಿ ಸಿಗುತ್ತಿಲ್ಲ' ಎಂದು ನೋವು ತೋಡಿಕೊಂಡರು.

ಖಾಸಗಿ ಶಾಲೆಯೊಂದರ ಶಿಕ್ಷಕಿ ರೇಖಾ, 'ಈ ಹಿಂದೆ ಪ್ರತಿ ದಿನ 15 ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಲಾಗುತ್ತಿತ್ತು. ಆದರೆ, ಈ ಬಾರಿ ಪ್ರತಿ ದಿನ 30 ಪತ್ರಿಕೆಗಳ ಮೌಲ್ಯಮಾಪನ ಮಾಡಬೇಕು ಎಂಬ ಗುರಿ ನಿಗದಿಪಡಿಸಲಾಗಿತ್ತು. ಇದರಿಂದಾಗಿ ಮೌಲ್ಯಮಾಪಕರು ಅತೀವ ಒತ್ತಡಕ್ಕೆ ಸಿಲುಕಿಕೊಂಡು ಸಾಕಷ್ಟು ಎಡವಟ್ಟುಗಳನ್ನು ಮಾಡಿದ್ದಾರೆ. ನನ್ನ ಶಾಲೆಯ ವಿದ್ಯಾರ್ಥಿಗಳ ಉತ್ತರ ಪತ್ರಿಕೆಯ ಛಾಯಾಪ್ರತಿ ಪರಿಶೀಲಿಸಿದಾಗ ಮೌಲ್ಯಮಾಪನ ಸರಿಯಾಗಿ ನಡೆದಿಲ್ಲ ಎಂಬುದು ಗಮಕ್ಕೆ ಬಂದಿದೆ' ಎಂದು ಹೇಳಿದರು.

'ಗಣಿತ ವಿಷಯದಲ್ಲಿ ಪ್ರತಿ ಹಂತಕ್ಕೂ ಅಂಕ ನಿಗದಿ ಆಗಿರುತ್ತದೆ. ಆದರೆ, ಹಂತಕ್ಕೆ ಅನುಗುಣವಾಗಿ ಅಂಕ ನೀಡಿಲ್ಲ. ಅಂಕ ಕಡಿತ ಮಾಡುವಾಗ ಉತ್ತರ ಪತ್ರಿಕೆಯಲ್ಲಿ ತಪ್ಪಾದ ಭಾಗಕ್ಕೆ ಅಡಿಗೆರೆ, ಸುತ್ತು ಹಾಕಿಲ್ಲ ಎಂದರು.

|| ಶ್ರೀ ಬೆಳಗೆರೆ ರಂಗನಾಥಸ್ವಾಮಿ ಪ್ರಸನ್ನ || || ಶ್ರೀ ಶಂಕರಲಿಂಗ ವಿಜಯತೇ ||

ವೈಕುಂಠ ಸಮಾರಾಧನೆ

ಶ್ರೀ ಎಂ.ರಂಗಪ್ಪನವರು

ನಿವೃತ್ತ ಉಪನಿರ್ದೇಶಕರು,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕರ್ನಾಟಕ ಸರ್ಕಾರ

ಶ್ರೀಮತಿ ಸಾವಿತ್ರಮ್ಮ, ಆಸ್ಪತ್ರೆ ರಸ್ತೆ, ಹಿರಿಯೂರು ಟೌನ್. ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 7-05-2024ನೇ ಮಂಗಳವಾರ ಮಧ್ಯಾಹ್ನ 3.45ಕ್ಕೆ ನನ್ನ ಪೂಜ್ಯ ಪತಿಯವರಾದ
ಶ್ರೀ ಎಂ.ರಂಗಪ್ಪನವರು
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು
ದಿನಾಂಕ 27-05-2024ನೇ ಸೋಮವಾರ ಬೆಳಗ್ಗೆ 12.30 ಕ್ಕೆ
ಹಿರಿಯೂರು ಟೌನ್, ತೇರುಬೀದಿಯಲ್ಲಿರುವ ಶ್ರೀ ಕನ್ನಿಕಾ ಮಹಲ್‌ನಲ್ಲಿ ನಡೆಸಲು
ಗುರು ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು : ಶ್ರೀಮತಿ ಸಾವಿತ್ರಮ್ಮ ಮತ್ತು ಮಕ್ಕಳು,
ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 6TH STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT Contact: 8050908920/ 9986866661

**BANASHANKARI 6TH Stage, 7th`Block** BDA 30x40 S/F`Site Sale 98 Lakhs. Close to Nice Road Contact 1st Owner: 9986103887.

BSK 6TH Stage 10th Block North Facing 20x30, 65 Lakhs. JPNagar 5th Phase 20x30 South Facing 1Cr Negotiable: 9845059328

BDA SITE for Sale, Residential & Commercial Banashankari 6th stage, Banashankari 5th stage, Uttarahalli, Rajarajeshwarinagara 30x40, 40x60, 50x80, 80% Bank Loan. 9916592400

65X90,COMMERCIAL South`Side 100Feet Road, North`Side 30feet Road`BDA Approved Balaji-Layout Kanakapura Rd`Near Sharma Transport: 9880770498.

20*30 BDA Site East facing for Sale in BSK 3rd block, 6th stage. Contact: 9844392575

Basaweshwaranagar

40X60 SITE Sale West Face Prime Location Near Vidyavardhaka College 23000/- Contact: 9448477376

SITE SALE 1600 SQFT A KHATHA RS 1 CRORE 80 LAKHS ONLY CLEAR TITLES: 9035883017

SITE FOR sale 40x60 Basweshwarnagar 3rd block 3rd stage, North face, Nice location, Rate 19000/- Mobile: 9945116577, 9945866245, 9743322555.

BASAVESHWARANAGAR, North Facing, 40x60 Property-sale, near old Pavithra Paradise Rs.25000/-sft. Contact -9916280018

HBR Layout

30X40 SEMI COMMERCIAL BDA property For-sale in HBR Layout 5th Block. Bangalore. Connect: TRINITY VENTURES- 9449287000.

Hesaraghatta

SITE SALE: HESSARGHATTA, MEI LAYOUT- BBMP 60X45 North Facing. Clear Documents. Brokers Excuse. Contact: 8050074511

HSR Layout

SALE HSR SITES & BUILDINGS 30X40 40X60 50X80 COMMERCIAL AVAILABLE BTM 20X33 5FLOORS 30X45: 9900966336

Jigani

JIGANI NANDANA VANA Site No. 166, 30x40 West Facing 2700/- Negotiable. 40x60 East 2700/-: 9844155175

Jayanagar

BDA SITE for Sale, Residential & Prime Commercial Jayanagara JP Nagara, BTM Layout, HSR Layout, Koramangala 40x60, 50x80, 100x100, 80% Bank Loan. 9916592400.

AVAILABLE PRIME Property for sale near Madhavan Park, 40x60 south facing. Immediate Possession. Contact 7760110114

JAYANAGAR PRIME Property 100x150 For SALE. Rs.30K Psft. Interested Buyers Call: 'LEO ESTATES'- 9343728200

Kengeri

30X40 CORNER Varahasandra Layout Hemmigepura Ward Opposite Kadalekayi Parse Conversion B Katha 4000/- Negotiable: 9731652024

DIRECT OWNER 30x40 KHB Aloted Site Sale, 'BANDEMATA' Adjacent to Kengeri Metro Station, Rs.7500/-. 9742681666

Kumarapark

KUMARAPARK 40X70 East Facing Site For Sale, Genuine Prospective Buyers only Call:9900001973 Brokers Strictly Excused

Kempegowda Layout

NADAPRABHU KEMPEGOWDA LAYOUT,3rd Block 40x60 W/F,30x40 E/F and 7th Block 20x30 S/F Contact: 9686469799

KEMPEGOWDA LAYOUT, BDA SITE FOR SALE 20X30 30X40, 40X60, 50X80 CONTACT KUMAR: 99451 19449

"50X80 COMMERCIAL BDA-SITES SALE KEMPEGOWDA LAYOUT, 50X80 VISHVESHWARAIYA LAYOUT, 40X60 RTO RAILWAY LAYOUT- 7338328879"

Chennapatna

BMICAPA APPROVED Residential DC Converted 3Acre Land for Sale, Channapatna Town Limits, Price 6Cr per Acre, Call- 9845188137

Nelamangala

EAST FACING 60x54 clear document developed Ramkey Layout excuse agent buyer. Contact Owner 9481028358, 9449611876

Rajarajeshwari Nagar

RAJARAJESHWARI NAGAR Ideal Homes 50x80, 70x96, 80x120. BEML 40x60, 50x80 and Commercial Building, Banashankari 6th Stage 30x40, 40x60, 50x80. 94484-83699

Vishweshwariah Layout

VVS LAYOUT Attached, 50X80 East facing A Katha Convertion land, Mallathalli, Balaji Layout, Near Krishna hardware: 9008884823

VISVESWARAIAH 9TH BLOCK 30x40 Semi Commercial 40ft Road, Near Nagarabhavi Ring Road 13000/- PSft: 9845488488

AVAILABLE 40X60 BDA Site North Facing 1st Block 40ft Road Vishveshwariah Layout Contact Buyers: 9844603127

'DIRECT OWNER' BDA 30x40 Site Sale VISHVESWARAIAH LAYOUT BLOCK-2, Near Park, Close to 100ft Road: 8496030007

VISWESHWARAIAH LAYOUT 2nd Block BDA 30x40 East Facing Near Kengeri Good Location Immediate Construction: 6360050356

BDA 8TH Block, Very Good Location,30x40 South Facing Site, Sale Price 12500/-sft, Payment mode Reasonable, Direct Registration Contact Genuine buyers only: 9945564769 (Brokers Excuse)

BDA SITE for Sale, Residential and Commercial Nagarbhavi, Sir M Vishveshwaraiah Layout, Kempegowda Layout 30x40, 40x60, 50x80, 80% Bank Loan. 9916592400

SALE BDA Vishweshwaraiah Layout 50X80 Commercial Site Kempegowda Layout 20X30 East West Facing Owner: 9880032685

"AVAILABLE ALL-MEASUREMENTS BDA Sites Vishveshwaraiah Layout. Please Contact Genuine Buyers Only.Feel free Contact: 7259675150"

"VISHVESHWARAIAH LAYOUT 6th-Block Opp.KLE Law college 50x80 North 80'feet Road 100% Vastu Site. 9448432633"

Vidyaranyapura

SITE BBMP A Katha 40x30 SEMI COMMERCIAL SF Rs. 9200/- THINDLU LAKE SHOW GARDEN: 8296895858

Chikkaballapura

30×50 KHB site for sale in Bhagyapalli, Dr Suma: 9880964010

Mangaluru

KHB ALLOTTED 30x40 SOUTH EAST CORNER Site Corporation Limit 17.50 Lakhs Clear Papers OWNER 9606866368

Hejjala

40X60 SOUTH East Corner Site for Sale at Judicial Layout, 3rd Phase, Hejjala, nearby Mysore Road, Contact: 9980163987

Anjanapura

BDA SITES Available for SALE 40x60 West Facing, 20x60 North Facing Anjanapura & Banashankari 6th Stage. Call: 9448082366

Kanakapura Road

"JAYANAGAR SOCIETY 30x40-West Gubbalalu near Doddakallasandra Metro-Station BDA approved only direct Registration "Sri.Ganesh Estate" 9845286505"

J P Nagar

JP NAGAR DOLLARS Colony 41x62 west Suitable PG/ Residential/ Office 16,500/-, Genuine Buyers USR: 7019770736/ 8951614989.

Mysore Road

NADAPRABHU KEMPEGOWDA Layout Adjacent to 300 ft Peripheral Ring Road, 8500 per sqft. 6360710395, 9900040218

KETHOHALLI BIGBANYAN Tree 30x50 4 Sites, East, 2200/-Sqft. 5 KM- Challaghatta Metro. 9945724472, 7829830333.

Flat

Basavanagudi

FOR SALE 3 BHK south-east facing flat with separate pooja room, attached bath, 2 balconies, wash and closed car parking in BASAVANAGUDI. 300m from Lalbhagh metro station.Contact - 9481483926

Hanumanthnagar

3BHK FLAT sale Rs. 1.2 Cr. Webster School Road 6th Cross Ashokanagar B'lore-50 call 9945455503

Kengeri

FOR SALE 2bhk flat in Sunworth, Kengeri. Built-up area of 730 sqft, with all amenities and open car parking.Contact - 9481483926

Mathikere

3-BHK, EAST facing, 1400sqft, A-Khata, New flat, Close to MS Ramaiah college, Contact 9341221988

Mysore Road

MYSORE ROAD AVILABLE EAST DOOR 3BHK FLAT WITH CAR PARKING LEASE RS. 32 LACS: 8105273951

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms attached bathroom, built with teak wood, Italian Marble Tiles, at BEML Layout, Basaveshwaranagar, Bangalore. Clear Titles & 'A' Katha, Rs.5.50 Crores (negotiable). Party going out of station, one time settlement (more negotiable) Immediate Registration. 9845765559/ 9845043282

Jayanagar

40X30 SITE 1200sft Duplex House G+2, LIC-Colony Jayanagar EF 3.20cr Brokers Excuse: 9148162188/ 8197196958

J P Nagar

J.P.NAGAR SECOND phase Excellent Residential 30x40 West facing 2 Floors Old House BDA- 9845173427/ 9845144365

J.P.NAGAR 4TH, Dollars colony 50x80 4`Unit House, 10 Carparking, Rental income 4,60,000/- Sale- 11,00,00,000/- 973999542.

J.P.NAGAR 2ND Near Central Mall 30x50 North 3 unit house 4,50,00000/-, 40x60 old house 6,00,00000/- 9739995042.

J.P.NAGAR 3RD, North facing old house 50x84 residential, Near Mini forest, 40' Road 10,60,00,000/- 9739995042.

J.P.NAGAR 3RD Near Mini forest 43x50 3 BHK 4 Unit House with Lift 7,00,00,000/- 9739995042.

Vidyaranyapura

HOUSE SALE for 1800 sqft (Site 20x55), 1.10 Crore. Singapura, Vidyaranyapura, Bangalore. Owner Sunil: 7353353377.

Mysore

2-BHK HOUSE for Sale 30x40, E/F, Ground,+2 Floors, Carparking. near Vasanthnagar, Mysuru. 8884920455.

Agricultural Land Converted

Devanahalli

REQUIRED/WANTED AGRICULTURE green zone or converted 4 to 50 acres outright purchase & joint venture for MNC Company & NRI Investors in and around Doddaballapura, Devanahalli, Chikkaballpur, Sarjapura Road, Hoskote-Chintamani-Malur surroundings, minimum Road width 40 feet plus. Flexible Payment. 9916592400

Ramanagar

RESIDENTIAL CONVERTED and Approved Site For Sale near Ramanagar 10000Sq.Ft Developed Area 1650/- P.Sqft Clear Titles. Owner- 9900115519

Agricultural Land

Mysore Road

"MADDUR 25 GUNTAS COCONUT TREES, BOREWELL, NEAR BUS ROUTE AND VILLAGE 33 LAKHS (OWNER). 9845178335"

Chitradurga

EXCELLANT INVESTMENT 50.22 Acres Redsoil suitable for Commercial Crops Bhoganahalli, Challekere (Science City) nearby BARC, DRDO, IISC, ISRO, BTPDAM @ 6.75 CR Nego, Mallesh: 9743865623

Commerical

Kengeri

COMMERCIAL PROPERTY For Sale 16500/- Sqf. Ajasent Kengeri Metro Station For Hotel, Theater Kumar 9945119449

Vishweshwariah Layout

SITE FOR Sale 40X60 Commercial at Vishweshwaraiah layout Near RTO Office Direct Owner Contact :8971851966 /9880781399

Industrial & Factory

Ramanagar

8ACRES 7GUNTA Industrial Converted Land Sale between RAMANAGARA-CHANNAPATNA Proposed 80ft Road 2.25Cr/ Acre: 9845488488

Commercial Building

Banashankari

30X40 BDA Commercial Property for Sale.Next to PES College Hosakerehalli, Good Rental Income. 9731115176/ 9845119946

Villas/Bunglows

Whitefield

VILLA SALE 4800 sft built 2200 sft Shriram Samskruti Kundalahalli. 9353159829

MORE Classifieds Ads on Subsequent Pages

PROPERTY CORNER

ಕ್ಲಾಸಿಫೈಡ್ಸ್

SALE 125 Acres Land
33 Kms from Yelahanka, 85Lacs per Acre

20Acres Industrial converted land
for IT Park, 17 Kms from Yelahanka @ Attractive Price
Contact: 7022446922

RESIDENTIAL HOUSE FOR SALE
IN HRBR LAYOUT 2nd BLOCK
(BDA Corner Site) 45 X 46 Dimension
GROUND FLOOR 1800 SQ.FT. (BUILTUP AREA)
FIRST FLOOR 800 SQ.FT. (BUILTUP AREA)
Concact : 9886618800

ಯಲಹಂಕ
Behind BMS College
DC COVERSION LAYOUT
E KHATA
Land Mark: SHELL PETROL BUNK OPP BMS College ಹಿಂಭಾಗ
30 x 30 ನಿವೇಶನಗಳು @ 44 ಲಕ್ಷಗಳು
30 x 40 ನಿವೇಶನಗಳು @ 58 ಲಕ್ಷಗಳು
Attached to BEL LAYOUT

ವಿದ್ಯಾರಣ್ಯಪುರ
GKVK Back Gate, Attur Layout
BBMP KHATA
Land Mark:
• DMart ನಿಂದ ನಿಮಿಷ
• 1.5km from Vidyaranyapura Busstop
• 2Mins Walking Distance to GKVK Busstop
20 x 30 ನಿವೇಶನಗಳು @ 28 ಲಕ್ಷಗಳು
30 x 40 ನಿವೇಶನಗಳು @ 56 ಲಕ್ಷಗಳು

ಯಲಹಂಕ ಬಾಗಲೂರು
E KHATA
DC COVERSION LAYOUT
SEZ Road, Vidya Nagar Cross, Venkateswara Engg. College
UPCOMING BBMP LIMITS
30 x 35 ನಿವೇಶನಗಳು @ 39.90 ಲಕ್ಷಗಳು
30 x 40 ನಿವೇಶನಗಳು @ 45 ಲಕ್ಷಗಳು
ನಿರ್ಮಾಣಕ್ಕೆ ಸಿದ್ಧವಾಗಿದೆ ಬ್ಯಾಂಕ್ ಸಾಲ @ LIC HFL ICICI Bank Home Loans
9880 149 159 | 9731 555 000

General

South

HANDPOST HOMES offers 2, 3 BHK Apartments (Bangalore South), Also undertake House Interiors Call 8088446226

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVILWORKS. 9448572697

RENTAL PROPERTIES

Accommodation Available

Industrial And Factory

AVAILABLE OF Industrial Shed for Rent 95000sqft at Soukya Road, Whitefield. Contact: 9341234288/ 9663224353/ 9845417487.

INDUSTRIAL FACTORY for Lease Rent. 26,000 sqft 3,000 sqft Office Loft. Kiadb Pillagmppa, Hoskote. 9513200065

House

NEW 2BHK 1st Floor Semi Furnished Bike Parking Rent:32,000 Bapuji Chandra Layout Contact:7795494932

Commercial

RENT- JAYANAGAR 4th Block Showroom Space 2nd Floor-1500 Sq.ft 3rd Floor-1350 Sq.ft Furnished Office Space with Plug-n-Play Lift,Power Power Back-up. Suitable for Office/IT/ ITES.Call- 9901453477

COMMERCIAL SPACE for Rent, Number 577B, First Floor, measuring about 2800 Sq.Ft. Plug and Play, adjacent to Skoda Show Room, Outer Ring Road, (Service Road) 6th Sector, HSR Layout, Bangalore 560102. Contact Mob. 9900523611/ 9342825747

6,500 - 20,000 sq.ft.
Suitable for Super Market / Godown / Warehouse / Office / Showroom, etc.,
CONTACT : 98450 49000

SHOP LEASE 700 Sqft Commercial at Ground floor Available for any Showroom or Business Purpose for long-term (20 years), for 2.5cr (Negotiable), at 80ft Road, BSK 3rd stage, near SBM Colony Bus Stop. 9482849811

REAL ESTATE BUYING

Flat

Multiple Locations

WANTED 1, 2, 3 BHK Flat Sale and Rental and Plots. Rajajinagar, Malleshwaram, Yeshwantpur. 7022573176/ 8308173176.

General

General

WANTED 1 to 10 Acres or more Land for Investment with Road, Water facility, Level Land without Encumbrance from Silk Board to Hosur side. Interested Land Owners Call 9620728917

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. Genuine Sellers Contact: 9902038118, 9449060605

WANTED BDA Site Anjanapura, Banashankari 6th Stage, Vishweshwaraiah layout, Kempegowda Layout & any BDA Katha Sites, immediate settlement. Genuine Sellers Contact: 9972223222, 9606632777

Banashankari

WANTED SITES BSK 6th Stage Kanakapura Road Visweshwaraiah Layout Nagarbhavi 30x40, 40x60, 50x80 Vakil Layout and Any Area: 9845059328

Kanakapura Road

WANTED SITE For INVESTMENT Anjanapura, NarayanNagar, Gubblala, BCMC, BCC Layout, Banashankari 6th Stage, Balaji`Layout, Agent Excuse Contact: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

BUSINESS

Business to Business

Agriculture

REQUIRED: FARM Maintenance Companies/Individuals near Kanakapura. Contact on 9845298575

PUBLIC NOTICE

NOTICE
To Whomsoever It May Concern

The under- mentioned law firm acts for The Binfield Trust and other heirs to the property bearing No.14, 14/10, 14/11, Cunningham Road, Bengaluru-560052. No one other than the heirs have any authority over the said property and anyone found interfering with or trespassing on the said property will invite legal action.

S. Ramasubramaniam and Associates
Advocates
First Floor, "Century Centre", New No. 75 (Old No.39) T.TK Road, Chennai- 600018
Ph: 044- 24990424, 24990069, 24992596

MATRIMONIAL

Grooms Wanted

Brahmin

GROOM WANTED
Wanted suitable match for Brahmin Girl MD Pediatrics, 1988 Born, 5' 4". Preference Doctor, IT, IAS, PCS & Gazetted officer. Preferred location Bangalore, Chandigarh, Delhi NCR.
Contact: 77529 51777

Brides Wanted

Muslim

WELL RENOWNED Muslim family from Mysore is looking for marriage for their son 1991 born 5'11' MD (Radiology). Practicing as a Doctor Contact for marriage (080-69072053)

MUSLIM BOY from an Affluent family 32 years 5'9' MBBS, MD (Cardiology) Looking for girl for marriage. (080-69072053)

Punjabi

BRIDE WANTED
Required Punjabi/ Sikh girl resident of Bangalore or prepared to live in Bangalore for my son 1990 born 5'7. Job in Bangalore, HOC Owning properties & bungalow. Parents running own school.
Mob: 730-20-90-990

PERSONAL

Change of Name

I, M SHEKAR, Residing at No. 65/2, 15th Cross, Kaveripura, Bangalore-79, have changed my name from M SHEKAR To SHEKAR SHETTY, vide Affidavit Dated 23/05/2024 before Notary K.H Jagadish Bangalore-79

ಶ್ರೀ ಕರಾಯಿಲ್ ಚಿಟ್ಸ್ ಇಂಡಿಯಾ ಲಿಮಿಟೆಡ್

ರಿಜಿಸ್ಟರ್ ಆಫೀಸ್ : ತಿರುಪುರ, ತಮಿಳುನಾಡು, ಆಡಳಿತ ಕಛೇರಿ: – ಕೊಡಂಗಲ್ಲೂರು, ತ್ರಿಸೂರ್, ಕೇರಳ, ಶಾಖಾ ಕಛೇರಿ: ನಂ. 21/8. # 21/8, B.Y Mansion, 2nd Floor, Konanakunte Cross, Kanakapura Main Road, Bengaluru- 560062

ಸಾರ್ವಜನಿಕ ಪ್ರಕಟಣೆ

ಶ್ರೀ ಕರಾಯಿಲ್ ಚಿಟ್ಸ್ (ಇಂಡಿಯಾ) ಲಿಮಿಟೆಡ್, # 21/8, B.Y Mansion, 2nd Floor, Konanakunte Cross, Kanakapura Main Road, Bengaluru- 560062 ಈ ಶಾಖಾ ಕಛೇರಿಯು ತನ್ನ ಚೀಟಿ ವಹಿವಾಟವನ್ನು ದಿನಾಂಕ: 12–01–2024 ರಂದು ಸ್ಥಗಿತಗೊಳಿಸುತ್ತಿದ್ದು, ಸಂಸ್ಥೆಯ ಎಲ್ಲಾ ಚೀಟಿದಾರರಿಗೆ ಈಗಾಗಲೇ ಅವರುಗಳ ವಹಿವಾಟಿನ ಮೊತ್ತವನ್ನು ಸಂಪೂರ್ಣವಾಗಿ ಪಾವತಿಸಿರುತ್ತೇವೆ. ಯಾರಿಗಾದರೂ ಇನ್ನೂ ಸಂಸ್ಥೆಯ ಚೀಟಿದಾರರು ಇದ್ದಲ್ಲಿ ಈ ಪ್ರಕಟಣೆಯ ದಿನಾಂಕ: 26–05–2024 ರಿಂದ ದಿನಾಂಕ: 11–06–2024ರ ಒಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಿ, ತಮ್ಮ ಚೀಟಿ ವಹಿವಾಟನ್ನು ಮುಕ್ತಾಯಗೊಳಿಸಿಕೊಳ್ಳಬಹುದಾಗಿದೆ ಎಂದು ಈ ಸಾರ್ವಜನಿಕ ಪ್ರಕಟಣೆ ಮೂಲಕ ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 080–26861889ನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಶ್ರೀ ಕರಾಯಿಲ್ ಚಿಟ್ಸ್ (ಇಂಡಿಯಾ) ಲಿಮಿಟೆಡ್
ಫೋನ್: 9743385396

DH Classifieds DECCAN HERALD More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS

www.dhclassifieds.com BOOK NOW
*Conditions apply
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164

ಎಲ್ಲ ಶಿಕ್ಷಕರಿಗೆ ಉಚಿತ ಆರೋಗ್ಯ ಕಾರ್ಡ್: ಬಿಜೆಪಿ ಅಭ್ಯರ್ಥಿ ವೈ.ಎ.ನಾರಾಯಣಸ್ವಾಮಿ

ಶಿಕ್ಷಕರು ನನ್ನ ಜತೆ ಗಟ್ಟಿಯಾಗಿ ನಿಂತಿದ್ದಾರೆ

• ರವಿಪ್ರಕಾಶ್ ಎಸ್.

‘ಅನುದಾನ ರಹಿತ ಶಾಲೆಗಳ ಶಿಕ್ಷಕರಿಗೆ ಆರೋಗ್ಯ ಕಾರ್ಡ್ ಕೊಡಿಸುವುದು, 2006ರ ಬಳಿಕ ನೇಮಕಗೊಂಡ ಶಿಕ್ಷಕರಿಗೆ ಪಿಂಚಣಿ ಸೌಲಭ್ಯ ಕೊಡಿಸುವುದೂ ಸೇರಿದಂತೆ ಶಿಕ್ಷಕರ ಸಮಸ್ಯೆಗಳ ಪರಿಹರಿಸಲು ನನ್ನದೇ ಆದ ಯೋಜನೆಗಳಿವೆ’ ಎಂದು ಆಗ್ನೇಯ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಹಾಲಿ ಸದಸ್ಯ ವೈ.ಎ. ನಾರಾಯಣಸ್ವಾಮಿ ಹೇಳಿದರು.

ಮೂರು ಬಾರಿ ಗೆದ್ದಿರುವ ಅವರು, ಮತ್ತೊಮ್ಮೆ ಚುನಾವಣೆ ಕಣದಲ್ಲಿದ್ದಾರೆ. ಶಿಕ್ಷಕರ ಸಮಸ್ಯೆಗಳ ಬಗ್ಗೆ ಅವರು ಮಾತನಾಡಿದ್ದು ಇಲ್ಲಿದೆ.

ವೈ.ಎ.ನಾರಾಯಣಸ್ವಾಮಿ

• ಶಿಕ್ಷಕರು ನಿಮಗೆ ಯಾವ ಕಾರಣಕ್ಕೆ ಮತ ಹಾಕಬೇಕು?
ಮೂರು ಬಾರಿ ಇದೇ ಈ ಕ್ಷೇತ್ರದಿಂದ ಗೆದ್ದಿರುವ ನಾನು ನಾಲ್ಕನೇ ಬಾರಿ ಸ್ಪರ್ಧಿಸಿದ್ದೇನೆ. ಶಿಕ್ಷಕರ ಜತೆಗಿನ ಒಡನಾಟ, ನಿರಂತರ ಸಂಪರ್ಕ ಮತ್ತು ಕಾಲ ಕಾಲಕ್ಕೆ ಅವರ ಸಮಸ್ಯೆಗಳನ್ನು ಅರಿತು ಅವುಗಳಿಗೆ ಪರಿಹಾರ ಕಲ್ಪಿಸುತ್ತಿರುವುದರಿಂದ ಶಿಕ್ಷಕರು ಆಚೆ– ಈಚೆ ಕದಲದೇ ಗಟ್ಟಿಯಾಗಿ ನನ್ನ ಜತೆ ನಿಂತಿದ್ದಾರೆ. ಇನ್ನು ಮುಂದೆಯೂ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸಿ ಅವುಗಳಿಗೆ ಪರಿಹಾರ ಕಲ್ಪಿಸಲು ಕಟಿಬದ್ಧನಾಗಿದ್ದೇನೆ. ಶಿಕ್ಷಕರ ಆಪ್ತಬಂಧುವಿನಂತೆ ಕೆಲಸ ಮಾಡುತ್ತಿದ್ದು, ಈ ಬಾರಿ ಕ್ಷೇತ್ರದಲ್ಲಿ ನನ್ನ ಪರವಾದ ಅಲೆ ಇದೆ.

• ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳೇನು? ಅವುಗಳಿಗೆ ನಿಮ್ಮ ಬಳಿ ಇರುವ ಪರಿಹಾರಗಳೇನು?

ವಿಶೇಷವಾಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಶಿಕ್ಷಕರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳಲ್ಲಿ ತಾತ್ಕಾಲಿಕ ಮತ್ತು ದೀರ್ಘಕಾಲೀನ ಸಮಸ್ಯೆಗಳಿವೆ. ಅನುದಾನ ರಹಿತ ಶಿಕ್ಷಕರಿಗೆ ಯಾವುದೇ ಸವಲತ್ತುಗಳೂ ಸಿಗುತ್ತಿಲ್ಲ. ಮುಖ್ಯವಾಗಿ ಆರೋಗ್ಯ ಕಾರ್ಡ್ ಸೌಲಭ್ಯ ಸಿಗುತ್ತಿಲ್ಲ. ಸರ್ಕಾರಿ ನೌಕರರಿಗೆ ಆರೋಗ್ಯ ಸೌಲಭ್ಯವಿದೆ. ಅಂಗನವಾಡಿ ಕಾರ್ಯಕರ್ತೆಯರಿಗೂ ಆರೋಗ್ಯ ಕಾರ್ಡ್ ಸಿಗುತ್ತಿದೆ. ಆದರೆ, ಅನುದಾನ ರಹಿತ ಶಾಲಾ ಶಿಕ್ಷಕರಿಗೆ ಇಂತಹ ಯಾವುದೇ ಕಾರ್ಡ್‌ಗಳು ಸಿಗುತ್ತಿಲ್ಲ. ಈ ಬಾರಿ ಗೆದ್ದರೆ ಅನುದಾನ ರಹಿತ ಶಾಲಾ ಶಿಕ್ಷಕರಿಗೆ ಉಚಿತ ಆರೋಗ್ಯ ಕಾರ್ಡ್ ಕೊಡಿಸುವ ಪ್ರಯತ್ನ ಮಾಡುತ್ತೇನೆ. ರಾಜ್ಯದಲ್ಲಿ ಅನುದಾನರಹಿತ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 15 ಲಕ್ಷ ಶಿಕ್ಷಕರಿದ್ದಾರೆ. ಅವರೆಲ್ಲರಿಗೂ ಇದರ ಪ್ರಯೋಜನ ಸಿಗಲಿದೆ.

• ಶಿಕ್ಷಕರಿಗೆ ಆಗಬೇಕಾಗಿರುವ ಅಗತ್ಯ ಕೆಲಸಗಳೇನು?
ಈಗಾಗಲೇ ಉಚಿತ ಆರೋಗ್ಯ ಕಾರ್ಡ್ ವಿತರಿಸುವ ವಿಚಾರ ಪ್ರಸ್ತಾಪಿಸಿದ್ದೇನೆ. ಮತ್ತೊಂದು ಮಹತ್ವದ ವಿಚಾರವೆಂದರೆ 2006 ಏಪ್ರಿಲ್ 1ರ ಬಳಿಕ ನೇಮಕಗೊಂಡ ಶಿಕ್ಷಕರಿಗೆ ಪಿಂಚಣಿ ಸೌಲಭ್ಯ ಸಿಗುತ್ತಿಲ್ಲ. ಅದಕ್ಕೂ ಹಿಂದೆ ನೇಮಕಗೊಂಡವರು ಹಳೆ ಪಿಂಚಣಿ ಅಥವಾ ಹೊಸ ಪಿಂಚಣಿ ವ್ಯವಸ್ಥೆಗೆ ಒಳಪಟ್ಟಿದ್ದಾರೆ. 2006 ಏಪ್ರಿಲ್ 1ರ ಬಳಿಕ ಸೇರಿದವರನ್ನೂ ಪಿಂಚಣಿ ವ್ಯವಸ್ಥೆಗೆ ಒಳಪಡಿಸಬೇಕು. ಹಿಂದೆ ನಮ್ಮ ಸರ್ಕಾರ ಇದ್ದಾಗ ಶಿಕ್ಷಕರು ಸುದೀರ್ಘ ಹೋರಾಟ ನಡೆಸಿದ್ದರು. ನಾನು ಅಂದಿನ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಬಳಿ ಹೋರಾಟಗಾರರನ್ನು ಕರೆದುಕೊಂಡು ಹೋಗಿದ್ದೆ. ಅದರ ಪರಿಣಾಮ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಇದಕ್ಕಾಗಿ ಸಮಿತಿ ರಚಿಸಲಾಯಿತು. ಕಾಂಗ್ರೆಸ್ ಸರ್ಕಾರ ಬಂದ ಬಳಿಕ ಆ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಇದಕ್ಕಾಗಿ ಹೋರಾಟ ಮುಂದುವರೆಸುತ್ತೇನೆ.

ನಮ್ಮ ಸರ್ಕಾರದ ಅವಧಿಯಲ್ಲಿ 7 ನೇ ವೇತನ ಆಯೋಗದ ವರದಿಯನ್ನು ಆಧರಿಸಿ ಶೇ 17 ರಷ್ಟು ಮಧ್ಯಂತರ ಪರಿಹಾರ ನೀಡಲಾಗಿತ್ತು. ಅಂದರೆ ₹10,500 ಕೋಟಿ ಇದಕ್ಕಾಗಿ ನೀಡಲಾಗಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 7 ನೇ ವೇತನ ಆಯೋಗದ ವರದಿ ಜಾರಿ ಮಾಡುವ ಬಗ್ಗೆ ಮಾತನಾಡುತ್ತಿಲ್ಲ. ಮೌನವಾಗಿದೆ. ಜಾರಿ ಮಾಡುವುದಕ್ಕೆ ಸರ್ಕಾರದ ಬಳಿ ಹಣವೇ ಇಲ್ಲ. ❖

ಪ್ರಜಾವಾಣಿ ಸಂದರ್ಶನ

ಆಗ್ನೇಯ ಶಿಕ್ಷಕರ ಕ್ಷೇತ್ರ

‘ಶಿಕ್ಷಕರಿಗೆ ಭರವಸೆಯ ಬೆಳಕಾಗುವೆ’

ಹಳೆ ಪಿಂಚಣಿ ವ್ಯವಸ್ಥೆ ಪೂರ್ಣ ಜಾರಿ –ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ.ಶ್ರೀನಿವಾಸ್

• ಜಿ.ಬಿ.ನಾಗರಾಜ್

ವಿಧಾನ ಪರಿಷತ್‌ನ ಆಗ್ನೇಯ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ. ಶ್ರೀನಿವಾಸ್, 2020ರಲ್ಲಿ ಆಗ್ನೇಯ ಪದವೀಧರರ ಕ್ಷೇತ್ರಕ್ಕೆ ನಡೆದಿದ್ದ ಚುನಾವಣೆಯಲ್ಲಿ ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲುಂಡಿದ್ದರು.

ಪ್ರಸಕ್ತ ಚುನಾವಣೆಯ ಸ್ಪರ್ಧೆಯ ಕುರಿತು ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• ಶಿಕ್ಷಕರ ಕ್ಷೇತ್ರಕ್ಕೆ ನೀವು ಹೊಸಬರು, ಯಾವ ಭರವಸೆಯ ಮೇಲೆ ಸ್ಪರ್ಧೆ ಮಾಡಿದ್ದೀರಿ?
2020ರಲ್ಲಿ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿದ ಅನುಭವ ಇದೆ. ಈ ಚುನಾವಣೆಯಲ್ಲಿ ಶಿಕ್ಷಕರು ಕೂಡ ಭಾಗಶಃ ಮತದಾರರು. ಹೊಸದಾಗಿ ಮುಖಪರಿಚಯ ಮಾಡಿಕೊಳ್ಳುವ ಅಗತ್ಯವಿಲ್ಲ. ಪಕ್ಷೇತರ ಅಭ್ಯರ್ಥಿಯಾಗಿ ಪರಾಭವಗೊಂಡ ಅನುಭವ ‘ಕೈ’ ಹಿಡಿದಿದೆ. ಕಾಂಗ್ರೆಸ್ ಅಭ್ಯರ್ಥಿಯಾಗಿ ಇದೇ ಮತದಾರರ ಎದುರು ಮತ್ತೆ ಬಂದಿದ್ದೇನೆ.

• ಶಿಕ್ಷಕರು ನಿಮಗೇ ಏಕೆ ಮತ ಹಾಕಬೇಕು?
ಶಿಕ್ಷಕರ ಕೊರತೆಯಿಂದ ನಲುಗುತ್ತಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಭರವಸೆಯ ಬೆಳಕಿನ ಅಗತ್ಯವಿದೆ. 7ನೇ ವೇತನ ಆಯೋಗ ಶೀಘ್ರದಲ್ಲಿ ಜಾರಿಗೆ ಬರಲಿದೆ. ಶಿಕ್ಷಣ ಕ್ಷೇತ್ರ ಹಾಗೂ ಸರ್ಕಾರಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ನನ್ನ ಅನುಭವ ಶಿಕ್ಷಕರ ಸೇವೆ ಮಾಡಲು ನೆರವಾಗಲಿದೆ.


ಡಿ.ಟಿ.ಶ್ರೀನಿವಾಸ್

• ಹಳೆ ಪಿಂಚಣಿ ವ್ಯವಸ್ಥೆ (ಒಪಿಎಸ್) ಜಾರಿಗೊಳಿಸುವ ಆಶ್ವಾಸನೆ ನೀಡುತ್ತಿದ್ದೀರಿ, ಇದರ ಅನುಷ್ಠಾನ ಹೇಗೆ ಸಾಧ್ಯ?
ಹೊಸ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಬಿಜೆಪಿಯ ಕೂಸು. ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಇದು ಜಾರಿಗೆ ಬಂದಿದೆ. ಹಳೆ ಪಿಂಚಣಿ ವ್ಯವಸ್ಥೆ ಜಾರಿಗೊಳಿಸುತ್ತೇವೆ ಎಂಬ ವಾಗ್ದಾನವನ್ನು ಪ್ರಣಾಳಿಕೆಯಲ್ಲೇ ನೀಡಿದ್ದೇವೆ. 2006ರ ಮಾರ್ಚ್‌ನಲ್ಲಿ ನೇಮಕಗೊಂಡಿದ್ದ 11,320 ನೌಕರರಿಗೆ ರಾಜ್ಯ ಸರ್ಕಾರ ಒಪಿಎಸ್ ಸೌಲಭ್ಯ ಕಲ್ಪಿಸಿದೆ. ಒಪಿಎಸ್ ಅನುಷ್ಠಾನದ ಮೊದಲ ಹಂತವಿದು.

• ಬಿಜೆಪಿಯಲ್ಲಿ ಅಧಿಕಾರ ಅನುಭವಿಸಿದ ನೀವು, ಕಾಂಗ್ರೆಸ್ ಟಿಕೆಟ್‌ಗಾಗಿ ಪಕ್ಷಾಂತರ ಮಾಡಿದ್ದೀರಿ ಎಂಬ ಆರೋಪ ಇದೆಯಲ್ಲ?
ರಾಜ್ಯದ ಹಲವು ಜಿಲ್ಲೆಗಳಲ್ಲಿ ಗೊಲ್ಲ ಸಮುದಾಯ ಪ್ರಭಾವಿಯಾಗಿದೆ. ಮಾಜಿ ಸಚಿವ ಎ.ಕೃಷ್ಣಪ್ಪ ಅವರ ಬಳಿಕ ಸಮಾಜ ಸಂಘಟನೆಯಲ್ಲಿ ಸಕ್ರಿಯರಾಗಿದ್ದೇವೆ. ಪತ್ನಿ, ಮಾಜಿ ಶಾಸಕಿ ಕೆ.ಪೂರ್ಣಿಮಾ ಮತ್ತು ನಾನು ಬಿಜೆಪಿ ಸೇರಿದ್ದು ಹಲವು ಕ್ಷೇತ್ರಗಳಲ್ಲಿ ಅನುಕೂಲವಾಗಿತ್ತು. ಆದರೆ, ಮಾರ್ಗ ಮಧ್ಯೆ ನಮ್ಮನ್ನು ಕೈಬಿಟ್ಟ ಬಿಜೆಪಿ ದ್ರೋಹ ಎಸಗಿದೆ.

• ಬಿಜೆಪಿ ಅಭ್ಯರ್ಥಿ ವೈ.ಎ.ನಾರಾಯಣಸ್ವಾಮಿ 18 ವರ್ಷಗಳಿಂದ ಕ್ಷೇತ್ರ ಪ್ರತಿನಿಧಿಸುತ್ತಿದ್ದಾರೆ. ಅವರನ್ನು ಹೇಗೆ ಎದುರಿಸುತ್ತೀರಿ?
ಶಿಕ್ಷಕರ ಕ್ಷೇತ್ರ ಪ್ರತಿನಿಧಿಸಿದವರು ಕಷ್ಟಗಳಿಗೆ ಸ್ಪಂದಿಸಿಲ್ಲ. ಚುನಾವಣೆ ಸಂದರ್ಭ ಪ್ರತ್ಯಕ್ಷವಾಗಿ ನಂತರ ಕಣ್ಮರೆಯಾಗುತ್ತಾರೆ. ಕಳೆದ ಚುನಾವಣೆಯಲ್ಲಿ ದ್ವಿತೀಯ ಪ್ರಾಶಸ್ತ್ಯದ ಮತಗಳಿಂದ ಗೆಲುವು ಸಾಧಿಸಿದ್ದಾರೆ. ಒಪಿಎಸ್ ಮರು ಜಾರಿಗೆ ಒತ್ತಾಯಿಸಿ ನಡೆದ ಹೋರಾಟಕ್ಕೆ ಅವರು ಸ್ಪಂದಿಸಲಿಲ್ಲ. ಬಿಜೆಪಿ ಅಭ್ಯರ್ಥಿ ಎದುರಿಸಲು ಮತದಾರರು ಸಜ್ಜಾಗಿದ್ದಾರೆ. ❖

ವಿಟಿಯು ಬೆಂಗಳೂರು ಪ್ರಾದೇಶಿಕ ಕಚೇರಿಯಲ್ಲಿ ಸ್ಥಾಪನೆ– ಕುಲಪತಿ ಪ್ರೊ. ಎಸ್‌. ವಿದ್ಯಾಶಂಕರ್

ಟೆಲಿಕಾಂ ಸೆಂಟರ್ ಆಫ್ ಎಕ್ಸಲೆನ್ಸ್ ಶೀಘ್ರ ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ‘ಬೆಂಗಳೂರು ಪ್ರಾದೇಶಿಕ ಕಚೇರಿಯಲ್ಲಿ ಉನ್ನತಮಟ್ಟದ ಟೆಲಿಕಾಂ ಸೆಂಟರ್ ಆಫ್ ಎಕ್ಸಲೆನ್ಸ್ ಆರಂಭಗೊಳ್ಳಲಿದ್ದು, ದೇಶದಲ್ಲಿ ಮೊಟ್ಟ ಮೊದಲಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಈ ಸೌಲಭ್ಯ ನೀಡುವ ಹೆಗ್ಗಳಿಕೆಗೆ ಪಾತ್ರವಾಗಲಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್ ಹೇಳಿದರು.

‘ವಿಶ್ವವಿದ್ಯಾಲಯದಿಂದ ಕೆಲ ಕೆಲಸಗಳು ಬಾಕಿಯಿದ್ದು, ಎಲ್ಲವೂ ನಿರೀಕ್ಷೆಯಂತೆ ನಡೆದರೆ ಜೂನ್ 24ರಂದು ಆರಂಭಗೊಳ್ಳಲಿದೆ’ ಎಂದು ಇಲ್ಲಿನ ಸಾತಗಳ್ಳಿಯ ಪ್ರಾದೇಶಿಕ ಕಚೇರಿಯಲ್ಲಿ ಶನಿವಾರ ತಿಳಿಸಿದರು.

ಇದಕ್ಕೂ ಮುನ್ನ ಕುವೆಂಪು ಮಲ್ಟಿಮೀಡಿಯಾ ಸೆಂಟರ್, ಭೌತಶಾಸ್ತ್ರ, ರಸಾಯನಶಾಸ್ತ್ರ, ಎಂಬಿಎ ವಿಭಾಗದ ಡಿಜಿಟಲ್ ಮಾರ್ಕೆಟಿಂಗ್ ಪ್ರಯೋಗಾಲಯವನ್ನು ಉದ್ಘಾಟಿಸಿದರು.

ಮುಖ್ಯಾಂಶಗಳು
- ಸಂಶೋಧನಾ ಕ್ಲಸ್ಟರ್ ಆರಂಭಕ್ಕೆ ಯೋಜನೆ
- ವಿವಿಧ ಕ್ಷೇತ್ರಗಳ 10 ಪರಿಣತರ ತಂಡ ರಚನೆ
- ಆಡಳಿತ, ಶಿಕ್ಷಣಕ್ಕೆ ವಿಟಿಯು ಆದ್ಯತೆ

‘ವಿಶ್ವವಿದ್ಯಾಲಯದಿಂದ ಸಂಶೋಧನೆ ಮತ್ತು ಆಡಳಿತಾತ್ಮಕ ಅಭಿವೃದ್ಧಿಗೆ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಉತ್ತಮ ದೂರದೃಷ್ಟಿಯುಳ್ಳವರ ಮುಂದಾಳತ್ವದಲ್ಲಿ ನಾಲ್ಕು ಸಂಶೋಧನಾ ಕ್ಲಸ್ಟರ್ ಆರಂಭಿಸಲಾಗುವುದು. ಕಂಪ್ಯೂಟರ್ ಸೈನ್ಸ್, ಮೆಕಾನಿಕಲ್, ಸಿವಿಲ್, ಎಲೆಕ್ಟ್ರಾನಿಕ್ ವಿಭಾಗದಲ್ಲಿ ಕ್ಲಸ್ಟರ್ ಆರಂಭಗೊಳ್ಳಲಿದ್ದು, ಜೂನ್ 15ರಂದು ಅನುಮತಿ ದೊರಕಲಿದೆ. ತಲಾ ₹25 ಲಕ್ಷ ಮೂಲಧನ ನೀಡಲಾಗುವುದು’ ಎಂದು ಮಾಹಿತಿ ನೀಡಿದರು.

ಮೈಸೂರಿನ ಸಾತಗಳ್ಳಿಯ ವಿಟಿಯು ಪ್ರಾದೇಶಿಕ ಕಚೇರಿಯಲ್ಲಿ ಶನಿವಾರ ಉದ್ಘಾಟನೆಗೊಂಡ ಕುವೆಂಪು ಮಲ್ಟಿಮೀಡಿಯಾ ಸೆಂಟರ್ ಕಾರ್ಯಾಚರಣೆಯನ್ನು ಪ್ರೊ.ಎಸ್. ವಿದ್ಯಾಶಂಕರ್, ಪ್ರೊ.ಎನ್.ಕೆ.ಲೋಕನಾಥ್, ಬಿ.ಇ.ರಂಗಸ್ವಾಮಿ, ಟಿ.ಎನ್.ಶ್ರೀನಿವಾಸ, ಎಂ.ಎ.ಸಪ್ನಾ, ಟಿ.ಪಿ.ರೇಣುಕಾ ಮೂರ್ತಿ ವೀಕ್ಷಿಸಿದರು

‘ಸಂಶೋಧನೆ ಗುಣಮಟ್ಟವನ್ನು ಹೆಚ್ಚಿಸಲು ವಿವಿಧ ಕ್ಷೇತ್ರಗಳ 10 ಪರಿಣತರ ತಂಡವನ್ನು ರಚಿಸಲಾಗುತ್ತಿದೆ. ನಾನು ಅಧಿಕಾರ ವಹಿಸಿಕೊಂಡ ಒಂದೂವರೆ ವರ್ಷದ ಅವಧಿಯಲ್ಲಿ 2,500 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ನೀಡಲಾಗಿದೆ. ಪ್ರಾಯೋಗಿಕ ಪರೀಕ್ಷೆಗಳು ಮುಗಿದ 2 ಗಂಟೆಯಲ್ಲೇ ಫಲಿತಾಂಶ ನೀಡುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ವಾಟ್ಸ್‌ಆ್ಯಪ್‌ನಲ್ಲಿಯೇ ಫಲಿತಾಂಶ ಲಭ್ಯವಾಗಲಿದೆ’ ಎಂದು ಹೇಳಿದರು.

‘ಎಂ.ಟೆಕ್‌ಗೆ ಐಐಎಸ್‌ಸಿ ಮಾದರಿ’

‘ಎಂ.ಟೆಕ್ ಅಧ್ಯಯನಕ್ಕೆ ಐಐಎಸ್‌ಸಿ ಮಾದರಿಯನ್ನು ಅನುಸರಿಸಲು ಸಿದ್ಧರಾಗಿದ್ದು, ಅದಕ್ಕಾಗಿ 10 ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ, 10 ಎನ್‌ಐಟಿ, ಐಐಟಿಗಳ ಪಠ್ಯಕ್ರಮಗಳನ್ನು ಪರಿಶೀಲಿಸಲಾಗಿದೆ’ ಎಂದು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ತಿಳಿಸಿದರು.

‘ಎಂ.ಟೆಕ್ ನಲ್ಲಿ ಮೆಕಾನಿಕಲ್, ಸಿವಿಲ್, ಎಲೆಕ್ಟ್ರಾನಿಕ್ ಮತ್ತು ಕಂಪ್ಯೂಟರ್ ಸೈನ್ಸ್ ವಿಭಾಗಗಳ ಪ್ರವೇಶಾತಿ ಮಾತ್ರ ನೀಡಲಿದ್ದು, ಉಳಿದ ವಿಷಯಗಳನ್ನು ಅದರೊಳಗೆ ಕಲಿಸಲಾಗುತ್ತದೆ’ ಎಂದರು.

30ರೊಳಗೆ ರ‍್ಯಾಂಕಿಂಗ್: ‘ವಿಶ್ವವಿದ್ಯಾಲಯವು ಎಂಜಿನಿಯರಿಂಗ್ ಕಾಲೇಜುಗಳ ಪೈಕಿ 52ನೇ ಸ್ಥಾನ, ವಿಶ್ವವಿದ್ಯಾಲಯಗಳ ಪೈಕಿ 63, ಮ್ಯಾನೇಜ್‌ಮೆಂಟ್ ಅಧ್ಯಯನದಲ್ಲಿ 95, ಒಟ್ಟಾರೆ ರ‍್ಯಾಂಕಿಂಗ್‌ನಲ್ಲಿ 93 ನೇ ಸ್ಥಾನದಲ್ಲಿದೆ. ಈ ವರ್ಷ ಎಂಜಿನಿಯರಿಂಗ್ ವಿಭಾಗದಲ್ಲಿ 30ರೊಳಗೆ ರ‍್ಯಾಂಕಿಂಗ್ ತರುವ ಉದ್ದೇಶ ಹೊಂದಿದ್ದೇವೆ’ ಎಂದರು.

ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ‘ವಿಟಿಯು ವಿದ್ಯಾರ್ಥಿಗಳಿಗೆ ಸಾಕಷ್ಟು ಸೌಲಭ್ಯಗಳನ್ನು ನೀಡುತ್ತಿದ್ದು, ಉತ್ತಮ ಸಾಧನೆಯತ್ತ ಯುವಜನತೆ ಮುಂದಾಗಬೇಕು. ಗುರಿಯನ್ನು ಹೊಂದಿ, ಪರಿಶ್ರಮ ಹಾಕಿದರೆ ಯಶಸ್ಸು ಖಂಡಿತ ದೊರೆಯುತ್ತದೆ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿಟಿಯು ಕುಲಸಚಿವ ಬಿ.ಇ.ರಂಗಸ್ವಾಮಿ, ಪರೀಕ್ಷಾಂಗ ಕುಲಸಚಿವ ಟಿ.ಎನ್. ಶ್ರೀನಿವಾಸ, ಹಣಕಾಸು ಅಧಿಕಾರಿ ಎಂ.ಎ. ಸಪ್ನಾ, ಪ್ರಾದೇಶಿಕ ಕಚೇರಿ ನಿರ್ದೇಶಕರಾದ ಟಿ.ಪಿ. ರೇಣುಕಾ ಮೂರ್ತಿ ಅವರು ಇದ್ದರು.

ಕಾಹೇರ್ ಘಟಿಕೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಇಲ್ಲಿನ ಕೆಎಲ್‌ಇ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಷನ್ ಆ್ಯಂಡ್ ರಿಸರ್ಚ್‌ನ (ಕಾಹೇರ್) 14ನೇ ಘಟಿಕೋತ್ಸವ ಮೇ 27ರಂದು ಬೆಳಿಗ್ಗೆ 11.30ಕ್ಕೆ ನಡೆಯಲಿದೆ’ ಎಂದು ಕಾಹೇರ್ ಕುಲಪತಿ, ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, ‘ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಆಗಮಿಸುವರು. ರಾಜ್ಯಪಾಲ ಥಾವರಚಂದ್ ಗೆಹ್ಲೋತ್ ಘಟಿಕೋತ್ಸವ ಭಾಷಣ ಮಾಡುವರು. ಪ್ರಭಾಕರ ಕೋರೆ ಅಧ್ಯಕ್ಷತೆ ವಹಿಸುವರು’ ಎಂದು ಹೇಳಿದರು.

‘ಕಾಹೇರ್ ಇತಿಹಾಸದಲ್ಲಿ ಇದೇ ಮೊದಲ ಬಾರಿ ‘ಡಾಕ್ಟರ್ ಆಫ್ ಸೈನ್ಸ್’ ಗೌರವ ಡಾಕ್ಟರೇಟ್ ಅನ್ನು ಯುಎಸ್‌ಎದ ಫಿಲಾಡೆಲ್ಫಿಯಾದ ಥಾಮಸ್ ಜೆಫರ್ಸನ್ ವಿಶ್ವವಿದ್ಯಾಲಯದ ವೈಸ್ ಪ್ರೊವೋಸ್ಟ್ ಡಾ.ರಿಚರ್ಡ್ ಜಾಕೋಬ್ ಡರ್ಮನ್ ಅವರಿಗೆ ಪ್ರದಾನ ಮಾಡಲಾಗುವುದು. 27 ವರ್ಷಗಳಿಂದ ಅವರು ಸಂಶೋಧನೆಯಲ್ಲಿ ತೊಡಗಿದ್ದಾರೆ. ಕಳೆದ ಏಳು ವರ್ಷಗಳಿಂದ ಕಾಹೇರ್ ಸಹಯೋಗದಲ್ಲಿ ಮಹಿಳೆಯರು ಮತ್ತು ಮಕ್ಕಳಲ್ಲಿ ಕಂಡುಬರುವ ರಕ್ತಹೀನತೆ ಬಗ್ಗೆ ಸಂಶೋಧನೆ ನಡೆಸಿದ್ದು, ಜೂನ್ 1ರಂದು ಕೇಂದ್ರಕ್ಕೆ ವರದಿ ಸಲ್ಲಿಸಲಿದ್ದಾರೆ’ ಎಂದರು.

‘ಈ ಸಲದ ಘಟಿಕೋತ್ಸವದಲ್ಲಿ 30 ಪಿಎಚ್‌.ಡಿ, 13 ಪೋಸ್ಟ್ ಡಾಕ್ಟರಲ್ (ಡಿಎಂ/ಎಂ.ಸಿಎಚ್), 644 ಸ್ನಾತಕೋತ್ತರ ಪದವಿ, 1,023 ಪದವಿ, 9 ಸ್ನಾತಕೋತ್ತರ ಡಿಪ್ಲೊಮಾ, 4 ಡಿಪ್ಲೊಮಾ, 5 ಫೆಲೋಷಿಪ್, 11 ಸರ್ಟಿಫಿಕೇಟ್ ಕೋರ್ಸ್ ಸೇರಿದಂತೆ ಆರೋಗ್ಯ ವಿಜ್ಞಾನದ ವಿವಿಧ ವಿಭಾಗಗಳಲ್ಲಿ 1,739 ಪದವಿ ಪ್ರದಾನ ಮಾಡಲಾಗುವುದು. ಶೈಕ್ಷಣಿಕ ಸಾಧನೆ ಮೆರೆದ 45 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಲಾಗುವುದು’ ಎಂದು ಹೇಳಿದರು.

‘ಕಾಹೇರ್ ಡಿಜಿಟಲ್ ಆಧಾರಿತವಾದ ಕಾಗದ ರಹಿತ ಪರೀಕ್ಷೆಗಳನ್ನು ಸಂಘಟಿಸಿ, 24 ತಾಸಿನೊಳಗೆ ಫಲಿತಾಂಶ ಪ್ರಕಟಿಸುತ್ತಿದೆ. ವಿದ್ಯಾರ್ಥಿಗಳು ಇ-ಪ್ಯಾಡ್‌ಗಳಲ್ಲಿ ಪರೀಕ್ಷೆ ಬರೆಯುತ್ತಿದ್ದಾರೆ. ಇದರಲ್ಲಿ ವಿಡಿಯೊ ಪ್ರಶ್ನೆಗಳನ್ನು ಕೇಳಲು ಇ-ಪ್ಯಾಡ್‌ಗಳು ಅನುಕೂಲ ಮಾಡಿಕೊಡುತ್ತಿವೆ. ಶೇ 80ರಷ್ಟು ವಿದ್ಯಾರ್ಥಿಗಳು ಈ ಬಗ್ಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದಾರೆ’ ಎಂದು ತಿಳಿಸಿದರು.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

ಉತ್ತರ ಪ್ರದೇಶದ ಅಯೋಧ್ಯೆ ಸಮೀಪ ಅಪಘಾತ

ಕಲಬುರಗಿಯ ಮೂವರ ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಉತ್ತರ ಪ್ರದೇಶದ ಪ್ರಯಾಗರಾಜ್ ಜಿಲ್ಲೆಯ ಹೆದ್ದಾರಿಯಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿದ ಅಪಘಾತದಲ್ಲಿ ಅಯೋಧ್ಯೆಗೆ ತೆರಳುತ್ತಿದ್ದ ಕಲಬುರಗಿಯ ಮೂವರು ಯಾತ್ರಿಕರು ಮೃತಪಟ್ಟಿದ್ದು, 11 ಮಂದಿ ಗಾಯಗೊಂಡಿದ್ದಾರೆ.

ಓಂ ನಗರದ ನಿವಾಸಿಗಳಾದ ಶಿವರಾಜ್, ತಂಗೆಮ್ಮ ಸೇರಿ ಮೂವರು ಮೃತಪಟ್ಟಿದ್ದು, ಇನ್ನೊಬ್ಬರ ಹೆಸರು ತಿಳಿದುಬಂದಿಲ್ಲ ಎಂದು ಕೊತ್ವಾಲಿ ಠಾಣೆಯ ಪೊಲೀಸರು ತಿಳಿಸಿದ್ದಾರೆ.

‘ಯಾತ್ರಿಗಳಿದ್ದ ಟಿ.ಟಿ ವಾಹನ ಅಯೋಧ್ಯೆಯತ್ತ ಹೋಗುತ್ತಿತ್ತು. ಪ್ರಯಾಗರಾಜ್ ಹೆದ್ದಾರಿಯಲ್ಲಿ ಎದುರಿಗೆ ಬರುತ್ತಿದ್ದ ಲಾರಿಗೆ ಉಜ್ಜಿಕೊಂಡು ಹೋಗಿದೆ. ಪರಿಣಾಮ ಟಿಟಿಯ ಬಲಭಾಗ ಜಖಂಗೊಂಡಿದ್ದು, ಮೂವರಿಗೆ ಗಂಭೀರ ಗಾಯವಾಗಿದ್ದು, ಚಿಕಿತ್ಸೆಗೆ ಸ್ಪಂದಿಸದೇ ಆಸ್ಪತ್ರೆಯಲ್ಲಿ ಇಬ್ಬರು ಮೃತಪಟ್ಟರು’ ಎಂದು ಬಿಕಾಪುರ್ ಠಾಣೆಯ ಇನ್‌ಸ್ಪೆಕ್ಟರ್ ಲಾಲ್‌ಚಂದ್ರ ಸರೋರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ನಾಲ್ಕೈದು ದಿನಗಳ ಹಿಂದೆಯೇ ರೈಲಿನ ಮುಖಾಂತರ ವಾರಣಾಸಿಗೆ ತೆರಳಿದ್ದರು. ಅಯೋಧ್ಯೆಯ 30 ಕಿ.ಮೀ. ಅಂತರದಲ್ಲಿ ಅಪಘಾತ ಸಂಭವಿಸಿದ್ದು, ಮೂರ್ನಾಲ್ಕು ಜನ ಮೃತಪಟ್ಟಿದ್ದಾಗಿ ಮಾಹಿತಿ ಇದೆ. ಆದರೆ, ಅವರ ಹೆಸರು ಸ್ಪಷ್ಟವಾಗಿ ಗೊತ್ತಾಗಿಲ್ಲ. ಆಸ್ಪತ್ರೆಗೆ ಹೋದ ಬಳಿಕವೇ ತಿಳಿಯಲಿದೆ’ ಎಂದು ಗಾಯಾಳು ಸಂಬಂಧ ನಿಜಲಿಂಗಪ್ಪ ಹೇಳಿದರು.

ವಸಂತೋತ್ಸವ
ಭಾರತೀಯ ವಿದ್ಯಾಭವನದ ಖಿಂಚಾ ಸಭಾಂಗಣದಲ್ಲಿ ಶನಿವಾರ ಇನ್ಫೋಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ ಆಯೋಜಿಸಿದ ಏಳು ದಿನಗಳ ಸಾಂಸ್ಕೃತಿಕ ಹಬ್ಬ ‘ವಸಂತೋತ್ಸವ’ ದ ಮೊದಲ ದಿನ ಮಿಥುನ್ ಮತ್ತು ತಂಡದವರು ‘ವಸಂತೋತ್ಸವ ವೈಭವ’ ಎಂಬ ಭರತನಾಟ್ಯ ಪ್ರದರ್ಶನ ನೀಡಿದರು
–ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಚಿತ್ರಾವಳಿ

ಕಬ್ಬನ್ ಪೇಂಟ್ಸ್ ವಾಷಿಕೋತ್ಸವದ ಪ್ರಯುಕ್ತ ನಗರದ ರಂಗೋಲಿ ಮೆಟ್ರೊ ಆರ್ಟ್ ಸೆಂಟರ್‌ನಲ್ಲಿ ನಡೆದ ವಿವಿಧ ಕಲಾವಿದರ ಚಿತ್ರಕಲಾ ಪ್ರದರ್ಶನವನ್ನು ಕಲಾಪ್ರೇಮಿಗಳು ವೀಕ್ಷಿಸಿದರು

ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಕೆಟ್ಟು ನಿಂತ 112 ಪೊಲೀಸ್ ಹೊಯ್ಸಳ ಕಾರನ್ನು ಸಾರ್ವಜನಿಕರು ಮತ್ತು ಪೊಲೀಸರು ತಳ್ಳುತ್ತಿರುವುದು ಕಂಡು ಬಂತು

ನಗರದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದಲ್ಲಿ ನಡೆದ ಸಾಂಸ್ಕೃತಿಕ ಉತ್ಸವ ‘ಇನ್ವಿನ್ಸಿಯಾ–2024’ದಲ್ಲಿ ನಟಿ ಧನ್ಯ ರಾಮ್‌ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಪ್ರೆಸಿಡೆನ್ಸಿ ಫೌಂಡೇಶನ್ ಅಧ್ಯಕ್ಷೆ ಕೌಸರ್ ನಿಸಾರ್ ಅಹಮದ್ ಹಾಗೂ ವಿಶ್ವವಿದ್ಯಾಲಯದ ಉಪಾಧ್ಯಕ್ಷ ಸಲ್ಮಾನ್ ಅಹ್ಮದ್ ಪಾಲ್ಗೊಂಡಿದ್ದರು
–ಪ್ರಜಾವಾಣಿ ಚಿತ್ರಗಳು

ಹೆದ್ದಾರಿಯಲ್ಲಿ ಸಾಗಿದ ಕಾಡಾನೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ತಾಲ್ಲೂಕಿನ ಕೆಂಗಲ್ ಬಳಿ ಶುಕ್ರವಾರ ರಾತ್ರಿ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಒಂದು ಕಾಡಾನೆ ಹಾಗೂ ಎರಡು ಮರಿ ಆನೆಗಳು ಕಾಣಿಸಿಕೊಂಡಿವೆ.

ಕಾಡಾನೆಯು ಕೆಂಗಲ್ ಆಸುಪಾಸಿನ ಕಾಡಿನಿಂದ ಮತ್ತೊಂದು ಕಡೆಗೆ ಹೋಗಲು ಹೆದ್ದಾರಿ ದಾಟಿದೆ. ಇದನ್ನು ನೋಡಿದ ಕೆಲವರು ಈ ದೃಶ್ಯವನ್ನು ತಮ್ಮ ಮೊಬೈಲ್‌ನಲ್ಲಿ ಸೆರೆಹಿಡಿದಿದ್ದಾರೆ.

ಆನೆ ತನ್ನ ಎರಡು ಮರಿ ಜತೆ ಹೆದ್ದಾರಿಯಲ್ಲಿ ಸ್ವಲ್ಪ ದೂರ ಸಾಗಿ ನಂತರ ಕುವೆಂಪು ಕಾಲೇಜು ಬಳಿಯಿಂದ ಕೆಮ್ಮಣ್ಣುಗುಡ್ಡೆ ಪ್ರದೇಶದತ್ತ ಸಾಗಿದೆ.

ಗುರುವಾರ ತಡರಾತ್ರಿ ಆನೆಯೊಂದು ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಕಾಣಿಸಿಕೊಂಡಿತ್ತು ಎಂದು ಸ್ಥಳೀಯ ಗ್ರಾಮಸ್ಥರು ತಿಳಿಸಿದ್ದಾರೆ.

ಡಿಕೆಶಿ ಸಿ.ಎಂ ಆಗಲಿ –ಪುಟ್ಟಣ್ಣ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ‘ಹಿತ್ತಲ ಬಾಗಿಲಿನಿಂದ ಯಾರ‍್ಯಾರೊ ಬಂದು ಸಿ.ಎಂ ಆಗಿದ್ದಾರೆ. ಅಂತಹದ್ದರಲ್ಲಿ ಪಕ್ಷಕ್ಕಾಗಿ ಕಷ್ಟಪಟ್ಟಿರುವ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕು. ನಾಳೆಯೇ ಆಗಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಈ ವಿಷಯದಲ್ಲಿ ನಾನು ಸದಾ ಅವರ ಪರವಿದ್ದೇನೆ’ ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಹೇಳಿದರು.

ಬೆಂಗಳೂರು ಪದವೀಧರರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮೋಜಿಗೌಡ ಪರವಾಗಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಶಿವಕುಮಾರ್ ಅವರಿಗೆ ಶೇ ನೂರರಷ್ಟು ಸಿ.ಎಂ ಅವಕಾಶವಿದೆ. ಅವರು ಆಗಬೇಕು ಕೂಡ’ ಎಂದು ಅಭಿಪ್ರಾಯಪಟ್ಟರು.

‘ಯಾರ‍್ಯಾರನ್ನೊ ಸಿ.ಎಂ ಮಾಡಿದ್ದೇವೆ. ನಮ್ಮ ಜಿಲ್ಲೆಯ ಮಗ, ಅದರಲ್ಲೂ ನಮ್ಮವರಾದ ಶಿವಕುಮಾರ್ ಮುಖ್ಯಮಂತ್ರಿಯಾಗಬೇಕು ಎಂಬುದು ನನ್ನ ವೈಯಕ್ತಿಕ ಆಸೆ. ನನ್ನ ಅಥವಾ ಐದಾರು ಮಂದಿಯ ತೀರ್ಮಾನದಿಂದ ಶಿವಕುಮಾರ್ ಮುಖ್ಯಮಂತ್ರಿ ಆಗುವುದಿಲ್ಲ. ಈ ಕುರಿತು ನಿರ್ಧಾರ ಪಕ್ಷ ಹಾಗೂ ಹೈಕಮಾಂಡ್‌ಗೆ ಬಿಟ್ಟಿದ್ದು’ ಎಂದರು.

‘ಈ ಹೇಳಿಕೆ ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿದೆಯೇ’ ಎಂಬ ಪ್ರಶ್ನೆಗೆ, ‘ಸಿದ್ದರಾಮಯ್ಯ ಅವರು ಹೋರಾಟದ ಮೂಲಕ ಮುಖ್ಯಮಂತ್ರಿಯಾಗಿದ್ದಾರೆ. ಉಳಿದ ಎಷ್ಟೋ ಮಂದಿ ಹಿತ್ತಲ ಬಾಗಿಲಿನಿಂದ ಬಂದು ಆ ಹುದ್ದೇಗೇರಿದ್ದಾರೆ’ ಎಂದು ಸಮಜಾಯಿಷಿ ನೀಡಿದರು.

ದೇವಸ್ಥಾನ ಪ್ರವೇಶ: 2 ಗುಂಪುಗಳ ಮಧ್ಯೆ ಘರ್ಷಣೆ

ಪ್ರಜಾವಾಣಿ ವಾರ್ತೆ

ಕಂಪ್ಲಿ: ದೇವಸ್ಥಾನ ಪ್ರವೇಶಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಹೊನ್ನಳ್ಳಿ ಗ್ರಾಮದಲ್ಲಿ ಶನಿವಾರ ಪರಿಶಿಷ್ಟ ಜಾತಿಯ ಕೆಲವರು ಮತ್ತು ಪರಿಶಿಷ್ಟ ಪಂಗಡದ ಕೆಲ ಮಂದಿಯ ನಡುವೆ ಘರ್ಷಣೆ, ವಾಗ್ವಾದ ನಡೆದಿದೆ.

ಪರಿಶಿಷ್ಟ ಜಾತಿಗೆ ಸೇರಿದ ಎಚ್. ಹುಲುಗಪ್ಪ ಎಂಬುವವರು ಶನಿವಾರ ಬೆಳಿಗ್ಗೆ ಗ್ರಾಮದ ಆಂಜನೇಯ ದೇಗುಲಕ್ಕೆ ತೆರಳಿದ್ದರು. ಆಗ ದೇವಸ್ಥಾನ ಆವರಣ ಶುಚಿಗೊಳಿಸುತ್ತಿದ್ದ ಪೂಜಾರಿ ವಿಶಾಲಾಕ್ಷಿ, ಸ್ವಲ್ಪ ಕಾಲ ತಡೆದು ಬರುವಂತೆ ಹುಲುಗಪ್ಪ ಅವರಿಗೆ ತಿಳಿಸಿದರು ಎನ್ನಲಾಗಿದೆ.

‘ನಾನು ದೇವಸ್ಥಾನ ಪ್ರವೇಶಿಸುವುದನ್ನು ಉದ್ದೇಶಪೂರ್ವಕವಾಗಿ ತಡೆದಿದ್ದೀರಿ’ ಎಂದು ಆಕ್ರೋಶಗೊಂಡ ಹುಲುಗಪ್ಪ, ಪೂಜಾರಿಯನ್ನು ನಿಂದಿಸಿದರು ಎನ್ನುವ ಆರೋಪ ಕೇಳಿಬಂದಿದೆ.


ಕಂಪ್ಲಿ ತಾಲ್ಲೂಕು ಹೊನ್ನಳ್ಳಿ ಗ್ರಾಮದಲ್ಲಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದ್ದು, ಘಟನೆ ನಡೆದ ಆಂಜನೇಯ ದೇವಸ್ಥಾನದ ಬಳಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ

ವಿಷಯ ಗ್ರಾಮದಲ್ಲಿ ಹರಡುತ್ತಿದ್ದಂತೆ ಎರಡೂ ಸಮುದಾಯಗಳ ನಡುವೆ ಮಾತಿನ ಚಕಮಕಿ ನಡೆದು ಕೆಲವರ ಮೇಲೆ ಹಲ್ಲೆಯೂ ನಡೆಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ವಿಷಯ ತಿಳಿದ ಕುರುಗೋಡು ಸಿಪಿಐ ವಿಶ್ವನಾಥ ಹಿರೇಗೌಡರ್, ಕುಡುತಿನಿ ಪಿಎಸ್‌ಐ ಹುಲಿಗೇಶ ಎಚ್. ಓಂಕಾರ್, ಕುರುಗೋಡು ಪಿಎಸ್‌ಐ ಸುಪ್ರೀತ್ ಸಿಬ್ಬಂದಿಯೊಂದಿಗೆ ಧಾವಿಸಿ ಗ್ರಾಮದಲ್ಲಿ ಬಂದೋಬಸ್ತ್ ಕೈಗೊಂಡಿದ್ದಾರೆ.

ಕುಡಿತಿನಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒತ್ತುವರಿ ತೆರವಿಗೆ ಎಎಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರತಿ ಮಳೆಗಾಲದಲ್ಲೂ ನಗರದಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರುತ್ತಿದೆ. ಯಾವುದೇ ಸರ್ಕಾರವು ರಾಜಕಾಲುವೆ ಒತ್ತುವರಿ ತೆರವಿಗೆ ಗಮನಹರಿಸುವುದಿಲ್ಲ. ಒತ್ತುವರಿ ತೆರವು ಮಾಡದೇ ಇರುವುದು ಸಮಸ್ಯೆಗೆ ಕಾರಣ’ ಎಂದು ಆಮ್ ಆದ್ಮಿ ಪಾರ್ಟಿ ರಾಜ್ಯ ಸಂಘಟನಾ ಕಾರ್ಯದರ್ಶಿ ಮೋಹನ್ ದಾಸರಿ ಆರೋಪಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ಪಕ್ಷದ ರಾಜ್ಯ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಅವರು ಈಚೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ಪತ್ರ ಬರೆದು ಅತಿವೃಷ್ಟಿಯಿಂದ ಸಮಸ್ಯೆಯಾಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳುವಂತೆ ಕೋರಿದ್ದರು. ಇದಕ್ಕೆ ಇದುವರೆಗೂ ಪ್ರತಿಕ್ರಿಯೆ ಬಂದಿಲ್ಲ. ಇದು ಸರ್ಕಾರದ ನಿರ್ಲಕ್ಷ್ಯತನದ ಪರಮಾವಧಿ’ ಎಂದು ಟೀಕಿಸಿದರು.

‘ಬಿಜೆಪಿ ಸರ್ಕಾರ ಇದ್ದಾಗ ಪ್ರವಾಹ ಪರಿಸ್ಥಿತಿ ಉಂಟಾಗಿತ್ತು. ಈಗ ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ ಯಾವುದೇ ಪ್ರಯೋಜನ ಆಗಿಲ್ಲ. ಬ್ರ್ಯಾಂಡ್ ಬೆಂಗಳೂರು ಕತೆ ಏನಾಯಿತು ಎಂಬುದು ಗೊತ್ತಿಲ್ಲ. ಒಂದು ವರ್ಷದಿಂದ ನಗರದಲ್ಲಿ ಯಾವುದೇ ಕೆಲಸ ಆಗುತ್ತಿಲ್ಲ. ಬೆಂಗಳೂರಿನ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರ್ಕಾರ ವಿಫಲವಾಗಿದೆ. ಆಗದಿದ್ದರೆ ಅಧಿಕಾರದಿಂದ ನಿರ್ಗಮಿಸಲಿ‘ ಎಂದರು. ನಗರ ಘಟಕದ ಅಧ್ಯಕ್ಷ ಸತೀಶ್ ಕುಮಾರ್, ‘ಮಳೆಯಿಂದ ಸಾಕಷ್ಟು ಸಮಸ್ಯೆ ಆಗುತ್ತಿದ್ದರೂ ಕ್ರಮ ಕೈಗೊಳ್ಳುತ್ತಿಲ್ಲ’ ಎಂದರು.

ನಾಳೆಯಿಂದ ಬೆಂಗಳೂರು- ಕಲಬುರಗಿ ನಡುವೆ ವಿಶೇಷ ರೈಲು

ಬೆಂಗಳೂರು: ಬೇಸಿಗೆ ಸಮಯದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ಕಡಿಮೆಗೊಳಿಸಲು ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಕಲಬುರಗಿ ನಗರ ನಡುವೆ ವಾರಕ್ಕೆ ಮೂರು ಬಾರಿಯಂತೆ (ಟ್ರೈ-ವೀಕ್ಲಿ) ಒಂದು ತಿಂಗಳು ಬೇಸಿಗೆ ವಿಶೇಷ ರೈಲು ಸಂಚರಿಸಲಿದೆ. ಮೇ 27ಕ್ಕೆ ಮೊದಲ ರೈಲು ಹೊರಡಲಿದೆ.

ಬೆಂಗಳೂರಿನ ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ (ಎಸ್‌ಎಂವಿಟಿ) ಸೋಮವಾರ, ಬುಧವಾರ, ಗುರುವಾರ ರಾತ್ರಿ 11.50ಕ್ಕೆ ರೈಲು ಹೊರಡಲಿದ್ದು, ಮರುದಿನ ಮಧ್ಯಾಹ್ನ 12.30ಕ್ಕೆ ಕಲಬುರಗಿ ನಿಲ್ದಾಣವನ್ನು ತಲುಪಲಿದೆ.

ಕಲಬುರಗಿ ನಿಲ್ದಾಣದಿಂದ ಪ್ರತಿ ಮಂಗಳವಾರ, ಗುರುವಾರ ಮತ್ತು ಶುಕ್ರವಾರ ಸಂಜೆ 4.50ಕ್ಕೆ ಹೊರಟು ನಾಗಸಮುದ್ರ ಮಾರ್ಗದ ಮೂಲಕ ಮರುದಿನ ಬೆಳಿಗ್ಗೆ 4.45ಕ್ಕೆ ಬೆಂಗಳೂರು ಎಸ್‌ಎಂವಿಟಿಗೆ ತಲುಪಲಿದೆ. ಯಲಹಂಕ, ಧರ್ಮಾವರಂ, ಅನಂತಪುರ, ಗುಂತಕಲ್, ಆದೋನಿ, ಮಂತ್ರಾಲಯಂ ರೋಡ್, ರಾಯಚೂರು, ಕೃಷ್ಣಾ, ಯಾದಗಿರಿ, ವಾಡಿ ಮತ್ತು ಶಹಾಬಾದ್ ನಿಲ್ದಾಣಗಳಲ್ಲಿ ನಿಲುಗಡೆ ಇರಲಿದೆ ಎಂದು ನೈರುತ್ಯ ರೈಲ್ವೆಯ ಹೇಳಿಕೆ ತಿಳಿಸಿದೆ.

ಗ್ಯಾಂಗ್ ವಾರ್ ಮೂವರ ಬಂಧನ

ಉಡುಪಿ: ಉಡುಪಿ-ಮಣಿಪಾಲ ರಾಷ್ಟ್ರೀಯ ಹೆದ್ದಾರಿ ಮಧ್ಯೆ ಈಚೆಗೆ ನಡೆದ ಗ್ಯಾಂಗ್ ವಾರ್ ಘಟನೆ ಸಂಬಂಧ ಮೂವರನ್ನು ಬಂಧಿಸಲಾಗಿದೆ.

ಆಶಿಕ್, ರಖೀಬ್, ಸಕ್ಲೇನ್ ಬಂಧಿತರು. ಮೇ 18ರಂದು ನಡೆದಿದ್ದ ಗ್ಯಾಂಗ್ ವಾರ್ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ವಿಡಿಯೊ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡ ಉಡುಪಿ ಠಾಣೆ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

ಬಂಧಿತರಿಂದ ಎರಡು ಕಾರು, ಎರಡು ಬೈಕ್, ಡ್ರ್ಯಾಗರ್, ತಲವಾರು ಹಾಗೂ ಮಾರಕಾಸ್ತ್ರ ವಶಪಡಿಸಿಕೊಳ್ಳಲಾಗಿದೆ ಎಂದು ಎಸ್‌ಪಿ ಡಾ. ಕೆ. ಅರುಣ್ ಅವರು ಮಾಹಿತಿ ನೀಡಿದ್ದಾರೆ.

‘ಬಂಧಿತ ಆರೋಪಿಗಳು ಕಾಪುವಿನ ಗರುಡ ಗ್ಯಾಂಗಿನವರು ಎಂದು ತಿಳಿದುಬಂದಿದೆ. ಈ ಗ್ಯಾಂಗ್‌ನಲ್ಲಿ ಕಾಣಿಸಿಕೊಂಡ ವೈಮನಸ್ಸು ಹೊಡೆದಾಟಕ್ಕೆ ಕಾರಣ. ತಲೆಮರೆಸಿಕೊಂಡಿರುವ ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದ್ದಾರೆ.

ಟೀಕೆ: ರಾಜಾರೋಷವಾಗಿ ರೌಡಿಗಳು ಗ್ಯಾಂಗ್ ವಾರ್ ನಡೆಸಿರುವುದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ನಿದರ್ಶನ ಎಂದು ಶಾಸಕರಾದ ವಿ.ಸುನೀಲ್ ಕುಮಾರ್, ಯಶ್‌ಪಾಲ್ ಸುವರ್ಣ ಅವರು ಸೇರಿದಂತೆ ಹಲವು ಬಿಜೆಪಿ ನಾಯಕರು ಟೀಕಿಸಿದ್ದಾರೆ.

ಊರಿನಿಂದ ಊರಿಗೆ ಸಾಗುವ ಬದುಕು ಕಷ್ಟಕರ

ಕುರಿಗಾಹಿಗಳ ಜಗತ್ತಿನಲ್ಲಿ...

• ರಾಹುಲ ಬೆಳಗಲಿ

ಒಳನೋಟ

ದಾವಣಗೆರೆ ಜಿಲ್ಲೆಯ ಮಲ್ಲಶೆಟ್ಟಿಹಳ್ಳಿಯಲ್ಲಿ ಹಿಂಡಿನೊಂದಿಗೆ ಕುರಿಗಾಹಿ
ಸಂಗ್ರಹ ಚಿತ್ರ: ಅನೂಪ್ ರಾಘ.ಟಿ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಹುಬ್ಬಳ್ಳಿ: ಬಟ್ಟಬರಿ, ಔಷಧಿ, ಗಂಟ್‌ಮೂಟಿ ಕಟ್ಕೊಂಡ್ ಕುರಿ, ಮ್ಯಾಕಿಗಳ ಸಂಗಟ ಹೊಂಟ ಬಿಡ್ತೀವ್ರಿ. ಹೆಗಲ ಮ್ಯಾಲೆ ಕಂಬಳಿ, ಕೈಯಾಗ್ ಉದ್ದ ಕೋಲು, ತಪ್ಪಲ ಕೊಯ್ಯಾಕ ಕೋತ ಹಿಡ್ಕೊಂಡು ಹೊಂಟ್ರ 8–10 ತಿಂಗಳ್ ಮ್ಯಾಲ ಮನೀಗ್ ಬರೊದ್. ಮಳಿ, ಚಳಿ, ಗಾಳಿ, ಬಿಸಿಲಿದ್ರೇನಂತ್ ನಮಗೇನ್ ಆಗಂಗಿಲ್ರಿ. ಇರಾಕ್, ಮಲಗಾಕ್, ಅಡಗಿ ಮಾಡಾಕ್ ಜಾಗ ಬೇಕ್ ನೋಡ್ರಿ. ಅಲ್ಲೇ ಉಳಿದ್‌ಬಿಡ್ತೀವಿ. ನಮಗೇನ್ರಿ ಆಕಾಶವೇ ಚಾದರ್, ಭೂಮಿನಾ ಹಾಸಗಿ. ಒಂದ್ ಕಡಿ ಇರೋ ಮಂದಿ ಅಲ್ರಿ ನಾವ್...'

ಇದು ಕುರಿಗಾಹಿಗಳ ಬದುಕಿನ ಸಂಕ್ಷಿಪ್ತ ಚಿತ್ರಣ. ಹೆದ್ದಾರಿ ಬದಿ, ಕಾಡುಮೇಡು, ಜಮೀನುಗಳಲ್ಲಿ ಕುರಿ ಹಿಂಡು ಕಂಡರೆ, ಸಮೀಪದಲ್ಲಿ ಅಲೆಮಾರಿ ಕುರುಬರು ಇದ್ದಾರೆಂದೇ ಅರ್ಥ. ಅವರೊಂದಿಗೆ ಹರಟುತ್ತ ಅರ್ಧ ದಿನ ಕಳೆದರೂ ಸಾಕು, 'ಹೊಸ ಜಗತ್ತು' ಅನಾವರಣಗೊಳ್ಳುತ್ತದೆ. ಎಲ್ಲರೂ ವಿಜ್ಞಾನ, ತಂತ್ರಜ್ಞಾನ, ಆವಿಷ್ಕಾರದತ್ತ ಮುನ್ನುಗ್ಗಿ ಅದೇನೋ ಸಾಧಿಸುವ ಪೈಪೋಟಿಯಲ್ಲಿದ್ದರೆ, ಕುರಿಗಾಹಿಗಳು ಮಾತ್ರ 'ನಮ್ಮ ಪಾಲಿಗೆ ಕುರಿಗಳೇ ಜಗತ್ತು. ಅಷ್ಟು ಸಾಕು' ಎನ್ನುತ್ತಾರೆ.

ಬಳ್ಳಾರಿ, ಚಿತ್ರದುರ್ಗ, ಕೊಪ್ಪಳ, ದಾವಣಗೆರೆ, ಬೆಳಗಾವಿ, ಬಾಗಲಕೋಟೆ ಅಲ್ಲದೇ ಆಂಧ್ರ ಪ್ರದೇಶದ ಕುರಿಗಾಹಿಗಳು ಅಲ್ಲಲ್ಲಿ ಹೆಚ್ಚು ಕಾಣಸಿಗುತ್ತಾರೆ. ಕುರಿಗಳ ಹಿಂಡಿನೊಂದಿಗೆ ಬೆರಳೆಣಿಕೆಯಷ್ಟು ಮೇಕೆ, ಒಂದೆರಡು ನಾಯಿ, ಕುದುರೆ ಮತ್ತು ಕತ್ತೆ ಇರುತ್ತವೆ. ಬೇಕಾದ ವಸ್ತು, ಸರಂಜಾಮು ಹೊರಲು ಕುದುರೆ, ಕತ್ತೆಗಳು 'ಸಾಥ್' ಕೊಟ್ಟರೆ, ಕುರಿ, ಮೇಕೆಗಳ ಕಾವಲಿಗೆ ನಾಯಿಗಳು ಬೇಕು. ಇವೆಲ್ಲದರ ಮೇಲೆ ನಿಗಾ ಇಡಲು ಕುರಿಗಾಹಿಗಳು ಸದಾ ಎಚ್ಚರದಿಂದ ಇರಬೇಕು.

ಮುಖ್ಯವಾಹಿನಿಯಲ್ಲಿ ಬೆರೆಯಲು ಹಲವು ಅವಕಾಶಗಳಿದ್ದರೂ ಪಾರಂಪರಗತವಾಗಿ ಬಂದಿರುವ ಕುರಿ ಸಾಕಣೆಯನ್ನೇ ನೆಚ್ಚಿಕೊಂಡಿರುವ ಕುರಿಗಾಹಿಗಳ ಪಾಲಿಗೆ 'ಕುರಿಗಳೇ ಜೀವಾಳ'. ಕುರಿಗಳನ್ನು ಬೇಟೆಯಾಡಲು ಬರುವ ಚಿರತೆ, ತೋಳದಂತಹ ಕಾಡುಪ್ರಾಣಿಗಳು ತಮ್ಮ ಪೂರ್ವಜರು ಎಂಬ ನಂಬಿಕೆ ಅವರದ್ದು. ಅವು ಬೇಟೆಯಾಡಿ ಕುರಿಗಳನ್ನು ಒಯ್ದರೆ, ಪೂರ್ವಜರು ತಮ್ಮ ಪಾಲು ಪಡೆದರು ಎಂದು ಸಮಾಧಾನ ಪಡುತ್ತಾರೆ ಹೊರತು, ಯಾರಿಗೂ ಶಪಿಸಲ್ಲ.

ಮೇವು ಅರಸಿ ಕೆಲವರು ಊರು ಬಿಟ್ಟರೆ, ಹುಟ್ಟೂರಿಗೆ ಮರಳುವುದು ಗಣೇಶ ಹಬ್ಬಕ್ಕೆ. ನಂತರದ 4 ತಿಂಗಳು ಎಲ್ಲಿಯೂ ಕದಲಲ್ಲ. ಕುಟುಂಬ ನಿರ್ವಹಣೆ, ಖರ್ಚು–ವೆಚ್ಚ ಎಲ್ಲದ್ದಕ್ಕೂ ಮನೆಯ ಹೆಣ್ಣುಮಕ್ಕಳೇ ಹೊಣೆ. ಮನೆಯಲ್ಲಿ ಏನೇ ದೊಡ್ಡ ಸಮಸ್ಯೆಯಾದರೆ, ದೂರದ ಊರಿನಲ್ಲಿ ಕುರಿ ಮೇಯಿಸುವ ಮನೆಯ ಯಜಮಾನನಿಗೆ ತಕ್ಷಣವೇ ಮೊಬೈಲ್ ಕರೆ ಹೋಗುತ್ತದೆ. ಯಜಮಾನನ ಬಳಿ ದ್ವಿಚಕ್ರ ವಾಹನವಿದ್ದರೆ ಅದರಲ್ಲಿ, ಇಲ್ಲದಿದ್ದರೆ ಸಿಕ್ಕಿದ ಲಾರಿ, ಬಸ್, ಸರಕು ಸಾಗಣೆ ವಾಹನವನ್ನೇರಿ ಆತ ಮನೆಗೆ ಹಾಜರ್. ಎಲ್ಲವನ್ನೂ ಬಗೆಹರಿಸಿದ ಬಳಿಕವೇ ಕಾಯಕಕ್ಕೆ ಮರಳುವುದು.

ಮಳೆಯಾದರಂತೂ ಕುರಿಗಳು ಮತ್ತು ಕುರಿಗಾಹಿಗಳ ಪಡಿಪಾಟಲು ಹೇಳತೀರದು. ವಿಶಾಲ ಜಮೀನು ಇಲ್ಲವೇ ಬಯಲು ಆಶ್ರಯಿಸುವ ಕುರಿಗಾಹಿಗಳಿಗೆ ಸ್ವಯಂ ಆಸರೆ ಕಂಡುಕೊಳ್ಳಲು ಮತ್ತು ಕುರಿಗಳಿಗೆ ರಕ್ಷಣೆ ನೀಡಲು ಆಗುವುದಿಲ್ಲ. ಸಿಡಿಲಿನ ಹೊಡೆತಕ್ಕೆ ಸಾವು ನೋವು ಸಂಭವಿಸುತ್ತದೆ. ರೈಲ್ವೆ ಹಳಿ ದಾಟುವಾಗ ಅಥವಾ ಹೆದ್ದಾರಿಗಳಲ್ಲಿ ಸಾಗುವಾಗ ಅಪಘಾತಕ್ಕೀಡಾಗಿ ಹಿಂಡುಗಟ್ಟಲೇ ಕುರಿ, ಮೇಕೆಗಳು ಸಾವನ್ನಪ್ಪುತ್ತವೆ. ನಷ್ಟಕ್ಕೆ ಸಾಕಷ್ಟು ಸಲ ಪರಿಹಾರ ಸಿಗಲ್ಲ. ಅದನ್ನು ಪಡೆಯುವ ವಿಧಾನವೂ ಅವರಿಗೆ ಗೊತ್ತಿರಲ್ಲ. ಒಂದು ವೇಳೆ ಗೊತ್ತಿದ್ದರೂ ಅಗತ್ಯ ದಾಖಲೆಪತ್ರ ಇರಲ್ಲ. ಜೊತೆಗೆ ಅನಕ್ಷರತೆ ಸಮಸ್ಯೆ. ಈ ಎಲ್ಲದರಿಂದ ಅವರಿಗೆ ಸುಲಭವಾಗಿ ಪರಿಹಾರ ದಕ್ಕುವುದಿಲ್ಲ.

ಕುರಿಗಳಿಗೆ ಸಾಂಕ್ರಾಮಿಕ ಕಾಯಿಲೆಗಳೂ ಕಾಡುತ್ತವೆ. ಎಲ್ಲಾ ಕುರಿಗಳನ್ನು ಸಮೀಪದ ಪಶುವೈದ್ಯಕೀಯ ಆಸ್ಪತ್ರೆಗೆ ಒಯ್ಯಲು ಅಥವಾ ಪಶುವೈದ್ಯರನ್ನು ಕರೆ ತರಲು ಆಗಲ್ಲ. ಅದಕ್ಕೆ ಕುರಿ ಮೇಯಿಸುವವರು ಯಾವಾಗಲೂ ತಮ್ಮೊಂದಿಗೆ ಎಲ್ಲಾ ಪ್ರಕಾರದ ನಾಟಿ ಔಷಧಿಗಳನ್ನು ಇಟ್ಟುಕೊಂಡಿರುತ್ತಾರೆ. ರೋಗದ ಲಕ್ಷಣ ಅಥವಾ ಸುಳಿವು ಗೊತ್ತಾದ ಕೂಡಲೇ ಔಷಧೋಪಚಾರಕ್ಕೆ ಸಿದ್ಧರಾಗುತ್ತಾರೆ.

ಸ್ವತಃ ಕುರಿಗಾಹಿಗಳಿಗೆ ಜ್ವರ, ಶೀತ ಅಥವಾ ಬೇರೆ ರೀತಿಯ ಅನಾರೋಗ್ಯ ಸಮಸ್ಯೆ ಕಾಡಿದರೂ ಸಮೀಪದ ಆಸ್ಪತ್ರೆಗೆ ಹೋಗಲು ಬಯಸಲ್ಲ. ಮನೆಯಿಂದ ಗಂಟುಮೂಟೆಯಲ್ಲಿ ಕಟ್ಟಿಕೊಂಡು ಬಂದ ಡಬ್ಬಿ ಅಥವಾ ಚೀಟಿಯಲ್ಲಿನ ಔಷಧಿ ಸೇವಿಸಿ, ಗುಣಮುಖರಾಗುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ತಾವು ನೆಲೆ ನಿಂತ ಊರಿನವರಿಗೂ ಅದೇ ಔಷಧಿಯನ್ನು ಕೊಡುತ್ತಾರೆ. ಯಾರಾದರೂ ಅವರ ಬಳಿ ತೆರಳಿ ಆಸಕ್ತಿಯಿಂದ ಔಷಧಿಯ ಜ್ಞಾನ ಪಡೆಯಲು ಇಚ್ಛಿಸಿದ್ದರೆ, 'ಪೂರ್ವಜರಿಂದ ಕಲಿತಿದ್ದನ್ನು ನಿಮಗೆ ಹೇಗೆ ಹೇಳಲು ಸಾಧ್ಯ' ಎಂದು ಹೇಳಿ ಸ್ಪಷ್ಟವಾಗಿ ನಿರಾಕರಿಸುತ್ತಾರೆ.

ಕುರಿಗಾಹಿಗಳು ಅಷ್ಟು ಸುಲಭವಾಗಿ ಯಾರನ್ನೂ ನಂಬುವುದಿಲ್ಲ. ಇದಕ್ಕೆ ಕಾರಣಗಳು ಹಲವು. ಅವುಗಳಲ್ಲಿ ಕುರಿಗಳ ಕಳ್ಳತನವೂ ಒಂದು. ಕುರಿ ಹಿಂಡನ್ನು ಬೆನ್ನತ್ತಿ ಬರುವ ಕಳ್ಳರು, ಮತ್ತು ಬರಿಸುವ ಪಾನೀಯ ಅಥವಾ ಆಹಾರ ನೀಡಿ, ಕುರಿಗಾಹಿಗಳ ಎಚ್ಚರ ತಪ್ಪಿಸುತ್ತಾರೆ. ನಂತರ 20 ರಿಂದ 30 ಕುರಿ, ಟಗರು ಕಳವು ಮಾಡಿ, ವಾಹನಗಳಲ್ಲಿ ಪರಾರಿ ಆಗುತ್ತಾರೆ. ಕುರಿಗಳ ಬೆಲೆ ₹ 10 ಸಾವಿರದವರೆಗೆ ಇದ್ದರೆ, ಟಗರಿನ ಬೆಲೆ ₹ 30 ಸಾವಿರ ಆಸುಪಾಸಿನಲ್ಲಿದೆ. ಏಕಕಾಲಕ್ಕೆ ಕೆಲವಷ್ಟು ಕಾಣೆ ಅಥವಾ ಕಳ್ಳತನವಾದರೆ, ಲಕ್ಷಾಂತರ ರೂಪಾಯಿ ನಷ್ಟವಾಗುತ್ತದೆ.

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ, ರಾಯಬಾಗ, ನಿಪ್ಪಾಣಿ ಭಾಗದಲ್ಲಿ ಕಬ್ಬು ಹೆಚ್ಚು ಬೆಳೆಯುವ ಮತ್ತು ನೀರಾವರಿ ಪ್ರದೇಶದಲ್ಲಿ 'ಸಂಚಾರಿ ಕುರುಬರು' ಇದ್ದಾರೆ. ಅವರಿಗೆ ಇರುವ ಇನ್ನೊಂದು ಹೆಸರು 'ಬಾಗಿ ಕುರುಬರು'. ಜಾತ್ರೆ, ಮದುವೆ, ಬಂಧು–ಬಳಗದ ಶುಭಕಾರ್ಯಕ್ಕೆ ಮನೆಗೆ ಬರುವ ಅವರು ಉಳಿದ ದಿನಗಳಲ್ಲಿ ಶಿವಮೊಗ್ಗ, ಹಾವೇರಿ, ಚಿಕ್ಕಮಗಳೂರು ಮತ್ತಿತರ ಜಿಲ್ಲೆಗಳತ್ತ ಪ್ರಯಾಣ ಬೆಳೆಸುತ್ತಾರೆ.

ಬಳ್ಳಾರಿಯಲ್ಲಿ ಟಗರಿನ ಗೊರಸು ಪರಿಶೀಲಿಸುತ್ತಿರುವ ಕುರಿಗಾಹಿ ತಿಮ್ಮಪ್ಪ

ಬೇಡಿಕೆಗೆ ಸಿಗದ ಸ್ಪಂದನೆ

ಕುರಿಗಾಹಿಗಳ ಸಮಸ್ಯೆ ಪರಿಹರಿಸಲು ಒತ್ತಾಯಿಸಿ ಕುರುಬ ಸಮಾಜ ಸಂಘಟನೆಗಳ ಒಕ್ಕೂಟದಿಂದ 2022ರ ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆದಿತ್ತು. ಕುರಿಗಾಹಿಗಳ ರಕ್ಷಣೆಗೆ ಕಾಯ್ದೆ ರೂಪಿಸುವುದರ ಜೊತೆಗೆ ಕೆಲ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲಾಗಿತ್ತು. ಸರ್ಕಾರದಿಂದ ಈವರೆಗೆ ಭರವಸೆ ಹೊರತುಪಡಿಸಿ ಮತ್ತೇನೂ ಸಿಕ್ಕಿಲ್ಲ ಎಂಬ ಬೇಸರ ಕುರಿಗಾಹಿಗಳದ್ದು

- ಕುರಿಗಳ್ಳರು, ವನ್ಯಜೀವಿಗಳಿಂದ ಪ್ರಾಣಕ್ಕೆ ಅಪಾಯವಿದ್ದು, ಆತ್ಮರಕ್ಷಣೆಗೆ ಬಂದೂಕು ನೀಡಬೇಕು
- ಅಲೆಮಾರಿ ಕುರಿಗಾಹಿಗಳಿಗೆ ಆರ್ಥಿಕ ನೆರವು ನೀಡಲು ಕ್ರಮ ಸರ್ಕಾರ ಕ್ರಮ ಕೈಗೊಳ್ಳಬೇಕು
- ಕೆಎಂಎಫ್ ಹಾಲು ಉತ್ಪನ್ನ ಮಾದರಿಯಲ್ಲೇ ಕುರಿ ಮಾಂಸ ಮಾರಾಟಕ್ಕೆ ಸರ್ಕಾರ ಮುಂದಾಬೇಕು
- ಬಾಕಿಯುಳಿದ ಪರಿಹಾರ ಮೊತ್ತವನ್ನು ಕುರಿಗಾಹಿಗಳಿಗೆ ವಿಳಂಬ ಮಾಡದೇ ಬೇಗ ನೀಡಬೇಕು
- ಪೊಲೀಸ್ ಠಾಣೆಗಳಲ್ಲಿ ಪ್ರತಿ ತಿಂಗಳು ಕುರಿಗಾಹಿಗಳ ಸಭೆ ನಡೆಸಿ, ಸಮಸ್ಯೆ ಪರಿಹರಿಸಬೇಕು
- ಕುರಿಗಾಹಿಗಳ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶ ಕಲ್ಪಿಸಲು ಆದ್ಯತೆ ನೀಡಬೇಕು
- ಅವಘಡ ಸಂಭವಿಸಿದಾಗ, ಕುರಿಗಾಹಿಗಳಿಗೆ ನೆರವಾಗಲು ಶಾಶ್ವತ ಪರಿಹಾರ ನಿಧಿ ಸ್ಥಾಪಿಸಬೇಕು
- ಅನುಗ್ರಹ ಪರಿಹಾರ ಯೋಜನೆ ಮೊತ್ತವನ್ನು ₹ 5 ಸಾವಿರದಿಂದ ₹ 10 ಸಾವಿರಕ್ಕೆ ಏರಿಕೆ ಮಾಡಬೇಕು
- ಕುರಿಗಳ ಆರೋಗ್ಯ ದೃಷ್ಟಿಯಿಂದ ನಿಯಮಿತವಾಗಿ ಲಸಿಕೆ ಪೂರೈಸಲು ಕ್ರಮ ಕೈಗೊಳ್ಳಬೇಕು

ಸವದತ್ತಿ, ಬೈಲಹೊಂಗಲ, ರಾಮದುರ್ಗ ತಾಲ್ಲೂಕುಗಳ ಕುರಿಗಾಹಿಗಳು ತಮ್ಮೂರು ಮತ್ತು ಅಕ್ಕಪಕ್ಕದ ಜಮೀನುಗಳಲ್ಲಿ ಮಾತ್ರ ಕುರಿ ಮೇಯಿಸುತ್ತಾರೆ. ಅವರು ತಮ್ಮೊಂದಿಗೆ ಮಕ್ಕಳನ್ನೂ ಕರೆದೊಯ್ಯುತ್ತಾರೆ. ಹೀಗಾಗಿ ಹಲವು ಸಂದರ್ಭಗಳಲ್ಲಿ ಮಕ್ಕಳಿಗೆ ಸಮರ್ಪಕ ಶಿಕ್ಷಣ ಸಿಗುವುದಿಲ್ಲ. 'ಕುರಿಗಾಹಿಗಳ ಮಕ್ಕಳಿಗೆಂದೇ ಶೈಕ್ಷಣಿಕವಾಗಿ ನಿರ್ದಿಷ್ಟ ಯೋಜನೆಗಳಿಲ್ಲ. ಅಲೆಮಾರಿ, ಹಿಂದುಳಿದ ವರ್ಗಗಳ ಸಮುದಾಯಕ್ಕೆ ಸಿಗುವ ಶೈಕ್ಷಣಿಕ ಸೌಲಭ್ಯಗಳೂ ಕುರಿಗಾಹಿಗಳ ಮಕ್ಕಳಿಗೂ ಇವೆ. ಕುರಿಗಾಹಿಗಳು ಮೇಯಿಸುತ್ತ ಅಲ್ಲಿ ತಂಗುವ ಆಯಾ ಪ್ರದೇಶದ ಶಾಲೆಗಳಲ್ಲಿ ಅವರ ಮಕ್ಕಳು ಓದಬಹುದು. ಅವರಿಗೆ ಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಊಟ ಇರುತ್ತದೆ' ಎಂದು ಚಿತ್ರದುರ್ಗ ಜಿಲ್ಲೆ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಿ.ಕೊಟ್ರೇಶ್ ಹೇಳುತ್ತಾರೆ.

'ಹಿಂದುಳಿದ ವರ್ಗಗಳ ವಸತಿ ಶಾಲೆ, ಏಕಲವ್ಯ ಮಾದರಿ ವಸತಿ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಸೇರಿ ಅಲೆಮಾರಿ ಸಮುದಾಯಗಳ ವಸತಿ ಶಾಲೆಗಳಲ್ಲಿ ಕುರಿಗಾಹಿಗಳ ಮಕ್ಕಳು ಶಿಕ್ಷಣ ಪಡೆಯಬಹುದು. ಆದರೆ, ಒಂದೇ ಕಡೆ ನೆಲೆ ನಿಲ್ಲದ ಕಾರಣ ಅವರನ್ನು ಶಾಲೆಗೆ ಕರೆತಂದರೂ, ಅಷ್ಟೇ ಬೇಗ ವಾಪಸ್ ಹೋಗುತ್ತಾರೆ' ಎಂಬ ಬೇಸರ ಅವರದ್ದು.

ವಲಸೆ ಕುಟುಂಬದ ಜೊತೆಗೆ ಊರಿನಿಂದ ಊರಿಗೆ ಹೋಗುವ ಮಕ್ಕಳು ಶಿಕ್ಷಣದಿಂದ ವಂಚಿತರಾಗುವುದನ್ನು ತಪ್ಪಿಸಲು ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ 'ಟೆಂಟ್ ಶಾಲೆ' ರೂಪಿಸಲಾಗಿದೆ. ಕಟ್ಟಡ ಕಾಮಗಾರಿ, ರೈತರ ಬೆಳೆ ಕಟಾವು ಮತ್ತಿತರ ಕಾರ್ಯಕ್ಕೆ ವಲಸೆ ಬರುವ ಪೋಷಕರ ಮಕ್ಕಳೂ ಟೆಂಟ್ ಶಾಲೆಗಳಲ್ಲಿ ಕಲಿಯಬಹುದು. ಕುರಿಗಾಹಿಗಳ ಮಕ್ಕಳೂ ಇಲ್ಲಿ ಶಿಕ್ಷಣ ಪಡೆಯಬಹುದು. ಆದರೆ, ಈ ಸೌಲಭ್ಯಗಳಿಂದ ಕಾರಿಗಾಹಿಗಳ ಬಹುತೇಕ ಮಕ್ಕಳು ವಂಚಿತರಾಗಿದ್ದಾರೆ.

ಕುರಿಗಾಹಿಗಳ ಆರಾಧ್ಯದೈವ ಬೀರೇಶ್ವರ, ರೇವಣಸಿದ್ಧೇಶ್ವರ, ಮಾಳಿಂಗರಾಯ ಮತ್ತು ಅಮೋಘಸಿದ್ಧ. ದೇವರ ಜಾತ್ರೆಗಳನ್ನು ಅದ್ಧೂರಿಯಾಗಿ ಆಚರಿಸುವ ಅವರಿಗೆ ಡೊಳ್ಳಿನ ಪದ, ಗಾಯನದ ಬಗ್ಗೆ ಹೆಚ್ಚು ಆಸಕ್ತಿ. ಹಬ್ಬದ ಸಂದರ್ಭದಲ್ಲಿ ದೂರದ ಊರುಗಳಲ್ಲಿ ನೆಲೆಸಿರುವ ನೆಂಟರು ಎಲ್ಲರೂ ಒಂದು ಕಡೆ ಸೇರುತ್ತಾರೆ. ಒಂದೆರಡು ದಿನ ಜೊತೆಗಿದ್ದು, ತಮ್ಮೂರುಗಳಿಗೆ ವಾಪಸ್ ಆಗುತ್ತಾರೆ.

'ಕುರಿಗಳು ನೂರಿರಲಿ, ಸಾವಿರ ಇರಲಿ, ಯಾವುದಕ್ಕೂ ಕೊರತೆ, ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆ. ದಿನಕ್ಕೆ 10 ರಿಂದ 20 ಕಿ.ಮೀ. ನಡೆಯುತ್ತೇವೆ. ಊರೂರು ಅಲೆದು, ಬೆಟ್ಟ–ಗುಡ್ಡಗಳನ್ನೇರಿ ಕುರಿಗಳನ್ನು ಮೇಯಿಸುತ್ತೇವೆ. ದಾರಿಯುದ್ದಕ್ಕೂ ಕಲ್ಲು, ಮುಳ್ಳು ಕಂಟಿಗಳಿಂದ ಗಾಯವಾಗುತ್ತದೆ. ಅದಕ್ಕೆ ಕಾಲಲ್ಲಿ ಯಾವಾಗಲೂ 'ಕೊಲ್ಹಾಪುರಿ ಚಪ್ಪಲಿ' ಇರುತ್ತದೆ. ಅದು ದೀರ್ಘ ಕಾಲ ಬಾಳಿಕೆಗೆ ಬರುತ್ತದೆ ಮತ್ತು ದೇಹದ ಉಷ್ಣತೆಯೂ ಕಾಯ್ದುಕೊಳ್ಳುತ್ತದೆ. ನಮ್ಮ ಹಿರಿಯರು ಇದನ್ನೇ ನಂಬಿದ್ದರು' ಎಂದು ಬೆಳಗಾವಿ ಜಿಲ್ಲೆ ನಿಪ್ಪಾಣಿ ತಾಲ್ಲೂಕಿನ ಗಳತಗಾದ ಹಾಲಪ್ಪ ಪಿಸುತ್ರೆ ಹೇಳುತ್ತಾರೆ.

ನಡೆಯಲು ಆಯಾಸಪಡದ ಕುರಿಗಾಹಿಗಳು ಇತ್ತೀಚಿನ ದಿನಗಳಲ್ಲಿ ಮೇವು ಮತ್ತು ನೀರಿಗೆ ಪರಿತಪಿಸುವಂತಾಗಿದೆ. ಬಹುತೇಕ ಕಡೆ ಕೆರೆಕುಂಟೆ ಬತ್ತಿದ್ದು, ನೀರಿಗಾಗಿ ರೈತರನ್ನು ಬೇಡಬೇಕಾದ ಪರಿಸ್ಥಿತಿ ಇದೆ. ಕೊಳವೆಬಾವಿ ನೀರು ಸಾಕಾಗುವುದಿಲ್ಲ. ಮೇವು ಇಲ್ಲದೇ ಮೇಯಿಸಲು ಆಗುವುದಿಲ್ಲ. ಹಾಗಂತ, ಈ ಕುಲಕಸಬು ಬಿಡಲು ಅವರು ಸಿದ್ಧರಿಲ್ಲ. 'ಕುರಿ ಮೇಯಿಸುವುದು, ಸಾಕುವುದು ಬಿಟ್ಟರೆ ನಮಗೆ ಬೇರೆ ಕೆಲಸ ಗೊತ್ತಿಲ್ಲ. ಓದು–ಬರಹ ಕಲಿತಿಲ್ಲ. ಎಷ್ಟು ದಿನ ಆಗುತ್ತೋ, ಅಷ್ಟು ದಿನ ಕುರಿಗಳನ್ನೇ ನಂಬಿ ಬದುಕುತ್ತೀವಿ' ಎನ್ನುತ್ತಾರೆ ಚಿಕ್ಕೋಡಿಯ ಕುರಿಗಾಹಿಗಳಾದ ಸಿದ್ದಪ್ಪ ದತ್ತವಾಡೆ ಮತ್ತು ಅಜಿತ ಡಂಗೇರಿ

ಆಂಧ್ರಪ್ರದೇಶದ ಸತ್ಯಸಾಯಿ, ಅನಂತರಪುರ ಜಿಲ್ಲೆಯ ಕುರಿಗಾಹಿಗಳು ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ಮತ್ತು ಚಿಂತಾಮಣಿ ತಾಲ್ಲೂಕಿನ ಗಡಿಗ್ರಾಮಗಳಲ್ಲಿ ಮೇವು ಇರುವ ಜಮೀನಿನಲ್ಲಿ ಬೀಡು ಬಿಡುತ್ತಾರೆ. ಕುರಿಗಳಿಗೆ ಮೇವು, ಜಮೀನು ಮಾಲೀಕರಿಗೆ ಕುರಿಗೊಬ್ಬರ ಸಿಗುತ್ತದೆ. ಅದು ತುಂಬಾ ಫಲವತ್ತಾದ ಕಾರಣ ಜಮೀನು ಮಾಲೀಕರು ಹಣ ಇಲ್ಲವೇ ಬೇರೆ ಆಹಾರ ಸಾಮಗ್ರಿ ಕೊಡುತ್ತಾರೆ. 'ಕುರಿಗಳಿಗೆ ಮೇವು ಸಿಕ್ಕಿತು' ಎಂಬ ಖುಷಿ ಕುರಿಗಾಹಿಗಿದ್ದರೆ, 'ಒಳ್ಳೆಯ ಕುರಿಗೊಬ್ಬರದಿಂದ ಕೃಷಿ ಚಟುವಟಿಕೆ ಮಾಡಬಹುದು' ಎಂಬ ನಿರಾಳಭಾವ ಜಮೀನು ಮಾಲೀಕರದ್ದು.

'ಎಲ್ಲಾ ಕಡೆ ಜಮೀನು ಮಾಲೀಕರು ಒಂದೇ ರೀತಿ ಇರುವುದಿಲ್ಲ. ಕೆಲ ಕಡೆ ಬೆಳೆ ಕಡೆ ಬರಬೇಡಿ ಎಂದು ತಡೆಯುತ್ತಾರೆ. ಕೆಲವೊಮ್ಮೆ ನಿಂದಿಸಿ, ಅವಮಾನಿಸುತ್ತಾರೆ. ಜಮೀನು ಸಮೀಪದ ಕೆರೆ, ಕುಂಟೆ ಬಳಸಲು ಅವಕಾಶ ಕೊಡಲ್ಲ. ಕೊಳವೆಬಾವಿಯ ನೀರನ್ನೂ ಕೊಡಲು ನಿರಾಕರಿಸುತ್ತಾರೆ. ನೀರು ಸಿಗದ ಕಾರಣ ಎಷ್ಟೋ ಸಲ ನಿತ್ಯದ ಕ್ರಿಯಾಕರ್ಮ, ಸ್ನಾನಕ್ಕೆ ತೊಂದರೆ ಆಗುತ್ತದೆ. ಆದರೆ, ನೂರು–ಸಾವಿರಾರು ಕುರಿಗಳಿಗೆ ಕರೆ ಅಥವಾ ಹೊಂಡ ಬೇಕು. ಅವುಗಳಿಗೆ ನೀರು ಕುಡಿಸುವವರೆಗೆ ನಮಗೆ ಸಮಾಧಾನವಾಗಲ್ಲ' ಎಂದು ಆಂಧ್ರಪ್ರದೇಶದ ಪ್ರಸಾದ ಮತ್ತು ಮಲ್ಲಿಕಾರ್ಜುನ ಸಂಕಷ್ಟ ತೋಡಿಕೊಳ್ಳುತ್ತಾರೆ.

> **ಊರಿನಿಂದ ಊರಿಗೆ ಹೋಗಿ ಮೇಯುವ ಕುರಿಗಳಿಗೆ ಸಾಮಾನ್ಯವಾಗಿ ರೋಗ ನಿರೋಧಕ ಶಕ್ತಿ ಇರುತ್ತದೆ. ಅಲ್ಲದೇ ಕುರಿಗಾಹಿಗಳು ಪಶುವೈದ್ಯರಿಂದ ಲಸಿಕೆ ಹಾಕಿಸಿರುತ್ತಾರೆ. ಹೀಗಾಗಿ ಅವುಗಳ ಆರೋಗ್ಯ ಸುಸ್ಥಿತಿಯಲ್ಲಿ ಇರುತ್ತದೆ.**
> **ಡಾ. ಯಲ್ಲಪ್ಪ ಇಂಗಳೆ**
> ಪಶುವೈದ್ಯಾಧಿಕಾರಿ, ಆಳಂದ, ಕಲಬುರಗಿ ಜಿಲ್ಲೆ

> **ಗೋಮಾಳ ಒತ್ತುವರಿ ತೆರವಿಗೆ ಮತ್ತು ಹುಲ್ಲುಗಾವಲು ಅಭಿವೃದ್ಧಿಗೆ ಮಾಡುವಂತೆ ಸರ್ಕಾರವನ್ನು ಕೋರಿದ್ದೇವೆ. ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಕುರಿ ಮೇಯಿಸಲು ಅವಕಾಶ ನೀಡಬೇಕು**
> **ದೇವೇಂದ್ರ ಮರತೂರ, ಅಧ್ಯಕ್ಷ**
> ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ

ರಾಜ್ಯದ ಬಹುತೇಕ ಕಡೆ ಗೋಮಾಳದ ಪ್ರಮಾಣ ಕಡಿಮೆ ಆಗುತ್ತಿರುವುದು ಕುರಿಗಾಹಿಗಳ ಕಸುಬಿಗೆ ದೊಡ್ಡ ಪೆಟ್ಟು ನೀಡಿದೆ. ಚಿತ್ರದುರ್ಗ ಜಿಲ್ಲೆಯ ಗ್ರಾಮೀಣ ಭಾಗದ ಗೊಲ್ಲ ಮತ್ತು ಕುರುಬ ಸಮುದಾಯ ಸೇರಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳು ಕುರಿ ಸಾಕಾಣಿಕೆಯನ್ನೇ ಬದುಕಿಗೆ ನೆಚ್ಚಿಕೊಂಡಿವೆ. ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ, ತಳಕು, ಪರಶುರಾಂಪುರ, ತುರುವನೂರು ಹೋಬಳಿಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಕುರಿಗಳ ಸಾಕಾಣಿಕೆ ನಡೆಯುತ್ತಿತ್ತು.

ಆದರೆ, 2009 ರಿಂದ 2011ರಲ್ಲಿ ನಾಯಕನಹಟ್ಟಿ ಹೋಬಳಿಯ ವರವುಕಾವಲಿನ ಸುಮಾರು 11,000 ಎಕರೆ ಭೂಮಿಯನ್ನು ವಿಜ್ಞಾನ ಸಂಸ್ಥೆಗೆ ಹಾಗೂ 4,500 ಹೆಚ್ಚು ಎಕರೆ ಪ್ರದೇಶವನ್ನು ಸೋಲಾರ್ ವಿದ್ಯುತ್ ಉತ್ಪಾದನಾ ಘಟಕಕ್ಕೆ ನೀಡಿದ್ದು, ಕುರಿ ಸಾಕಾಣಿಕೆ ಮೇಲೆ ಗಂಭೀರ ಪರಿಣಾಮ ಬೀರಿದೆ. ಕಾವಲು ಪ್ರದೇಶದಲ್ಲಿ ಮೇವಿನ ಸಮಸ್ಯೆ, ಸಾಮಾಜಿಕ ಅರಣ್ಯಕ್ಕೆ ನಿರ್ಬಂಧ, ಕುರಿ ಸಂವರ್ಧನ ಕೇಂದ್ರದ ನಿಷ್ಕ್ರಿಯತೆಯು ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಿವೆ.

ಬರ ಪರಿಣಾಮ ಈ ಬಾರಿ ಕಲ್ಯಾಣ ಕರ್ನಾಟಕದ ಜಿಲ್ಲೆಗಳಿಗೆ ಹಿಂಡು ಕುರಿಗಳೊಂದಿಗೆ ಬೆಳಗಾವಿ, ವಿಜಯಪುರ ಜಿಲ್ಲೆಯ ಬಹುತೇಕ ಕುರಿಗಾಹಿಗಳು ಹೋಗಿಲ್ಲ. ಒಂದೆಡೆ ಹಸಿರು ಮೇವು ಸಿಗುತ್ತಿಲ್ಲ, ಮತ್ತೊಂದೆಡೆ ಕಲಬುರಗಿ, ಯಾದಗಿರಿ ಜಿಲ್ಲೆಯಲ್ಲಿ ಹರಿಯುವ ಭೀಮಾ ನದಿ ಬತ್ತಿದೆ. ಯಾದಗಿರಿ, ರಾಯಚೂರು ಜಿಲ್ಲೆಯಲ್ಲಿ ಕೃಷ್ಣಾ ನದಿ ಪಾತ್ರ ಬರಿದಾಗಿದೆ. ಪ್ರತಿ ವರ್ಷ ಕುರಿಗಾಹಿಗಳು 100ರಿಂದ 500 ಕುರಿಗಳ ಹಿಂಡಿನೊಂದಿಗೆ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಮೇವು ಇರುವಲ್ಲಿ ಬೀಡುಬಿಡುತ್ತಿದ್ದರು. ಸತತ ಎರಡು ವರ್ಷಗಳಿಂದ ಬರ ಆವರಿಸಿದ್ದು, ಕುರಿಗಾಹಿಗಳು ಪರಿತಪಿಸುತ್ತಿದ್ದಾರೆ.

'ಮೊದಲೆಲ್ಲ ಯಥೇಚ್ಛವಾಗಿ ಗೋಮಾಳ, ಹುಲ್ಲುಗಾವಲು ಪ್ರದೇಶ ಇರುತ್ತಿದ್ದವು. ಒತ್ತುವರಿಯಿಂದ ಗೋಮಾಳ ಹಂತಹಂತವಾಗಿ ಮಾಯ ಆಗುತ್ತಿವೆ. ವಸತಿ, ಕೈಗಾರಿಕಾ ಯೋಜನೆ, ರಿಯಲ್ ಎಸ್ಟೇಟ್ ಮುಂತಾದ ಕಾರಣಗಳಿಗೆ ಗೋಮಾಳ ಬಳಕೆಯಾಗುತ್ತಿದೆ. ಹೀಗಾಗಿ ಮೇವಿನ ಸಮಸ್ಯೆ ಹೆಚ್ಚಾಗಿದೆ' ಎಂದು ಕುರಿಗಾಹಿಗಳು ಹೇಳುತ್ತಾರೆ.

ವಲಸೆ ಕುರಿಗಾಹಿಗಳಿಗೆಂದೇ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತದಿಂದ ಪರಿಕರ ಕಿಟ್ ಕೊಡಲಾಗುತ್ತದೆ. ನೈಸರ್ಗಿಕ ವಿಕೋಪದ ಸಂದರ್ಭದಲ್ಲಿ ಸ್ವಯಂ ರಕ್ಷಣೆ ಮಾಡಿಕೊಳ್ಳಲು ಅವರಿಗೆ ವಿತರಿಸಲಾಗುತ್ತದೆ. ಪರಿಕರ ಕಿಟ್‌ನಲ್ಲಿ ಸಂಚಾರಿ ಟೆಂಟ್, ಸೋಲಾರ್ ಟಾರ್ಚ್, ರೇನ್‌ಕೋಟ್ ಮತ್ತು ರಬ್ಬರ್ ಫ್ಲೋರ್ ಮ್ಯಾಟ್ ಇರುತ್ತದೆ. 'ನಿಗಮದಲ್ಲಿ ನೋಂದಣಿ ಆದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಗಳಲ್ಲಿ ಸದಸ್ಯರಾಗಿರುವ ವಲಸೆ ಕುರಿಗಾರರಿಗೆ ಪರಿಕರ ಕಿಟ್ ನೀಡುತ್ತೇವೆ' ಎನ್ನುತ್ತಾರೆ ನಿಗಮದ ಉಪನಿರ್ದೇಶಕ ಡಾ. ಸಿ.ಬಿ.ಸುರೇಶ.

ರಾಜ್ಯ ಸರ್ಕಾರದ 'ಅನುಗ್ರಹ' ಯೋಜನೆಯಡಿ 1.34 ಲಕ್ಷ ಪ್ರಕರಣಗಳಿಗೆ ಸಂಬಂಧಪಟ್ಟಂತೆ ₹65.34 ಕೋಟಿ ಪರಿಹಾರ ಧನ ಬಿಡುಗಡೆ ಆಗಬೇಕಿತ್ತು. 2021–22ನೇ ಸಾಲಿನಲ್ಲಿ 30,449 ಪ್ರಕರಣಗಳಿಗೆ ಸಂಬಂಧಿಸಿದಂತೆ ₹14.93 ಕೋಟಿ ಮತ್ತು 2022–23ನೇ ಸಾಲಿನಲ್ಲಿ 1.03 ಲಕ್ಷ ಪ್ರಕರಣಗಳಿಗೆ ಸಂಬಂಧಿಸಿದಂತೆ ₹50.41 ಕೋಟಿ ಪರಿಹಾರ ಧನ ಕುರಿಗಾಹಿಗಳಿಗೆ ಸಿಗಬೇಕಿತ್ತು. ಆದರೆ, ವಿತರಣಾ ಪ್ರಕ್ರಿಯೆ ತುಂಬಾ ನಿಧಾನಗತಿಯಲ್ಲಿ ಸಾಗಿದೆ ಎನ್ನುವ ಆರೋಪ ಕೇಳಿ ಬರುತ್ತಿದೆ.

ನೈಸರ್ಗಿಕ ವಿಪತ್ತು, ಅಪಘಾತ ಅಥವಾ ಕಾಯಿಲೆಗಳಿಂದ ಕುರಿ–ಮೇಕೆಗಳು ಮೃತಪಟ್ಟರೆ, ಕುರಿಗಾಹಿಗಳಿಗೆ ಕಾಡುವ ಆರ್ಥಿಕ ಸಮಸ್ಯೆ ಕೊಂಚ ನಿವಾರಿಸಲೆಂದೇ ರಾಜ್ಯ ಸರ್ಕಾರವು 'ಅನುಗ್ರಹ' ಯೋಜನೆ ಜಾರಿಗೊಳಿಸಿದೆ. 6 ತಿಂಗಳ ಮೇಲ್ಪಟ್ಟ ಕುರಿ ಅಥವಾ ಮೇಕೆ ಸಾವನ್ನಪ್ಪಿದರೆ ₹ 5 ಸಾವಿರ, 3 ಅಥವಾ 6 ತಿಂಗಳ ವಯಸ್ಸಿನ ಒಳಗಿನ ಕುರಿಮರಿ ಅಥವಾ ಮೇಕೆ ಮರಿ ಸತ್ತರೆ, ₹ 3,500 ಪರಿಹಾರ ಸಿಗುತ್ತದೆ. ಅದನ್ನು ಪಡೆಯಲು ಪಶುವೈದ್ಯರಿಂದ ದೃಢೀಕರಣ ಪ್ರಮಾಣಪತ್ರ, ಕುರಿ ಅಥವಾ ಮೇಕೆಗಳ ಮರಣೋತ್ತರ ಪರೀಕ್ಷೆ ವರದಿ ಸೇರಿ ಇತರ ದಾಖಲೆಪತ್ರಗಳು ಇರಬೇಕು.

'ವಲಸೆ ಕುರಿಗಾಹಿಗಳ ಬದುಕು ಸುಧಾರಣೆಗೆಂದೇ ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ ಹಾಗೂ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ ಹಲವು ಯೋಜನೆಗಳಿವೆ. ಕುರಿಗಳಿಗೆ ನಿರಂತರ ಆರ್ಥಿಕ ನೆರವು ಮತ್ತು ಸೌಲಭ್ಯಗಳನ್ನು ಕಲ್ಪಿಸುತ್ತೇವೆ' ಎನ್ನುತ್ತಾರೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಧಾರವಾಡ ಜಿಲ್ಲೆಯ ಉಪನಿರ್ದೇಶಕ ಡಾ. ರವಿ ಎಸ್.ಸಾಲಿಗೌಡರ್.

ಪಶುವೈದ್ಯಕೀಯ ಸೇವಾ ಇಲಾಖೆಯಲ್ಲಿ ಆಯಾ ಜಿಲ್ಲೆಗಳ ಕುರಿಗಾಹಿಗಳು ಮತ್ತು ಅವರ ಬಳಿಯಿರುವ ಕುರಿ, ಮೇಕೆಗಳು ಮತ್ತು ಇನ್ನಿತರ ಜಾನುವಾರುಗಳ ಬಗ್ಗೆ ಮಾಹಿತಿ ಇರುತ್ತದೆ. ಹೀಗಾಗಿ ಸೌಲಭ್ಯ, ನೆರವು ಒದಗಿಸಲು ಕಷ್ಟವಾಗಲ್ಲ. ಸಾಂಕ್ರಾಮಿಕ ಕಾಯಿಲೆ ಅಥವಾ ದುರ್ಘಟನೆಯಲ್ಲಿ ಕುರಿಗಳು ಸಾವನ್ನಪ್ಪಿದರೂ ಲೆಕ್ಕ ಸಿಗುತ್ತದೆ. ಕುರಿಗಾಹಿಗಳ ಬೇಡಿಕೆ ಅನುಸಾರ ಇಲಾಖೆಯು ಕ್ರಮ ಕೈಗೊಳ್ಳುತ್ತದೆ ಎಂದು ಹೇಳುವರು.

ಆದರೆ ಸರ್ಕಾರದ ನೆರವು ಸಕಾಲಿಕವಾಗಿ ದೊರಕಿದ್ದರೆ ಅನಕ್ಷರಸ್ಥರಾದ ಕುರಿಗಾಹಿಗಳ ಬದುಕು ಹಸನಾಗಬೇಕಿತ್ತು. ವಿವಿಧ ಇಲಾಖೆಗಳು ಎಷ್ಟೋ ನೆರವು ನೀಡುತ್ತಿದ್ದೇವೆ ಎಂದು ಹೇಳಿಕೊಂಡರೂ ಶತಶತಮಾನಗಳಿಂದ ಇವರ ಬದುಕಿನಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಸರಳವಲ್ಲದ ಕಾನೂನು ಮತ್ತು ದಾಖಲೆಗಳ ಸಂಕೋಲೆಯಲ್ಲಿ ಯಾವ ನೆರವಿನ ಹಸ್ತವೂ ಈ ಸರಳಜೀವಿಗಳಿಗೆ ಸಿಗುತ್ತಿಲ್ಲ. ನೆರವಿಗಾಗಿ ಇವರು ಇಲಾಖೆಗಳತ್ತ ತಿರುಗುವ ಬದಲು ಇಲಾಖೆಗಳೇ ಅವರತ್ತ ತಿರುಗಿನೋಡಿದರೆ ಕುರಿಗಾಹಿಗಳ ಬದುಕು ಅದೆಷ್ಟೋ ಸುಧಾರಿಸುತ್ತದೆ.

ಪೂರಕ ಮಾಹಿತಿ: ಹರಿಶಂಕರ್ ಆರ್, ಇಮಾಮ್ ಹುಸೇನ್ ಗೂಡುನವರ, ಜಿ.ಬಿ.ನಾಗರಾಜ, ಸಿದ್ದು ಆರ್.ಜಿ ಹಳ್ಳಿ, ಮನೋಜಕುಮಾರ್ ಗುದ್ದಿ, ರಾಮಮೂರ್ತಿ.ಪಿ

ಗುಂಡಣ್ಣ

25 ವರ್ಷಗಳ ಹಿಂದೆ
ಬುಧವಾರ, 26-05-1999

• ಚುನಾವಣೆಗೆ ಸೋನಿಯಾ ಸಾರಥ್ಯ: ಕಾಂಗ್ರೆಸ್ ನಿರ್ಧಾರ

ನವದೆಹಲಿ, ಮೇ 25 – ಕೇವಲ ಎರಡು ಗಂಟೆಗಳ ಕಾಲ ನಡೆದ ಒಂದು ದಿನದ ವಿಶೇಷ ಎಐಸಿಸಿ ಅಧಿವೇಶನವು ಮತ್ತೆ ಪಕ್ಷದ ನಾಯಕತ್ವವನ್ನು ಒಪ್ಪಿಕೊಂಡ ಸೋನಿಯಾ ಗಾಂದಿ ಅವರ ಸಾರಥ್ಯದಲ್ಲಿ ಲೋಕಸಭೆ ಚುನಾವಣೆ ಎದುರಿಸುವ ನಿರ್ಣಯ ಕೈಗೊಂಡಿತು.
ಈ ನಿರ್ಣಯದ ನಂತರ ಭಾವೋದ್ವೇಗದಿಂದ ಹಿಂದಿ ಮತ್ತು ಆಂಗ್ಲ ಭಾಷೆಗಳ ಭಾಷಣವನ್ನು ಓದಿದ ಸೋನಿಯಾ ಗಾಂದಿ ಅವರು ತಮ್ಮನ್ನು ಪ್ರಧಾನ ಮಂತ್ರಿ ಅಭ್ಯರ್ಥಿಯನ್ನಾಗಿ ಬಿಂಬಿಸುವ ಬಗ್ಗೆ ಒಲವು ತೋರಲಿಲ್ಲ.

50 ವರ್ಷಗಳ ಹಿಂದೆ
ಭಾನುವಾರ, 26-05-1974

• ಭಾರತದ ಬಗ್ಗೆ ಭಯ ಅನಗತ್ಯ: ಶ್ರೀಮತಿ ಗಾಂಧಿ ಆಶ್ವಾಸನೆ

ನವದೆಹಲಿ, ಮೇ 25
ಭಾರತದ ಅಣುಸಾಧನ ಆಸ್ಫೋಟನೆ ಬಗ್ಗೆ ಎದ್ದಿರುವ ಬೊಬ್ಬೆ ತಮಗೆ ಅರ್ಥವಾಗದು ಎಂದು ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಇಲ್ಲಿ ತಿಳಿಸಿ, ಭಾರತದ ಬಗ್ಗೆ ನೆರೆರಾಷ್ಟ್ರಗಳು ಭಯಪಡಬೇಕಾದುದಿಲ್ಲವೆಂದು ಭರವಸೆ ನೀಡಿದರು.
ಭಾರತದ ಅಣುಸಾಧನ ಆಸ್ಫೋಟನೆಯಿಂದ ಹೊಸ ಬಿಕ್ಕಟ್ಟು ಉಂಟಾಗಿದೆಯೆಂಬ ವಾದಗಳನ್ನು ಅವರು ತಿರಸ್ಕರಿಸಿದರು.
ಆಫ್ರಿಕಾ ದಿನದ ಅಂಗವಾಗಿ ಏರ್ಪಡಿಸಲಾಗಿದ್ದ ಸಭೆಯೊಂದರಲ್ಲಿ ಅವರು ಈ ರೀತಿ ತಿಳಿಸಿದರು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ
ಭಾನುವಾರ ಮೇ 26, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣತೃತೀಯ ಗಂ. 18-07 ನಕ್ಷತ್ರ: ಮೂಲ ಗಂ. 10-36 ಯೋಗ: ಸಾಧ್ಯ ಗಂ. 08-31 ಕರಣ: ವಣಿಜ ಗಂ. 6-36, ವೃಷಭ ಮಾಸದ ನೇ 12 ದಿನ, ಮಳೆನಕ್ಷತ್ರ: ರೋಹಿಣಿ 1.
ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-06 ಸೂರ್ಯಾಸ್ತ : 06-49
ಮುಸ್ಲಿಂ ದಿನಾಂಕ : 17 ಜುಲ್ಕಾಯದ್ ದಿನ ವಿಶೇಷ : ಟಿನಿಟಿ ಭಾನುವಾರ
ಅದೃಷ್ಟ ಸಂಖ್ಯೆ : 9, 8

ಮೇಷ: ಅನುಷ್ಠಾನದ ಉತ್ತಮ ಫಲಗಳು ನಿಮ್ಮ ವರ್ಚಸ್ಸನ್ನು ಅಧಿಕಗೊಳಿಸುತ್ತದೆ. ವಿದ್ಯಾವಂತರಾಗಿದ್ದರು ಸಹ ಪ್ರಜ್ಞಾವಂತಿಕೆಯನ್ನು ಕಳೆದುಕೊಂಡರೆ ವಿದ್ಯೆಗೆ ಬೆಲೆ ಬರುವುದಿಲ್ಲ. ಅಭಿಮಾನಿಗಳ ಅಭಿಲಾಷೆಯನ್ನು ಕಡೆಗಣಿಸದಿರಿ.

ವೃಷಭ: ಇಂಜಿನಿಯರಿಂಗ್ ಮುಗಿಸುವ ಹಂತದ ವಿದ್ಯಾರ್ಥಿಗಳು ಪರದೇಶಕ್ಕೆ ಹೋಗುವುದಿದ್ದಲ್ಲಿ ಆದಷ್ಟು ಬೇಗ ಕೆಲವು ಕೋರ್ಸ್‌ಗಳನ್ನು ಮಾಡಿಕೊಳ್ಳುವ ಯೋಚನೆ ಮಾಡಿ. ಕೆಲಸದ ನಿರ್ವಹಣೆಯನ್ನು ಉತ್ತಮವಾಗಿ ಮಾಡುವಿರಿ.

ಮಿಥುನ: ನಿಮ್ಮ ಹರಿತವಾದ ಮಾತುಗಳು ಕೆಲವರ ತೇಜೋವಧೆಯನ್ನು ಮಾಡಬಹುದು ಆದರೆ ಅದಕ್ಕೆ ಅವಕಾಶವನ್ನು ಕೊಡದಿರಿ. ನಿಷ್ಠಾವಂತ ಸಂಗಾತಿಯಾಗಿರುವ ನಿಮಗೆ ಉಡುಗೊರೆ ದೊರೆಯುವ ಸಂಭವವಿದೆ.

ಕರ್ಕಾಟಕ: ಹಲವಾರು ಕೆಲಸಗಳಲ್ಲಿ ಅಡೆತಡೆ ಉಂಟಾಗುತ್ತಿರುವುದು ಜನ್ಮಸ್ಥಾನದ ದೇವರ ಹರಕೆಯನ್ನು ತೀರಿಸದ ಪ್ರಭಾವ ಇದ್ದಿರಬಹುದು. ಸಕಲ ವಿಘ್ನಗಳನ್ನು ಕಳೆದುಕೊಂಡು ಕಾರ್ಯಸಾಧನೆಗಾಗಿ ಗಣಪತಿಯನ್ನು ಪ್ರಾರ್ಥಿಸಿ.

ಸಿಂಹ: ಕೆಲವೊಂದು ವಿಷಯಗಳು ಹೀಗಾಗಬಹುದು ಎಂಬ ಅನುಭವ ನಿಮಗಾಗುತ್ತಿದ್ದರು ಸಹ ಆಗುವ ಅವಘಡವನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ. ಹೆಚ್ಚು ಜ್ಞಾನ ಪಡೆಯುವ ಮನಸ್ಸಿನಿಂದ ಪರ ಊರಿಗೆ ತೆರಳುವ ಸಾಧ್ಯತೆ ಇದೆ.

ಕನ್ಯಾ: ದಾಯದಿವರ್ಗದ ಜನರಿಗೆ ಅವರು ನಿಮ್ಮನ್ನು ಸತ್ಕರಿಸುವಷ್ಟು ಸತ್ಕಾರವು ಸಾಕಾಗುತ್ತದೆ. ನೀವು ಮಾಡಿದ ವ್ಯವಹಾರ ವಿಶ್ಲೇಷಣೆಗೂ ವಾಸ್ತವ ಪರಿಸ್ಥಿತಿಗೂ ಹಲವಾರು ವ್ಯತ್ಯಾಸಗಳು ಉಂಟಾಗಬಹುದು.

ತುಲಾ: ಪ್ರಾರ್ಥನೆಯನ್ನು ಮಾಡದೆ ಪ್ರಾರಂಭ ಮಾಡಿದ ಕೆಲಸಗಳಿಗೆ ಹಲವಾರು ವಿಘ್ನಗಳು ಬಂದೊದಗಬಹುದು. ಮಕ್ಕಳ ಆಟಿಕೆ ಸಾಮಾನು ಮಾರಾಟಗಾರರಿಗೆ ಲಾಭವಿದೆ. ನಿತ್ಯದ ಕೆಲಸ ಕಾರ್ಯಗಳಿಂದ ಸ್ವಲ್ಪ ಮುಕ್ತಿ ಸಿಗುವ ಅವಕಾಶವಿದೆ.

ವೃಶ್ಚಿಕ: ಮನೆಯಲ್ಲಿನ ಸಂತೋಷವು ಇಂದು ನಿಮ್ಮ ಅನಿರೀಕ್ಷಿತ ಭೇಟಿಯಿಂದ ಇಮ್ಮಡಿಯಾಗುತ್ತದೆ. ಪುಷ್ಪ ವಿನ್ಯಾಸಕರ ಅಪರೂಪದ ಪುಷ್ಪ ಸಂಯೋಜನೆಯು ಪ್ರಸಿದ್ಧಿಯನ್ನು ಗಳಿಸುವುದು. ತವರಿನ ಸೆಳೆತ ಹೆಚ್ಚಾಗುತ್ತದೆ.

ಧನು: ಸಸ್ಯ ಶಾಸ್ತ್ರಜ್ಞರು ಶಿಲೀಂದ್ರಗಳ ಅಧ್ಯಯನ ನಡೆಸುವುದಿದ್ದಲ್ಲಿ ಮುಂಜಾಗ್ರತೆ ವಹಿಸಿ. ಅಮೂಲ್ಯವಾದ ವಸ್ತುವಿನ ಪ್ರಾಪ್ತಿಯಿಂದಾಗಿ ಸಂತೋಷ ಹೊಂದುವಿರಿ. ಊಟ ಉಪಹಾರಗಳನ್ನು ಇಂದು ಸ್ವಗೃಹದಲ್ಲಿ ಮಾಡಿ.

ಮಕರ: ಕೆಲವು ಕೆಲಸಗಳನ್ನು ನೀವೊಬ್ಬರೆ ಮಾಡಬಹುದೆಂದು ತಿಳಿದರು ಸಹ ಇತರರ ಸಹಾಯದಿಂದ ಕಡಿಮೆ ಸಮಯದಲ್ಲಿ ಮುಗಿಸಬಹುದೆಂಬುದನ್ನು ಕಂಡುಕೊಳ್ಳಿ. ಕುಲದೇವರ ದರ್ಶನ ಮಾಡುವ ಮನಸ್ಸಾಗಬಹುದು.

ಕುಂಭ: ಇಂದು ನೀವು ನಡೆಸಿದ ಅವಘಡವನ್ನು ಸರಿಪಡಿಸಿಕೊಂಡು ಮರೆಯಲು ಹೆಚ್ಚಿನ ಸಮಯ ಹಿಡಿಯಬಹುದು. ಸಹೋದರರ ನಡುವಿನ ವ್ಯಾಜ್ಯಗಳು ಮನೆಯಿಂದ ಹೊರಗೆ ಹೋಗುವುದು ಸರಿಯಲ್ಲ.

ಮೀನ: ಮೊಮ್ಮಗನ ವಯಸ್ಸಿಗೆ ಮೀರಿದ ಕೆಲವು ಆಟೋಟಗಳನ್ನು ನೋಡಿ ಮನಸ್ಸು ಪ್ರಫುಲ್ಲವಾಗುವುದು. ವ್ಯವಹಾರದ ಪಾರದರ್ಶಕತೆಯು ಶುಭ ತರುತ್ತದೆ. ಚರ್ಮ ಸಂಬಂಧಿ ತೊಂದರೆಗಳು ಪೀಡಿಸಬಹುದು.

ಪದಬಂಧ 5692
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇವ ಪೂಜಾ ತಂತ್ರವನ್ನು ತಿಳಿಸುವ ಶಾಸ್ತ್ರ (3)
3.ತಾರೀಕು ಇಲ್ಲಿ ನಮೂದಾಗಿದೆ (3)
4.ಬಿಡದಿ ಬಳಿಯಲ್ಲಿರುವ ಹೆಂಡತಿ (3)
6.ಕ್ರೀಡೆಗೊಂದು ಪರ್ಯಾಯ ಪದ (2)
7.ತಿರುಗಿದ್ದಾಗ ವನದಲ್ಲಿ ಹೊಸದು ಕಂಡಿದೆ (2)
9.ಹಾವು ವಾಸಮಾಡುವ ಸ್ಥಳ (2)
13.ಈತ ಮದುವೆಯಾಗುತ್ತಿರುವ ಗಂಡು (2)
14.ಬಾಗಿಲಿಗೆ ಹಾಕುವ ಕೊಂಡಿ (3)
15.ಜೋಪಾನ ಎಂದು ಹೀಗನ್ನಿ (3)
16.ನಗರದಿಂದ ತಂದ ಚರ್ಮವಾದ್ಯ (3)

ಮೇಲಿಂದ ಕೆಳಕ್ಕೆ
1.ಆಳು ಹೊಡೆದುಕೊಂಡು ಬಂದಿರುವ ಹಸು (3)
2.ಮಾತೆ ಮತ್ತೆ ಮತ್ತೆ ತೋರುವ ಪ್ರೀತಿ (3)
3.ದಿಟ್ಟತನದಿಂದ ನುಡಿದ ಸತ್ಯ (2)
5.ಇಪ್ಪತ್ನಾಲ್ಕು ಗಂಟೆಗಳ ಕಾಲ (2)
6.ಉದ್ದವಾದ ತೋಳು (5)
8.ಬಣ್ಣಗುಂದುವಿಕೆಯನ್ನು ಹೀಗನ್ನಿ (5)
10.ತಿರುಗಿದ ಮನಸ್ಸು (2
11.ಮುದ್ರೆ ಒತ್ತುವುದು ಅಥವಾ ಗುರುತು ಮಾಡುವುದು (3)
12.ಹಳೆಯ ಸಾಮಾನುಗಳನ್ನು ಮಾರುವ ಸ್ಥಳ (3)
13.ವರ್ತಮಾನದಲ್ಲೇ ನೋಡುತ್ತಿರುವ ಅರಣ್ಯ(2)



5691ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಲೆಮಾರಿ 3.ಆಘ್ರಾಣಿಸು
5.ದಿವ್ಯ 7.ತಿರುಕ
8.ಹಂತ 9.ಸತ್ವ
10.ಅಸುರ 12.ಕರ
14.ಯಮಸುತ 15.ಪರಸ್ಪರ

ಮೇಲಿಂದ ಕೆಳಕ್ಕೆ:
1.ಅಷ್ಟಪದಿ 2.ರಿಯಾಯಿತಿ
3.ಆಮುಷ್ಮಿಕ 4.ಸುರಕ್ಷಿತ
6.ವ್ಯಕ್ತಿತ್ವ 8.ಹಂತಕ
9.ಸಮುದಾಯ 10.ಅನುಚಿತ
11.ರಜನಿಪ 13.ರತ್ನಾಕರ

ಸುಡೊಕು 6077

7				5			9	
	2		1		9	6		5
		5		3			1	
					4	1		9
9		1	5	8			4	
4				1		3		7
			3		7			1
	6					7	3	
				2			6	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6076 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಓಲೈಕೆ ರಾಜಕಾರಣ’ದ ವಿರುದ್ಧ ಪ್ರಧಾನಿ ತೀವ್ರ ವಾಗ್ದಾಳಿ • ಮೋದಿ ಬಳಸಿದ ಪದಗಳ ಬಗ್ಗೆ ವಿರೋಧ ಪಕ್ಷಗಳ ಟೀಕೆ

‘ಇಂಡಿಯಾ ಕೂಟವು ‘ಮುಜ್ರಾ’ ಮಾಡುತ್ತಿದೆ’

ದೆಹರಿ/ಬಿಕ್ರಮ್/ಘಾಜಿಪುರ (ಪಿಟಿಐ): ‘ಇಂಡಿಯಾ’ ಕೂಟವು ಮುಸ್ಲಿಂ ಮತಬ್ಯಾಂಕ್ ಅಡಿಯಾಳಾಗಿದ್ದು, ಅದರ ಮುಂದೆ ‘ಮುಜ್ರಾ’ (ನೃತ್ಯ) ಮಾಡುತ್ತಿದೆ ಎಂದು ಟೀಕಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಅದು (‘ಇಂಡಿಯಾ’ ಕೂಟ) ದಲಿತರು, ಹಿಂದುಳಿದ ವರ್ಗಗಳ ಮೀಸಲಾತಿ ಕಸಿಯಲು ಅವಕಾಶ ನೀಡುವುದಿಲ್ಲ ಎಂದು ಶನಿವಾರ ಶಪಥ ಮಾಡಿದರು.

ಕಾರಾಕಾಟ್ ಮತ್ತು ಪಾಟಲಿಪುತ್ರ ಲೋಕಸಭಾ ಕ್ಷೇತ್ರಗಳಲ್ಲಿ ಚುನಾವಣಾ ರ‍್ಯಾಲಿ ನಡೆಸಿದ ಅವರು, ‘ಬಿಹಾರವು ಸಾಮಾಜಿಕ ನ್ಯಾಯದ ಹೋರಾಟಕ್ಕೆ ಹೊಸ ದಿಕ್ಕು ನೀಡಿದ ನೆಲವಾಗಿದೆ. ಎಸ್‌ಸಿ, ಎಸ್‌ಟಿ, ಒಬಿಸಿ ಸಮುದಾಯಗಳ ಹಕ್ಕುಗಳನ್ನು ಕಸಿದು, ಅವನ್ನು ಮುಸ್ಲಿಮರಿಗೆ ನೀಡುವ ‘ಇಂಡಿಯಾ’ ಕೂಟದ ಪ್ರಯತ್ನಗಳನ್ನು ವಿಫಲಗೊಳಿಸುತ್ತೇನೆ ಎಂದು ನಾನು ಇಲ್ಲಿ ಘೋಷಿಸುತ್ತೇನೆ’ ಎಂದು ಹೇಳಿದರು.

‘ರಾಜ್ಯದ ವಲಸಿಗರ ಬಗ್ಗೆ ಪಂಜಾಬ್, ತೆಲಂಗಾಣದ ಕಾಂಗ್ರೆಸ್ ನಾಯಕರು ಮತ್ತು ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದ ಡಿಎಂಕೆ, ಟಿಎಂಸಿ ನಾಯಕರು ಅವಹೇಳನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ತಮ್ಮ ಲಾಟೀನಿನೊಂದಿಗೆ (ಚುನಾವಣಾ ಚಿಹ್ನೆ) ‘ಮುಜ್ರಾ’ ಮಾಡುತ್ತಿರುವ ಆರ್‌ಜೆಡಿ ಮುಖಂಡರಿಗೆ, ಅದನ್ನು ಪ್ರತಿಭಟಿಸಿ ಒಂದು ಮಾತು ಆಡುವ ಧೈರ್ಯವೂ ಇಲ್ಲ’ ಎಂದು ಟೀಕಿಸಿದರು.

‘ಇಂಡಿಯಾ’ ಕೂಟ ಅಧಿಕಾರಕ್ಕೆ ಬಂದರೆ, ಅವರು ಮಾಡುವ ಮೊದಲು ಕೆಲಸ, ನ್ಯಾಯಾಲಯ ಕೂಡ ಏನೂ ಮಾಡಲು ಆಗದಂತೆ ಮುಸ್ಲಿಮರಿಗೆ ಮೀಸಲಾತಿ ನೀಡಲು ಸಂವಿಧಾನವನ್ನು ಬದಲಾಯಿಸುವುದು. ನನ್ನ ಹೇಳಿಕೆ ಸುಳ್ಳು ಎನ್ನುವುದಾದರೆ, ಹಾಗೆ ಮಾಡುವುದಿಲ್ಲ ಎಂದು ಲಿಖಿತ ರೂಪದಲ್ಲಿ ನೀಡಿ ಎಂದರೂ ಅವರು ನೀಡಿಲ್ಲ. ಏಕೆಂದರೆ, ಅವರಲ್ಲಿ ತಪ್ಪಿತಸ್ಥ ಭಾವನೆ ಇದೆ’ ಎಂದು ಪ್ರತಿಪಾದಿಸಿದರು.

ಯಾದವರು ಸೇರಿದಂತೆ ಆರ್‌ಜೆಡಿಯ ಪಾರಂಪರಿಕ ಬೆಂಬಲಿಗರಾದ ಕೆಲವು ಸಮುದಾಯಗಳ ಹೆಸರನ್ನು ಪ್ರಸ್ತಾಪಿಸಿದ ಮೋದಿ, ‘ಇಂಡಿಯಾ’ ಕೂಟದ ಪ್ರಯತ್ನಗಳು ಫಲಿಸಿದರೆ ನೀವು ಮೀಸಲಾತಿ ಕಳೆದುಕೊಳ್ಳಲಿದ್ದೀರಿ ಎಂದು ಹೇಳಿದರು.

‘ಆದಾಗ್ಯೂ, ವಿರೋಧಿ ಕೂಟವು ಜೂನ್ 4ರಂದು ಸೋಲಲಿದ್ದು, ಆರ್‌ಜೆಡಿ ಮತ್ತು ಕಾಂಗ್ರೆಸ್ ಕಾರ್ಯಕರ್ತರು ಪರಸ್ಪರರ ಬಟ್ಟೆಗಳನ್ನು ಹರಿದುಕೊಳ್ಳಲಿದ್ದಾರೆ. ಕಾಂಗ್ರೆಸ್‌ನ ‘ಶಾಹಿ’ ಪರಿವಾರವು ಸೋಲಿನ ಸಂಪೂರ್ಣ ಹೊಣೆಗಾರಿಕೆಯನ್ನು ಮಲ್ಲಿಕಾರ್ಜುನ ಖರ್ಗೆ ಅವರ ಮೇಲೆ ಹೊರಿಸಿ, ರಜೆಗಾಗಿ ವಿದೇಶಕ್ಕೆ ಹಾರಲಿದೆ’ ಎಂದು ತಿಳಿಸಿದರು.

ಉದ್ಯೋಗಕ್ಕಾಗಿ ಜನರ ಭೂಮಿ ಕಸಿದುಕೊಂಡವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಲಾಲೂ ಪ್ರಸಾದ್ ಹೆಸರು ಪ್ರಸ್ತಾಪಿಸದೇ ನುಡಿದರು.

ನಿರಂತರ ವಿದ್ಯುತ್ ಸಂಪರ್ಕ ಹಾಗೂ ಹೆಚ್ಚು ಪಕ್ಕಾ ಮನೆಗಳೊಂದಿಗೆ ತಮ್ಮ ಮುಂದಿನ ಐದು ವರ್ಷಗಳ ಆಡಳಿತದಲ್ಲಿ ಬಿಹಾರದ ತ್ವರಿತ ಅಭಿವೃದ್ಧಿಗಾಗಿ ಶ್ರಮಿಸುವುದಾಗಿ ಭರವಸೆ ನೀಡಿದ ಅವರು, ಹಿಂದಿನ ಯುಪಿಎ ಸರ್ಕಾರ ಜನರಿಗೆ ಉಚಿತ ಆಹಾರ ಧಾನ್ಯ ಒದಗಿಸುವಲ್ಲಿ ವಿಫಲವಾಗಿದೆ ಎಂದು ಆರೋಪಿಸಿದರು.

ನಂತರ ಉತ್ತರ ಪ್ರದೇಶದ ಘಾಜಿಪುರದಲ್ಲಿ ಚುನಾವಣಾ ಪ್ರಚಾರ ನಡೆಸಿದ ಮೋದಿ, ‘ಕಾಂಗ್ರೆಸ್ ಕೆಲಸಗಳನ್ನು ವಿಳಂಬ ಮಾಡುವುದರಲ್ಲಿ ಮತ್ತು ಹಕ್ಕು ಕಸಿಯುವುದರಲ್ಲಿ ಪ್ರಾವೀಣ್ಯತೆ ಗಳಿಸಿದೆ. ನಮ್ಮ ಸೈನಿಕರು ಒಂದು ಶ್ರೇಣಿ, ಒಂದು ಪಿಂಚಣಿ ಪಡೆಯಲು ಕೂಡ ಅವರು ಬಿಡಲಿಲ್ಲ. ಮೋದಿ ಬಂದ ನಂತರ ಅದು ಜಾರಿಯಾಯಿತು’ ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಬಿಹಾರದ ಪಟ್ನಾದಲ್ಲಿ ಚುನಾವಣಾ ಪ್ರಚಾರ ನಡೆಸಿದರು. ಉಪಮುಖ್ಯಮಂತ್ರಿ ವಿಜಯ್ ಕುಮಾರ್ ಸಿನ್ಹಾ, ಎಲ್‌ಜೆಪಿ ಮುಖ್ಯಸ್ಥ ಚಿರಾಗ್ ಪಾಸ್ವಾನ್ ಅವರೂ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಚುನಾವಣೆಯು ಮುಗಿಯುವ ಮುನ್ನವೇ ‘ಇಂಡಿಯಾ’ ಕೂಟವು ಮತಗಟ್ಟೆ ಸಮೀಕ್ಷೆಗಳನ್ನು ಮಾಡಿಸುತ್ತಿದೆ. ಶೀಘ್ರದಲ್ಲೇ ಅವರು ಇವಿಎಂಗಳ ವಿರುದ್ಧ ಕಿರುಚುತ್ತಾ ವಾಪಸ್ ಹೋಗಲಿದ್ದಾರೆ

ನರೇಂದ್ರ ಮೋದಿ, ಪ್ರಧಾನಿ

‘ಸ್ಮಾರ್ಟ್ ಸಿಟಿ ಎಲ್ಲಿ ಕಣ್ಮರೆಯಾಯಿತು?’

ನವದೆಹಲಿ (ಪಿಟಿಐ): ಪಟ್ನಾ ಸ್ಮಾರ್ಟ್ ಸಿಟಿ, ನಮಾಮಿ ಗಂಗೆಯ ಹಣ ಎಲ್ಲಿ ಕಣ್ಮರೆಯಾಯಿತು ಎಂದು ಕಾಂಗ್ರೆಸ್ ಪ್ರಧಾನಿ ನರೇಂದ್ರ ಮೋದಿಯನ್ನು ಶನಿವಾರ ಪ್ರಶ್ನಿಸಿದೆ.

ಪ್ರಧಾನಿ ಮೋದಿ ಅವರು ಬಿಹಾರದಲ್ಲಿ ಚುನಾವಣಾ ಪ್ರಚಾರ ನಡೆಸಿದ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ.

‘ಬಿಹ್ತಾ ವಿಮಾನ ನಿಲ್ದಾಣ ಎಂದಿಗಾದರೂ ನಿರ್ಮಾಣವಾಗುವುದೇ? ಮತ್ತೊಂದು ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ತಡೆಗಟ್ಟುವಲ್ಲಿ ಬಿಜೆಪಿ ವಿಫಲವಾಗಿದ್ದೇಕೆ? ಪಟ್ನಾ ವಿಶ್ವವಿದ್ಯಾಲಯಕ್ಕೆ ಕೇಂದ್ರೀಯ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ನಿರಾಕರಿಸಿದ್ದೇಕೆ? ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಬಕ್ಸರ್‌ನಲ್ಲಿ ಅನೇಕ ಅಗತ್ಯ ಯೋಜನೆಗಳು ಅಪೂರ್ಣಗೊಂಡಿರುವುದು ಏಕೆ? ಚೌಸಾದಲ್ಲಿ ರೈತರು 500ಕ್ಕೂ ಹೆಚ್ಚು ದಿನಗಳಿಂದ ಬಿಜೆಪಿ ವಿರುದ್ಧ ಪ್ರತಿಭಟನೆ ಮಾಡುತ್ತಿರುವುದು ಏಕೆ? ಬಿಹಾರದಲ್ಲಿ ನರೇಗಾ ಜಾರಿ ಅತ್ಯಂತ ಕಳಪೆಯಾಗಿರುವುದು ಏಕೆ’ ಎಂದು ಪ್ರಶ್ನಿಸಿದ್ದಾರೆ.

‘ರಾಜ್ಯದ ಪ್ರಮುಖ ಮೂಲಸೌಕರ್ಯ ಯೋಜನೆಗಳು ನಿಗದಿತ ವೇಳೆಗೆ ಪೂರ್ಣಗೊಳ್ಳದೇ ಕುಂಟುತ್ತಾ ಸಾಗುತ್ತಿವೆ. ಸಾರ್ವಜನಿಕರ ಹಣ ಏಕೆ ಹೀಗೆ ಅಪವ್ಯಯ ಮಾಡಲಾಗುತ್ತಿದೆ ಎಂದು ಪ್ರಧಾನಿ ಹೇಳುವರೇ’ ಎಂದು ಪ್ರಶ್ನಿಸಿದ್ದಾರೆ.

ಪ್ರತಿಕ್ರಿಯೆಗಳು

‘ಎಂ’ ಅಕ್ಷರದಿಂದ ಆರಂಭವಾಗುವ ಪದಗಳ ಬಗ್ಗೆ ಪ್ರಧಾನಿ ಅವರಿಗೆ ಏಕೆ ಆಕರ್ಷಣೆ? ಮುಸಲ್ಮಾನ್, ಮಚ್ಲಿ, ಮಂಗಳಸೂತ್ರ, ಮಟನ್.. ಈಗ ಮುಜ್ರಾ. ಭಾರತದ ಪ್ರಧಾನಿ ಈ ರೀತಿ ಮಾತನಾಡುವುದು ಉಚಿತವೇ?
ಕ್ಲೈಡ್ ಕ್ರಾಸ್ಟೊ, ಎನ್‌ಸಿಪಿ (ಎಸ್‌ಪಿ) ಮುಖಂಡ

ನಮಗೆ ಹಿಂದೆ ಪ್ರಧಾನಿ ಜತೆಗೆ ಭಿನ್ನಾಭಿಪ್ರಾಯಗಳಿದ್ದವು. ಈಗ ಅವರಿಗೆ ವೈದ್ಯಕೀಯ ನೆರವಿನ ಅಗತ್ಯವಿದೆಯೇನೋ ಎಂದು ಆತಂಕವಾಗುತ್ತಿದೆ. ಅವರು ಇತ್ತೀಚೆಗೆ ತಮ್ಮನ್ನು ತಾವು ‘ದೈವಿಕ ಸಾಧನ’ ಎಂದು ಕರೆದುಕೊಂಡಿದ್ದರು. ಅದು ಭವ್ಯತೆಯ ಭ್ರಮೆಯನ್ನು ಸೂಚಿಸುತ್ತಿದೆ
ಮನೋಜ್ ಕುಮಾರ್ ಝಾ, ಆರ್‌ಜೆಡಿ ಮುಖಂಡ

ಬಿಹಾರದಲ್ಲಿ ಪ್ರಧಾನಿ ಆಡಿದ ಮಾತುಗಳನ್ನು ನೀವು ಕೇಳಿದ್ದೀರಾ.. ಅವರು ಎಂತಹ ಪದಗಳನ್ನು ಬಳಸಿದ್ದಾರೆ ಎಂದರೆ, ದೇಶದ ಚರಿತ್ರೆಯಲ್ಲಿ ಯಾವ ಪ್ರಧಾನಿಯೂ ಅಂತಹ ಮಾತುಗಳನ್ನು ಆಡಿರಲಾರರು
ಪ್ರಿಯಾಂಕಾ ಗಾಂಧಿ ವಾದ್ರಾ
ಕಾಂಗ್ರೆಸ್ ನಾಯಕಿ

ಇಂದು ಪ್ರಧಾನಿಯ ಬಾಯಿಯಿಂದ ‘ಮುಜ್ರಾ’ ಎನ್ನುವ ಪದವನ್ನು ಕೇಳಿದೆ. ಮೋದಿಜೀ ಇದು ಏನು? ಪ್ರಾಯಶಃ ಬಿಸಿಲಿನಲ್ಲಿ ಚುನಾವಣಾ ಪ್ರಚಾರ ಮಾಡಿದ್ದು ನಿಮ್ಮ ಬುದ್ಧಿಯ ಮೇಲೆ ವಿಪರೀತ ಪರಿಣಾಮ ಬೀರಿರಬಹುದು
ಪವನ್ ಖೇರಾ
ಕಾಂಗ್ರೆಸ್ ಮುಖಂಡ

‘ಪ್ರವಾಹ ಬಂದಾಗ ಮೋದಿ ಎಲ್ಲಿದ್ದರು?’

ಶಿಮ್ಲಾ/ಹಮೀರಪುರ (ಪಿಟಿಐ): ಹಿಮಾಚಲ ಪ್ರದೇಶ ಸರ್ಕಾರವು ಪ್ರವಾಹ ಸಂತ್ರಸ್ತರಿಗೆ ಪರಿಹಾರವನ್ನು ಸರಿಯಾಗಿ ವಿತರಿಸಿಲ್ಲ ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಆರೋಪಕ್ಕೆ ಕಾಂಗ್ರೆಸ್ ನಾಯಕರು ತಿರುಗೇಟು ನೀಡಿದ್ದು, ಕೇಂದ್ರವು ವಿಪತ್ತು ಪರಿಹಾರವಾಗಿ ರಾಜ್ಯಕ್ಕೆ ಎಷ್ಟು ಹಣ ನೀಡಿದೆ ಎಂಬುದನ್ನು ಹೇಳಲಿ ಎಂದು ಪ್ರಶ್ನಿಸಿದ್ದಾರೆ.

ರಾಜ್ಯದಲ್ಲಿ ಚುನಾವಣಾ ಪ್ರಚಾರ ನಡೆಸಿದ ಮುಖ್ಯಮಂತ್ರಿ ಸುಖ್‌ವಿಂದರ್ ಸಿಂಗ್ ಸುಖು, ‘ಹಿಮಾಚಲ ಪ್ರದೇಶ ಸರ್ಕಾರಕ್ಕೆ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಅಡಿ ಲಭ್ಯವಿರುವ ಹಣವಷ್ಟೇ ಸಿಕ್ಕಿದೆ. ರಾಜ್ಯವು ಕೇಂದ್ರಕ್ಕೆ ₹9,900 ಕೋಟಿಯ ಪರಿಷ್ಕೃತ ಅಂದಾಜು ಮೊತ್ತಕ್ಕಾಗಿ ಮನವಿ ಸಲ್ಲಿಸಿತ್ತು. ಆದರೆ, ಕೇಂದ್ರ ಸರ್ಕಾರವು ಹಣ ನೀಡಲೇ ಇಲ್ಲ. ಬಿಜೆಪಿ ನಾಯಕರು ಈ ವಿಚಾರದ ಬಗ್ಗೆ ಸುಳ್ಳು ಹೇಳುವುದನ್ನು ನಿಲ್ಲಿಸಬೇಕು’ ಎಂದು ಹೇಳಿದರು.


ಮಲ್ಲಿಕಾರ್ಜುನ ಖರ್ಗೆ

‘ಪ್ರಧಾನಿ ಮೋದಿ ಅವರು ಕಳೆದ ಮಳೆಗಾಲದ ಪ್ರವಾಹದ ಸಂದರ್ಭದಲ್ಲಿ ಹಿಮಾಚಲಕ್ಕೆ ಭೇಟಿ ನೀಡಿದ್ದರೆ ರಾಜ್ಯದ ಜನರಿಗೆ ಸಂತೋಷವಾಗುತ್ತಿತ್ತು’ ಎಂದು ಸಚಿವ ವಿಕ್ರಮಾದಿತ್ಯ ಸಿಂಗ್ ಹೇಳಿದರು.

‘ರಾಜ್ಯವು ವಿಶೇಷ ಪ್ಯಾಕೇಜ್‌ಗಾಗಿ ಮನವಿ ಮಾಡಿದರೆ, ಸಿಕ್ಕಿದ್ದು ಕೇವಲ ₹300 ಕೋಟಿ. ಅದೂ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಅಡಿ ಮಾತ್ರ. ಹಿಮಾಚಲವನ್ನು ತಮ್ಮ ಎರಡನೆಯ ಮನೆ ಎಂದು ಕರೆದುಕೊಳ್ಳುವ ಪ್ರಧಾನಿ ಪ್ರವಾಹದ ಸಂದರ್ಭದಲ್ಲಿ ಎಲ್ಲಿದ್ದರು’ ಎಂದು ವಿಡಿಯೊ ಸಂದೇಶದಲ್ಲಿ ಸಿಂಗ್ ಪ್ರಶ್ನಿಸಿದ್ದಾರೆ.

‘56 ಇಂಚಿನ ಎದೆ ಎಲ್ಲಿದೆ?’

ಚೀನಾ ದೇಶವು ಭಾರತದ ನೆಲವನ್ನು ಅತಿಕ್ರಮಿಸಿದ್ದು, ಮನೆ, ರಸ್ತೆ ನಿರ್ಮಿಸುತ್ತಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಮೌನವಾಗಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ಆರೋಪಿಸಿದರು. 56 ಇಂಚಿನ ಎದೆ ಎಲ್ಲಿದೆ ಎಂದು ಪ್ರಶ್ನಿಸಿದರು.

ಹಿಮಾಚಲ ಪ್ರದೇಶದ ರೋಹ್ರುವಿನಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, ‘ನಾವು ಪಾಕಿಸ್ತಾನದ ವಿರುದ್ಧ ಹೋರಾಡಿದೆವು, ಬಾಂಗ್ಲಾ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟೆವು’ ಎಂದು ಪ್ರತಿಪಾದಿಸಿದರು.

ಹಿಮಾಚಲ ಪ್ರದೇಶದಲ್ಲಿ 2023ರಲ್ಲಿ ಪ್ರವಾಹಗಳು ಬಂದರೂ ಕೇಂದ್ರ ಸರ್ಕಾರವು ನೆರವು ನೀಡಲಿಲ್ಲ ಎಂದು ಆರೋಪಿಸಿದರು.

ಆರನೇ ಹಂತದಲ್ಲಿ ಮತದಾನ ಮಾಡಿದ ಪ್ರಮುಖರು: ಎಡದಿಂದ: ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ್ ಧನಕರ್, ಕೇಂದ್ರ ಸಚಿವ ಜೈಶಂಕರ್, ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಸುಪ್ರೀಂ ಕೋರ್ಟ್ ಸಿಜೆಐ ಡಿ.ವೈ.ಚಂದ್ರಚೂಡ್
ಕೆಳಗಿನ ಸಾಲು: ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಬಿಜೆಪಿ ಮುಖಂಡ ಬಿ.ಎಲ್‌.ಸಂತೋಷ್ —ಪಿಟಿಐ ಚಿತ್ರ

ಟಿಎಂಸಿ ಕಾರ್ಯಕರ್ತನ ಕೊಲೆ

ಹರೋಆ (ಪಿಟಿಐ): ತಮ್ಮ ಪ್ರಮುಖ ಎದುರಾಳಿ ಸುವೇಂದು ಅಧಿಕಾರಿಯ ಪುರ್ಬ ಮೇದಿನಿಪುರ ಜಿಲ್ಲೆಯಲ್ಲಿ ಬಿಜೆಪಿಯು ಭಯೋತ್ಪಾದನೆ ಮಾಡುತ್ತಿದ್ದು, ಒಬ್ಬ ಟಿಎಂಸಿ ಕಾರ್ಯಕರ್ತನನ್ನು ಹತ್ಯೆ ಮಾಡಲಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಶನಿವಾರ ಆರೋಪಿಸಿದರು.

ಬಶೀರ್‌ಹಾಟ್ ಲೋಕಸಭಾ ಕ್ಷೇತ್ರದ ಹರೋಆದಲ್ಲಿ ಚುನಾವಣಾ ಪ್ರಚಾರ ನಡೆಸಿದ ಅವರು, ‘ನಿನ್ನೆ ಕೂಡ ಅವರು ಪುರ್ಬ ಮೇದಿನಿಪುರದ ಮಹಿಸದಲ್‌ನ ನಮ್ಮ ಪಕ್ಷದ ಸಕ್ರಿಯ ಕಾರ್ಯಕರ್ತನನ್ನು ಹತ್ಯೆ ಮಾಡಿದ್ದಾರೆ. ಚುನಾವಣೆಯಲ್ಲಿ ಸೋಲುವ ಭಯದಿಂದ ಅವರು ಜನರ ಮೇಲೆ ಮತ್ತು ಟಿಎಂಸಿ ಕಾರ್ಯಕರ್ತರ ಮೇಲೆ ದಾಳಿಗಳನ್ನು ಮಾಡುತ್ತಿದ್ದು, ಹತ್ಯೆ ಮಾಡುತ್ತಿದ್ದಾರೆ’ ಎಂದರು.

ಎರಡು ದಿನಗಳ ಹಿಂದೆ ನಂದಿಗ್ರಾಮದಲ್ಲಿ ಬಿಜೆಪಿಯ ಕಾರ್ಯಕರ್ತೆಯೊಬ್ಬರನ್ನು ಹತ್ಯೆ ಮಾಡಲಾಗಿತ್ತು. ಅದರ ನಂತರ ದುಷ್ಕರ್ಮಿಗಳು ಹಲವು ಮನೆಗಳಿಗೆ ಹಾಗೂ ಅಂಗಡಿಗಳಿಗೆ ಬೆಂಕಿ ಹಚ್ಚಿದ್ದರು. ನಂದಿಗ್ರಾಮದ ಘಟನೆಗೆ ಟಿಎಂಸಿ ಗೂಂಡಾಗಳು ಕಾರಣ ಎಂದು ನಂದಿಗ್ರಾಮದ ಬಿಜೆಪಿ ಶಾಸಕ ಸುವೇಂದು ಅಧಿಕಾರಿ ಆರೋಪಿಸಿದ್ದರು. ಆದರೆ, ಅದು ಬಿಜೆಪಿಯ ಎರಡು ಗುಂಪುಗಳ ಸಂಘರ್ಷ ಎಂದು ಟಿಎಂಸಿ ಹೇಳಿತ್ತು.

ಚಂದ್ರಶೇಖರ ಪಾಟೀಲ, ಅಮರನಾಥ ಪಾಟೀಲ, ಪ್ರತಾಪ್ ರೆಡ್ಡಿ ಸೇರಿ 19 ಮಂದಿಯ ಹೋರಾಟ

‘ಕಲ್ಯಾಣ’ದ ಕಣದಲ್ಲಿ ತ್ರಿಕೋನ ಸ್ಪರ್ಧೆ

• ಮನೋಜಕುಮಾರ್ ಗುದ್ದಿ

ಕಲಬುರಗಿ: ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿರುವ ಈಶಾನ್ಯ ಕರ್ನಾಟಕ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಕಾಂಗ್ರೆಸ್‌ನ ಚಂದ್ರಶೇಖರ ಪಾಟೀಲ ಹುಮನಾಬಾದ್ ಹಾಗೂ ಬಿಜೆಪಿಯ ಅಮರನಾಥ ಪಾಟೀಲ ಅವರ ಗೆಲುವಿನ ಓಟಕ್ಕೆ ಪಕ್ಷೇತರ ಅಭ್ಯರ್ಥಿ ಎನ್. ಪ್ರತಾಪ ರೆಡ್ಡಿ ‘ಮೂಗುದಾರ’ ಹಾಕುತ್ತಿದ್ದಾರೆ.

ಬಿಜೆಪಿಯ ಭದ್ರಕೋಟೆಯಾಗಿದ್ದ ಈ ಕ್ಷೇತ್ರದಲ್ಲಿ ಕಳೆದ ಬಾರಿ ಮೊದಲ ಸಲ ಕಾಂಗ್ರೆಸ್ ಗೆಲುವಿನ ನಗೆ ಬೀರಿತ್ತು. ಆಗ ಜೆಡಿಎಸ್‌ನಿಂದ ಸ್ಪರ್ಧಿಸಿ ಪರಾಭವಗೊಂಡಿದ್ದ ಬಳ್ಳಾರಿಯ ಎನ್. ಪ್ರತಾಪ್ ರೆಡ್ಡಿ ಅವರು ಈ ಬಾರಿ ಗೆಲುವು ಸಾಧಿಸಲೇಬೇಕು ಎಂಬ ಹಂಬಲದಿಂದ ವರ್ಷಗಳ ಹಿಂದೆಯೇ ಭೂಮಿಕೆ ಸಜ್ಜು ಮಾಡಿಕೊಂಡಿದ್ದು, ಇವರಿಗೆ ಆಮ್ ಆದ್ಮಿ ಪಕ್ಷ ಬಾಹ್ಯ ಬೆಂಬಲವನ್ನೂ ನೀಡಿದೆ.

ಕ್ಷೇತ್ರವನ್ನು ಮತ್ತೆ ವಶಕ್ಕೆ ಪಡೆಯಲು ಬಿಜೆಪಿ ಈ ಬಾರಿ ತೀವ್ರ ಪ್ರಯತ್ನ ನಡೆಸಿದೆ. ಕಳೆದ ಬಾರಿ ಬಿಜೆಪಿಯು ಕಲಬುರಗಿಯ ಅಮರನಾಥ ಪಾಟೀಲ ಬದಲು ಹೊಸಪೇಟೆಯ ಕೆ.ಬಿ. ಶ್ರೀನಿವಾಸ್ ಅವರನ್ನು ಕಣಕ್ಕಿಳಿಸಿತ್ತು. ಈ ಬಾರಿ ಮತ್ತೆ ಅಮರನಾಥ ಪಾಟೀಲ ಅವರಿಗೇ ಮಣೆ ಹಾಕಿದೆ. ಬಿಜೆಪಿಯ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಯಾದಗಿರಿ ಜಿಲ್ಲೆಯ ಮುಖಂಡ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಸುರೇಶ ಸಜ್ಜನ್ ಅವರ ಮನವೊಲಿಸಿ ಕಣದಿಂದ ಹಿಂದೆ ಸರಿಸುವಲ್ಲಿ ಪಕ್ಷದ ನಾಯಕರು ಯಶಸ್ವಿಯಾಗಿದ್ದಾರೆ. ಆದರೆ, ಕ್ಷೇತ್ರದಲ್ಲಿ ಅಸಮಾಧಾನದ ಹೊಗೆ ಇನ್ನೂ ಕಾಣಿಸಿಕೊಳ್ಳುತ್ತಿದೆ. ಹಾಲಿ ಸದಸ್ಯ ಚಂದ್ರಶೇಖರ ಪಾಟೀಲ ಹುಮನಾಬಾದ್ ಅವರನ್ನೇ ಕಾಂಗ್ರೆಸ್ ಕಣಕ್ಕೆ ಇಳಿಸಿದೆ.

ಕ್ಷೇತ್ರದಲ್ಲಿ ಬಿಜೆಪಿ ಹೊರತುಪಡಿಸಿದರೆ ಪಕ್ಷೇತರ ಅಭ್ಯರ್ಥಿ ಎನ್. ಪ್ರತಾಪ್ ರೆಡ್ಡಿ ಸಕ್ರಿಯವಾಗಿ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಕಾಂಗ್ರೆಸ್ ಅಷ್ಟಾಗಿ ಪ್ರಚಾರದಲ್ಲಿ ತೊಡಗಿಸಿಕೊಂಡಿಲ್ಲ. ಕಳೆದ ಆರು ವರ್ಷಗಳಿಂದ ಕಾಂಗ್ರೆಸ್ ಅಭ್ಯರ್ಥಿ, ವಿಧಾನಪರಿಷತ್ ಹಾಲಿ ಸದಸ್ಯ ಚಂದ್ರಶೇಖರ ಪಾಟೀಲ ಅವರು ಪದವೀಧರರ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರಯತ್ನ ಮಾಡಿಲ್ಲ ಎಂಬುದು ಮತದಾರರ ಆರೋಪ. ಇದರ ನಡುವೆಯೂ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರುವುದರಿಂದ ತಮಗೆ ಹೆಚ್ಚು ಅನುಕೂಲವಾಗಬಹುದು ಎಂಬ ನಿರೀಕ್ಷೆಯಲ್ಲಿ ಚಂದ್ರಶೇಖರ ಇದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ತೋರಿಸಿದ ಹುಮ್ಮಸ್ಸನ್ನು ಕಾಂಗ್ರೆಸ್ ಮುಖಂಡರು ಪರಿಷತ್ ಚುನಾವಣೆಯಲ್ಲಿ ತೋರಿಸುತ್ತಿಲ್ಲ. ಚಂದ್ರಶೇಖರ ಪಾಟೀಲ ಅವರ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರನ್ನು ಹೊರತುಪಡಿಸಿದರೆ ಸಚಿವರು, ಶಾಸಕರು ಕಂಡು ಬರಲಿಲ್ಲ. ಇದಕ್ಕೆ ವ್ಯತಿರಿಕ್ತವೆಂಬಂತೆ ಬಿಜೆಪಿ ಪ್ರಮುಖರುತಮ್ಮ ಪಕ್ಷದ ಅಭ್ಯರ್ಥಿ ಪರ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಹಾಜರಿದ್ದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶಾಸಕ ಬಸವರಾಜ ಬೊಮ್ಮಾಯಿ, ಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಸುನೀಲ ವಲ್ಯಾಪುರೆ ಹಾಗೂ ಪಕ್ಷದ ಶಾಸಕರು ಸಕ್ರಿಯವಾಗಿ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ.

ಕಾಂಗ್ರೆಸ್‌ನಲ್ಲಿ ಇತ್ತೀಚೆಗೆ ಕಲಬುರಗಿಯಲ್ಲಿ ಸಚಿವರಾದ ಪ್ರಿಯಾಂಕ್ ಖರ್ಗೆ, ಡಾ.ಶರಣಪ್ರಕಾಶ ಪಾಟೀಲ ನೇತೃತ್ವದಲ್ಲಿ ಪ್ರಚಾರ ಸಭೆಯೊಂದು ನಡೆದಿದ್ದು ಬಿಟ್ಟರೆ ತಳಮಟ್ಟದ ಕಾರ್ಯಕರ್ತರ ಸ್ಪಂದನೆ ಹೇಳಿಕೊಳ್ಳುವಂತೆ ಕಂಡುಬರುತ್ತಿಲ್ಲ.

ಇತ್ತೀಚಿನ ವರ್ಷಗಳಲ್ಲಿ ಈಶಾನ್ಯ ಪದವೀಧರ ಕ್ಷೇತ್ರದಲ್ಲಿ ಬಿಜೆಪಿಯೇ ಹೆಚ್ಚು ಬಾರಿ ಗೆಲುವು ಸಾಧಿಸಿದೆ. ಬಿಜೆಪಿ ಮುಖಂಡರಾದ ಡಾ.ಎಂ.ಆರ್. ತಂಗಾ ಅವರು ಮೂರು ಬಾರಿ, ಮನೋಹರ ಮಸ್ಕಿ, ಅಮರನಾಥ ಪಾಟೀಲ ತಲಾ ಒಂದು ಬಾರಿ ಗೆಲುವು ಸಾಧಿಸಿದ್ದರು. ಕಾಂಗ್ರೆಸ್‌ನ ಡಾ.ಚಂದ್ರಶೇಖರ ಪಾಟೀಲ ಹುಮನಾಬಾದ್ ಕಳೆದ ಬಾರಿ ಬಿಜೆಪಿಯ ಕೋಟೆ ಛಿದ್ರಗೊಳಿಸಿ ಕಾಂಗ್ರೆಸ್ ಬಾವುಟ ಹಾರಿಸಿದ್ದರು.

ಕಣದಲ್ಲಿ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳಲ್ಲದೇ, ಪಕ್ಷೇತರ ಅಭ್ಯರ್ಥಿಗಳಾಗಿ ಅನಿಮೇಶ ಮಹಾರುದ್ರಪ್ಪ, ಅಬ್ದುಲ್ ಜಬ್ಬಾರ್ ಅಬ್ದುಲ್ ರೆಹಮಾನ್ ಗೋಳಾ, ಕಾಶಿನಾಥ ಎಂ. ಸೋಮಪ್ಪ, ಗವಿಸಿದ್ದಪ್ಪ ಚಂದ್ರಶೇಖರ, ಎನ್.ಗೌರಣ್ಣ, ಪ್ರಭು ನಾರಾಯಣ, ಶರಣ ಐಟಿ ಸೇರಿದಂತೆ 19 ಜನ ಕಣದಲ್ಲಿದ್ದಾರೆ.

ಚುನಾವಣಾ ವಿಷಯಗಳೇನು?

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಇತ್ತೀಚಿನ ವರ್ಷಗಳಲ್ಲಿ ಯಥೇಚ್ಛ ಅನುದಾನ ಹರಿದು ಬರುತ್ತಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಈ ಭಾಗದ ಅಭಿವೃದ್ಧಿ ಆಗುತ್ತಿಲ್ಲ. ನಿರುದ್ಯೋಗದ ಭೂತ ಬೃಹದಾಕಾರವಾಗಿ ಬೆಳೆದಿದ್ದು, ವಿಶ್ವವಿದ್ಯಾಲಯಗಳು, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿ ಆಗುತ್ತಿಲ್ಲ.

ಹೀಗಾಗಿ, ಉನ್ನತ ಪದವಿ ಪಡೆದವರೂ ನಿರುದ್ಯೋಗಿಳಾಗಿದ್ದಾರೆ. ಕುಟುಂಬ ಸಲುಹಲು ಅತಿಥಿ ಉಪನ್ಯಾಸಕರಾಗಿ ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯ ಪದವೀಧರರು ಉದ್ಯೋಗ ಹುಡುಕಿಕೊಂಡು ಬೆಂಗಳೂರು, ಹೈದರಾಬಾದ್‌ಗೆ ವಲಸೆ ಹೋಗುವುದು ಹೆಚ್ಚುತ್ತಲೇ ಇದೆ.



ಒಪಿಎಸ್‌ಗಾಗಿ ಸರ್ಕಾರಿ ನೌಕರರು ಧರಣಿ ನಡೆಸಿದರೂ ಬಿಜೆಪಿ ಸರ್ಕಾರ ಕ್ಯಾರೆ ಎನ್ನಲಿಲ್ಲ. ನಮ್ಮ ಸರ್ಕಾರ ಅವರ ಬೇಡಿಕೆ ಈಡೇರಿಸಲಿದೆ. ಹೀಗಾಗಿ, ನನ್ನನ್ನು ಗೆಲ್ಲಿಸಲಿದ್ದಾರೆ
ಡಾ.ಚಂದ್ರಶೇಖರ ಪಾಟೀಲ
ಕಾಂಗ್ರೆಸ್ ಅಭ್ಯರ್ಥಿ

ಈಗಾಗಲೇ ಒಮ್ಮೆ ಈ ಕ್ಷೇತ್ರ ಪ್ರತಿನಿಧಿಸಿದ್ದರಿಂದ ಪದವೀಧರರ ಸಮಸ್ಯೆಗಳ ಅರಿವಿದೆ. ಮತದಾರರೊಂದಿಗೆ ನಿರಂತರ ಸಂಪರ್ಕ ಇದೆ. ಹೀಗಾಗಿ, ಗೆಲುವು ನಿಶ್ಚಿತ
ಅಮರನಾಥ ಪಾಟೀಲ, ಬಿಜೆಪಿ ಅಭ್ಯರ್ಥಿ

6 ವರ್ಷಗಳಿಂದ ಮತದಾರರೊಂದಿಗೆ ಸಂಪರ್ಕವಿದೆ. ಜೆಡಿಎಸ್, ಬಿಜೆಪಿ, ಕಾಂಗ್ರೆಸ್, ಎಎಪಿಯ ನನ್ನ ಗೆಳೆಯರು ಬೆಂಬಲ ವ್ಯಕ್ತಪಡಿಸಿದ್ದಾರೆ. ನನ್ನ ಪರ ಅಲೆ ಇದೆ
ಎನ್. ಪ್ರತಾಪ್ ರೆಡ್ಡಿ, ಪಕ್ಷೇತರ ಅಭ್ಯರ್ಥಿ

ಚುಟುಕು

‘ಜಮ್ಮು–ಕಾಶ್ಮೀರ: ಶೀಘ್ರ ವಿಧಾನಸಭಾ ಚುನಾವಣೆ’

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯ ವೇಳೆ ಜಮ್ಮು–ಕಾಶ್ಮೀರದಲ್ಲಿ ಉತ್ತಮ ಪ್ರಮಾಣದಲ್ಲಿ ಮತದಾನವಾಗಿದ್ದು, ಅದರಿಂದ ಪ್ರೇರೇಪಿತವಾಗಿರುವ ಚುನಾವಣಾ ಆಯೋಗವು ಶೀಘ್ರದಲ್ಲೇ ಕೇಂದ್ರಾಡಳಿತ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆಯ ಪ್ರಕ್ರಿಯೆಯನ್ನು ಆರಂಭಿಸಲಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಶನಿವಾರ ತಿಳಿಸಿದರು.

ಪಿಟಿಐ ಜತೆಗೆ ಮಾತನಾಡಿದ ಅವರು, ಜಮ್ಮು–ಕಾಶ್ಮೀರದ ಜನ ಅವರದೇ ಸರ್ಕಾರವನ್ನು ಹೊಂದಲು ಅರ್ಹರಾಗಿದ್ದಾರೆ ಎಂದು ಹೇಳಿದರು.

‘ನನ್ನ ಕಿವಿಗೆ ಇದು ಸಂಗೀತದಂತಿದೆ. ಯುವಜನತೆ, ಮಹಿಳೆಯರು ಖುಷಿಯಿಂದ ಮತದಾನ ಮಾಡಲು ದೊಡ್ಡ ಪ್ರಮಾಣದಲ್ಲಿ ಬರುತ್ತಿದ್ದಾರೆ. ಜನರ ಪಾಲ್ಗೊಳ್ಳುವಿಕೆ ಹೆಚ್ಚಾಗಿದ್ದು, ಪ್ರಜಾಪ್ರಭುತ್ವದ ಬೇರುಗಳು ಮತ್ತಷ್ಟು ಬಲಿಷ್ಠವಾಗಿವೆ’ ಎಂದು ಅಭಿಪ್ರಾಯಪಟ್ಟರು.

ಸಂವಿಧಾನದ 370 ವಿಧಿಯ ಅಡಿ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು 2019ರಲ್ಲಿ ರದ್ದು ಮಾಡಿ, ಎರಡು ಕೇಂದ್ರಾಡಳಿತ ಪ್ರದೇಶಗಳನ್ನಾಗಿ ವಿಭಜಿಸಿದ ನಂತರ ಇಲ್ಲಿ ವಿಧಾನಸಭಾ ಚುನಾವಣೆಯೇ ನಡೆದಿಲ್ಲ.

‘ಮುಸ್ಲಿಮರಿಗೆ ಮೀಸಲಾತಿ ಪರಿಶೀಲನೆಗೆ ಸಮಿತಿ’

ಜೈಪುರ (ಪಿಟಿಐ): ಲೋಕಸಭಾ ಚುನಾವಣೆಯ ವೇಳೆ ಮೀಸಲಾತಿಗೆ ಸಂಬಂಧಿಸಿ ಬಿಜೆಪಿ ಮತ್ತು ವಿರೋಧ ಪಕ್ಷಗಳ ನಡುವೆ ಹಗ್ಗಜಗ್ಗಾಟ ನಡೆಯುತ್ತಿರುವುದರ ನಡುವೆಯೇ ರಾಜಸ್ಥಾನದ ಸಚಿವ ಅವಿನಾಶ್ ಗೆಹಲೋತ್ ಅವರು, ‘ರಾಜ್ಯದಲ್ಲಿ ಒಬಿಸಿ ಪ್ರವರ್ಗದ ಅಡಿಯಲ್ಲಿ ಕೆಲವು ಮುಸ್ಲಿಂ ಗುಂಪುಗಳಿಗೆ ಮೀಸಲಾತಿ ನೀಡಿರುವುದನ್ನು ಪರಿಶೀಲಿಸಲಾಗುವುದು’ ಎಂದಿದ್ದಾರೆ.

ಹಿಂದಿನ ಕಾಂಗ್ರೆಸ್ ಸರ್ಕಾರವು ಓಲೈಕೆಯ ರಾಜಕಾರಣಕ್ಕಾಗಿ 1997ರಿಂದ 2013ರ ನಡುವೆ ಮುಸ್ಲಿಮರಿಗೆ ಒಬಿಸಿ ಮೀಸಲಾತಿ ನೀಡಿದೆ ಎಂದು ಆರೋಪಿಸಿದರು.

ಒಬಿಸಿ ಪ್ರವರ್ಗದಡಿ ಮುಸ್ಲಿಮರ 14 ಜಾತಿಗಳನ್ನು ಸೇರಿಸಲಾಗಿದೆ. ಈ ಕುರಿತು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚಿಸಲಾಗುವುದು ಎಂದು ತಿಳಿಸಿದರು.

ಧರ್ಮದ ಆಧಾರದಲ್ಲಿ ಯಾವುದೇ ಜಾತಿಗೆ ಮೀಸಲಾತಿ ಸೌಲಭ್ಯ ನೀಡಬಾರದು ಎಂದು ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಉಲ್ಲೇಖಿಸಿದ್ದಾರೆ. ಧರ್ಮದ ಆಧಾರದಲ್ಲಿ ಮೀಸಲಾತಿ ನೀಡುವುದು ಅಸಾಂವಿಧಾನಿಕ ಎಂದು ತಿಳಿಸಿದರು.

ಬಿಜೆಪಿ, ಕಾಂಗ್ರೆಸ್ ನೀತಿಗಳಿಗೆ ಮಾಯಾವತಿ ಟೀಕೆ

ಗೋರಖ್‌ಪುರ (ಉತ್ತರ ಪ್ರದೇಶ) (ಪಿಟಿಐ): ಬಿಜೆಪಿ ಮತ್ತು ಕಾಂಗ್ರೆಸ್‌ನ ತಪ್ಪು ನೀತಿಗಳಿಂದಾಗಿ ಆ ಪಕ್ಷಗಳನ್ನು ಜನರು ಕೈಬಿಟ್ಟಿದ್ದಾರೆ ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಶನಿವಾರ ಹೇಳಿದರು.

ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಜಾತಿವಾದಿ, ಬಂಡವಾಳಶಾಹಿ ನೀತಿಗಳಿಂದಾಗಿ ಈ ಬಾರಿ ಎನ್‌ಡಿಎ ಕೇಂದ್ರದಲ್ಲಿ ಅಧಿಕಾರಕ್ಕೇರದು ಎಂದರು.

‘ಹಿಂದುತ್ವದ ಹೆಸರಿನಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ಉತ್ತುಂಗಕ್ಕೇರಿವೆ. ಮೇಲ್ವರ್ಗದಲ್ಲಿರುವ ಬಡವರ ಸ್ಥಿತಿಯೂ ಉತ್ತಮವಾಗಿಲ್ಲ. ರಾಜ್ಯದಲ್ಲಿ ಬ್ರಾಹ್ಮಣರಿಗೂ ಕಿರುಕುಳ ನೀಡಲಾಗುತ್ತಿದೆ’ ಎಂದು ಆರೋಪಿಸಿದರು.

‘ಬಿಜೆಪಿ ಸರ್ಕಾರದ ತಪ್ಪು ನೀತಿಗಳು ದೇಶದ ಆರ್ಥಿಕತೆಯ ಮೇಲೆ ಪರಿಣಾಮ ಬೀರಿವೆ. ಬಡತನ, ನಿರುದ್ಯೋಗ ಮತ್ತು ಹಣದುಬ್ಬರ ಏರಿಕೆಯಾಗುತ್ತಿದೆ. ಭ್ರಷ್ಟಾಚಾರ ನಿರ್ಮೂಲನೆಯಾಗಿಲ್ಲ’ ಎಂದು ಟೀಕಿಸಿದರು.

‘ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರ ಕಿಸೆಯ ಹಣದಿಂದ ಜನರಿಗೆ ಉಚಿತ ಪಡಿತರ ವಿತರಿಸುತ್ತಿಲ್ಲ. ಅದನ್ನು ಅವರ ತೆರಿಗೆ ಹಣದಿಂದ ನೀಡಲಾಗುತ್ತಿದೆ’ ಎಂದು ಹೇಳಿದರು.

ಎಂಥಾ ಮಾತು!

ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾದ ಬಳಿಕ ಕೇಂದ್ರದಲ್ಲಿ ಮತ್ತು ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಸರ್ಕಾರ ರಚಿಸಲಿದ್ದೇವೆ. ರಾಹುಲ್ ಬಾಬಾ ಅವರು ವಿಶ್ರಾಂತಿ ಪಡೆಯಲು ಬ್ಯಾಂಕಾಕ್‌ಗೆ ತೆರಳಲಿದ್ದಾರೆ. ಐದು ಹಂತಗಳ ಮತದಾನ ನಡೆದಾಗಲೇ ಪ್ರಧಾನಿ ನರೇಂದ್ರ ಮೋದಿ ಅವರು 310 ಕ್ಷೇತ್ರಗಳನ್ನು ಗೆದ್ದಿದ್ದಾರೆ. ಆರು ಮತ್ತು ಏಳನೇ ಹಂತದ ಮತದಾನವು ಬಿಜೆಪಿಗೆ 400ಕ್ಕಿಂತಲೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲಲು ಸಹಾಯಕವಾಗಲಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಭಯೋತ್ಪಾದನೆಯ ವಿರುದ್ಧ ಹೋರಾಡಲಿದೆ. ದೇಶದ ಆರ್ಥಿಕ ಬೆಳವಣಿಗೆಯ ಖಾತರಿ ನೀಡಲಿದೆ ಮತ್ತು ಬಡವರ ಬಗ್ಗೆ ಕಾಳಜಿ ವಹಿಸಲಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಮೋದಿ ಅವರು ತಮ್ಮ 10 ವರ್ಷದ ಸಾಧನೆಗಳೆಂದು ಹೇಳಿಕೊಳ್ಳುವ ನೋಟು ಅಮಾನ್ಯೀಕರಣ, ಜಿಎಸ್‌ಟಿ, ಅಗ್ನಿವೀರ್, ಕೃಷಿ ಕಾಯ್ದೆಗಳು, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ಪತ್ರಕರ್ತರು, ವಿದ್ಯಾರ್ಥಿಗಳ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆ ಬಳಸಿದ್ದು, ಪೆಟ್ರೋಲ್, ಡೀಸೆಲ್ ಬೆಲೆ ₹100 ದಾಟಿದ್ದು, ಅಡುಗೆ ಅನಿಲ ಸಿಲಿಂಡರ್ ಬೆಲೆ ₹1100 ದಾಟಿದ್ದರ ಬಗ್ಗೆ ಈ ಚುನಾವಣೆಯಲ್ಲಿ ಪ್ರಚಾರ ಮಾಡಲಿ

ಅಶೋಕ್ ಗೆಹಲೋತ್, ಕಾಂಗ್ರೆಸ್ ಮುಖಂಡ

‘ಬಿಜೆಪಿ 140 ಸ್ಥಾನಗಳಲ್ಲಷ್ಟೇ ಗೆಲ್ಲಲಿದೆ’

ದೇವರಿಯಾ (ಉತ್ತರ ಪ್ರದೇಶ) (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ 400ಕ್ಕಿಂತಲೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುತ್ತೇವೆಂಬ ಬಿಜೆಪಿಯ ಘೋಷವಾಕ್ಯವು ನಿರರ್ಥಕವಾಗಲಿದೆ ಮತ್ತು ಆ ಪಕ್ಷವು 140 ಸ್ಥಾನಗಳಲ್ಲಷ್ಟೇ ಗೆಲ್ಲಲಿದೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಶನಿವಾರ ಪ್ರತಿಪಾದಿಸಿದರು.

ಚುನಾವಣಾ ಬಾಂಡ್‌ಗಳ ಮೂಲಕ ಬಿಜೆಪಿಗೆ ಅತಿ ಹೆಚ್ಚು ದೇಣಿಗೆ ನೀಡಿರುವ ಕಂಪನಿಗಳು ಸರಕುಗಳ ಬೆಲೆಯನ್ನು ಹೆಚ್ಚಿಸಲಿವೆ. ಇದರಿಂದ ಹಣದುಬ್ಬರ ಏರಿಕೆಯಾಗಲಿದೆ ಎಂದರು.

ದೇವರಿಯಾ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಖಿಲೇಶ್ ಪ್ರತಾಪ್ ಸಿಂಗ್ ಹಾಗೂ ಕುಶಿನಗರ ಕ್ಷೇತ್ರದ ಎಸ್‌ಪಿ ಅಭ್ಯರ್ಥಿ ಅಜಯ್ ಕುಮಾರ್ ಸಿಂಗ್ ಪರ ಹಮ್ಮಿಕೊಂಡಿದ್ದ ಜಂಟಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಉತ್ತರ ಪ್ರದೇಶದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ ಎಂದು ಹೇಳಿದರು.

‘ಇಂಡಿಯಾ’ ಒಕ್ಕೂಟಕ್ಕೆ ಭಾರಿ ಬೆಂಬಲ ವ್ಯಕ್ತವಾಗಿರುವುದನ್ನು ಗಮನಿಸಿದರೆ, ಜೂನ್ 4ರಂದು ಬಿಜೆಪಿ ಖಂಡಿತವಾಗಿಯೂ ಉತ್ತರ ಪ್ರದೇಶದಲ್ಲಿ ಕೊಚ್ಚಿ ಹೋಗಲಿದೆ. ಲೋಕಸಭಾ ಚುನಾವಣೆಯ ಫಲಿತಾಂಶದ ಬಳಿಕ ಕೇಂದ್ರ ಸರ್ಕಾರ ಮಾತ್ರವಲ್ಲ, ಮಾಧ್ಯಮಗಳೂ ಬದಲಾಗಲಿವೆ’ ಎಂದು ಆಶಯ ವ್ಯಕ್ತಪಡಿಸಿದರು.

‘ಪೂರ್ವಾಂಚಲದ ಜನರು ನಮಗೆ ಆದ್ದೂರಿಯ ಸ್ವಾಗತ ನೀಡಿದ್ದಾರೆ. 2014ರಲ್ಲಿ ಅಧಿಕಾರಕ್ಕೆ ಬಂದವರು 2024ರಲ್ಲಿ ಹೊರನಡೆಯಲಿದ್ದಾರೆ’ ಎಂದರು.

‘ಬಿಜೆಪಿಯು ಹುಸಿ ಭರವಸೆಗಳನ್ನು ನೀಡಿದೆ. ಕೇಂದ್ರದ ಹತ್ತು ವರ್ಷಗಳ ಮತ್ತು ರಾಜ್ಯದ ಏಳು ವರ್ಷಗಳ ಬಿಜೆಪಿ ಆಡಳಿತದಲ್ಲಿ ರೈತರು ಮತ್ತು ಯುವಕರ ಭವಿಷ್ಯ ಅಪಾಯಕ್ಕೆ ಸಿಲುಕಿದೆ’ ಎಂದು ಹೇಳಿದರು.

ಕೇಂದ್ರದಲ್ಲಿ ‘ಇಂಡಿಯಾ’ ಒಕ್ಕೂಟವು ಅಧಿಕಾರಕ್ಕೆ ಬಂದರೆ ‘ಅಗ್ನಿವೀರ್’ ಯೋಜನೆಯನ್ನು ರದ್ದುಗೊಳಿಸಲಾಗುವುದು ಎಂದು ಅಖಿಲೇಶ್ ಭರವಸೆ ನೀಡಿದರು.

ದೇವರಿಯಾ ಮತ್ತು ಕುಶಿನಗರ ಕ್ಷೇತ್ರಗಳಿಗೆ ಜೂನ್ 1ರಂದು ಮತದಾನ ನಡೆಯಲಿದೆ.

ಎನ್‌ಟಿಪಿಸಿಗೆ ₹6,490 ಕೋಟಿ ಲಾಭ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮವು (ಎನ್‌ಟಿಪಿಸಿ) 2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹6,490 ಕೋಟಿ ನಿವ್ವಳ ಲಾಭ ಗಳಿಸಿದೆ.

2022–23ರ ಇದೇ ಅವಧಿಯಲ್ಲಿ ₹4,871 ಕೋಟಿ ಲಾಭ ಗಳಿಸಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 33ರಷ್ಟು ಏರಿಕೆಯಾಗಿದೆ. ಒಟ್ಟು ವರಮಾನವು ₹44,744 ಕೋಟಿಯಿಂದ ₹48,816 ಕೋಟಿಗೆ ಹೆಚ್ಚಳವಾಗಿದೆ. ಹೆಚ್ಚಿದ ವರಮಾನದಿಂದ ಲಾಭದ ಪ್ರಮಾಣ ಏರಿಕೆಯಾಗಿದೆ ಎಂದು ನಿಗಮವು ಷೇರುಪೇಟೆಗೆ ತಿಳಿಸಿದೆ.

2023–24ರ ಪೂರ್ಣ ಹಣಕಾಸು ವರ್ಷದಲ್ಲಿ ₹21,332 ಕೋಟಿ ಲಾಭ ಗಳಿಸಿದೆ. ಹಿಂದಿನ ಇದೇ ಅವಧಿಯಲ್ಲಿ ₹17,121 ಕೋಟಿ ಲಾಭ ಗಳಿಸಿತ್ತು. ವರಮಾನವು ₹1.77 ಲಕ್ಷ ಕೋಟಿಯಿಂದ ₹1.81 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಕಂಪನಿಯ ಮಂಡಳಿಯು ಪ್ರತಿ ಷೇರಿಗೆ ₹3.25 ಡಿವಿಡೆಂಡ್ ನೀಡಲು ಶಿಫಾರಸು ಮಾಡಿದೆ.

ರಿಲಯನ್ಸ್ ಪವರ್‌ಗೆ ₹397 ಕೋಟಿ ನಷ್ಟ

ನವದೆಹಲಿ (ಪಿಟಿಐ): ರಿಲಯನ್ಸ್ ಪವರ್ ಲಿಮಿಟೆಡ್ 2023–24ರ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹397 ಕೋಟಿ ನಷ್ಟ ಕಂಡಿದೆ. ಇಂಧನ ದರದಲ್ಲಿ ಹೆಚ್ಚಳವಾಗಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ.

2022–23ರ ಇದೇ ಅವಧಿಯಲ್ಲಿ ಕಂಪನಿ ₹321 ಕೋಟಿ ಲಾಭ ಗಳಿಸಿತ್ತು. ಆ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಕಂಪನಿಯ ಒಟ್ಟು ವರಮಾನವು ₹1,853 ಕೋಟಿಯಷ್ಟು ಇದ್ದರೆ, 2023–24ರಲ್ಲಿ ಅದರ ಪ್ರಮಾಣವು ₹2,193 ಕೋಟಿಗೆ ಹೆಚ್ಚಳವಾಗಿದೆ. ಇಂಧನ ವೆಚ್ಚವು 2022–23ರ ಕೊನೆಯ ತ್ರೈಮಾಸಿಕದಲ್ಲಿ ₹823 ಕೋಟಿಯಷ್ಟು ಆಗಿದ್ದರೆ, ಈ ವರ್ಷ ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಅದರ ಪ್ರಮಾಣ ₹953 ಕೋಟಿಗೆ ಏರಿಕೆಯಾಗಿದೆ. ಈ ಹೊರೆಯೇ ನಷ್ಟಕ್ಕೆ ಕಾರಣ ಎಂದು ಕಂಪನಿ ಷೇರುಪೇಟೆಗೆ ಶನಿವಾರ ತಿಳಿಸಿದೆ.

2023–24ರ ಪೂರ್ಣ ಹಣಕಾಸು ವರ್ಷದಲ್ಲಿ ಕಂಪನಿ ₹2,068 ಕೋಟಿ ನಷ್ಟ ಕಂಡಿದ್ದರೆ, ಅದಕ್ಕೂ ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹470 ಕೋಟಿ ನಷ್ಟವಾಗಿತ್ತು.

ಕಂಪನಿಯ ಮಂಡಳಿಯು ವಿದೇಶಿ ಕರೆನ್ಸಿ ಪರಿವರ್ತನೀಯ ಬಾಂಡ್‌ಗಳು (ಎಫ್‌ಸಿಸಿಬಿ) ಮತ್ತು ಅರ್ಹ ಸಾಂಸ್ಥಿಕ ನೀಡಿಕೆ (ಕ್ಯುಐಪಿ) ಮೂಲಕ ಸೆಕ್ಯುರಿಟಿಗಳ ವಿತರಣೆಗಾಗಿ ಸದಸ್ಯರ ಅಧಿಕಾರವನ್ನು ಅನುಮೋದಿಸಿದೆ.

ಮುಂಬೈ ಧಾರಣೆ

ಶೇಂಗಾ

25-5-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	910 (912)
ಪಾಮ್ ವಾರದ ಡೆಲಿವರಿ	893 (894)
ಸೂರ್ಯಕಾಂತಿ ಎಣ್ಣೆ ಕಚ್ಚಾ	885 (885)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,525 (71,800)
ಬೆಳ್ಳಿ ಕೆ.ಜಿ ₹89,200 (89,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹625
12 ಕ್ಕೆ ₹82
ಮೈಸೂರು
100ಕ್ಕೆ ₹625

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹182
ಆರ್‌ಎಸ್‌ಎಸ್-5 ₹176
ಗುಡ್ ಲಾಟ್ ₹166
(ಪ್ರತಿ ಕೆ.ಜಿಗೆ)

ರೈತನಿಗೆ ನೆರವಾದ ‘ಕರ್ ಸಿರಿ’ ತಂತ್ರಾಂಶ • ಕೋಲ್ಕತ್ತ, ಸಿಂಗಪುರಗೆ ರವಾನೆ

ಆನ್‌ಲೈನ್: ಮಾವು ಮಾರಾಟ

• ಬಾವಸಲಿ

ರಾಯಚೂರು: ಮಾವು ಬೆಳೆಗಾರರನ್ನು ನೇರ ಮಾರುಕಟ್ಟೆಗೆ ಉತ್ತೇಜಿಸಲು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಅಭಿವೃದ್ಧಿಪಡಿಸಿದ ‘ಕರ್ ಸಿರಿ ಮ್ಯಾಂಗೋಸ್’ ಆನ್‌ಲೈನ್ ತಂತ್ರಾಂಶದ ಮೂಲಕ ರಾಯಚೂರು ತಾಲ್ಲೂಕಿನ ಮಂಡಲಗೇರಾ ಗ್ರಾಮದ ರೈತ ಗುಡಿಪಾಡು ಆಂಜನೇಯ ಎರಡು ತಿಂಗಳಲ್ಲಿ ವಿವಿಧ ತಳಿಯ 1,800 ಕೆ.ಜಿ. ಮಾವು ಮಾರಾಟ ಮಾಡಿದ್ದಾರೆ.

‘ಕರ್ ಸಿರಿ’ ಆನ್‌ಲೈನ್ ತಂತ್ರಾಂಶ ಮೂಲಕ ಬಂಗನ್‌ಪಲ್ಲಿ, ಮಲ್ಲಿಕಾ ಹಾಗೂ ಕೇಸರಿ ತಳಿಯ ಮಾವುಗಳು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುತ್ತಿದ್ದಾರೆ. ಅಷ್ಟೇ ಅಲ್ಲದೇ ಕಳೆದ ವಾರ ಬೆಂಗಳೂರಿನ ಜಯನಗರ, ಐಟಿ ಕಂಪನಿಯಿಂದ ವೈಟ್‌ಫೀಲ್ಡ್‌ನಲ್ಲಿ ನಡೆದ ಹಾಗೂ ಲಾಲ್‌ಬಾಗ್‌ನಲ್ಲಿ ನಡೆಯುತ್ತಿರುವ ಮಾವು ಮೇಳಕ್ಕೂ ಮಾವಿನ ಹಣ್ಣು ಕಳಿಸಿದ್ದಾರೆ.

ಖಾಸಗಿ ಕಂಪನಿಗೆ ವಿದಾಯ: ಮಂಡಲಗೇರಾದ ಗುಡಿಪಾಡು ಆಂಜನೇಯ ಡಿಪ್ಲೊಮಾ ವಿದ್ಯಾಭ್ಯಾಸ ಮಾಡಿ ಬೆಂಗಳೂರಿನಲ್ಲಿ ಏಳು ವರ್ಷಗಳ ಕಾಲ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿದ್ದಾರೆ. ಕುಟುಂಬದ ಜವಾಬ್ದಾರಿ ಇವರ ಮೇಲಿರುವ ಕಾರಣ ಖಾಸಗಿ ಕಂಪನಿಯ ಕೆಲಸ ಬಿಟ್ಟು ಸ್ವಂತ ಜಮೀನಿನಲ್ಲಿ ವ್ಯವಸಾಯ ಮಾಡುವುದೇ ಲೇಸು ಎಂದು ನಿರ್ಧರಿಸಿ ತೋಟಗಾರಿಕೆಯಲ್ಲಿ ತೊಡಗಿದ್ದಾರೆ.

ರಾಯಚೂರು ತಾಲ್ಲೂಕಿನ ಮಂಡಲಗೇರಾ ಗ್ರಾಮದ ರೈತ ಆಂಜನೇಯ ಮಾವಿನ ತೋಟದಲ್ಲಿ ಗಾತ್ರದ ಆಧಾರದ ಮೇಲೆ ಮಾವು ವಿಂಗಡಣೆ ಮಾಡುತ್ತಿರುವುದು

ಮಾರಾಟ ಹೇಗೆ?

ಮಂಡಲಗೇರಾದಲ್ಲಿ 6 ಎಕರೆಯ ಪೈಕಿ 2.5 ಎಕರೆಯಲ್ಲಿ ಬಂಗನ್‌ಪಲ್ಲಿ, ಮಲ್ಲಿಕಾ ಹಾಗೂ ಕೇಸರಿ ತಳಿಯ ಮಾವು ಬೆಳೆದ ಆಂಜನೇಯ ಅವರು ಗ್ರಾಹಕರ ಬೇಡಿಕೆಯ ಅನುಸಾರ 3 ಕೆ.ಜಿಯಿಂದ 40 ಕೆ.ಜಿಯವರೆಗೆ ಕರ್ ಸಿರಿ ಮೂಲಕ ಮಾವು ಮಾರಾಟ ಮಾಡಿದ್ದಾರೆ.

‘ಹರಿದ್ವಾರ್ ಆರ್ಗನಿಕ್ ಎಂಟರ್ ಪ್ರೈಸೆಸ್’ ಮೂಲಕ ಕರ್ ಸಿರಿ ತಂತ್ರಾಂಶದಲ್ಲಿ ಹೆಸರು ನೋಂದಾಯಿಸಿ ತಮ್ಮ ಮಾವಿನ ತಳಿಗಳ ಸಹಿತ ಎಲ್ಲ ಮಾಹಿತಿ, ವಿಳಾಸ ಪ್ರಕಟಿಸಿದ್ದಾರೆ. ಗ್ರಾಹಕರು ಕರ್ ಸಿರಿಯಲ್ಲಿ ಮಾವಿನ ತಳಿಗಳ ಬಗ್ಗೆ ಮಾಹಿತಿ ಪಡೆದು ಆರ್ಡರ್ ಮಾಡುತ್ತಿದ್ದಾರೆ. ಗ್ರಾಹಕರ ಬೇಡಿಕೆಯಂತೆ ಅಂಚೆ ಇಲಾಖೆಯ ಮೂಲಕ ಅವರ ಮನೆ ಬಾಗಿಲಿಗೆ ತಲುಪಿಸಿದ್ದಾರೆ.

‘ಹಿಂದೆ ಮೂಸಂಬಿ, ನಿಂಬೆ ಬೆಳೆದು ಆನ್‌ಲೈನ್ ಮೂಲಕ ಬೆಂಗಳೂರಿಗೆ ಮಾರಾಟ ಮಾಡಿದ್ದೇನೆ. ಈ ವರ್ಷ ಮಾವು ಬೆಳೆದಿದ್ದು ಕರ್ ಸಿರಿ ಮೂಲಕ ಮತ್ತಷ್ಟು ಪ್ರೋತ್ಸಾಹ ಸಿಕ್ಕಿದೆ. ಬಂಗನ್‌ಪಲ್ಲಿ ಕೆ.ಜಿಗೆ ₹100, ಮಲ್ಲಿಕಾ ಹಾಗೂ ಕೇಸರಿ ₹120 ದರ ಇದೆ. ಕರ್ ಸಿರಿ ಮೂಲಕ ಕೋಲ್ಕತ್ತ, ಸಿಂಗಪುರಗೆ ಮಾವು ಕಳಿಸಿರುವೆ’ ಎಂದು ಆಂಜನೇಯ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೋಲ್ಕತ್ತದ ಗ್ರಾಹಕರೊಬ್ಬರು ನನ್ನ ಮಾವಿನ ರುಚಿಗೆ ಮಾರು ಹೋಗಿ ಕೂಲ್ ಕ್ಯಾನ್ ಉಡುಗೊರೆಯಾಗಿ ನೀಡಿದ್ದಾರೆ. ಶೇ 99ರಷ್ಟು ಮಾವುಗಳು ಹಣ್ಣಾಗಿರುತ್ತದೆ. ಬಾಕ್ಸ್‌ಗಳಲ್ಲಿ ಪ್ಯಾಕ್ ಮಾಡಿ ಬೆಂಗಳೂರಿಗೆ ರವಾನಿಸುತ್ತೇನೆ. ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಮಧ್ಯಸ್ಥಿಕೆಯಲ್ಲಿ ಗ್ರಾಹಕರ ಮನೆ ಬಾಗಿಲಿಗೆ ತಲುಪುತ್ತಿದೆ. ನನ್ನ ವ್ಯಾಪಾರಕ್ಕೆ ಕುಟುಂಬ ಸದಸ್ಯರು ಸಹಕಾರ ನೀಡುತ್ತಿರುವುದರಿಂದ ಯಶಸ್ವಿಯಾಗಿ ನಡೆಯುತ್ತಿದೆ. ನನ್ನಿಂದ ನಮ್ಮ ಊರಿನಲ್ಲಿ 5 ಜನ ಆನ್‌ಲೈನ್ ಮಾರಾಟದಿಂದ ಉತ್ತೇಜಿತರಾಗಿದ್ದಾರೆ’ ಎಂದು ಸಂತಸ ಹಂಚಿಕೊಂಡರು.

ಮುಖ್ಯಾಂಶಗಳು

- ಆನ್‌ಲೈನ್ ಮೂಲಕ ಗ್ರಾಹಕರ ಮನೆ ಬಾಗಿಲಿಗೆ ಮಾವು
- ಹೊರ ದೇಶಕ್ಕೂ ಮಾವು ರಫ್ತು ಮಾಡಲು ತಯಾರಿ
- ಕೇಸರಿ ಮಾವಿಗೆ ಮನಸೋತ ಕೋಲ್ಕತ್ತ ಗ್ರಾಹಕರು

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹945 (945)
ಸೂರ್ಯಕಾಂತಿ (ರಿಫೈನ್ಡ್)	₹945 (945)
ಪಾಮೋಲಿನ್	₹895 (896)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹320-469
ದ್ವಿತಳಿ (ಬಿ.ವಿ) ₹277-849

ಏರ್ ಇಂಡಿಯಾಗೆ ಹೊಸ ಸಿಎಫ್‌ಒ

ನವದೆಹಲಿ (ಪಿಟಿಐ): ಜೂನ್ 10ರಿಂದ ಜಾರಿಗೆ ಬರುವಂತೆ ಸಂಜಯ್ ಶರ್ಮಾ ಅವರನ್ನು ಮುಖ್ಯ ಹಣಕಾಸು ಅಧಿಕಾರಿಯಾಗಿ (ಸಿಎಫ್‌ಒ) ನೇಮಕ ಮಾಡಿರುವುದಾಗಿ ವಿಮಾನಯಾನ ಸಂಸ್ಥೆ ಏರ್ ಇಂಡಿಯಾ ತಿಳಿಸಿದೆ.

ಏರ್ ಇಂಡಿಯಾದಲ್ಲಿ ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿ ನಿವೃತ್ತಿ ಹೊಂದುತ್ತಿರುವ ವಿನೋದ್ ಹೆಜ್ಮಾಡಿ ಅವರ ಸ್ಥಾನಕ್ಕೆ ಶರ್ಮಾ ಬರಲಿದ್ದಾರೆ.

ಕಾರ್ಪೊರೇಟ್ ಹಣಕಾಸು, ಇನ್ವೆಸ್ಟ್‌ಮೆಂಟ್ ಬ್ಯಾಂಕಿಂಗ್ ಮತ್ತು ರಿಯಲ್ ಎಸ್ಟೇಟ್ ಕ್ಷೇತ್ರಗಳಲ್ಲಿ ಶರ್ಮಾ ಮೂರು ದಶಕಗಳಿಗೂ ಹೆಚ್ಚು ಅನುಭವವನ್ನು ಹೊಂದಿದ್ದಾರೆ. ಟಾಟಾ ಪ್ರಾಜೆಕ್ಟ್ಸ್ ಲಿಮಿಟೆಡ್‌ನಲ್ಲಿ ಸಿಎಫ್‌ಒ ಆಗಿದ್ದ ಶರ್ಮಾ ಅವರು ಇದಕ್ಕೂ ಮೊದಲು ಟಾಟಾ ರಿಯಾಲ್ಟಿ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ನಲ್ಲಿ ಸಿಎಫ್‌ಒ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ. ಡಾಯ್ಚ ಬ್ಯಾಂಕ್ ಗ್ರೂಪ್‌ನಲ್ಲಿ ಇಕ್ವಿಟಿ ಕ್ಯಾಪಿಟಲ್ ಮಾರ್ಕೆಟ್ಸ್ ಮುಖ್ಯಸ್ಥರಾಗಿ, ವ್ಯವಸ್ಥಾಪಕ ನಿರ್ದೇಶಕರಾಗಿ ಕರ್ತವ್ಯ ಸಲ್ಲಿಸಿದ್ದಾರೆ ಎಂದು ಸಂಸ್ಥೆ ತಿಳಿಸಿದೆ.

ಸುದ್ದಿ 2 ನಿಮಿಷ

ಬೇಸಿಗೆ: ವಿದ್ಯುತ್ ಬೇಡಿಕೆ ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಬೇಸಿಗೆಯಲ್ಲಿ ದೇಶದ ವಿದ್ಯುತ್ ಬೇಡಿಕೆಯು ಶುಕ್ರವಾರ 239.96 ಗಿಗಾವಾಟ್‌ಗೆ ಹೆಚ್ಚಳವಾಗಿದೆ.

ದೇಶದ ಬಹುತೇಕ ಭಾಗದಲ್ಲಿ ತಾಪಮಾನದ ತೀವ್ರ ಹೆಚ್ಚಳದಿಂದಾಗಿ ಹವಾ ನಿಯಂತ್ರಕ, ಕೂಲರ್ಸ್‌ಗಳ ಬಳಕೆಯಲ್ಲಿ ಏರಿಕೆಯಾಗಿದೆ. ಇದರಿಂದ ವಿದ್ಯುತ್ ಬೇಡಿಕೆ ಹೆಚ್ಚಳವಾಗಿದೆ. ಇದು ಈ ವರ್ಷದ ಬೇಸಿಗೆಯಲ್ಲಿ ಇದುವರೆಗಿನ ಗರಿಷ್ಠ ಬೇಡಿಕೆ ಎಂದು ವಿದ್ಯುತ್ ಸಚಿವಾಲಯದ ಅಂಕಿ–ಅಂಶಗಳು ತಿಳಿಸಿವೆ.

ಬುಧವಾರ 235.06 ಗಿಗಾವಾಟ್ ಮತ್ತು ಗುರುವಾರ 236.59 ಗಿಗಾವಾಟ್ ವಿದ್ಯುತ್ ಬೇಡಿಕೆ ಇತ್ತು. ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ವಿದ್ಯುತ್ ಬೇಡಿಕೆಯು ಸಾರ್ವಕಾಲಿಕ ಗರಿಷ್ಠ 243.27 ಗಿಗಾವಾಟ್ ದಾಖಲಾಗಿತ್ತು.

ವಿದ್ಯುತ್ ಸಚಿವಾಲಯವು ಈ ತಿಂಗಳ ಆರಂಭದಲ್ಲಿ ವಿದ್ಯುತ್ ಬೇಡಿಕೆಯು ಮೇ ನಲ್ಲಿ ಹಗಲಿನ ವೇಳೆ 235 ಗಿಗಾವಾಟ್, ಸಂಜೆ ವೇಳೆ 225 ಗಿಗಾವಾಟ್ ಇರಲಿದೆ. ಜೂನ್‌ನಲ್ಲಿ ಹಗಲು 240 ಗಿಗಾವಾಟ್ ಮತ್ತು ಸಂಜೆ 235 ಗಿಗಾವಾಟ್‌ನಷ್ಟು ಇರಲಿದೆ. ಇದಲ್ಲದೇ ಈ ಬೇಸಿಗೆ ಅವಧಿಯಲ್ಲಿ ಬೇಡಿಕೆಯು 260 ಗಿಗಾವಾಟ್‌ನ್ನು ಮುಟ್ಟಲಿದೆ ಎಂದು ಅಂದಾಜಿಸಿದೆ.

ಮಾರ್ಚ್‌ನಲ್ಲಿ, ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಬೇಸಿಗೆಯು ಹೆಚ್ಚಿನ ಉಷ್ಣಾಂಶದಿಂದ ಕೂಡಿರಲಿದೆ ಮತ್ತು ಎಲ್ ನಿನೊ ಕನಿಷ್ಠ ಮೇ ವರೆಗೆ ಮುಂದುವರಿಯುತ್ತದೆ ಎಂದು ಅಂದಾಜಿಸಿದೆ.

ಕೊಯಮತ್ತೂರಿನಲ್ಲಿ ಎರಡನೇ ಮಳಿಗೆ ತೆರೆದ ಬಿಎನ್‌ಸಿ ಮೋಟರ್

ಚೆನ್ನೈ (ಪಿಟಿಐ): ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ತಯಾರಕ ಬಿಎನ್‌ಸಿ ಮೋಟರ್ಸ್ ಕೊಯಮತ್ತೂರಲ್ಲಿ ತನ್ನ ಎರಡನೇ ಮಳಿಗೆ ಉದ್ಘಾಟಿಸಿದೆ.

ಕೊಯಮತ್ತೂರು ಮೂಲದ ಬಿಎನ್‌ಸಿ ಮೋಟರ್ಸ್ ದೇಶದ ದಕ್ಷಿಣ ಭಾಗದಲ್ಲಿ 15ಕ್ಕೂ ಹೆಚ್ಚು ಮಳಿಗೆಗಳನ್ನು ಹೊಂದಿದೆ ಎಂದು ಕಂಪನಿಯ ಸಿಇಒ ಅನಿರುದ್ಧ್ ರವಿ ನಾರಾಯಣ್ ತಿಳಿಸಿದ್ದಾರೆ.

‘ನಮ್ಮ ತವರು ನಗರವಾದ ಕೊಯಮತ್ತೂರಿನಲ್ಲಿ ನಮ್ಮ ಎರಡನೇ ಮಳಿಗೆ ಪ್ರಾರಂಭ ಮಾಡುತ್ತಿರುವುದು ಸಂತಸ ತಂದಿದೆ. ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ’ ಎಂದು ತಿಳಿಸಿದ್ದಾರೆ.

ಮಳಿಗೆ ಉದ್ಘಾಟನೆಯ ಕಾರಣಕ್ಕೆ ತನ್ನ ದ್ವಿಚಕ್ರ ವಾಹನಗಳಾದ ಚಾಲೆಂಜರ್ ಎಸ್ 110 ಮತ್ತು ಚಾಲೆಂಜರ್ ಎಸ್ 125 ಮಾದರಿಗಳನ್ನು ಕ್ರಮವಾಗಿ ₹99,900 ಮತ್ತು ₹1.45 ಲಕ್ಷಕ್ಕೆ ನೀಡಲಾಗುತ್ತಿದೆ ಎಂದು ಕಂಪನಿ ತಿಳಿಸಿದೆ.

ಬೆಂಗಳೂರು, ಹೈದರಾಬಾದ್‌ನಲ್ಲಿ ಐ.ಟಿ ನೇಮಕಾತಿ ಪ್ರಮಾಣ ಹೆಚ್ಚಳ



ಮುಂಬೈ: ದೇಶದಾದ್ಯಂತ ಏಪ್ರಿಲ್‌ನಲ್ಲಿ ಉದ್ಯೋಗ ನೇಮಕಾತಿಯಲ್ಲಿ ಐ.ಟಿ ವಲಯದಲ್ಲಿ ಒಟ್ಟಾರೆ ಉದ್ಯೋಗ ಗಮನಾರ್ಹ ಬೆಳವಣಿಗೆ ಕಂಡುಬಂದಿದೆ. ನೇಮಕಾತಿಯು ಶೇ 3.6ರಷ್ಟು ಕುಸಿದಿದೆ. ಇದರ ನಡುವೆಯೂ ಬೆಂಗಳೂರಲ್ಲಿ ಶೇ24ರಷ್ಟು ಮತ್ತು ಹೈದರಾಬಾದ್‌ನಲ್ಲಿ ಶೇ 41.5ರಷ್ಟು ನೇಮಕಾತಿ ಪ್ರಮಾಣದಲ್ಲಿ ಏರಿಕೆಯಾಗಿದೆ.

ಈ ನಗರಗಳು ಐ.ಟಿ ವೃತ್ತಿಪರರಿಗೆ ಉತ್ತಮ ವಾತಾವರಣ ಸೃಷ್ಟಿಸುತ್ತಿವೆ ಎಂದು ಉದ್ಯೋಗ ಅವಕಾಶಗಳ ಮಾಹಿತಿ ನೀಡುವ ಅಂತರ್ಜಾಲ ತಾಣ ಇಂಡೀಡ್ ತಿಳಿಸಿದೆ.

ಉದ್ಯೋಗಾಕಾಂಕ್ಷಿಗಳ ಪ್ರಮಾಣ ಹೈದರಾಬಾದ್‌ನಲ್ಲಿ ಶೇ 161ರಷ್ಟು ಏರಿಕೆಯಾಗಿದ್ದರೆ, ಬೆಂಗಳೂರಲ್ಲಿ ಶೇ 80ರಷ್ಟು ಹೆಚ್ಚಳವಾಗಿದೆ.

ಇಂಡೀಡ್ ವೇದಿಕೆಯು 2023ರ ಏಪ್ರಿಲ್‌ನ ಅಂಕಿ–ಅಂಶಕ್ಕೆ ಹೋಲಿಕೆ ಮಾಡಿ ಈ ವರದಿ ತಯಾರಿಸಿದೆ. ವಿಶ್ಲೇಷಣೆ, ಎಪಿಐ, ಜಾವಾಸ್ಕ್ರಿಪ್ಟ್ ಮತ್ತು ಎಸ್‌ಕ್ಯುಎಲ್ ಕ್ಷೇತ್ರದಲ್ಲಿನ ಉದ್ಯೋಗಾವಕಾಶದಲ್ಲಿ ಏರಿಕೆ ಕಂಡಿವೆ ಎಂದು ವರದಿ ತಿಳಿಸಿದೆ.

ಕಾನ್ ಚಿತ್ರೋತ್ಸವದಲ್ಲಿ ಅನಸೂಯಾಗೆ ಪ್ರಶಸ್ತಿ

ಕಾನ್ (ಪಿಟಿಐ): ಹಿಂದಿ ಸಿನಿಮಾ ‘ದಿ ಶೇಮ್‌ಲೆಸ್’ನಲ್ಲಿ ಪ್ರಮುಖ ಪಾತ್ರವೊಂದನ್ನು ನಿರ್ವಹಿಸಿದ್ದ ಅನಸೂಯಾ ಸೆನ್‌ಗುಪ್ತ ಅವರು 2024ನೇ ಸಾಲಿನ ಕಾನ್ ಚಲನಚಿತ್ರೋತ್ಸವದ ‘ಅನ್ ಸರ್ಟೇನ್ ರಿಗಾರ್ಡ್’ ವಿಭಾಗದಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿಗೆ ಪಾತ್ರರಾಗಿ ಇತಿಹಾಸ ಸೃಷ್ಟಿಸಿದ್ದಾರೆ. ಈ ಸಿನಿಮಾವನ್ನು ಬಲ್ಗೇರಿಯಾದ ನಿರ್ದೇಶಕ ಕೊನ್‌ಸ್ಟಾಂಟಿನ್ ಬೊಜನೊವ್ ನಿರ್ದೇಶಿಸಿದ್ದಾರೆ.

ಅನಸೂಯಾ ಅವರು ಕೋಲ್ಕತ್ತ ಮೂಲದವರು. ಈ ವಿಭಾಗದಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿಗೆ ಪಾತ್ರರಾದ ಮೊದಲ ಭಾರತೀಯ ಕಲಾವಿದೆ ಇವರು. ಅವರು ಈ ಪ್ರತಿಷ್ಠಿತ ಸಿನಿಮೋತ್ಸವದಲ್ಲಿ ಪ್ರಶಸ್ತಿಗೆ ಪಾತ್ರರಾಗಿರುವುದು ಭಾರತದ ಪಾಲಿಗೆ ಒಂದು ಮೈಲಿಗಲ್ಲು ಎಂದು ಸಿನಿಮಾ ಕ್ಷೇತ್ರದ ಪ್ರಮುಖರು ಸಂತಸ ವ್ಯಕ್ತಪಡಿಸಿದ್ದಾರೆ. ಶುಕ್ರವಾರ ರಾತ್ರಿ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅನಸೂಯಾ ಅವರು, ಪ್ರಶಸ್ತಿಯನ್ನು ಲೈಂಗಿಕ ಅಲ್ಪಸಂಖ್ಯಾತ ಸಮುದಾಯ ಹಾಗೂ ಸಮಾಜದ ಅಂಚಿಗೆ ಸರಿಸಲಾಗಿರುವ ಸಮುದಾಯಗಳಿಗೆ ಅರ್ಪಿಸುತ್ತಿರುವುದಾಗಿ ಹೇಳಿದರು.

‘ಸಮಾನತೆಗಾಗಿ ಹೋರಾಡಬೇಕು ಎಂದಾದರೆ ನೀವು ಲೈಂಗಿಕ ಅಲ್ಪಸಂಖ್ಯಾತರೇ ಆಗಿರಬೇಕಿಲ್ಲ. ವಸಾಹತೀಕರಣವು ಎಷ್ಟು ಕೆಟ್ಟದ್ದು ಎಂಬುದನ್ನು ಹೇಳಲು ನೀವು ವಸಾಹತಿನಲ್ಲಿಯೇ ಇದ್ದಿರಬೇಕು ಎಂದೇನೂ ಇಲ್ಲ. ನಾವು ಬಹಳ ಒಳ್ಳೆಯ ಮನುಷ್ಯರಾಗಿದ್ದರೆ ಸಾಕು’ ಎಂದು ಅವರು ಹೇಳಿದರು. ಅನಸೂಯಾ ಅವರು 2009ರಲ್ಲಿ ಬಿಡುಗಡೆ ಆದ ‘ಮ್ಯಾಡ್ಲಿ ಬಂಗಾಲಿ’ ಚಿತ್ರದಲ್ಲಿ ಪೋಷಕ ಪಾತ್ರವೊಂದನ್ನು ನಿರ್ವಹಿಸಿದ್ದರು. ‘ಅನ್ ಸರ್ಟೇನ್ ರಿಗಾರ್ಡ್’ ವಿಭಾಗವು ಸಿನಿಮಾ ಲೋಕದ ಹೊಸ ಅಲೆ–ಪಥಗಳನ್ನು, ಹೊಸ ದೇಶಗಳಲ್ಲಿನ ಸಿನಿಮಾ ಗುರುತಿಸುವ ಉದ್ದೇಶ ಹೊಂದಿದೆ.

ನೊಟ್ರೆ ಡೇಮ್ ಕ್ಯಾಥೆಡ್ರಲ್ ಕ್ರಾಸ್ ಮರುಸ್ಥಾಪನೆ

ಪ್ಯಾರಿಸ್(ಎಪಿ): 2019ರ ಬೆಂಕಿ ಅವಘಡದಲ್ಲಿ ಹಾನಿಯಾಗಿದ್ದ ನೊಟ್ರೆ-ಡೇಮ್ ಡಿ ಪ್ಯಾರಿಸ್‌ನ ಮೇಲ್ಭಾಗದ ಶಿಲುಬೆಯನ್ನು ಕ್ಯಾಥೆಡ್ರಲ್‌ನ ಚೌಕಟ್ಟಿನ ಮೇಲೆ ಮರು ಸ್ಥಾಪಿಸಲಾಗಿದೆ.

12 ಮೀಟರ್ ವ್ಯಾಪಿಸಿರುವ 1.5 ಟನ್ ತೂಕ ಭವ್ಯವಾದ ಶಿಲುಬೆಯನ್ನು ಸರಿಸುಮಾರು 250 ಕಂಪನಿಗಳು ಮತ್ತು ನೂರಾರು ಕುಶಲಕರ್ಮಿಗಳು, ವಾಸ್ತುಶಿಲ್ಪಿಗಳು ಮತ್ತು ವೃತ್ತಿಪರರು ಸಿದ್ಧಪಡಿಸಿದ್ದಾರೆ. ಡಿಸೆಂಬರ್ 8ರಂದು ಕ್ಯಾಥೆಡ್ರಲ್‌ನ ಮರು ಉದ್ಘಾಟನೆ ನೆರವೇರಿಸಲು ಉದ್ದೇಶಿಸಲಾಗಿದೆ.

2019ರ ಏಪ್ರಿಲ್ 15ರಂದು ಸಂಭವಿಸಿದ್ದ ಅಗ್ನಿ ಅವಘಡದಲ್ಲಿ ಈ ಕ್ಯಾಥೆಡ್ರಲ್‌ಗೆ ಹಾನಿಯಾಗಿತ್ತು. ಇದು ಯುನೆಸ್ಕೊ ವಿಶ್ವ ಪಾರಂಪರಿಕ ತಾಣವಾಗಿದೆ.

‘ಭಾರತೀಯ ಗಗನಯಾತ್ರಿಗಳಿಗೆ ಶೀಘ್ರ ನಾಸಾದ ತರಬೇತಿ’

ಭಾರತದಲ್ಲಿನ ಅಮೆರಿಕ ರಾಯಭಾರಿ ಗಾರ್ಸೆಟ್ಟಿ ಹೇಳಿಕೆ

ವಾಷಿಂಗ್ಟನ್ (ಪಿಟಿಐ): ‘ಈ ವರ್ಷ ಅಥವಾ ಮುಂದಿನ ವರ್ಷ ಜಂಟಿ ಕಾರ್ಯಾಚರಣೆಯ ಭಾಗವಾಗಿ ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಲು ಭಾರತೀಯ ಗಗನಯಾತ್ರಿಗಳಿಗೆ ನಾಸಾ ಶೀಘ್ರದಲ್ಲೇ ಅತ್ಯಾಧುನಿಕ ತರಬೇತಿ ನೀಡಲಿದೆ’ ಎಂದು ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಹೇಳಿದ್ದಾರೆ.

ಎರಿಕ್ ಗಾರ್ಸೆಟ್ಟಿ

ಬೆಂಗಳೂರಿನಲ್ಲಿ ಶುಕ್ರವಾರ ಅಮೆರಿಕ– ಭಾರತ ವ್ಯಾಪಾರ ಮಂಡಳಿ (ಯುಎಸ್‌ಐಬಿಸಿ) ಆಯೋಜಿಸಿದ್ದ ಅಮೆರಿಕ–ಭಾರತ ವಾಣಿಜ್ಯ ಬಾಹ್ಯಾಕಾಶ ಸಮಾವೇಶದಲ್ಲಿ ಅವರು ಈ ವಿಷಯ ತಿಳಿಸಿದ್ದಾರೆ.

‘ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಗಗನಯಾತ್ರಿಗಳನ್ನು ಕಳುಹಿಸುವ ಜಂಟಿ ಪ್ರಯತ್ನದ ಭಾಗವಾಗಿ ಭಾರತೀಯ ಗಗನಯಾತ್ರಿಗಳಿಗೆ ನಾಸಾದಿಂದ ಈ ವರ್ಷ ಅಥವಾ ಮುಂಬರುವ ಕೆಲ ದಿನಗಳಲ್ಲಿ ಅತ್ಯಾಧುನಿಕ ತರಬೇತಿ ನೀಡಲಾಗುವುದು. ನಮ್ಮ ಉಭಯ ರಾಷ್ಟ್ರಗಳ ನಾಯಕರು ಭೇಟಿ ಮಾಡಿ ಮಾತುಕತೆ ನಡೆಸಿದ ವೇಳೆ ನೀಡಿದ ಭರವಸೆಗಳಲ್ಲಿ ಇದೂ ಕೂಡ ಇತ್ತು’ ಎಂದು ಹೇಳಿದರು.

ಉಡ್ಡಯನ: ‘ಪರಿಸರ ವ್ಯವಸ್ಥೆಗಳು, ಭೂಮಿಯ ಮೇಲ್ಮೈ, ನೈಸರ್ಗಿಕ ವಿಪತ್ತುಗಳು, ಸಮುದ್ರ ಮಟ್ಟ ಏರಿಕೆ ಮತ್ತು ಕ್ರಯೋಸ್ಫಿಯರ್‌ ಮೇಲೆ ಹವಾಮಾನ ಬದಲಾವಣೆಯ ಪ್ರಭಾವ ಸೇರಿದಂತೆ ವಿವಿಧ ವಿದ್ಯಮಾನಗಳ ಎಲ್ಲಾ ಸಂಪನ್ಮೂಲಗಳನ್ನು ಮೇಲ್ವಿಚಾರಣೆ ಮಾಡಲು ನಾವು ಶೀಘ್ರದಲ್ಲೇ ನಿಸಾರ್ (ಎನ್‌ಐಎಸ್‌ಎಆರ್) ಉಪಗ್ರಹವನ್ನು ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಉಡ್ಡಯನ ಮಾಡಲಿದ್ದೇವೆ’ ಎಂದು ಇಲ್ಲಿ ಬಿಡುಗಡೆ ಮಾಡಿದ ಯುಎಸ್‌ಐಬಿಸಿ ಪತ್ರಿಕಾ ಪ್ರಕಟೆಯಲ್ಲಿ ಹೇಳಲಾಗಿದೆ.

ನಿಸಾರ್ ಉಪಗ್ರಹವು ನಾಸಾ ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ನಡುವಿನ ಜಂಟಿ ಭೂ-ವೀಕ್ಷಣೆ ಕಾರ್ಯಾಚರಣೆಯಾಗಿದೆ.

ಕಾರ್ಯಕ್ರಮದಲ್ಲಿ ಗಾರ್ಸೆಟ್ಟಿ, ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, ನಾಸಾ ಮತ್ತು ರಾಷ್ಟ್ರೀಯ ಸಾಗರ ಮತ್ತು ವಾಯುಮಂಡಲ ಆಡಳಿತ (ಎನ್‌ಒಎಎ) ಪ್ರತಿನಿಧಿಗಳು ಸೇರಿದಂತೆ ಅಮೆರಿಕ ಮತ್ತು ಭಾರತ ಎರಡೂ ಸರ್ಕಾರಗಳ ಹಿರಿಯ ಅಧಿಕಾರಿಗಳು, ವಾಣಿಜ್ಯ ಬಾಹ್ಯಾಕಾಶ ಉದ್ಯಮ ಪ್ರಮುಖರು, ಉದ್ಯಮ ಪಾಲುದಾರರು, ಬಂಡವಾಳ ಹೂಡಿಕೆ ಪ್ರಮುಖರು ಹಾಗೂ ಮಾರುಕಟ್ಟೆ ವಿಶ್ಲೇಷಕರು ಭಾಗವಹಿಸಿದ್ದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಮಂಜುಳವಾಣಿ
(W/o ಲೇಟ್ ಎಂ. ಸತ್ಯನಾರಾಯಣಸ್ವಾಮಿ)
ಮಾಜಿ ಅಧ್ಯಕ್ಷರು FKCCI ಮತ್ತು ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ.
ಶ್ರೀಮತಿ ಮಂಜುಳವಾಣಿ ಅವರು ದಿನಾಂಕ 16-05-2024ನೇ ಗುರುವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಅಗಲಿದ ಆತ್ಮದ ಚಿರಶಾಂತಿಗಾಗಿ ಈ ಗಂಭೀರ ಸಂದರ್ಭವನ್ನು ಅನುಗ್ರಹಿಸಲು ನಿಮ್ಮ ದಯೆಯ ಉಪಸ್ಥಿತಿಯನ್ನು ನಾವು ಕೋರುತ್ತೇವೆ.
ಇಂತಿ ದುಃಖತಪ್ತರು :
ಎಂ.ಎಸ್. ಹರ್ಷಾನಂದ
ಎಂ.ಎಸ್. ಪವನ್ ಕುಮಾರ್
ಶ್ರೀಮತಿ ಗ್ರೀಷ್ಮ ಭರತ್, ಮೊಮ್ಮಕ್ಕಳು ಮತ್ತು
ಹೆಚ್.ಕೆ.ಎಂ. ಕುಟುಂಬದವರು

ಶ್ರದ್ಧಾಂಜಲಿ

ಶ್ರೀ ಆರ್.ವಿ.ರಾಮಕೃಷ್ಣ ರೆಡ್ಡಿ
ಅಟ್ಟೂರು ಲೇಔಟ್, ಯಲಹಂಕ ನ್ಯೂಟೌನ್, ಬೆಂಗಳೂರು
ಇವರು ದಿ: 25-05-2024ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಇಂತಿ ದುಃಖತಪ್ತ:
ಪತ್ನಿ ಡಿ.ನಾಗರತ್ನಮ್ಮ, ಮಕ್ಕಳು-ಆರ್. ಹಿತೇಂದ್ರ, ಆರ್. ರವೀಂದ್ರ, ಆರ್. ವಿವೇಕ್ ರೆಡ್ಡಿ ಮತ್ತು ಕುಟುಂಬ ವರ್ಗ

19ನೇ ವರ್ಷದ ಚಿರಸ್ಮರಣೆ

ಶ್ರೀ ಟಿ. ಅಣ್ಣಯಪ್ಪ
ಮಾ॥ ತಾ॥ ಪಂ॥ ಸದಸ್ಯರು, ಮಾರಗೊಂಡಹಳ್ಳಿ
ನೀವು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆಯುತ್ತಿದ್ದೇವೆ. ಸದಾ ನಿಮ್ಮ ಆಶೀರ್ವಾದ ನಮಗಿರಲಿ.
ಶ್ರೀಮತಿ ದೊಡ್ಡ ಅಮ್ಮಯ್ಯಮ್ಮ ಮತ್ತು ಮಕ್ಕಳು
ಎ. ಶ್ರೀನಿವಾಸಮೂರ್ತಿ– 9880427590

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್
Agricultural Land
Shivamogga
ಮಲೆನಾಡಿನಲ್ಲಿ ತೋಟ ಮಾರಾಟಕ್ಕಿದೆ
ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು ಕೇಂದ್ರದಿಂದ 7 ಕಿ.ಮೀ. ದೂರ ಬಹುತೇಕ ಮುಖ್ಯರಸ್ತೆಗೆ ಹೊಂದಿಕೊಂಡಂತಿರುವ ಅಡಕೆ, ರಬ್ಬರ್ ಸೇರಿದಂತೆ ಹಲವು ಬೆಳೆಗಳಿರುವ ತೋಟ ಮಾರಾಟಕ್ಕಿದೆ. 12 ಎಕರೆ ಖಾತೆ ಭೂಮಿ ಸೇರಿದಂತೆ ಸುಮಾರು 18 ಎಕರೆಯಷ್ಟು ಜಾಗ ಹಿಡುವಳಿಯಲ್ಲಿರುವ ತೋಟ ಮಾರಾಟಕ್ಕಿದೆ. 9 ಎಕರೆ ಅಡಕೆ, 5 ಎಕರೆ ರಬ್ಬರ್, 2 ಎಕರೆ ಅಪ್ಪೆಮಿಡಿ ಮಾವಿನ ಗಿಡಗಳು, ಕಾಳು ಮೆಣಸು ಇರುವ ತೋಟ ಇದಾಗಿದ್ದು, 800 ಸಿಲ್ವರ್ ಗಿಡ, 6 ಸಾಗುವಾನಿ, 35 ಅಗರ್ವುಡ್ ಮರಗಳಿವೆ. ಅಪ್ಪಟ ಮಲೆನಾಡಿನ ಸೊಬಗನ್ನುಹೊಂದಿದೆ. ಎರಡು ಕೆರೆ, ಎರಡು ಬೋರ್‌ವೆಲ್ ಸೇರಿ ಸಮೃದ್ಧ ನೀರಿನ ವ್ಯವಸ್ಥೆಯಿದೆ. ಸೋಲಾರ್ ಪಂಪ್ ಹೊಂದಿದೆ.
Contact: 9108825454

ಉದ್ಯೋಗಾವಕಾಶ
Accounts & Finance
ACCOUNTANT WITH 10Y min Tally experience for export company in Yeswanthapur, BLR. Ph-9483215391

Drivers
ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನುಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000 ಗೆ ಕರೆಮಾಡಿ

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted
ವಸತಿಗೃಹಕ್ಕೆ ಸ್ವಾಗತಕಾರರು (Receptionist) ಹಾಗೂ ರೂಂ ಬಾಯ್ಸ್ ಬೇಕಾಗಿದ್ದಾರೆ. ಖುದ್ದಾಗಿ ಬೆಳಿಗ್ಗೆ 10 ಗಂಟೆಯೊಳಗೆ ಸಂಪರ್ಕಿಸಿ. ವಿಳಾಸ: ಶ್ರೀಕಮಲ್ ಹೋಟೆಲ್(ಲಾಡ್ಜ್), ಕಬ್ಬನ್ ಪೇಟೆ ಮುಖ್ಯರಸ್ತೆ, ಅವಿನ್ಯೂರಸ್ತೆ ಕ್ರಾಸ್, ಮೈಸೂರುಬ್ಯಾಂಕ್ ಸರ್ಕಲ್ ಹತ್ತಿರ, ಬೆಂಗಳೂರು-02. 080 - 22215903

ಮಂಗಳೂರಿನಲ್ಲಿ ಪ್ರಖ್ಯಾತ ಕಂಪೆನಿಯ ವಿವಿಧ ಹುದ್ದೆಗಳಿಗೆ ಯುವಕ–ಯುವತಿಯರು ಬೇಕಾಗಿದ್ದಾರೆ. ಸಂಬಳ 15000, ಬೋನಸ್; ಊಟ, ವಸತಿ ಉಚಿತ; 9964811751

ಭವಿಷ್ಯ
Astrology
★ಜೀವನದ ಸರ್ವತೋಮುಖ ಅಭಿವೃದ್ಧಿಗಾಗಿ,ನಿಮ್ಮ ಯಾವುದೇ ಹೆಣ್ಣು ಅಥವಾ ಗಂಡು ಸಂಬಂಧಿತ ಸಂಪೂರ್ಣ ಮನಇಚ್ಛ ವಶೀಕರಣ, ದಾಂಪತ್ಯ,ಸಂತಾನ,ಆರೋಗ್ಯ,ಹಣ, ಆಸ್ತಿ,ಮತ್ತು ಇನ್ನಿತರ ನಿಮ್ಮ ಯಾವುದೇ ಇಷ್ಟಾರ್ಥಫಲಪ್ರಾಪ್ತಿ 3ದಿನಗಳಲ್ಲಿ ಲಭ್ಯ. 9845005009*

★॥ಸ್ತ್ರೀಪುರುಷ ವಶೀಕರಣ॥★ ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ, ಇಷ್ಟಪಟ್ಟವರು ನಿಮ್ಮಂತೆ ಆಗಲು, 1ದಿನದಲ್ಲಿ ಪರಿಹಾರ ಶತಸಿದ್ಧ. 9611968471

ಪ್ರವಾಸ
Travel
ಸುಸಜ್ಜಿತವಾದ ಊಟ, ವಸತಿಯೊಂದಿಗೆ 20.8.2024 ಮತ್ತು 23.8.2024 ರಿಂದ (10/6)ದಿನಗಳ ರೈಲು/ವಿಮಾನದಲ್ಲಿ ಅಯೋಧ್ಯಾ ಕಾಶಿ,ಗಯಾ, ಪ್ರಯಾಗ್ ರಾಜ್ ಪ್ರವಾಸ. 4.9.2024 ರಿಂದ (13/10)ದಿನಗಳ ಗುಜರಾತ್ ಪ್ರವಾಸ:ಸೋಮನಾಥ್, ದ್ವಾರಕ ಓಂಕಾರೇಶ್ವರ್ ಉಜ್ಜೈನಿ ಮಹಾಕಾಳೇಶ್ವರ ಇತ್ಯಾದಿ ಪ್ರವಾಸಗಳಿಗೆ ಸಂಪರ್ಕಿಸಿ: 9740311411, 9741024122 ಕೆ.ಪಿ.ಟೂರ್ಸ್& ಟ್ರಾವೆಲ್ಸ್, ಬೆಂಗಳೂರು.

ಸುವರ್ಣ ಯಾತ್ರ, ನೇಪಾಳ ಮುಕ್ತಿನಾಥ, ಪಶುಪತಿನಾಥ ಅಯೋಧ್ಯೆ, ಪ್ರವಾಸ 9 ದಿನಗಳು 18/06/24 ಹಾಗೂ 12/7/24. ಪೂರಿಜಗನ್ನಾಥ್ ಪ್ರವಾಸ 19/6/24. 9019462508

ವೈವಾಹಿಕ
Brides Wanted
Hindu
ವಧು ಬೇಕಾಗಿದ್ದಾರೆ
32 ವರ್ಷದ ವರ, ಮೂಲತಃ ಬೆಂಗಳೂರಿನವರು. ಪದವೀದರನಾಗಿದ್ದು, ಕೇಂದ್ರ ಸರಕಾರದ ಹುದ್ದೆಯಲ್ಲಿರುವ ಎಸ್.ಸಿ. ಜನಾಂಗದ ವರನಿಗೆ, ಯಾವುದೇ ಜಾತಿಯ ಸುಂದರವಾಗಿರುವ, ಪದವೀಧರೆಯಾಗಿರುವ ವಧು ಬೇಕಾಗಿದೆ
ಸಂಪರ್ಕಿಸಿ: 97318 46956

Matrimonial Bureaus
MARATHA HIGHLY - QUALIFIED BRIDE GROOM / PARENTS INTRODUCTION MEET
SUNDAY, 26/05/2024 TIME - 11 AM TO 4 PM
-: VENUE :- MARATHA MANDAL HALL, 2nd CROSS, GANDHINAGAR, BANGALORE
CONTACT - 9945188077

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164
*Conditions apply

ಆರನೇ ಹಂತದ ಮತದಾನ: ದೇಶದ 58 ಕ್ಷೇತ್ರಗಳ 889 ಅಭ್ಯರ್ಥಿಗಳ ಭವಿಷ್ಯ ಇವಿಎಂಗಳಲ್ಲಿ ಭದ್ರ

ಪಶ್ಚಿಮ ಬಂಗಾಳ: ಅಲ್ಲಲ್ಲಿ ಹಿಂಸಾಚಾರ

ಪ್ರಜಾ ಮತ ಜನತಂತ್ರದ ಹಬ್ಬ ಲೋಕಸಭಾ ಚುನಾವಣೆ - 2024

ಪೂರ್ವ ದೆಹಲಿ ಲೋಕಸಭಾ ಕ್ಷೇತ್ರದಲ್ಲಿ ಶನಿವಾರ ಮತ ಚಲಾಯಿಸಲು ಸರದಿಯಲ್ಲಿ ನಿಂತಿದ್ದ ಮತದಾರರು – ಪಿಟಿಐ ಚಿತ್ರ

ರಾಜ್ಯ	ಕ್ಷೇತ್ರ	ಮತದಾನ ಪ್ರಮಾಣ
ಬಿಹಾರ	8	53.30 %
ಹರಿಯಾಣ	10	58.37 %
ಜಮ್ಮು ಮತ್ತು ಕಾಶ್ಮೀರ	1	52.28 %
ಜಾರ್ಖಂಡ್	4	62.74 %
ದೆಹಲಿ	7	54.48 %
ಒಡಿಶಾ	6	60.07 %
ಉತ್ತರ ಪ್ರದೇಶ	14	54.03 %
ಪಶ್ಚಿಮ ಬಂಗಾಳ	8	78.19 %
ಒಟ್ಟು	58	59.06 %

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಎಂಟು ಲೋಕಸಭಾ ಕ್ಷೇತ್ರಗಳಲ್ಲಿ ಶನಿವಾರ ನಡೆದ ಮತದಾನದ ವೇಳೆ ಜಾರ್‌ಗ್ರಾಮ್, ತಮ್ಲುಕ್, ಕಾಂಠಿ, ಮಿಡ್ನಾಪುರ, ಬಿಷ್ಣುಪುರ ಕ್ಷೇತ್ರಗಳ ವಿವಿಧ ಭಾಗಗಳಲ್ಲಿ ಹಿಂಸಾಚಾರ ನಡೆದಿರುವ ಘಟನೆಗಳು ವರದಿಯಾಗಿವೆ.

ಚುನಾವಣಾ ಆಯೋಗಕ್ಕೆ ವಿವಿಧ ರಾಜಕೀಯ ಪಕ್ಷಗಳಿಂದ ಬೆಳಿಗ್ಗೆ 11 ಗಂಟೆ ವೇಳೆಗೆ 954 ದೂರುಗಳು ಬಂದಿದ್ದವು. ಈ ಪೈಕಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಲೋಪ, ಏಜೆಂಟರನ್ನು ಬೂತ್ ಪ್ರವೇಶಿಸಲು ಬಿಡುತ್ತಿಲ್ಲ ಎಂಬ ದೂರುಗಳು ಪ್ರಮುಖವಾಗಿದ್ದವು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬಿಜೆಪಿ ಅಭ್ಯರ್ಥಿ ಮೇಲೆ ಕಲ್ಲು ಎಸೆತ: ಜಾರ್‌ಗ್ರಾಮ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಣತ್ ತುಡು ಮತ್ತು ಅವರ ಬೆಂಗಾವಲು ಪಡೆಯ ಮೇಲೆ ಪಶ್ಚಿಮ ಮಿಡ್ನಾಪುರ ಜಿಲ್ಲೆಯ ಗಾರ್ಬೆಟಾ ಪ್ರದೇಶದಲ್ಲಿ ಜನರ ಗುಂಪು ದಾಳಿ ನಡೆಸಿದೆ. ಈ ವೇಳೆ ಭದ್ರತಾ ಸಿಬ್ಬಂದಿಯ ಕೆಲವರಿಗೆ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಕೆಲ ಮತಗಟ್ಟೆಗಳಲ್ಲಿ ಬಿಜೆಪಿ ಏಜೆಂಟರಿಗೆ ಪ್ರವೇಶ ನಿರಾಕರಿಸಲಾಗುತ್ತಿದೆ ಎಂಬ ದೂರು ಬಂದ ಕಾರಣ ಗಾರ್ಬೆಟಾಕ್ಕೆ ತೆರಳುತ್ತಿದ್ದಾಗ ಈ ಘಟನೆ ನಡೆದಿದೆ’ ಎಂದು ತುಡು ಪ್ರತಿಕ್ರಿಯಿಸಿದ್ದಾರೆ.

‘ಟಿಎಂಸಿ ಗೂಂಡಾಗಳು ಇದ್ದಕ್ಕಿದ್ದಂತೆ ರಸ್ತೆಗೆ ಅಡ್ಡ ಬಂದು, ಕಾರಿನ ಮೇಲೆ ಇಟ್ಟಿಗೆಗಳನ್ನು ಎಸೆಯಲು ಪ್ರಾರಂಭಿಸಿದರು. ನನ್ನ ಭದ್ರತಾ ಸಿಬ್ಬಂದಿ ಮಧ್ಯ ಪ್ರವೇಶಿಸಲು ಪ್ರಯತ್ನಿಸಿದಾಗ ಅವರು ಗಾಯಗೊಂಡರು. ನನ್ನ ಜೊತೆಗಿದ್ದ ಇಬ್ಬರು ಸಿಐಎಸ್‌ಎಫ್ ಜವಾನರ ತಲೆಗೂ ಗಾಯಗಳಾಗಿವೆ’ ಎಂದು ಅವರು ಹೇಳಿದ್ದಾರೆ.

ತುಡು ಮತ್ತು ಅವರ ಬೆಂಗಾವಲು ಸಿಬ್ಬಂದಿಯನ್ನು ಜನರ ಗುಂಪು ಅಟ್ಟಿಸಿಕೊಂಡು ಹೋಗುತ್ತಿರುವ ಮತ್ತು ಕಲ್ಲು, ಇಟ್ಟಿಗೆಗಳನ್ನು ಎಸೆಯುತ್ತಿರುವ ದೃಶ್ಯ ಸೆರೆಯಾಗಿದೆ. ಈ ಘಟನೆ ವೇಳೆ ಮಾಧ್ಯಮ ಸಂಸ್ಥೆಗಳ ಕೆಲ ವಾಹನಗಳೂ ಧ್ವಂಸವಾಗಿವೆ ಎಂದು ವರದಿಯಾಗಿದೆ.

ಈ ಆರೋಪಗಳನ್ನು ತಳ್ಳಿಹಾಕಿರುವ ಟಿಎಂಸಿ ಸ್ಥಳೀಯ ನಾಯಕರು, ‘ಬಿಜೆಪಿ ಅಭ್ಯರ್ಥಿ ಮತದಾರರಿಗೆ ಬೆದರಿಕೆ ಹಾಕುತ್ತಿದ್ದರು. ಈ ವೇಳೆ ಆಕ್ರೋಶಗೊಂಡ ಗ್ರಾಮದ ಜನರು ಪ್ರತಿಭಟಿಸಿದ್ದಾರೆ’ ಎಂದು ಹೇಳಿದ್ದಾರೆ.

ಘಟಾಲ್, ಕಾಂಠಿಯಲ್ಲೂ ಘರ್ಷಣೆ: ಮತಗಟ್ಟೆ ಏಜೆಂಟರನ್ನು ಬೂತ್ ಒಳಗೆ ಬಿಡಲಾಗುತ್ತಿಲ್ಲ ಎಂದು ಘಟಾಲ್ ಕ್ಷೇತ್ರದಲ್ಲಿ ಟಿಎಂಸಿ ಮತ್ತು ಬಿಜೆಪಿ ಬೆಂಬಲಿಗರ ನಡುವೆ ಘರ್ಷಣೆ ನಡೆದಿದೆ. ‘ನಮ್ಮ ಏಜೆಂಟರಿಗೆ ಬೂತ್ ಪ್ರವೇಶಕ್ಕೆ ಅಡ್ಡಿ ಮಾಡುತ್ತಿರುವ ಟಿಎಂಸಿ ಗೂಂಡಾಗಳು ಮತದಾನ ಪ್ರಕ್ರಿಯೆಗೆ ಧಕ್ಕೆ ತುರತ್ತಿದ್ದಾರೆ’ ಎಂದು ಬಿಜೆಪಿ ಅಭ್ಯರ್ಥಿ ಹಿರಣ್ ಚಟರ್ಜಿ ದೂರಿದ್ದಾರೆ.

ಕಾಂಠಿ ಕ್ಷೇತ್ರದ ವಿವಿಧೆಡೆಯೂ ಹಿಂಸಾಚಾರದ ವರದಿಯಾಗಿದೆ. ಟಿಎಂಸಿ ಮತ್ತು ಕೇಂದ್ರ ಪಡೆಗಳ ವಿರುದ್ಧ ಬಿಜೆಪಿ ಹರಿಹಾಯ್ದು ಪ್ರತಿಭಟನೆ ನಡೆಸಿದೆ. ‘ಟಿಎಂಸಿ ಮತ್ತು ಕೇಂದ್ರ ಪಡೆಗಳು ನಮ್ಮ ಪಕ್ಷದ ಬೆಂಬಲಿಗರನ್ನು ಥಳಿಸುತ್ತಿವೆ’ ಎಂದು ಬಿಜೆಪಿ ಅಭ್ಯರ್ಥಿ ಸೌಮೇಂದು ಅಧಿಕಾರಿ ಆರೋಪಿಸಿದ್ದಾರೆ.

‘ಗೋ ಬ್ಯಾಕ್’ ಘೋಷಣೆ: ಮಿಡ್ನಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಅಗ್ನಿಮಿತ್ರ ಪಾಲ್ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಟಿಎಂಸಿ ಕಾರ್ಯಕರ್ತರು ‘ಗೋ ಬ್ಯಾಕ್’ ಘೋಷಣೆಗಳನ್ನು ಕೂಗಿದ್ದಾರೆ. ಈ ವೇಳೆ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದಿದ್ದು, ಕೇಂದ್ರ ಪಡೆಗಳು ಗುಂಪುಗಳನ್ನು ಚದುರಿಸಿವೆ.

ಬಿಜೆಪಿ ಅಭ್ಯರ್ಥಿಯಾಗಿರುವ ಕಲ್ಕತ್ತ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರು ತಮ್ಲುಕ್ ಮತಗಟ್ಟೆಗೆ ಬಂದಾಗ, ಜನರ ಗುಂಪು ಅವರ ವಿರುದ್ಧ ಘೋಷಣೆಗಳನ್ನು ಕೂಗಿದೆ. ಕೇಂದ್ರ ಪಡೆಗಳು ಪರಿಸ್ಥಿತಿಯನ್ನು ನಿಯಂತ್ರಿಸಿವೆ.

ಬಂಕುರಾ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿ, ಕೇಂದ್ರ ಸಚಿವ ಸುಭಾಶ್ ಸರ್ಕಾರ್ ಅವರು ಬೂತ್ ಒಂದಕ್ಕೆ ಭೇಟಿ ನೀಡಿದಾಗ ಪ್ರತಿಭಟನೆಯನ್ನು ಎದುರಿಸಿದ್ದಾರೆ.

ತಾಪದ ನಡುವೆಯೂ ಮತದಾನ

ನವದೆಹಲಿ(ಪಿಟಿಐ): ಉತ್ತರ ಭಾರತದ ಹಲವು ಭಾಗಗಳಲ್ಲಿ ತಾಪಮಾನ ಹೆಚ್ಚಳದ ನಡುವೆಯೂ ಮತದಾರರು ಮತಗಟ್ಟೆಗಳ ಬಳಿ ಬಂದು, ಸರತಿ ಸಾಲಿನಲ್ಲಿ ನಿಂತು ಉತ್ಸಾಹದಿಂದ ತಮ್ಮ ಹಕ್ಕು ಚಲಾಯಿಸಿದರು. ಹಲವು ಮತಗಟ್ಟೆಗಳಲ್ಲಿ ತಣ್ಣೀರು, ಕೂಲರ್‌ಗಳು, ಫ್ಯಾನ್ ಮತ್ತು ಟೆಂಟ್ ವ್ಯವಸ್ಥೆ ಮಾಡಲಾಗಿತ್ತು.

ಬಿಹಾರ, ಜಮ್ಮು ಮತ್ತು ಕಾಶ್ಮೀರ, ಹರಿಯಾಣ, ಜಾರ್ಖಂಡ್, ದೆಹಲಿ, ಒಡಿಶಾ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ನಡೆದ ಈ ಹಂತದ ಚುನಾವಣೆಯಲ್ಲಿ ಒಟ್ಟು 889 ಅಭ್ಯರ್ಥಿಗಳು ಕಣದಲ್ಲಿದ್ದರು.

ಆರನೇ ಹಂತದ ಮುಕ್ತಾಯದೊಂದಿಗೆ 28 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 486 ಲೋಕಸಭಾ ಕ್ಷೇತ್ರಗಳ ಮತದಾನ ಪೂರ್ಣಗೊಂಡಿದೆ. ಒಡಿಶಾದ 42 ವಿಧಾನಸಭಾ ಕ್ಷೇತ್ರಗಳಿಗೂ ಏಕ ಕಾಲದಲ್ಲಿ ಮತದಾನ ನಡೆದಿದೆ. ಏಳನೇ ಹಂತದ ಮತದಾನ ಜೂನ್ 1ರಂದು ನಿಗದಿಯಾಗಿದ್ದು, ದೇಶದ 57 ಲೋಕಸಭಾ ಕ್ಷೇತ್ರಗಳಿಗೆ ನಡೆಯಲಿದೆ.

ಠಾಣೆ ಎದುರು ಮುಫ್ತಿ ಪ್ರತಿಭಟನೆ

ಬಿಜ್‌ಬೆಹರಾ (ಜಮ್ಮು ಮತ್ತು ಕಾಶ್ಮೀರ): ಅನಂತನಾಗ್ ಜಿಲ್ಲೆಯಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ಪೋಲಿಂಗ್ ಏಜೆಂಟರ ಬಂಧನ ವಿರೋಧಿಸಿ ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಪೊಲೀಸ್ ಠಾಣೆ ಮುಂಭಾಗ ಪ್ರತಿಭಟಿಸಿದರು.

ಇದೇ ವೇಳೆ ಅವರು, ‘ನನ್ನ ಮೊಬೈಲ್ ಸಂಖ್ಯೆಯಿಂದ ಹೊರ ಹೋಗುವ ಕರೆಗಳನ್ನು ಸ್ಥಗಿತಗೊಳಿಸಲಾಗಿದೆ’ ಎಂದೂ ಆರೋಪಿಸಿದರು. ಸುಗಮ ಚುನಾವಣೆಗಾಗಿ ಬಂಧಿಸಲಾಗಿದೆ ಎಂದು ಪೊಲೀಸರು ಪ್ರತಿಕ್ರಿಯಿಸಿದ್ದಾರೆ.

ಚುನಾವಣೆಯಲ್ಲಿ ಕಂಡದ್ದು...

- ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಅವರ ಪತ್ನಿ ಸುನಿತಾ ಕೇಜ್ರಿವಾಲ್, ಸಿಪಿಎಂ ನಾಯಕರಾದ ಬೃಂದಾ ಕಾರಟ್ ಮತ್ತು ಪ್ರಕಾಶ್ ಕಾರಟ್ ಸೇರಿದಂತೆ ಹಲವು ರಾಜಕಾರಣಿಗಳು ತಮ್ಮ ಮತದಾನದ ಹಕ್ಕನ್ನು ದೆಹಲಿಯಲ್ಲಿ ಚಲಾಯಿಸಿದರು.
- ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರೂ ರಾಷ್ಟ್ರೀಯ ರಾಜಧಾನಿಯಲ್ಲಿ ಮತದಾನ ಮಾಡಿದರು. ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ರಾಂಚಿಯಲ್ಲಿ, ಕುಸ್ತಿಪಟುಗಳಾದ ಬಬಿತಾ ಫೋಗಟ್, ಯೋಗೇಶ್ವರ್ ದತ್, ರಿತಿಕಾ ಹೂಡಾ ಅವರು ಹರಿಯಾಣದಲ್ಲಿ ಮತ ಚಲಾಯಿಸಿದರು.
- ದೆಹಲಿಯ ರಾಷ್ಟ್ರಪತಿ ಭವನದ ಉದ್ಯೋಗಿಗಳಾದ ಯೂನಸ್ ಸಲೀಂ, ಅಜಿಂ ಖಾನ್ ಅವರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಕಾಣೆಯಾಗಿತ್ತು. ನಮ್ಮ ಬಳಿ ಅಗತ್ಯ ದಾಖಲೆಗಳು ಇದ್ದರೂ, ಪಟ್ಟಿಯಲ್ಲಿ ಏಕೆ ಹೆಸರಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.
- ಒಡಿಶಾದ ನಯಾಗಢ ವಿಧಾನಸಭಾ ಕ್ಷೇತ್ರದ ಭಾಪುರ್ ಪ್ರದೇಶದ ಮತಗಟ್ಟೆಯಲ್ಲಿ ಅಸ್ವಸ್ಥಗೊಂಡಿದ್ದ ಹಿರಿಯ ಮಹಿಳಾ ಮತದಾರರೊಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಧೆಂಕನಾಲ್ ಲೋಕಸಭಾ ಕ್ಷೇತ್ರದ ಹಿಂದೋಲ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆಯಲ್ಲಿ ಪೋಲಿಂಗ್ ಏಜೆಂಟ್ ಒಬ್ಬರು ಮೃತಪಟ್ಟಿದ್ದಾರೆ.
- ಜಾರ್ಖಂಡ್‌ನ ರಾಂಚಿ ನಗರ ಬೂತ್‌ಗಳಲ್ಲಿ ಮತದಾನದ ಪ್ರಮಾಣ ಹೆಚ್ಚಿಸಲು ಮತದಾರರಿಗೆ ಉಚಿತ ಪಿಕಪ್ ಮತ್ತು ಡ್ರಾಪ್ ಸೌಲಭ್ಯ ಕಲ್ಪಿಸಲು ಜಿಲ್ಲಾಡಳಿತವು ಬೈಕ್–ಟ್ಯಾಕ್ಸಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಿತ್ತು.
- ಜಮ್ಮು ಮತ್ತು ಕಾಶ್ಮೀರದ ಅನಂತನಾಗ್– ರಾಜೌರಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸೆಹರ್ ಮತ್ತು ಮಕ್ರಿಯ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಉದ್ದಕ್ಕೂ ವಾಸಿಸುವ ಜನರು ಗಡಿಯಾಚೆಗಿನ ಶೆಲ್ ದಾಳಿಯ ಭಯವಿಲ್ಲದೆ ಮತ ಚಲಾಯಿಸಿದರು.

ನಕ್ಸಲ್‌ಪೀಡಿತ ತುಂಡಿಯಲ್ಲಿ ಉತ್ಸಾಹ

ಧನ್‌ಬಾದ್ (ಜಾರ್ಖಂಡ್): ಜಾರ್ಖಂಡ್‌ನ ಧನ್‌ಬಾದ್ ಜಿಲ್ಲೆಯ ನಕ್ಸಲ್ ಪೀಡಿತ ತುಂಡಿ ಬ್ಲಾಕ್‌ನಲ್ಲಿ 1984ರ ಬಳಿಕ ಇದೇ ಮೊದಲ ಬಾರಿಗೆ ಜನರು ಉತ್ಸಾಹದಿಂದ ತಮ್ಮ ಹಕ್ಕು ಚಲಾಯಿಸಿದರು. ನಕ್ಸಲರು ಚುನಾವಣಾ ಬಹಿಷ್ಕಾರಕ್ಕೆ ಈ ಬಾರಿ ಕರೆ ನೀಡದ ಕಾರಣ 55 ವರ್ಷದ ದೇವಯಂತಿ ಮಜ್ಹಿಯಾ ಸೇರಿದಂತೆ ಹಲವರು ಮತದಾನದ ಹಕ್ಕು ಚಲಾಯಿಸಿದರು.

ಗಿರಿದಿಹ್ ಕ್ಷೇತ್ರ ವ್ಯಾಪ್ತಿಯ ತುಂಡಿಯಲ್ಲಿ ಶಾಂತಿಯುತ ಮತದಾನ ನಡೆದಿದೆ ಎಂದು ಧನ್‌ಬಾದ್ ಜಿಲ್ಲಾಧಿಕಾರಿ ಮಾಧ್ವಿ ಮಿಶ್ರಾ ತಿಳಿಸಿದರು.

‘ಬಿಜೆಪಿ ವಿರುದ್ಧ ಕ್ರಮ ಏಕಿಲ್ಲ’

ಮಾಜಿ ಅಧಿಕಾರಿಗಳಿಂದ ಚುನಾವಣಾ ಆಯೋಗಕ್ಕೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ನಾಯಕರ ದ್ವೇಷ ಭಾಷಣದ ವಿಚಾರದಲ್ಲಿ ಅಲ್ಪ ಮಟ್ಟದಲ್ಲಿ ಮಾತ್ರ ಕ್ರಮ ಕೈಗೊಂಡಿರುವುದು ಏಕೆ, ಮತದಾನ ಪ್ರಮಾಣದ ನಿರ್ದಿಷ್ಟ ಅಂಕಿ–ಅಂಶವನ್ನು ಪ್ರಕಟಿಸದೆ ಇರುವುದು ಏಕೆ ಎಂಬುದನ್ನು ಬಹಿರಂಗವಾಗಿ ವಿವರಿಸುವಂತೆ ಕೋರಿ ಸರಿಸುಮಾರು ನೂರು ಮಂದಿ ಮಾಜಿ ನಾಗರಿಕ ಸೇವಾ ಅಧಿಕಾರಿಗಳು ಚುನಾವಣಾ ಆಯೋಗವನ್ನು ಪ್ರಶ್ನಿಸಿದ್ದಾರೆ.

ಚುನಾವಣಾ ಆಯೋಗವು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಹಿಂದೇಟು ಹಾಕುತ್ತಿದೆ ಎಂದು ಅವರು ಪತ್ರದಲ್ಲಿ ಆರೋಪಿಸಿದ್ದಾರೆ.

ರಾಜಕೀಯೇತರ ಸಂಘಟನೆಯಾದ ‘ಕಾನ್ಸ್ಟಿಟ್ಯೂಷನಲ್ ಕಾಂಡಕ್ಟ್ ಗ್ರೂಪ್’ನ (ಸಿಸಿಜಿ) ಸದಸ್ಯರು ಇವರು. ಮತ ಎಣಿಕೆಯ ದಿನ (ಜೂನ್ 4) ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಆಯೋಗವು ಎಲೆಕ್ಟ್ರಾನಿಕ್ ಮತ ಯಂತ್ರಗಳನ್ನು ಸುರಕ್ಷಿತವಾಗಿ ಇರಿಸಲು ಕ್ರಮ ಕೈಗೊಳ್ಳಬೇಕು, ಚುನಾವಣಾ ಅಧಿಕಾರಿಗಳು ಫಲಿತಾಂಶವನ್ನು ಘೋಷಿಸುವಲ್ಲಿ ವಿಳಂಬ ಮಾಡಬಾರದು ಎಂದು ಅವರು ಒತ್ತಾಯಿಸಿದ್ದಾರೆ.

ಚುನಾವಣೆಯು ಮುಕ್ತವಾಗಿ ಹಾಗೂ ನ್ಯಾಯಯುತವಾಗಿ ನಡೆಯುವಂತೆ ನೋಡಿಕೊಳ್ಳುವ ಸಾಂವಿಧಾನಿಕ ಹೊಣೆ ಇರುವ ಸಂಸ್ಥೆಗಳಿಗೆ ಇದು ಪರೀಕ್ಷೆಯ ಕಾಲಎಂದುಅವರುನೆನಪಿಸಿದ್ದಾರೆ.ಪತ್ರಕ್ಕೆ ಮಾಜಿ ಅಧಿಕಾರಿಗಳಾದ ವಜಾಹತ್ ಹಬೀಬ್–ಉಲ್ಲಾ, ಶಿವಶಂಕರ್ ಮೆನನ್, ಜಿ.ಕೆ. ಪಿಳ್ಳೈ, ಕೆ. ಸುಜಾತಾ ರಾವ್ ಮತ್ತಿತರರು ಸಹಿ ಮಾಡಿದ್ದಾರೆ.

ಚುನಾವಣೆಯು ಎಷ್ಟರಮಟ್ಟಿಗೆ ನ್ಯಾಯಸಮ್ಮತವಾಗಿರುತ್ತದೆ ಎಂಬ ವಿಚಾರವಾಗಿ ಕಳವಳಗಳನ್ನು ಹಲವು ಸಂದರ್ಭಗಳಲ್ಲಿ ವ್ಯಕ್ತಪಡಿಸಲಾಗಿದೆ. ಈ ಕಳವಳಗಳು ಇವಿಎಂ ಹಾಗೂ ವಿವಿ–ಪ್ಯಾಟ್ ಯಂತ್ರಗಳನ್ನು ತಿರುಚುವ ಸಾಧ್ಯತೆ, ಹಲವರ ಪರವಾಗಿ ಒಬ್ಬನೇ ವ್ಯಕ್ತಿ ಮತ ಚಲಾಯಿಸಿದ್ದು ಮತ್ತು ಮತದಾರರ ಪಟ್ಟಿಯಲ್ಲಿ ಹೆಸರುಗಳು ಕಾಣೆಯಾಗಿದ್ದರ ಬಗ್ಗೆ ಇವೆ ಎಂದು ಅವರು ಹೇಳಿದ್ದಾರೆ.

‘ಮತದಾರರಲ್ಲಿನ ಆತಂಕಗಳನ್ನು ನಿವಾರಿಸಲು, ಈ ಸಮಸ್ಯೆಗಳ ಬಗ್ಗೆ ಕೈಗೊಂಡ ಹಾಗೂ ಕೈಗೊಳ್ಳದೆ ಇರುವ ಕ್ರಮಗಳನ್ನು ಆಯೋಗವು ಸಾರ್ವಜನಿಕವಾಗಿ ವಿವರಿಸುವುದು ಸೂಕ್ತವಾಗುತ್ತದೆ. ಆಯೋಗವು ಇನ್ನು ಯಾವುದೇ ವಿಳಂಬ ಇಲ್ಲದೆ ಈ ಕೆಲಸವನ್ನು ಪಾರದರ್ಶಕವಾಗಿ ಮಾಡಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

ಅನುಮಾನ ಸೃಷ್ಟಿಸುವುದು ಕೆಲವರ ಕೆಲಸ: ರಾಜೀವ್ ಕುಮಾರ್

ನವದೆಹಲಿ (ಪಿಟಿಐ): ಅನುಮಾನಗಳನ್ನು ಸೃಷ್ಟಿಸುವುದು ಕೆಲವರ ಕೆಲಸ ಎಂದು ಹೇಳಿರುವ ಕೇಂದ್ರದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಆಯೋಗದಲ್ಲಿ ಇರುವ ವ್ಯವಸ್ಥೆಯು ಯಾವುದೇ ಲೋಪ ಆಗದಂತೆ ನೋಡಿಕೊಳ್ಳುವಷ್ಟು ಬಲಿಷ್ಠವಾಗಿ ಇದೆ ಎಂದು ಹೇಳಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಚಲಾವಣೆ ಆಗಿರುವ ಮತಗಳ ಸಂಖ್ಯೆಯ ಬಗ್ಗೆ ಅನುಮಾನಗಳನ್ನು ವ್ಯಕ್ತಪಡಿಸುತ್ತಿರುವ ವಿಚಾರವಾಗಿ ಅವರನ್ನು ಪ್ರಶ್ನಿಸಿದಾಗ ಈ ಉತ್ತರ ನೀಡಿದ್ದಾರೆ.

‘ಇಲ್ಲಿ ಯಾವುದೇ ಲೋಪ ಆಗಿಲ್ಲ ಎಂದು ನಾನು ಹೇಳುವೆ. ಇಲ್ಲಿ ಲೋಪ ಆಗಲಿಕ್ಕೆ ಸಾಧ್ಯವೂ ಇಲ್ಲ’ ಎಂದು ಅವರು ಹೇಳಿದ್ದಾರೆ. ‘ಆದರೆ ಇಂತಹ ಅನುಮಾನಗಳು ಮೂಡಿದ್ದು ಏಕೆ, ಅವುಗಳನ್ನು ಹೇಗೆ ಸೃಷ್ಟಿಸಲಾಯಿತು, ಅವು ನಮ್ಮ ಸುತ್ತ ಎಷ್ಟು ನಕಾರಾತ್ಮಕ ಪರಿಣಾಮ ಉಂಟುಮಾಡಿದವು, ನಮ್ಮ ಶಕ್ತಿ ಹೇಗೆ ಇನ್ನೊಂದೆಡೆ ವಿನಿಯೋಗ ಆಯಿತು, ಇವನ್ನೆಲ್ಲ ನಾವು ಒಂದು ದಿನ ದೇಶಕ್ಕೆ ಖಂಡಿತವಾಗಿಯೂ ತಿಳಿಸುತ್ತೇವೆ’ ಎಂದು ಹೇಳಿದ್ದಾರೆ.

ಮತದಾನದ ಲೆಕ್ಕ ನೀಡಿದ ಆಯೋಗ

ಒಂದನೇ ಪುಟದಿಂದ

ಆರನೆಯ ಹಂತದ ಮತದಾನ ಪ್ರಕ್ರಿಯೆ ನಡೆಯುತ್ತಿರುವ ಹೊತ್ತಿನಲ್ಲಿ, ಚಲಾವಣೆಯಾದ ಮತಗಳ ನಿಖರ ಅಂಕಿ–ಅಂಶವನ್ನು ಬಿಡುಗಡೆ ಮಾಡುವಂತೆ ನೂರಕ್ಕೂ ಹೆಚ್ಚು ಮಂದಿ ಮಾಜಿ ನಾಗರಿಕ ಸೇವಾ ಅಧಿಕಾರಿಗಳು ಕೋರಿದ ಕೆಲವು ಗಂಟೆಗಳ ನಂತರದಲ್ಲಿ ಆಯೋಗವು ಈ ವಿವರ ಪ್ರಕಟಿಸಿದೆ.

ಪ್ರತಿಯೊಂದು ಮತಗಟ್ಟೆಯಲ್ಲಿ ಚಲಾವಣೆಯಾದ ಮತಗಳ ವಿವರವನ್ನು ಒಳಗೊಂಡ ‘ಫಾರ್ಮ್ 17ಸಿ’ಯನ್ನು ಮತದಾನ ನಡೆದ 48 ಗಂಟೆಗಳಲ್ಲಿ ಪ್ರಕಟಿಸಬೇಕು ಎಂಬ ಕೋರಿಕೆ ಇದ್ದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಆಡಿದ ಮಾತುಗಳು ತನಗೆ ಶಕ್ತಿ ತುಂಬಿವೆ ಎಂದು ಆಯೋಗವು ಹೇಳಿದೆ. ಅರ್ಜಿಯ ಆಧಾರದಲ್ಲಿ ಆಯೋಗಕ್ಕೆ ನಿರ್ದೇಶನ ನೀಡಲು ಕೋರ್ಟ್ ಶುಕ್ರವಾರ ನಿರಾಕರಿಸಿತ್ತು.

‘ಜನರ ಮಾಹಿತಿ ಹಕ್ಕಿಗೆ ದೊಡ್ಡ ಜಯ ಸಿಕ್ಕಿದೆ. ಚುನಾವಣಾ ಆಯೋಗವು ಮತದಾನದ ಸಂಪೂರ್ಣ ಅಂಕಿ–ಅಂಶಗಳನ್ನು ಬಿಡುಗಡೆ ಮಾಡಿದೆ. ಇದು ಆಯೋಗದ ಪ್ರಮುಖ ಹೆಜ್ಜೆ. ಇದನ್ನು ಮೊದಲೇ ಮಾಡಬಹುದಿತ್ತು. ಆದರೆ, ಫಾರ್ಮ್ 17ಸಿ ಪ್ರಕಟಿಸುವ ಬೇಡಿಕೆ ಮುಂದುವರಿಯಬೇಕು. ಏಕೆಂದರೆ, ಮತದಾನದ ಪ್ರಮಾಣದ ಶಾಸನಬದ್ಧ ಅಧಿಕೃತ ದಾಖಲೆ ಅದೊಂದೇ’ ಎಂದು 'ಕಾಮನ್ ಕಾಸ್' ಸಂಘಟನೆಯ ಆಡಳಿತ ಮಂಡಳಿಯ ಸದಸ್ಯೆ ಅಂಜಲಿ ಭಾರದ್ವಾಜ್ ಹೇಳಿದ್ದಾರೆ.

ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನವು ಏಪ್ರಿಲ್ 19ರಂದು ನಡೆದಾಗಿನಿಂದ, ಲೋಕಸಭಾ ಕ್ಷೇತ್ರಗಳಲ್ಲಿನ ಮತದಾರರ ನಿಖರ ಸಂಖ್ಯೆಯನ್ನು ಹಾಗೂ ಅಲ್ಲಿ ಮತದಾನದ ಹಕ್ಕು ಚಲಾಯಿಸಿದವರ ನಿಖರ ಸಂಖ್ಯೆಯನ್ನು ಪ್ರಕಟಿಸಬೇಕು ಎಂಬ ಬೇಡಿಕೆ ಇದೆ.

ಆದರೆ, ಆಯೋಗವು ಇದುವರೆಗೆ ಚಲಾವಣೆಯಾದ ಮತಗಳ ಸಂಖ್ಯೆಯನ್ನು ನೀಡಿರಲಿಲ್ಲ. ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸಿದ ನಂತರ, ಆಯೋಗವು ಪ್ರತಿ ಲೋಕಸಭಾ ಕ್ಷೇತ್ರದಲ್ಲಿನ ಮತದಾರರ ಸಂಖ್ಯೆಯನ್ನು ಒದಗಿಸಲು ಮೇ 1ರಿಂದ ಆರಂಭಿಸಿತು. ಮೊದಲ ಹಂತದ ಮತದಾನದಲ್ಲಿ ಚಲಾವಣೆಯಾದ ಮತಗಳ ಸಂಖ್ಯೆಯನ್ನು ಪ್ರಕಟಿಸಲು 11 ದಿನ ವಿಳಂಬ ಮಾಡಿದ್ದು ವಿವಾದಕ್ಕೆ ಕಾರಣವಾಗಿತ್ತು.

‘ಮಾಹಿತಿ ಬಿಡುಗಡೆ ವಿಳಂಬ ಆಗಿಲ್ಲ’

ಒಂದನೇ ಪುಟದಿಂದ

ಮತದಾನದ ಪ್ರಮಾಣವನ್ನು ನೀಡುವ ವಿಧಾನವನ್ನು ಇನ್ನಷ್ಟು ವಿಸ್ತರಿಸಲು ತೀರ್ಮಾನಿಸಲಾಗಿದೆ ಎಂದು ಹೇಳಿರುವ ಆಯೋಗವು, ಪ್ರತಿ ಲೋಕಸಭಾ ಕ್ಷೇತ್ರದಲ್ಲಿ ಮತದಾನ ಮಾಡಿದವರ ನಿಖರ ಸಂಖ್ಯೆಯನ್ನು ನೀಡಲಾಗುತ್ತಿದೆ ಎಂದು ತಿಳಿಸಿದೆ.

ಮತ ಚಲಾವಣೆಗೆ ಸಂಬಂಧಿಸಿದ ದತ್ತಾಂಶವನ್ನು ಬಿಡುಗಡೆ ಮಾಡುವ ಪ್ರಕ್ರಿಯೆಯು ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನದ ದಿನದಿಂದಲೂ ನಿಖರವಾಗಿದೆ, ಖಚಿತವಾಗಿದೆ, ಚುನಾವಣೆಗೆ ಸಂಬಂಧಿಸಿದ ಕಾನೂನುಗಳಿಗೆ ಅನುಗುಣವಾಗಿದೆ, ಯಾವುದೇ ರೀತಿಯ ವ್ಯತ್ಯಾಸಗಳು ಆಗಿಲ್ಲ ಎಂದು ಆಯೋಗ ಹೇಳಿದೆ.

ಆಯೋಗದ ಮಾತು...

- ಫಾರ್ಮ್ 17ಸಿ ದಾಖಲೆಯಲ್ಲಿ ಮತಗಟ್ಟೆಗಳ ಮಟ್ಟದಲ್ಲಿ ಆಗಿರುವ ಮತದಾನದ ವಿವರ ಇರುತ್ತದೆ. ದತ್ತಾಂಶದಲ್ಲಿ ವ್ಯತ್ಯಾಸಕ್ಕೆ ಅವಕಾಶವಿಲ್ಲ.
- ಕ್ಷೇತ್ರದಲ್ಲಿ ಚಲಾವಣೆಯಾದ ಮತಗಳ ಸಂಖ್ಯೆಯು ‘ಫಾರ್ಮ್ 17ಸಿ’ಯಲ್ಲಿ ದಾಖಲಾಗಿರುತ್ತದೆ. ಈ ದಾಖಲೆಯು ಎಲ್ಲ ಅಭ್ಯರ್ಥಿಗಳ ಬಳಿಯೂ ಇರುತ್ತದೆ. ಇದರಲ್ಲಿನ ಮಾಹಿತಿಯನ್ನು ಬದಲಾಯಿಸಲು ಅವಕಾಶ ಇಲ್ಲ.
- ಇವಿಎಂ ಹಾಗೂ ಇತರ ಶಾಸನಬದ್ಧ ದಾಖಲೆಗಳನ್ನು ಭದ್ರತಾ ಕೊಠಡಿಯವರೆಗೆ ಒಯ್ಯುವವರೆಗೆ ಅವುಗಳ ಮೇಲೆ ಕಣ್ಣಿಡುವುದಕ್ಕೆ ಅಭ್ಯರ್ಥಿಗಳ ಏಜೆಂಟರಿಗೆ ಯಾವಾಗಲೂ ಅವಕಾಶ ಇರುತ್ತದೆ.
- ಅಭ್ಯರ್ಥಿಗಳು ಅಥವಾ ಅವರ ಏಜೆಂಟರು ‘ಫಾರ್ಮ್ 17ಸಿ’ಯನ್ನು ಮತ ಎಣಿಕೆ ಕೇಂದ್ರಕ್ಕೆ ತರುತ್ತಾರೆ. ಪ್ರತಿ ಸುತ್ತಿನ ಫಲಿತಾಂಶದ ನಂತರ ಅದನ್ನು ಫಲಿತಾಂಶದ ಜೊತೆ ತಾಳೆ ಮಾಡುತ್ತಾರೆ.
- ಮತದಾನ ಪ್ರಮಾಣದ ವಿವರ ನೀಡುವಲ್ಲಿ ಆಯೋಗದ ಕಡೆಯಿಂದ ಯಾವುದೇ ವಿಳಂಬ ಆಗಿಲ್ಲ. ಮತದಾನ ಪ್ರಮಾಣದ ವಿವರವು ಸಾರ್ವಜನಿಕರಿಗೆ ಆ್ಯಪ್ ಮೂಲಕ ಸಿಗುತ್ತಲೇ ಇರುತ್ತಿತ್ತು.

ಕೇರಳ: ಭಾರಿ ಮಳೆ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಭಾರಿ ಮಳೆ ಸುರಿಯುತ್ತಿದ್ದು ಜನಜೀವನದ ಮೇಲೆ ದುಷ್ಪರಿಣಾಮ ಬೀರಿದೆ. ನೂರಾರು ಮನೆಗಳಿಗೆ ಹಾನಿಯಾಗಿದ್ದು, ರಸ್ತೆಗಳು ಜಲಾವೃತವಾಗಿವೆ. ಮರಗಳು ನೆಲಕ್ಕುರುಳಿದ್ದು, ಪ್ರವಾಹದ ನೀರು ಮನೆಗಳನ್ನು ಪ್ರವೇಶಿಸಿದೆ. ಧಾರಾಕಾರ ಮಳೆಯ ಕಾರಣ ರೈಲು ಸಂಚಾರದಲ್ಲಿ ತೊಡಕಾಗಿದೆ.

ಕರಾವಳಿಯ ಆಲಪ್ಪುಳ ಜಿಲ್ಲೆಯ ಕುಟ್ಟನಾಡಿನ ತಗ್ಗು ಪ್ರದೇಶಗಳಲ್ಲಿ ಇರುವ ಮನೆಗಳು, ಶಾಲೆಗಳು ಮತ್ತು ಅಂಗಡಿಗಳಿಗೆ ಪ್ರವಾಹದ ನೀರು ನುಗ್ಗಿ ಸಂಕಷ್ಟ ಎದುರಾಗಿದೆ.

ಪೋಶೆ ಕಾರು ಅಪಘಾತ ಬಾಲಕನ ತಾತ ಕಸ್ಟಡಿಗೆ

ಪುಣೆ (ಪಿಟಿಐ): ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಭಾಗಿಯಾಗಿರುವ 17 ವರ್ಷದ ಬಾಲಕನ ತಾತನನ್ನು ಪೊಲೀಸರು ಬಂಧಿಸಿದ್ದಾರೆ.

ಕುಟುಂಬದ ಚಾಲಕನನ್ನು ಅಕ್ರಮವಾಗಿ ಕೂಡಿಟ್ಟ ಪ್ರಕರಣಕ್ಕಾಗಿ ಬಂಧಿಸಲಾಗಿದ್ದು, ಪುಣೆಯ ನ್ಯಾಯಾಲಯವು ಮೇ 28ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಈ ಪ್ರಕರಣದಲ್ಲಿ ಕಾನೂನು ಸಂಘರ್ಷಕ್ಕೆ ಸಿಲುಕಿರುವ ಬಾಲಕನ ತಂದೆ, ಸದ್ಯ ನ್ಯಾಯಾಂಗ ಬಂಧನದಲ್ಲಿರುವ ರಿಯಲ್ ಎಸ್ಟೇಟ್ ಉದ್ಯಮಿ ವಿಶಾಲ್ ಅಗರ್ವಾಲ್ ಮತ್ತು ಬಾಲಕನ ತಾತ, ಕಾರು ಅಪಘಾತದ ಕಳಂಕವನ್ನು ತಮ್ಮ ಕುಟುಂಬದ ಚಾಲಕನಿಗೆ ಹೊರಿಸಲು, ಅದನ್ನು ಒಪ್ಪಿಕೊಂಡು ಬಂಧನಕ್ಕೆ ಒಳಗಾಗುವಂತೆ ಚಾಲಕನಿಗೆ ನಗದು ಮತ್ತು ಉಡುಗೊರೆಗಳ ಆಮಿಷವೊಡ್ಡಿದ್ದಾರೆ. ಚಾಲಕ, ಇದಕ್ಕೆ ಒಪ್ಪಿಕೊಳ್ಳದಿದ್ದಾಗ ಆತನಿಗೆ ಬೆದರಿಕೆ ಹಾಕಿದ್ದಾರೆ ಎಂದು ಪುಣೆ ಪೊಲೀಸ್ ಆಯುಕ್ತ ಅಮಿತೇಶ್ ಕುಮಾರ್ ಮಾಧ್ಯಮಗಳಿಗೆ ತಿಳಿಸಿದರು.

‘ಅಪಘಾತ ನಡೆದ ನಂತರ ಚಾಲಕ ಪೊಲೀಸ್ ಠಾಣೆಗೆ ಹಾಜರಾಗಿ, ಅಪಘಾತ ನಡೆದಾಗ ತಾನೇ ಚಾಲನೆ ಮಾಡುತ್ತಿದ್ದುದಾಗಿ ಹೇಳಿಕೆ ನೀಡಿದ್ದ. ಬಾಲಕನೇ ಕಾರು ಚಾಲನೆ ಮಾಡುತ್ತಿದ್ದ ಸಂಗತಿಯನ್ನು ಹೇಳಿಲ್ಲ. ಪ್ರಕರಣ ದಾಖಲಾಗಿರುವ ಯರವಾಡ ಪೊಲೀಸ್ ಠಾಣೆಯಿಂದ ಚಾಲಕ ಹೊರಟು ಹೋಗುತ್ತಿದ್ದಾಗ, ಆರೋಪಿಗಳಾದ ವಿಶಾಲ್ ಅಗರ್ವಾಲ್ ಮತ್ತು ಅವರ ತಂದೆ ಚಾಲಕನನ್ನು ಕಾರಿನಲ್ಲಿ ತಮ್ಮ ಬಂಗಲೆಯ ಆವರಣದಲ್ಲಿರುವ ಅವರ ಮನೆಗೆ ಕರೆದೊಯ್ದು, ಮೊಬೈಲ್ ಕಸಿದುಕೊಂಡು ಆತನನ್ನು ಅಲ್ಲಿಯೇ ಕೂಡಿಟ್ಟಿದ್ದರು. ಅವರ ನಿರ್ದೇಶನದಂತೆ ಪೊಲೀಸರಿಗೆ ಹೇಳಿಕೆ ನೀಡುವಂತೆಯೂ ಒತ್ತಡ ಹೇರಿದ್ದರು. ಚಾಲಕನ ಪತ್ನಿ ಮರುದಿನ ಅಗರ್ವಾಲ್ ಮನೆಗೆ ಹೋದಾಗ ಚಾಲಕನನ್ನು ಅಕ್ರಮ ಬಂಧನದಿಂದ ಬಿಡುಗಡೆ ಮಾಡಿದ್ದಾರೆ’ ಎಂದರು.

ಬಾಲಕನ ತಾತನನ್ನು ಪುಣೆ ಪೊಲೀಸರು 7 ದಿನಗಳ ಕಸ್ಟಡಿಗೆ ಕೋರಿದ್ದರು. ನ್ಯಾಯಾಲಯವು ಇದೇ 28ರವರೆಗೆ ಕಸ್ಟಡಿಗೆ ಒಪ್ಪಿಸಿದೆ. ಚಾಲಕ ಮತ್ತು ಆತನ ಕುಟುಂಬದವರಿಗೆ ರಕ್ಷಣೆ ಒದಗಿಸಲಾಗಿದೆ ಎಂದು ಅಮಿತೇಶ್ ಕುಮಾರ್ ತಿಳಿಸಿದರು.

ಬಾಲಕನ ತಾತ ಹಾಗೂ ತಂದೆ ರಿಯಲ್ ಎಸ್ಟೇಟ್ ಉದ್ಯಮಿ ವಿಶಾಲ್ ಅಗರ್ವಾಲ್ ವಿರುದ್ಧ ಚಾಲಕನನ್ನು ಅಕ್ರಮವಾಗಿ ಕೂಡಿಟ್ಟ ಮತ್ತು ಆತನಿಗೆ ಬೆದರಿಕೆಯೊಡ್ಡಿದ ಆರೋಪಗಳಿಗೆ ಸಂಬಂಧಿಸಿ ಐಪಿಸಿ ಸೆಕ್ಷನ್ 365 ಮತ್ತು 368 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಗೂಗಲ್ ನಿರ್ದೇಶನ: ತೊರೆಗೆ ಕಾರು!

ಕೊಟ್ಟಾಯಂ (ಕೇರಳ, ಪಿಟಿಐ): ರಸ್ತೆಯ ಮಾರ್ಗದರ್ಶನಕ್ಕಾಗಿ ಗೂಗಲ್ ಮ್ಯಾಪ್ ಬಳಸಿದ ಹೈದರಾಬಾದ್‌ನ ಪ್ರವಾಸಿಗರು ತುಂಬಿ ಹರಿಯುತ್ತಿದ್ದ ತೊರೆಗೆ ಕಾರನ್ನು ಇಳಿಸಿದ್ದಾರೆ.

ಮಹಿಳೆಯು ಸೇರಿದಂತೆ ನಾಲ್ವರು ಪ್ರವಾಸಿಗರಿದ್ದ ತಂಡ ಶುಕ್ರವಾರ ರಾತ್ರಿ ಕಾರಿನಲ್ಲಿ ಆಲಪ್ಪುಳ ಕಡೆಗೆ ತೆರಳುತ್ತಿದ್ದಾಗ ದಕ್ಷಿಣ ಕೇರಳದ ಕುರುಪ್ಪಂತಾರ ಬಳಿ ಈ ಘಟನೆ ನಡೆದಿದೆ.

ಭಾರಿ ವರ್ಷಧಾರೆಯಿಂದಾಗಿ ಪ್ರವಾಸಿಗರು ಪ್ರಯಾಣಿಸುತ್ತಿದ್ದ ರಸ್ತೆಯಲ್ಲಿ ನೀರು ಹೊಳೆಯಂತೆ ಹರಿಯುತ್ತಿತ್ತು. ಈ ಪ್ರದೇಶದ ಪರಿಚಯವಿಲ್ಲದಿದ್ದರಿಂದ ಅವರು, ಮಾರ್ಗದರ್ಶನಕ್ಕಾಗಿ ಗೂಗಲ್ ಮ್ಯಾಪ್‌ನ ಮೊರೆ ಹೋಗಿದ್ದರು. ನಕ್ಷೆಯು ಅವರನ್ನು ಉಕ್ಕೇರಿದ ತೊರೆಗೆ ಕರೆದೊಯ್ದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಮೀಪದಲ್ಲಿದ್ದ ಪೊಲೀಸ್ ಗಸ್ತು ಘಟಕ ಹಾಗೂ ಸ್ಥಳೀಯರ ಪ್ರಯತ್ನದಿಂದ ನಾಲ್ವರು ಅಪಾಯದಿಂದ ಪಾರಾಗಿದ್ದಾರೆ. ಆದರೆ, ಅವರು ಪ್ರಯಾಣಿಸುತ್ತಿದ್ದ ಕಾರು ತೊರೆಯಲ್ಲಿ ಸಂಪೂರ್ಣ ಮುಳುಗಿತು. ಕ್ರೇನ್ ಬಳಸಿ ಕಾರನ್ನು ಹೊರ ತೆಗೆಯಲಾಗಿದೆ ಎಂದು ಕಡುತುರುತಿ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ.

‘ಮುನ್ನಾರ್‌ನಿಂದ ಆಲಪ್ಪುಳಕ್ಕೆ ಪ್ರಯಾಣಿಸುತ್ತಿದ್ದೆವು. ಮಧ್ಯಾಹ್ನ 2 ಗಂಟೆ ಸುಮಾರಿಗೆ ಭಾರಿ ಮಳೆ ಸುರಿದಿದ್ದರಿಂದ ರಸ್ತೆ ಜಲಾವೃತಗೊಂಡಿತು. ಮಾರ್ಗದರ್ಶನಕ್ಕಾಗಿ ನಕ್ಷೆ ಬಳಸಿಕೊಂಡು ಗಂಟೆಗೆ 10 ಕಿ.ಮೀ. ವೇಗದಲ್ಲಿ ವಾಹನ ಚಲಾಯಿಸುತ್ತಿದ್ದೆ. ಈ ಸಂದರ್ಭ ಇದ್ದಕ್ಕಿದ್ದಂತೆ ಮುಂಭಾಗದ ಟೈರ್‌ಗಳು ನೀರಿನಲ್ಲಿ ಮುಳುಗಿದ್ದರಿಂದ ವಾಹನ ನಿಯಂತ್ರಣ ಕಳೆದುಕೊಂಡಿತು. ಹಿಂಭಾಗದ ಟೈರ್‌ಗಳು ಸಹ ನೀರಿನೊಳಗೆ ಇಳಿದಿದ್ದರಿಂದ ತೇಲಲಾರಂಭಿಸಿತು. ಎಲ್ಲರೂ ಹೊರಗೆ ಹಾರಿ, ದಡ ತಲುಪಿದೆವು’ ಎಂದು ಕಾರು ಚಾಲನೆ ಮಾಡುತ್ತಿದ್ದ ಪ್ರವಾಸಿಯೊಬ್ಬ ತಿಳಿಸಿದ್ದಾರೆ.

ಮಳೆಗಾಲದಲ್ಲಿ ರಸ್ತೆಗಳು ಜಲಾವೃತಗೊಂಡಾಗ ಇಂತಹ ಅಪಘಾತಗಳು ಸಂಭವಿಸುತ್ತವೆ ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ.

ಕೇರಳದಲ್ಲಿ ಗೂಗಲ್ ಮ್ಯಾಪ್ ಸಂಬಂಧಿತ ಅಪಘಾತಗಳು ವರದಿಯಾಗಿರುವುದು ಇದೇ ಮೊದಲಲ್ಲ. ಕಳೆದ ವರ್ಷದ ಅಕ್ಟೋಬರ್‌ನಲ್ಲೂ ಗೂಗಲ್ ನಕ್ಷೆ ಆಧರಿಸಿ ಚಲಿಸುತ್ತಿದ್ದ ಕಾರೊಂದು ನದಿಗೆ ಬಿದ್ದು ವೈದ್ಯರಿಬ್ಬರು ಮೃತಪಟ್ಟಿದ್ದರು. ಈ ಘಟನೆಯ ನಂತರ ಕೇರಳ ಪೊಲೀಸರು ಮಳೆಗಾಲದಲ್ಲಿ ತಂತ್ರಜ್ಞಾನ ಬಳಕೆಗೆ ಸಂಬಂಧಿಸಿದಂತೆ ಎಚ್ಚರಿಕೆಯ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದರು.

ಬಾಂಗ್ಲಾ ಸಂಸದ ಅನಾರ್ ಹತ್ಯೆ ಸ್ನೇಹಿತನೇ ಪ್ರಮುಖ ಶಂಕಿತ

ಕೋಲ್ಕತ್ತ/ಢಾಕಾ (ಪಿಟಿಐ): ‘ಬಾಂಗ್ಲಾದೇಶದ ಸಂಸದ ಅನ್ವರುಲ್ ಅಜೀಂ ಅನಾರ್ ಅವರ ಹತ್ಯೆ ಪ್ರಕರಣದಲ್ಲಿ ಉದ್ಯಮಿ ಅಖ್ತರುಜ್ಜಮಾಂ ಶಾಹಿನ್ ಅವರು ಪ್ರಮುಖ ಶಂಕಿತ ವ್ಯಕ್ತಿಯಾಗಿದ್ದು, ಅವರನ್ನು ವಿಚಾರಣೆಗೆ ಗುರಿಪಡಿಸಲು ಭಾರತ ಹಾಗೂ ಅಮೆರಿಕದ ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದ್ದೇವೆ’ ಎಂದು ಬಾಂಗ್ಲಾದೇಶದ ಗೃಹ ಸಚಿವ ಅಸದುಜ್ಜಮಾಂ ಖಾನ್ ಹೇಳಿದ್ದಾರೆ.

ಢಾಕಾದಲ್ಲಿ ಇರುವ ಖಾನ್ ಅವರು ಪಿಟಿಐ ಜೊತೆ ಶನಿವಾರ ಮಾತನಾಡಿದರು. ‘ನಾವು ಅಖ್ತರುಜ್ಜಮಾಂ ಶಾಹೀನ್ ಅವರಿಗಾಗಿ ಹುಡುಕಾಟ ನಡೆಸಿದ್ದೇವೆ. ಅವರು ಪ್ರಮುಖ ಶಂಕಿತ ವ್ಯಕ್ತಿ. ಅವರನ್ನು ವಿಚಾರಣೆಗೆ ಗುರಿಪಡಿಸಲು ನಾವು ನೇಪಾಳ, ಅಮೆರಿಕ ಮತ್ತು ಭಾರತದ ಕಾನೂನು ಜಾರಿ ಸಂಸ್ಥೆಗಳಿಂದ ನೆರವು ಕೋರಿದ್ದೇವೆ’ ಎಂದು ಅವರು ಹೇಳಿದ್ದಾರೆ.

‘ನಮ್ಮ ಸಂಸದರ ಕುಟುಂಬಕ್ಕೆ ನ್ಯಾಯ ಕೊಡಿಸಲು ನಾವು ಇಂಟರ್‌ಪೋಲ್ ಜೊತೆಗೂ ಸಂಪರ್ಕದಲ್ಲಿ ಇದ್ದೇವೆ. ಒಬ್ಬಳು ಮಹಿಳೆ ಸೇರಿದಂತೆ ಮೂವರನ್ನು ಬಂಧಿಸಿದ್ದೇವೆ. ಅವರಲ್ಲಿ ಇಬ್ಬರು ಕ್ರಿಮಿನಲ್ ಅಪರಾಧ ಹಿನ್ನೆಲೆ ಹೊಂದಿದ್ದಾರೆ. ಮಹಿಳೆಯ ಹಿನ್ನೆಲೆ ಏನಿದೆ ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಖಾನ್ ಹೇಳಿದ್ದಾರೆ. ಹತ್ಯೆಯ ಉದ್ದೇಶ ಏನು ಎಂಬುದನ್ನು ಶೀಘ್ರದಲ್ಲಿಯೇ ತಿಳಿಸಲಾಗುತ್ತದೆ ಎಂದಿದ್ದಾರೆ.

ಬ್ಯಾಡ್ಮಿಂಟನ್: ಶಾಯ್ನಾಗೆ ಪ್ರಶಸ್ತಿ ‘ಡಬಲ್’ ಸಂಭ್ರಮ

ಪ್ರಜಾವಾಣಿ ವಾರ್ತೆ

ಬ್ಯಾಡ್ಮಿಂಟನ್ ಟೂರ್ನಿಯ ವಿಜೇತರು ಪ್ರಶಸ್ತಿಯೊಂದಿಗೆ ಸಂಭ್ರಮಿಸಿದರು.ಪಿಯೂಷ್ ತ್ರಿಪಾಠಿ, ವೃದ್ಧಿ ಪೊನ್ನಮ್ಮ, ಅದಿತಿ ಡಿ., ಶೈನಾ ಎಂ., ದಿಶಾ ಆರ್., ನಿಧಿ ಆತ್ಮಾರಾಮ್, ಸೆಲ್ವಸಮೃದ್ಧಿ(ಎಡದಿಂದ ಬಲಕ್ಕೆ ಕುಳಿತವರು).ಶ್ಯಾಮ್ ಬಿಂಡಿಗನವಿಲೆ, ಮೆಹುಲ್ ಮಾನವ್, ಮನೀಷ್ ಎಸ್.ಆರ್., ಸಾಯಿ ಪುಷ್ಕರ್, ಅಮೃತ್ ರಾಜ್ ಎನ್., ಹಾರ್ದಿಕ್ ದಿವ್ಯಾಂಶ್(ಎಡದಿಂದ ಬಲಕ್ಕೆ ನಿಂತವರು)

ದಾವಣಗೆರೆ: ಬೆಂಗಳೂರಿನ ಶಾಯ್ನಾ ಮಣಿಮುತ್ತು, ಶನಿವಾರ ಮುಕ್ತಾಯವಾದ ರಾಜ್ಯ ರ‍್ಯಾಂಕಿಂಗ್ ಸಬ್ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ 'ಡಬಲ್' ಸಾಧನೆ ಮಾಡಿದರು.

ಇಲ್ಲಿನ ನೇತಾಜಿ ಸುಭಾಷ್ ಚಂದ್ರ ಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ 17 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಶಾಯ್ನಾ 21-19, 21-14 ರಿಂದ ಮೈಸೂರಿನ ಆಟಗಾರ್ತಿ, ಅಗ್ರ ಶ್ರೇಯಾಂಕಿತೆ ದಿಯಾ ಭೀಮಯ್ಯ ಎದುರು ಗೆದ್ದರು.

15 ವರ್ಷದೊಳಗಿನ ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ಶಾಯ್ನಾ ಎದು ರಿನ ಪಂದ್ಯದಲ್ಲಿ ಐಕ್ಯಾ ಶೆಟ್ಟಿ 21-18, 11-5 ಮುನ್ನಡೆ ಕಂಡಿದ್ದರು.ಈ ವೇಳೆ ಎದುರಾಳಿ ಗಾಯಗೊಂಡು ಹಿಂದೆ ಸರಿದ ಕಾರಣ ಶಾಯ್ನಾ ವಿಜಯಿಯಾದರು.

17 ವರ್ಷದೊಳಗಿನ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ ಮೈಸೂರಿನ ಹಾರ್ದಿಕ್ ದಿವ್ಯಾಂಶ್ 21-17, 21-19 ರಿಂದ ಮೂರನೇ ಶ್ರೇಯಾಂಕದ ಇಶಾನ್ ನಾಯ್ಕ ಅವರನ್ನು ಮಣಿಸಿದರು.

15 ವರ್ಷದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ ಫೈನಲ್ ಹೋರಾಟದಲ್ಲಿ ಬೆಂಗಳೂರಿನ ಸಾಯಿ ಪುಷ್ಕರ್ 21-11, 21-23, 21-18 ರಿಂದ (ಮೈಸೂರು), ಅಗ್ರಶ್ರೇಯಾಂಕದ ಶ್ಯಾಮ್ ಬಿಂಡಿಗನವಿಲೆಗೆ ಆಘಾತ ನೀಡಿದರು.

17 ವರ್ಷದೊಳಗಿನ ಬಾಲಕರ ಡಬಲ್ಸ್ ಫೈನಲ್‌ನಲ್ಲಿ ಅಮಿತ್ ರಾಜ್ ಮತ್ತು ಹಾರ್ದಿಕ್ ದಿವ್ಯಾಂಶ್ 17-21, 21-9, 21-14 ರಿಂದ ಕೆ.ಯದುನಂದನ್ ಮತ್ತು ಎ.ವಂಶಿ ಎದುರು ಜಯಿಸಿದರು. ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ಅದಿತಿ ದೀಪಕ್ ರಾಜ್ ಮತ್ತು ವೃದ್ಧಿ ಪೊನ್ನಮ್ಮ ಬಿ.ವಿ. 11-21, 21-16, 21-15 ರಿಂದ ಇಶಿಕಾ ಬರುವಾ ಮತ್ತು ಲಕ್ಷ್ಯ ರಾಜೇಶ್ ವಿರುದ್ಧ ಗೆಲುವು ಕಂಡರು.

15 ವರ್ಷದೊಳಗಿನ ಬಾಲಕರ ಡಬಲ್ಸ್ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಪಿಯೂಷ್ ತ್ರಿಪಾಠಿ ಮತ್ತು ಶ್ಯಾಮ್ ಬಿಂಡಿಗನವಿಲೆ 21-11, 21-14 ರಿಂದ ಎಸ್.ಹರ್ಷವರ್ಧನ್ ಮತ್ತು ಎನ್.ಡಿ. ನಿಕೇತನ್ ಹರಿ ಎದುರು, ಈ ವಿಭಾಗದ ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ನಿಧಿ ಆತ್ಮರಾಮ್ ಮತ್ತು ಸೆಲ್ವಸಮೃದ್ಧಿ 21-12 21-10 ರಿಂದ ಅವನಿ ಕುಲಕರ್ಣಿ ಮತ್ತು ತನ್ವಿ ಮುನೋತ್ ವಿರುದ್ಧ ವಿಜಯಿಯಾದರು.

17 ವರ್ಷದೊಳಗಿನ ಮಿಶ್ರ ಡಬಲ್ಸ್‌ನ ಫೈನಲ್‌ನಲ್ಲಿ ಮನೀಷ್ ಎಸ್.ಆರ್. ಮತ್ತು ಅದಿತಿ ದೀಪಕ್ ರಾಜ್ 21-9, 18-21, 21-10 ರಿಂದ ಧ್ಯಾನ್ ಸಂತೋಷ್ ಮತ್ತು ದಿಶಾ ಸಂತೋಷ್ ಎದುರು ಜಯಿಸಿದರು.

ಹಾಕಿ:ಮಹಿಳಾ ತಂಡಕ್ಕೆ ಸೋಲು

ಆ್ಯಂಟ್‌ವರ್ಪ್(ಬೆಲ್ಜಿಯಮ್) (ಪಿಟಿಐ): ಭಾರತ ವನಿತೆಯರ ತಂಡ, ಎಫ್‌ಐಎಚ್ ಪ್ರೊ ಲೀಗ್ ಹಾಕಿ ಯುರೋಪ್ ಲೆಗ್‌ನ ಸತತ ಮೂರನೇ ಪಂದ್ಯದಲ್ಲೂ ಸೋಲು ಅನುಭವಿಸಿತು. ಶನಿವಾರ ನಡೆದ ಪಂದ್ಯದಲ್ಲಿ ಭಾರತ 1–2 ಗೋಲುಗಳಿಂದ ಅತಿಥೇಯ ಬೆಲ್ಜಿಯಮ್‌ಗೆ ಮಣಿಯಿತು.

ಕೋಚ್ ಆಗಿ ಹರೇಂದ್ರ ಸಿಂಗ್ ಅವರಿಗೆ ಇದು ಮೊದಲ ಪ್ರವಾಸ. ಭಾರತ ತಂಡ ಪ್ರವಾಸ ಮೊದಲ ಪಂದ್ಯದಲ್ಲಿ 0–5 ಗೋಲುಗಳಿಂದ ಅರ್ಜೆಂಟೀನಾ ತಂಡಕ್ಕೆ ಮಣಿದಿತ್ತು.

ಬೆಲ್ಜಿಯಮ್ ಪರ ಬ್ಯಾಲೆಂಫಿಯೆನ್ ಅಂಬ್ರೆ (14ನೇ ನಿಮಿಷ) ಹಾಗೂ ಬ್ಲಾಕ್ಮನ್ಸ್ ವನೆಸ್ಸಾ (20ನೇ ನಿಮಿಷ) ಗಳಿಸಿದ ಗೋಲುಗಳ ನೆರವಿನಿಂದ ಬೆಲ್ಜಿಯಂ 2-0 ಮುನ್ನಡೆ ಸಾಧಿಸಿತು. ಎರಡೂ ಗೋಲುಗಳು ಪೆನಾಲ್ಟಿ ಕಾರ್ನರ್‌ಗಳಿಂದ ಬಂದವು. ಭಾರತದ ಪರ ಕುಮಾರಿ ಸಂಗೀತಾ 34ನೇ ನಿಮಿಷದಲ್ಲಿ ಗೋಲ್ ಬಾರಿಸಿದರು.

ಮಯೂರ ಜೂನ್ 2024
ಕೊಂಡು ಓದಿ, ಓದಿಸಿ



ಮಯೂರ ವಿಶೇಷ
ಮಳೆಯ ಉತ್ತರ ದಕ್ಷಿಣಗಳು ಪುರುಷೋತ್ತಮ ಬಿಳಿಮಲೆ
ಮೊದಲ ಅನುವಾದ ಮತ್ತು ಮೂರು ಬೆತ್ತದ ಏಟುಗಳು! ಕೆ.ಕೆ. ಗಂಗಾಧರನ್ ಸಂದರ್ಶನ
ಲಲಿತ ಮಂಟಪ ಜನಪದ–ಶಾಸ್ತ್ರೀಯ ಎಂಬ ಭೇದವೇಕೆ? ಪಿ. ರಾಜಗೋಪಾಲನ್
ಕಥೆಗಳು: ಚೀಮನಹಳ್ಳಿ ರಮೇಶಬಾಬು; ರವಿಕುಮಾರ್ ನೀಹ; ಲಿಂಗರಾಜ ಸೊಟ್ಟಪ್ಪನವರ; ಜೇಕಬ್ ಅಬ್ರಹಾಂ/ ಕೆ.ಕೆ. ಗಂಗಾಧರನ್; ವಿ.ಎಂ. ಮಂಜುನಾಥ್; ಬರ್ಹಾನುದ್ದೀನ್ ಜಹಾಂಗೀರ್/ಯೋಗೀಂದ್ರ ಮರವಂತೆ; ಡಿ.ಎಸ್. ಚೌಗಲೆ; ಎಚ್. ಭರತ್‌ಕುಮಾರ್
ಪ್ರಬಂಧಗಳು: ಊರುಮನೆ ಎಚ್.ಆರ್. ಸುಜಾತಾ; ಸಾಲುಗಾರನ ಸ್ವಗತ ಎಚ್. ಭರತ್‌ಕುಮಾರ್
ನನ್ನ ಓದು: ದೇಹವೇ ದೇಶ ರಾಜೇಂದ್ರ ಚೆನ್ನಿ; ಬದುಕಿನ ಬೆರಗು ಅರುಣ್ ಜೋಳದಕೂಡ್ಲಿಗಿ
ಕಾವ್ಯತೋರಣ: ಲಲಿತಾ ಸಿದ್ಧಬಸವಯ್ಯ; ಮಾಧವಿಕುಟ್ಟಿ/ ತೇರ್‌ಳಿ ಎನ್. ಶೇಖರ್; ಸ. ರಘುನಾಥ; ಎಂ.ಎಸ್. ಮೂರ್ತಿ; ಪೂರ್ಣಿಮಾ ಸುರೇಶ್; ಪಿ.ಬಿ. ಪ್ರಸನ್ನ; ವಸುಂಧರಾ ಕದಲೂರು
ಅಂಕಣಗಳು: ಕಾವ್ಯಸಂಕ ಕವಿತೆ ನನಗೆ ಅಡಗುದಾಣ ಮೆಲಿಸ್ಸಾ ನಂಗೆರೆ ಆರಿಫ್ ರಾಜಾ; ಕಾಡಿಗೆ ಕಣ್ಣು ರಾತ್ರಿ ಫೋಟೊಗ್ರಫಿ ಎಂಬ ತಲುಬು ಕಲೀಮ್ ಉಲ್ಲಾ; ಪರಾಗ ಕುತೂಹಲ ಜೀವನಗಾಥೆ ಎಂ.ಎಸ್. ಶ್ರೀರಾಮ್
₹15 editormy@mayura.co.in mayuraezine.com /mayuramonthly 080-45557333/264

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 26 ಮೇ 2024



ರಾಯ ಕಾಲುವೆ ವಿಜಯನಗರ ಅರಸರ ಮೇರು ಕಾಣಿಕೆ 11

'ಹಯವದನದ ಪದ್ಮಿನಿ ಸತಿ ಹೋಗಬೇಕಿರಲಿಲ್ಲ' 12

ಸಪೋನ್ ನೆಪ ವೈವಿಧ್ಯತೆಯ ಜಪ 13



ಮಮದಾಪುರದಲ್ಲಿ ಅರಣ್ಯ ಇಲಾಖೆ ಬೆಳೆಸಿರುವ ನೆಡುತೋಪು –ಚಿತ್ರಗಳು: ಸಂಜೀವ ಅಕ್ಕಿ

ಬಿಸಿಲೂರಲ್ಲಿ ಹಚ್ಚಹಸುರಿನ ಕಾನನ!

ಬಸವರಾಜ್ ಸಂಪಳ್ಳಿ

ಬಿಜಾಪುರದ ರಾಜ ಮೊಹಮ್ಮದ್ ಆದಿಲ್ ಶಾಹಿಯ ಪುತ್ರಿ ಬೇಸಿಗೆಯಲ್ಲಿ ಮಹಾರಾಷ್ಟ್ರದ ಪ್ರಸಿದ್ಧ ಗಿರಿಧಾಮ ಮಹಾಬಲೇಶ್ವರಕ್ಕೆ ಭೇಟಿ ನೀಡುತ್ತಾಳೆ. ಸಹ್ಯಾದ್ರಿಯ ಮನಮೋಹಕ ಪರಿಸರಕ್ಕೆ ಮಾರುಹೋಗುತ್ತಾಳೆ. ಅಷ್ಟೇ ಅಲ್ಲ, ಆ ಗಿರಿಶೃಂಗದ ಪರಿಸರದಲ್ಲೇ ಹಾಯಾಗಿ ಇರಬೇಕೆಂದು ತೀರ್ಮಾನಿಸುತ್ತಾಳೆ. 'ನೀರು, ನೆರಳಿಲ್ಲದ ಬಿಜಾಪುರಕ್ಕೆ ಮರಳುವುದಿಲ್ಲ' ಎಂಬ ಸಂದೇಶವನ್ನು ತಂದೆಗೆ ಕಳುಹಿಸುತ್ತಾಳೆ.

ರಾಜಕುಮಾರಿಯನ್ನು ಮರಳಿ ಬಿಜಾಪುರಕ್ಕೆ ಕರೆತರಲು ರಾಜ ಉಪಾಯ ಹೂಡುತ್ತಾನೆ. 'ಮಗಳೇ, ಬಿಜಾಪುರದಲ್ಲೇ ನಿನಗಾಗಿ ಮಹಾಬಲೇಶ್ವರಕ್ಕೆ ಸರಿಸಮನಾದ ಪರಿಸರವನ್ನು ಸೃಷ್ಟಿಸುತ್ತೇನೆ, ಮರಳಿ ಬಾ' ಎಂದು ಆಹ್ವಾನಿಸುತ್ತಾನೆ. ಅಂತೆಯೇ, ರಾಜಕುಮಾರಿಗಾಗಿ 1633ರಲ್ಲಿ ಬಬಲೇಶ್ವರ ಸಮೀಪ ಮಮದಾಪುರ ಎಂಬ ಹಳ್ಳಿಯಲ್ಲಿ ಅತೀ ದೊಡ್ಡದಾದ ಎರಡು ಕೆರೆಗಳನ್ನು ನಿರ್ಮಿಸಿ, ಸುತ್ತಲೂ ಗಿಡಮರಗಳನ್ನು ಬೆಳೆಸಿ, ಮಲೆನಾಡನ್ನು ಹೋಲುವಂತ ಪರಿಸರವನ್ನು ಪುತ್ರಿಗಾಗಿ ಸೃಷ್ಟಿಸುತ್ತಾನೆ.

ಅಷ್ಟೇ ಅಲ್ಲದೇ, ಮಲೆನಾಡಿನಲ್ಲಿ ಬೆಳೆಯುವ 'ಬಾಸುಮತಿ' ಅಕ್ಕಿ ಸಹಿತ ಎಲ್ಲ ಬಗೆಯ ಬೆಳೆಯನ್ನು ಬೆಳೆಯಲು ಅನುಕೂಲ ಮಾಡುತ್ತಾನೆ. ಮಮದಾಪುರ ಸಸ್ಯಶ್ಯಾಮಲೆಯಿಂದ ಕಂಗೊಳಿಸುವಂತೆ ಮಾಡುತ್ತಾನೆ ಎನ್ನುವುದು ಇತಿಹಾಸದ ಪುಟಗಳಿಂದ ತಿಳಿಯುತ್ತದೆ.

ಆದಿಲ್‌ಶಾಹಿಗಳ ನಂತರ ನೀರಿಲ್ಲದೇ ಕೆರೆಗಳು ಬರಿದಾದವು, ಜಾಲಿ ಬೆಳೆದು ನಿಂತಿತು. ಗಿಡಮರಗಳು ಇದ್ದವೆಂಬುದಕ್ಕೆ ಯಾವುದೇ ಕುರುಹುಗಳಿಲ್ಲದೇ ಇಡೀ ಪರಿಸರ ನೂರಾರು ವರ್ಷಗಳಿಂದ ಬರದ ಬೆಂಗಾಡಾಗಿ ಉಳಿಯಿತು. ಆದರೆ, ಇದೀಗ ಅದೇ ಕೆರೆ ತುಂಬಿ ತುಳುಕುತ್ತಿದೆ. 1560 ಎಕರೆಯ ಅರ್ಧದಷ್ಟು ಪ್ರದೇಶದಲ್ಲಿ ಗಿಡಗಳು ಬೆಳೆದು ಪ್ರಾಣಿಪಕ್ಷಿಗಳಿಗೆ ಆಸರೆಯಾಗುತ್ತಿವೆ.

ಕಾನನ ಚಿಗುರೊಡೆದ ಕಥೆ

2013–18ರ ಅವಧಿಯಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದ ಎಂ.ಬಿ.ಪಾಟೀಲ ಅವರು ಕೆರೆ ತುಂಬುವ ಯೋಜನೆಯಡಿ ಮಮದಾಪುರ ಕೆರೆಗಳ ಹೂಳು ತೆಗೆಸಿ, ಭರ್ತಿ ಮಾಡಿಸಿದ್ದರು. ಪರಿಣಾಮ ಸುತ್ತಮುತ್ತಲಿನ ಪರಿಸರದಲ್ಲಿ ಅಂತರ್ಜಲ ಹೆಚ್ಚಾಯಿತು. ರೈತರ ಹೊಲಗಳಲ್ಲಿ ಬೆಳೆ ಸಮೃದ್ಧವಾಯಿತು. ಆದರೆ, ಕೆರೆಯ ಸುತ್ತ ಹೆಸರಿಗಷ್ಟೇ ಇದ್ದ ಅರಣ್ಯ ಪ್ರದೇಶದಲ್ಲಿ ಬಳ್ಳಾರಿ ಜಾಲಿ ಆವರಿಸಿತ್ತು. ಜಾಲಿ ಬಿಟ್ಟರೆ ಅಲ್ಲಿ ಮತ್ತೇನೂ ಇರಲಿಲ್ಲ. ಹಗಲಿನಲ್ಲೇ ಜನ ಹೋಗಲು ಭಯಪಡುವಂತಹ ವಾತಾವರಣವಿತ್ತು.

ಪಾಳು ಬಿದ್ದಿರುವ ಪ್ರದೇಶದಲ್ಲಿ 'ಕಿರು ಅರಣ್ಯ' ಬೆಳೆಸಬೇಕು ಎಂಬ ಮಹಾದಾಸೆ ಸಚಿವ ಎಂ.ಬಿ.ಪಾಟೀಲ ಅವರದು.

11ನೇ ಪುಟಕ್ಕೆ...

ಬೆಂಗಳೂರಿನ ಜಲಯೋಧರು

ಈ ವರ್ಷ ಬೇಸಿಗೆಯಲ್ಲಿ ಇಡೀ ಬೆಂಗಳೂರು ನಗರ ಬಾಯಾರಿತ್ತು. ಹನಿ ಹನಿ ನೀರಿಗೂ ಬೆಲೆ ಬಂದಿತ್ತು. ಆ ಸಮಯದಲ್ಲಿ ಜನರಲ್ಲಿ ನೀರು ಸಂಗ್ರಹ ಮತ್ತು ಸಂರಕ್ಷಣ ಕುರಿತು ಕೊಂಚವಾದರೂ ಅರಿವು ಉಂಟಾಗಿತ್ತು. ಇದರ ಪರಿಣಾಮ ಬಾವಿ ಮತ್ತು ಇಂಗುಬಾವಿಗಳ ನಿರ್ಮಾಣಕ್ಕೆ ಬೇಡಿಕೆ ಹೆಚ್ಚಾಗಿದೆ.

ಅಬ್ದುಲ್ ರಹಿಮಾನ್

ಬೆಂಗಳೂರಿನ ಹೊರಮಾವಿನ ಬಡಾವಣೆಯಲ್ಲಿ ಬಾವಿ ತೋಡುತ್ತಿರುವ ತಂಡ –ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

ಕಲ್ಲು ಮಣ್ಣೊಳಗೆ ಮಲಗಿದ ನೀರ ದೇವಿಯ ಕರೆತಂದ ಕರಗಳ ತುಂಬಾ ಗಾಯಗಳ ಕತೆಗಳಿವೆ..
ಮಂಕ್ರಿಯ ತುಂಬ ಹೊತ್ತ ಮಣ್ಣಿನ ಘಮಲಿಗೂ ಬದುಕಿನ ಬಣ್ಣವಿದೆ..

ಬೆಂಗಳೂರಿನ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣದ ಗೋಡೆಯಲ್ಲಿ ದೊಡ್ಡದಾದ ಚಿತ್ರವೊಂದರ ನಡು ನಡುವೆ ಬರೆದಿರುವ ಈ ಸಾಲುಗಳು ಪ್ರತಿದಿನ ಕಣ್ಣಿಗೆ ಬೀಳುತ್ತಿದ್ದವು. ಚಿತ್ರದ ಹಿಂದಿನ ಸ್ವಾರಸ್ಯದ ಜಾಡು ಹಿಡಿದು ಹೊರಟಾಗ ತೆರೆದುಕೊಂಡಿದ್ದು ಬೆಂಗಳೂರು ಮಹಾನಗರಿಯ ದಾಹ ತಣಿಸುವ ಜಲಯೋಧರ ಕಥೆ!

'ಬೆಂಗಳೂರಿನಲ್ಲಿ ಇಷ್ಟಾದರೂ ನೀರು ಸಿಗಲು ಅವರೇ ಕಾರಣ. ಅವರಿಲ್ಲದಿದ್ದರೆ ನಗರದ ನೀರಿನ ಪರಿಸ್ಥಿತಿ ಇನ್ನಷ್ಟು ಭೀಕರವಾಗಿರುತ್ತಿತ್ತು. ಬೆಂಗಳೂರಿಗರೆಲ್ಲ ಅವರಿಗೆ ಆಭಾರಿಯಾಗಿರಬೇಕು' ಎನ್ನುತ್ತಲೇ ಚಿತ್ರದ ಹಿಂದಿನ ಕಥೆಯನ್ನು ಬಿಚ್ಚಿಟ್ಟವರು ಪರಿಸರ ಸಂರಕ್ಷಣೆಗಾಗಿ ಇರುವ ಬಯೋಮ್ ಟ್ರಸ್ಟ್‌ನ ಸಲಹೆಗಾರ ವಿಶ್ವನಾಥ್. ಎಲ್ಲೂ ಪ್ರವರ್ಧಮಾನಕ್ಕೆ ಬಾರದೆ, ನೀರಿನ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುತ್ತ, ಪೂರ್ವಸೂರಿಗಳು ದಾಟಿಸಿದ ಮಣ್ಣು ಅಗೆಯುವ ಕುಲಕಸುಬನ್ನೇ ನಂಬಿ, ಭೂಮಿತಾಯಿಯ ದಾಹ ಇಂಗಿಸುವ, ನಗರದ ಅಂತರ್ಜಲವನ್ನು ಕಾಪಿಟ್ಟುಕೊಳ್ಳುವ ಮಣ್ಣಿನ ಮಕ್ಕಳಾದ ಬೋವಿ ಅಥವಾ ರಾಜಾ ಬೋವಿ ಸಮುದಾಯದವರ ಕಥನ...

ಬಾವಿ, ಇಂಗುಬಾವಿಗಳನ್ನು ತೋಡುವ ಮೂಲಕ ನೀರಿನ ಮರುಪೂರಣ ಹಾಗೂ ಅಂತರ್ಜಲ ಮಟ್ಟ ಕಾಪಾಡುವಲ್ಲಿ ಇವರ ಪಾತ್ರ ಹಿರಿದು. ಬೆಂಗಳೂರಿನಲ್ಲಿ ಅಂದಾಜು 2.5 ಲಕ್ಷ ಬಾವಿಗಳು, ಇಂಗುಬಾವಿಗಳನ್ನು ತೋಡಿ ನೀರಿನ ಸಂರಕ್ಷಣೆಯಲ್ಲಿ, ನಗರದ ಪ್ರವಾಹವನ್ನು ಕೊಂಚವಾದರೂ ತಡೆಗಟ್ಟುವಲ್ಲಿ ಕೊಡುಗೆ ನೀಡಿದ್ದಾರೆ. ಹಳೆಯ ಬಾವಿಗಳಿಗೆ, ಕೆರೆಗಳಿಗೆ, ಬತ್ತಿದ ಕೊಳವೆಬಾವಿಗಳಿಗೆ ಜೀವ ನೀಡಿದ್ದೂ ಇದೇ ಸಮುದಾಯದ ಶ್ರಮಜೀವಿಗಳು.

ನಗರೀಕರಣದ ಬೇನೆ ಬೆಂಗಳೂರನ್ನು ಬಾಧಿಸದಂತೆ ಜನ ಮತ್ತೆ ಪ್ರಕೃತಿ ಕಡೆ ಮರಳಲು ಪ್ರಾರಂಭಿಸಿದ್ದಾರೆ. ಈ ಬಾರಿ ನೀರಿನ ಸಮಸ್ಯೆ ಮತ್ತಷ್ಟು ಉಲ್ಬಣವಾಗಿದ್ದರಿಂದ ಜನರು ಎಚ್ಚೆತ್ತುಕೊಂಡಿದ್ದಾರೆ. ಮನೆಗಳು, ಅಪಾರ್ಟ್‌ಮೆಂಟ್‌ಗಳು, ಟೆಕ್‌ಪಾರ್ಕ್‌ಗಳು, ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಕಚೇರಿಗಳು, ಸಾರ್ವಜನಿಕ ಸ್ಥಳಗಳಲ್ಲಿ ಇಂಗುಬಾವಿ ತೋಡಿಸುತ್ತಿದ್ದಾರೆ.

'ತೊಂಬತ್ತರ ದಶಕದ ಆರಂಭದಲ್ಲಿ ಬೋರ್‌ವೆಲ್‌ಗಳ ಹಾವಳಿ ಜೊತೆಗೆ ಮನೆ ಮನೆಗೆ ಕಾವೇರಿ ನೀರು ಬರಲು ಆರಂಭವಾಗಿದ್ದರಿಂದ ಇವರಿಗೆ ಖಾಲಿ ಕೂರುವ ಪರಿಸ್ಥಿತಿ ಬಂದಿತ್ತು. ಪಾಯ ತೋಡುವ ಕೆಲಸವನ್ನು ಯಂತ್ರಗಳು ಮಾಡತೊಡಗಿದಾಗ ಇವರ ಬದುಕು ಇನ್ನಷ್ಟು ಸಂಕಷ್ಟಕ್ಕೆ ಸಿಲುಕಿತು. ಹೊಟ್ಟೆಪಾಡಿಗೆ ಕೂಲಿಯನ್ನು ಆಶ್ರಯಿಸಬೇಕಾಗಿ ಬಂತು. ಈಗ ನೀರಿನ ಸಮಸ್ಯೆಗೆ ಮೂಲ ಕಾರಣ ತಿಳಿದುಕೊಂಡ ಬಳಿಕ ಜನರ ಮನಸ್ಥಿತಿ ಬದಲಾಗಿದೆ. ಬಾವಿಗಳು, ಇಂಗುಬಾವಿಗಳಿಗೆ ಬೇಡಿಕೆ ಹೆಚ್ಚಿದೆ. ಕೊಳವೆಬಾವಿಗಳನ್ನು ಪುನಶ್ಚೇತನಗೊಳಿಸುತ್ತಿದ್ದಾರೆ. ಇವೆಲ್ಲ ಕೆಲಸವನ್ನೂ ಬೋವಿ ಜನಾಂಗದವರೇ ಮಾಡುವುದರಿಂದ ಅವರಿಗೆ ಮತ್ತೆ ಬೇಡಿಕೆ ಹೆಚ್ಚಾಗಿದೆ, ಹಣ ಬರುತ್ತಿದೆ. ಭೂಮಿಯ ದಾಹ ತೀರಿಸುವ ಕೆಲಸವೂ ಆಗುತ್ತಿದೆ' ಎಂದು ವಿಶ್ವನಾಥ್ ವಿವರಿಸಿದರು.

'ಮೊದಲು ಬಾವಿಗಳಿಗೆ ಹೆಚ್ಚಿನ ಬೇಡಿಕೆ ಇತ್ತು. ಈಗ ಇಂಗುಬಾವಿಗಳನ್ನು ತೋಡಿಸುತ್ತಿದ್ದಾರೆ. ಹಿಂದೆ ಮನೆ ಮನೆಗೆ ತೆರಳಿ ಕೆಲಸ ಇದೆಯೇ ಎಂದು ಕೇಳುತ್ತಿದ್ದೆವು. ಈಗ ಮೊಬೈಲ್ ಬಂದಿದೆ. ಏಪ್ರಿಲ್ ತಿಂಗಳೊಂದರಲ್ಲೇ 400-500 ಕರೆಗಳು ಬಂದಿವೆ. ಈಗ ಕಂಪನಿಗಳು ನಮ್ಮ ಜೊತೆ ಒಪ್ಪಂದ ಮಾಡಿಕೊಂಡು ಕೆಲಸ ಮಾಡಿಸುತ್ತಿವೆ. ನಾವೂ ಅಪಾರ್ಟ್‌ಮೆಂಟ್, ವಿವಿಧ ಸಂಸ್ಥೆಗಳಿಗೆ ತೆರಳಿ ನೀರಿನ ಮರುಪೂರಣ ಹಾಗೂ ಇಂಗುಬಾವಿಯ ಅವಶ್ಯಕತೆ, ಅನಿವಾರ್ಯತೆ ಹಾಗೂ ಲಾಭಗಳನ್ನು ತಿಳಿಸಿ ಜಾಗೃತಿ ಮೂಡಿಸುತ್ತೇವೆ. ಅವರೇ ಕರೆದು ನಮಗೆ ಕೆಲಸ ಕೊಡಿಸುತ್ತಾರೆ. ಒಂದು ಕೆಲಸ ಸಿಕ್ಕರೆ ನಾಲ್ಕೈದು ಕುಟುಂಬಗಳ ಹೊಟ್ಟೆ ತುಂಬುತ್ತದೆ' ಎನ್ನುತ್ತಾರೆ ಆನೇಕಲ್ ತಾಲ್ಲೂಕಿನ ಸರ್ಜಾಪುರದ ಬೋವಿಪಾಳ್ಯದ ರಾಮಕೃಷ್ಣ.

'ಮೂವತ್ತು ವರ್ಷದಿಂದ ಬಾವಿ ತೋಡುವ ಕೆಲಸ ಮಾಡುತ್ತಿದ್ದೇನೆ. ಬೆಳಗ್ಗೆ 6-7 ಗಂಟೆಗೆಲ್ಲಾ ತಂಡವಾಗಿ ಮನೆಯಿಂದ ಹೊರಡುತ್ತೇವೆ. 3*30 ಅಡಿಯ ಸಾಧಾರಣ ಬಾವಿ ತೋಡಲು 5-7 ಜನರಿಗೆ ಎರಡು ದಿನ ಬೇಕು. ಬಾವಿಯ ಹೂಳೆತ್ತಲು ಒಂದು ದಿನ ಸಾಕು' ಎಂದು ಹೊರಮಾವು ಬಳಿಯ ಮನೆಯೊಂದರಲ್ಲಿ ಇಂಗುಬಾವಿ ತೋಡುತ್ತಿದ್ದ ಆನಂದ್ ಕುಮಾರ್ ಹೇಳಿದರು. ಬೇಸಿಗೆಯಲ್ಲಿ ಬಾವಿ ತೋಡಲು ಬೇಡಿಕೆ ಜಾಸ್ತಿ. ಕೋಲಾರ, ಚಿಕ್ಕಬಳ್ಳಾಪುರ, ಆಂಧ್ರಪ್ರದೇಶ, ತಮಿಳುನಾಡಿಗೂ ತೆರಳಿ ಬಾವಿ ತೋಡುತ್ತಾರೆ.

12ನೇ ಪುಟಕ್ಕೆ..

ಪ್ರತಿಕ್ರಿಯೆಗಾಗಿ
bhanuvara@prajavani.co.in

ಬಾವಿ ತೋಡಲು ಹೊರಟ ಜಲಯೋಧರು...

ಇವರ ಕೈಕೆಸರಾದರೆ ಜಲಧಾರೆ... ಚಿತ್ರ: ಸೃಷ್ಟಿ ಮಣಿಪಾಲ್

ಹಿರೀಕರಿಂದ ಬಂದ ಬಳುವಳಿ

ನೀರು ಹಾಗೂ ಮಣ್ಣಿನ ಬಗೆಗಿನ ಜ್ಞಾನ ಇವರಿಗೆ ಹಿರೀಕರಿಂದ ಬಂದಿದೆ. ಸಾಂಪ್ರದಾಯಿಕವಾಗಿ ಬಾವಿ ತೋಡುವ ಇವರು, 40-50 ಅಡಿ ಆಳದವರೆಗೂ ಕೊರೆಯುತ್ತಾರೆ. ಕೆಳಗೆ ಹೋದಂತೆಲ್ಲಾ ಆಮ್ಲಜನಕ ಕಡಿಮೆಯಾಗಿ ಮೃತಪಡುವ ಆತಂಕವೂ ಇದೆ. ಭೂತಾಯಿಯ ಮಡಿಲಲ್ಲೇ ಬೆಳೆದ ಇವರಿಗೆ, ಇದನ್ನು ತಿಳಿಯುವ ಕೌಶಲ, ಕಲೆ ರಕ್ತಗತವಾಗಿದೆ. ಸಮಯಪ್ರಜ್ಞೆ ಜೊತೆಗೆ ಅನುಭವವೂ ಬೆನ್ನ ಹಿಂದೆ ಇರುವುದರಿಂದ ಕೆಲಸ ಸವಾಲೆನಿಸದು. ಜಾಗ, ಮಣ್ಣಿನ ವಿಧಾನ, ಭೂಮಿಯ ಮೇಲ್ಮೈ ಲಕ್ಷಣ ನೋಡಿಕೊಂಡು ಕೆಲಸ ಮಾಡುತ್ತಾರೆ.

ಆಳವಾದ ಬಾವಿಗೆ ಇಳಿಯುವ ಮುನ್ನ ಮೇಣದಬತ್ತಿಯನ್ನು ಹಚ್ಚಿ ಬುಟ್ಟಿಯಲ್ಲಿ ಕೆಳಗೆ ಇಳಿಸುತ್ತಾರೆ. ಅದು ಆರಿಹೋದರೆ ಆಮ್ಲಜನಕ ಪ್ರಮಾಣ ಕಡಿಮೆ ಇದೆ ಎಂದರ್ಥ. ಹೀಗಾದರೆ ನಾಲ್ಕೈದು ಕೊಡ ನೀರು ಸುರಿದ ಬಳಿಕ ಬಾವಿಗೆ ಇಳಿಯುತ್ತಾರೆ.

“ಈ ಬಾರಿಯಷ್ಟು ನೀರಿನ ಸಮಸ್ಯೆ ಯಾವತ್ತೂ ಎದುರಾಗಿರಲಿಲ್ಲ. ಜೇಬಿಗೆ ಭಾರವಾದರೂ ಟ್ಯಾಂಕ್ ನೀರೇ ಅನಿವಾರ್ಯವಾಗಿತ್ತು. ಅದೂ ಕೂಡ ಬಳಕೆಗೆ ಯೋಗ್ಯವಾಗಿರಲಿಲ್ಲ. ನೀರು ಮರುಪೂರಣದ ಬಗ್ಗೆ ಮಾಹಿತಿ ಪಡೆದುಕೊಂಡು ಇಂಗು ಬಾವಿ ತೋಡಿಸಿದ್ದೇನೆ.”

ಜಯಲಕ್ಷ್ಮಿ ಹರಿಹರನ್, ಹೊರಮಾವು

ವೇಣೂರಿನ ಮನೋಜ್‌ಗೆ ಪಟ್ಲ ಫೌಂಡೇಷನ್ ಕಟ್ಟಿಸಿಕೊಟ್ಟಿರುವ ಮನೆ

ಕಲಾವಿದರ ತಾಯಿ 'ಯಕ್ಷಧ್ರುವ'

ಸಂಧ್ಯಾ ಹೆಗಡೆ

ವೇಣೂರಿನ ಮನೋಜ್ ಕಾಲೇಜು ವಿದ್ಯಾರ್ಥಿ, ಜೊತೆಗೆ ಯಕ್ಷಗಾನ ತಿರುಗಾಟ ಮೇಳದ ಕಲಾವಿದ. ಚಿಕ್ಕಂದಿನಲ್ಲೇ ಎಡಗಾಲು ಕಳೆದುಕೊಂಡಿದ್ದ ಇವರು ಕೃತಕ ಕಾಲು ಅಳವಡಿಸಿಕೊಂಡು ವೇಷ ಕಟ್ಟುವವರು. ಮಗನ ಯಕ್ಷಗಾನದ ಸಂಭಾವನೆಯನ್ನೇ ನಂಬಿರುವ ಕುಟುಂಬಕ್ಕೆ ಸಣ್ಣದೊಂದು ಸೂರಿನ ಕನಸು ಚಿಗುರಿತು. ಮನೆ ಕಟ್ಟಲು ಹಣ ಹೊಂದಿಸಲಾಗದೆ ತಾಯಿ–ಮಗ ಕೈಚೆಲ್ಲಿ ಕುಳಿತಿದ್ದರು. ಇವರ ಕನಸಿಗೆ ಬಣ್ಣ ತುಂಬಿದ್ದು 'ಯಕ್ಷಧ್ರುವ ಪಟ್ಲ ಫೌಂಡೇಷನ್'.

ಕಲಾವಿದ ವಾಮನ ಕುಮಾರ್ ಬೈಕ್ ಅಪಘಾತಕ್ಕೊಳಗಾಗಿ ನಡುರಸ್ತೆಯಲ್ಲಿ ಜೀವ ಕಳೆದುಕೊಂಡರು. ಪತಿಯ ದುಡಿಮೆಯನ್ನೇ ಅವಲಂಬಿಸಿದ್ದ ಕುಟುಂಬಕ್ಕೆ ಸಿಡಿಲಾಘಾತ. ಅನಾಥರಾದ ಇಬ್ಬರು ಪುಟ್ಟ ಮಕ್ಕಳು, ಅನಾರೋಗ್ಯಪೀಡಿತ ಪತ್ನಿಗೆ ಆಸರೆಯಾದದ್ದು ಪಟ್ಲ ಫೌಂಡೇಷನ್‌ನ ಅಪಘಾತ ವಿಮಾ ಯೋಜನೆ. ವಿಮೆಯಿಂದ ದೊರೆತ ಎಂಟು ಲಕ್ಷ ರೂಪಾಯಿ ಮೊತ್ತ ಅವರ ಕುಟುಂಬವನ್ನು ಸಲುಹಿತು.

ಪಟ್ಲ ಸತೀಶ್ ಶೆಟ್ಟಿ

ತೆಂಕುತಿಟ್ಟಿನ ವೇಷಧಾರಿ ಬಣ್ಣದ ಮಹಾಲಿಂಗ ಯಕ್ಷಗಾನದಲ್ಲಿ ಮಿಂಚಿದವರು. ಅವರ ಮಗ ಸುಬ್ರಾಯ ಸಂಪಾಜೆ ಕಟೀಲು ಮೇಳದ ಬಣ್ಣದ ವೇಷಧಾರಿ. ಮಹಿಷಾಸುರನ ಪಾತ್ರಕ್ಕೆ ತೂಕ ಹೆಚ್ಚಿಸಿದ ಕಲಾವಿದ. ನಾಲ್ಕೈದು ದಶಕ ಮೇಳದಲ್ಲಿ ತಿರುಗಾಟ ಮಾಡಿದವರು. ಮಗಳ ಮದುವೆಗೆ ಹಣ ಹೊಂದಿಸಲಾಗದೆ ಕೈಚೆಲ್ಲಿ ಕುಳಿತಿದ್ದರು. ಇವರ ನೆರವಿಗೆ ಬಂದಿದ್ದು ಇದೇ ಪಟ್ಲ ಅಭಿಮಾನಿ ಬಳಗ.

ಮಿನುಗುವ ಬೆಳಕಿನ ವೇದಿಕೆಯಲ್ಲಿ ರಾಮನಾಗಿ, ರಾವಣನಾಗಿ, ಮಹಿಷಾಸುರನಾಗಿ, ದೇವಿಯಾಗಿ ಬಣ್ಣ ಹಚ್ಚುವ ಕಲಾವಿದರಿಗೆ ಪತ್ತನಾಜೆ (ಹಂಗಾಮಿನ ಕೊನೆ ಯಕ್ಷಗಾನ ಪ್ರದರ್ಶನ) ನಂತರ ಚೌಕಿಮನೆಯಾಚೆಗಿನ ವಾಸ್ತವ ಪ್ರಪಂಚಕ್ಕೆ ಇಳಿಯುವುದು ಅನಿವಾರ್ಯ. ಜೀವನ ನಿರ್ವಹಣೆಗೆ ಕೂಲಿ, ಹೋಟೆಲ್, ಗ್ಯಾರೇಜ್‌ಗಳಲ್ಲಿ ಕೆಲಸ ಅರಸಿಕೊಂಡು ಬದುಕಿನ ಬಂಡಿ ನಡೆಸುವ ಕಲಾವಿದರಿಗೆ ಕಷ್ಟಕೋಟಲೆಗಳು ಬಂದರೆ ನಲುಗುವ ಪರಿಸ್ಥಿತಿ.

ಮಂಗಳೂರಿನ ಯಕ್ಷಧ್ರುವ ಪಟ್ಲ ಫೌಂಡೇಷನ್ ತನ್ನ ಎಂಟು ವರ್ಷಗಳ ಅವಧಿಯಲ್ಲಿ ಮೂರೂವರೆ ಸಾವಿರಕ್ಕೂ ಹೆಚ್ಚು ಅಸಹಾಯಕ ಕಲಾವಿದರಲ್ಲಿ ಬಾಳಲ್ಲಿ ಭರವಸೆಯ ಬೆಳಕು ಮೂಡಿಸಿದೆ. ಇದರ ಫಲಾನುಭವಿಗಳು ನೆಮ್ಮದಿಯ ಬದುಕು ಕಟ್ಟಿಕೊಂಡಿದ್ದಾರೆ.

ಇಂತಹ ಸಹಸ್ರಾರು ಕಲಾವಿದರಿಗೆ ಆಲದಮರದಂತೆ ಆಶ್ರಯ ನೀಡಿದೆ ಮಂಗಳೂರಿನ 'ಯಕ್ಷಧ್ರುವ ಪಟ್ಲ ಫೌಂಡೇಷನ್'. ತೆಂಕುತಿಟ್ಟು, ಬಡಗುತಿಟ್ಟು ಎಂಬ ಭೇದವಿಲ್ಲದೆ ಯಕ್ಷಗಾನ ಎಂಬ ಕಲೆಯನ್ನು ಕಟ್ಟಿದ ಹಿರಿ, ಕಿರಿಯ ಕಲಾವಿದರನ್ನು ತಾಯಿಯಂತೆ ಪೊರೆದಿದೆ.

ಹಿಂದೆ ಕಟೀಲು ತಿರುಗಾಟ ಮೇಳದ ಭಾಗವತರಾಗಿದ್ದು, ಪ್ರಸ್ತುತ ಪಾವಂಜೆ ತಿರುಗಾಟ ಮೇಳದ ಯಜಮಾನ, ಭಾಗವತರಾಗಿರುವ ಸತೀಶ್ ಶೆಟ್ಟಿ ಪಟ್ಲ ಅವರ ಅಭಿಮಾನಿಗಳು ಸೇರಿ ಸ್ಥಾಪಿಸಿರುವ 'ಯಕ್ಷಧ್ರುವ ಪಟ್ಲ ಫೌಂಡೇಷನ್' ಎಂಟು ವರ್ಷ ಪೂರೈಸಿದೆ. ಫೌಂಡೇಷನ್‌ನ ಒಂಬತ್ತನೇ ವರ್ಷದ 'ಯಕ್ಷಧ್ರುವ ಪಟ್ಲ ಸಂಭ್ರಮ' ಮೇ 26ರಂದು ಮಂಗಳೂರಿನ ಅಡ್ಯಾರ್ ಗಾರ್ಡನ್‌ನಲ್ಲಿ ನಡೆಯಲಿದೆ.

ಎಂಟು ವರ್ಷಗಳಲ್ಲಿ ಫೌಂಡೇಷನ್ ಹಲವು ಮೈಲಿಗಲ್ಲುಗಳನ್ನು ಕ್ರಮಿಸಿದೆ. 3,500 ಸಾವಿರಕ್ಕೂ ಹೆಚ್ಚು ಕಲಾವಿದರಲ್ಲಿ ಭರವಸೆಯ ಬೆಳಕು ಮೂಡಿಸಿದೆ. ಕಲಾವಿದರಿಗಾಗಿ ಈ ಸಂಸ್ಥೆ ವಿನಿಯೋಗಿಸಿದ ಮೊತ್ತ ₹11.5 ಕೋಟಿಗೂ ಮಿಕ್ಕಿ. ಸಂಸ್ಥೆಗೆ ಬೆನ್ನೆಲುಬಾಗಿ ನಿಂತವರು ಪಟ್ಲ ಭಾಗವತರ ಅಭಿಮಾನಿಗಳು, ಉದ್ಯಮಿಗಳು, ಕಲಾಪೋಷಕರು.

'ಪಟ್ಲ ಯಕ್ಷಾಶ್ರಯ' ಯೋಜನೆಯಡಿ 26 ಕಲಾವಿದರು ಸ್ವಂತದ್ದೊಂದು ಸೂರು ಕಂಡಿದ್ದಾರೆ. ಉಡುಪಿ ಸಮೀಪದ ಮಲ್ಪೆಯಲ್ಲಿ ಕಲಾವಿದ ಎಂ.ಎಲ್. ಸಾಮಗರು ಅರ್ಧ ಎಕರೆ ಜಮೀನು ದಾನವಾಗಿ ನೀಡಿದ್ದಾರೆ. ಅಲ್ಲಿ ಪಟ್ಲರ ಅಭಿಮಾನಿ, ಬೆಂಗಳೂರಿನ ವಾಣಿಶ್ರೀ ಸ್ಕೂಲ್ ಮುಖ್ಯಸ್ಥರಾಗಿರುವ ಅಮೆರಿಕ ನಿವಾಸಿ ಶಾರದಾಪ್ರಸಾದ್ ಕಲಾವಿದರಿಗಾಗಿ 20 ಮನೆಗಳನ್ನು ನಿರ್ಮಿಸುತ್ತಿದ್ದಾರೆ.

162 ಕಲಾವಿದರಿಗೆ ಗೃಹ ನಿರ್ಮಾಣಕ್ಕೆ ಸಹಾಯ ದೊರೆತಿದೆ. 160 ಅಶಕ್ತ ಕಲಾವಿದರಿಗೆ ತಲಾ ₹50 ಸಾವಿರ ಗೌರವಧನ ಸಹಾಯ ಹಸ್ತ, ಪ್ರತಿವರ್ಷ ಸುಮಾರು 2,400ಕ್ಕೂ ಹೆಚ್ಚು ಕಲಾವಿದರಿಗೆ ಅಪಘಾತ ವಿಮಾ ಯೋಜನೆ, ತುರ್ತು ಚಿಕಿತ್ಸಾ ವೆಚ್ಚ, ಅಪಘಾತ ಅಥವಾ ಅನಾರೋಗ್ಯದಿಂದ ಮೃತಪಟ್ಟ 27 ಕಲಾವಿದರ ಕುಟುಂಬಕ್ಕೆ ತಲಾ ₹50 ಸಾವಿರ ಪರಿಹಾರ ಧನ, ಅಸಹಾಯಕ ಕಲಾವಿದರಿಗೆ ಔಷಧ ವೆಚ್ಚಕ್ಕೆ ಮಾಸಾಶನ, ಕಲಾವಿದರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸಹಾಯ, ಯಕ್ಷ ಶಿಕ್ಷಣ... ಹೀಗೆ ಪಟ್ಲ ಫೌಂಡೇಷನ್ ನೆರವು ನೀಡಿದೆ.

12ನೇ ಪುಟಕ್ಕೆ...

ರಾಯ ಕಾಲುವೆ

ವಿಜಯನಗರ ಅರಸರ ಮೇರು ಕಾಣಿಕೆ

[ವಿಜಯನಗರ ಅರಸರ ಕಾಲದಲ್ಲಿ ಹದಿನೆಂಟು ಕಾಲುವೆಗಳಿದ್ದವು. ಅವುಗಳ ಪೈಕಿ 'ರಾಯ' ಹೆಸರಿನ ಕಾಲುವೆ ಪ್ರಮುಖವಾದುದು. 600 ವರ್ಷಗಳ ಹಿಂದಿನ ನೀರಾವರಿ ಕಾಲುವೆ ತಂತ್ರಜ್ಞಾನಕ್ಕೆ ಇದು ಅತ್ಯುತ್ತಮ ನಿದರ್ಶನವಾಗಿ ಇಂದಿಗೂ ಹರಿಯುತ್ತಲೇ ಇದೆ.]

ಸಿಂಗನಾಥನಹಳ್ಳಿಯ ಗುಡ್ಡವನ್ನು ಬಳಸಿಕೊಂಡು ಹರಿಯುವ ಕಾಲುವೆ ಚಿತ್ರ: ಬಿ.ಎಸ್.ಅಡಪ್ಪ

ಮಲ್ಲಿಕಾರ್ಜುನ ಹೊಸಪಾಳ್ಯ

ವಿಜಯನಗರ ಅರಸರ ಕಾಲದಲ್ಲಿ ತುಂಗಭದ್ರಾ ನದಿಯಿಂದ ನೀರು ಪಡೆಯಲು ನಿರ್ಮಾಣವಾದ ಹತ್ತಾರು ಕಾಲುವೆಗಳ ಪೈಕಿ 'ರಾಯ' ಹೆಸರಿನ ಕಾಲುವೆಯ ವೈಭವವೇ ಬೇರೆ. ಅದರ ಉದ್ದ, ಸಾಗುವ ಮಾರ್ಗ, ಹಠಾತ್ ತಿರುವುಗಳು ಚಕಿತಗೊಳಿಸುತ್ತವೆ. 600 ವರ್ಷಗಳ ಹಿಂದಿನ ನೀರಾವರಿ ಕಾಲುವೆ ತಂತ್ರಜ್ಞಾನದ ಉತ್ಕೃಷ್ಟ ಉದಾಹರಣೆ.

ಹಂಪಿಯಲ್ಲಿ ವೈವಿಧ್ಯಮಯ ಜಲಮೂಲಗಳು, ನೀರಿನ ರಚನೆಗಳು, ಅಣೆಕಟ್ಟುಗಳು, ಕಾಲುವೆಗಳು ಹೆಜ್ಜೆಹೆಜ್ಜೆಗೂ ಕಂಡುಬರುತ್ತವೆ. ಮಹಾನವಮಿ ದಿಬ್ಬದ ಬಳಿಯ ಮೆಟ್ಟಿಲು ಕಲ್ಯಾಣಿ, ವಿರೂಪಾಕ್ಷ ದೇವಾಲಯದ ಪಕ್ಕದಲ್ಲಿರುವ ಮನ್ಮಥ ಹೊಂಡ, ಕೃಷ್ಣ ದೇವಾಲಯದ ಮುಂದಿನ ಬಾಲಕೃಷ್ಣ ಹೊಂಡ, ವಿಜಯ ವಿಠಲ ದೇವಾಲಯಕ್ಕೆ ಹೋಗುವ ಹಾದಿಯ ಅಕ್ಕಪಕ್ಕ ಹಲವಾರು ಕಲ್ಯಾಣಿಗಳು, ಕಲ್ಲಿನ ಮೇಲ್ಕಾಲುವೆ, ಕೂಪಾರಾಮ ವಾಟಿಕೆ, ರಾಣಿ ಸ್ನಾನಗೃಹ, ಅಷ್ಟಕೋನದ ಈಜುಕೊಳ, ಸಾರ್ವಜನಿಕ ಈಜುಕೊಳ ಇತ್ಯಾದಿ ರಚನೆಗಳಿವೆ.

ಇವುಗಳ ಜೊತೆಗೆ ಆ ಕಾಲದ ಕಾಲುವೆ ನೀರಾವರಿ ವ್ಯವಸ್ಥೆ ಇಂದಿಗೂ ಬಳಕೆಯಾಗುತ್ತಿದೆ. ತುಂಗಾಭದ್ರಾ ನದಿಗೆ ಹೊಸಪೇಟೆಯಿಂದ ರಾಯಚೂರಿನ ಬಿಚ್ಚಾಲಿಯವರೆಗೆ ಚಿಕ್ಕಚಿಕ್ಕ ಅಣೆಕಟ್ಟುಗಳನ್ನು ನಿರ್ಮಿಸಿ ಕಾಲುವೆಗಳ ಮೂಲಕ ನೀರು ಪಡೆಯಲಾಗುತ್ತಿತ್ತು. ಇವುಗಳಲ್ಲಿ ಹೆಚ್ಚಿನವು ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣಗೊಂಡಿವೆ. ಒಂದು ಎಕರೆಯೂ ಮುಳುಗಡೆಯಾಗದಂತೆ ಅಣೆಕಟ್ಟೆಗಳನ್ನು ಹಾಕಿ ಸುಮಾರು 11 ಸಾವಿರ ಹೆಕ್ಟೇರ್ ಜಮೀನಿಗೆ ನೀರುಣಿಸುವ ಜಾಣ್ಮೆ ಇದು. ಬಸವ, ಬೆಲ್ಲ, ಕಾಳಘಟ್ಟ, ಹಿರಿಯ–ಹೀಗೆ ಅವುಗಳ ಹೆಸರೇ ವಿಭಿನ್ನ. ಒಟ್ಟು 18 ಕಾಲುವೆಗಳಿದ್ದವು. ಇವುಗಳ ಪೈಕಿ 'ರಾಯ' ಹೆಸರಿನ ಕಾಲುವೆ ಅತ್ಯಂತ ಪ್ರಮುಖವಾದುದು. ಉಳಿದೆಲ್ಲವುಗಳಿಗಿಂತ ಅತ್ಯಂತ ಉದ್ದನೆಯ ಕಾಲುವೆ ಇದು. ಅಲ್ಲದೆ ಅತಿ ಹೆಚ್ಚು ಪ್ರದೇಶ ಮತ್ತು ಹೆಚ್ಚು ಗ್ರಾಮಗಳಿಗೆ ನೀರುಣಿಸುತ್ತದೆ.

ಅಚ್ಚರಿ

ವಿಜಯನಗರ ಅರಸರ ಕಾಲದಲ್ಲಿ ಹೊಸಕೋಟೆ ಬಳಿ ತುಂಗಾಭದ್ರಾ ನದಿಗೆ ಹಾಕಿದ್ದ ಕುರುವಗಡ್ಡೆ ಅಣೆಕಟ್ಟಿನಿಂದ ಈ ಕಾಲುವೆ ಆರಂಭವಾಗುತ್ತಿತ್ತು. ತುಂಗಭದ್ರಾ ಜಲಾಶಯ ನಿರ್ಮಾಣವಾದಾಗ ಈ ಗ್ರಾಮ, ಅಣೆಕಟ್ಟೆ ಮತ್ತು ಕಾಲುವೆಯ ಸ್ವಲ್ಪ ಭಾಗ ಮುಳುಗಡೆಯಾದವು. ಪ್ರಸ್ತುತ ತುಂಗಭದ್ರಾ ಜಲಾಶಯದಿಂದಲೇ ಈ ಕಾಲುವೆಗೆ ನೀರೊದಗಿಸಲಾಗುತ್ತಿದೆ. ಹೊಸಪೇಟೆ ತಾಲ್ಲೂಕಿನ 18 ಹಳ್ಳಿಗಳು ಇದರ ಉಪಯೋಗ ಪಡೆಯುತ್ತಿವೆ. 18 ಕಾಲುವೆಗಳು ಸೇರಿ 11 ಸಾವಿರ ಹೆಕ್ಟೇರಿಗೆ ನೀರುಣಿಸುತ್ತಿದ್ದರೆ ಅದರಲ್ಲಿ 'ರಾಯ' ಕಾಲುವೆಯೊಂದೇ 2300 ಹೆಕ್ಟೇರುಗಳನ್ನು ಒಳಗೊಂಡಿದೆ.

ಕಾಲುವೆ ದಡದಲ್ಲಿನ ಸ್ಮಾರಕಗಳು

'ರಾಯ' ಕಾಲುವೆಗುಂಟ ಹಲವು ಅಪರೂಪದ ಸ್ಮಾರಕಗಳಿವೆ. ತುಂಗಭದ್ರಾ ಜಲಾಶಯದ ಬಳಿ ಕಾಲುವೆಗೆ ತುಸು ದೂರದಲ್ಲಿ ಬೃಹತ್ ಹೆಬ್ಬಾಗಿಲಿದೆ. ಈಗ ಹಾಳಾಗಿರುವ ಇದನ್ನು 'ಗೋವಾ ಹೆಬ್ಬಾಗಿಲು' ಎನ್ನುತ್ತವೆ ದಾಖಲೆಗಳು. ಮುಂದೆ ಹೋದಂತೆ ನಾಗೇನಹಳ್ಳಿಯ ಬಳಿ ಕಾಲುವೆ ದಡದಲ್ಲಿಯೇ ಹಾಳು ಬಿದ್ದಿರುವ ಕಲ್ಲಿನಮಂಟಪಗಳಿವೆ. ಕಾಳಘಟ್ಟ ರಸ್ತೆಯ ಬಳಿ ಪ್ರಾಚೀನ ಶಿವ ದೇವಾಲಯವಿದೆ. ಇದೂ ಸಹ ಬಹುತೇಕ ಹಾಳಾಗಿದೆ. ಸಿಂಗನಾಥನಹಳ್ಳಿ ಗುಡ್ಡದ ಬಳಿ ಕಾಲುವೆಯಿಂದ ತುಸು ಮೇಲ್ಭಾಗದಲ್ಲಿ ಸರಸ್ವತಿ ಮಂದಿರ, ಮಂಟಪಗಳು, ಕಂಬ ಮುಂತಾದ ಸ್ಮಾರಕಗಳನ್ನು ಕಾಣಬಹುದು. ಹಿಂದೆ ವಿಸ್ತಾರವಾದ ದೇವಾಲಯ ಹಾಗೂ ಜನವಸತಿ ಪ್ರದೇಶವಾಗಿದ್ದ ಕುರುಹುಗಳು ಇಲ್ಲಿವೆ. 'ರಾಯ' ಕಾಲುವೆಯೇ ಇಲ್ಲಿಗೆ ನೀರಿನಾಸರೆಯಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಇನ್ನು ಕಾಲುವೆ ಕೊನೆಗೊಳ್ಳುವ ಕಾಮಲಾಪುರ ಕೆರೆಯ ಬಳಿ ದೊಡ್ಡ ಆಲದಮರವಿದ್ದು ಅಲ್ಲಿಯೂ ಒಂದು ಪಾಳು ಬಿದ್ದ ಮಂಟಪವನ್ನು ಕಾಣಬಹುದು.



ಕಾಮಲಾಪುರ ಕೆರೆ

ಈಗಿನ ಕಾಲುವೆಯ ಉದ್ದವೇ 28 ಕಿ.ಮೀಗಳಿದ್ದು ತುಂಗಭದ್ರಾ ಜಲಾಶಯ ನಿರ್ಮಾಣಕ್ಕೂ ಮುನ್ನ ಇದರ ಉದ್ದ ಸುಮಾರು 40 ಕಿ.ಮೀಗಳಷ್ಟು. 600 ವರ್ಷಗಳ ಹಿಂದೆಯೇ ಇಷ್ಟು ಉದ್ದದ ಕಾಲುವೆ ನಿರ್ಮಿಸಿರುವುದು ಅಚ್ಚರಿಯೇ ಸರಿ. ಈ ಕಾಲುವೆಯು ಹೊಸಪೇಟೆ ನಗರದ ಚಿತ್ತವಾಡಿಗಿ ಮತ್ತು ರಾಣಿಪೇಟೆಯ ಪಕ್ಕದಲ್ಲಿ ಸಾಗುತ್ತದೆ. ಮಾಜಿ ಸಚಿವ ಆನಂದ್ ಸಿಂಗ್ ಅವರ ಹೊಸ ಬಂಗಲೆಯು ಕಾಲುವೆಯ ದಡದಲ್ಲಿಯೇ ಇದೆ. ಹೀಗೆ ಮುಂದುವರಿಯುವ ಕಾಲುವೆ ವಿಜಯನಗರ ಕಾಲದಲ್ಲಿ ನಿರ್ಮಾಣವಾಗಿರುವ ನಾಗೇನಹಳ್ಳಿಯನ್ನು ದಾಟಿ ಬಿದಿರುಕಲ್ಲು ಗುಡ್ಡ ಹಾಗೂ ಸಿಂಗನಾಥನಹಳ್ಳಿ ಗುಡ್ಡಗಳನ್ನು ಹೇರ್‌ಪಿನ್ ತಿರುವಿನಂತೆ ಬಳಸಿಕೊಂಡು ಕಾಮಲಾಪುರ ಕೆರೆಯನ್ನು ಸೇರುತ್ತದೆ. ನಾಗೇನಹಳ್ಳಿಯ ನಂತರ ಹಲವು ಕಿಲೋಮೀಟರ್ ಗುಡ್ಡಗಳ ಅರ್ಧ ಎತ್ತರದಲ್ಲಿಯೇ ಸಾಗುವ ಕಾಲುವೆ ಹತ್ತಾರು ತಿರುವುಗಳನ್ನು ತೆಗೆದುಕೊಳ್ಳುತ್ತದೆ. ಆ ಕಾಲದಲ್ಲಿಯೇ ಭೂಕ್ಷಿತಿಜ ಮಟ್ಟವನ್ನು ಆಧರಿಸಿ ಕಾಲುವೆ ಹರಿವನ್ನು ನಿರ್ಮಿಸಿರುವುದು ಸ್ಪಷ್ಟ.

ವಿಜಯನಗರದ ರಾಜಧಾನಿ ಕೇಂದ್ರವಾಗಿದ್ದ ಮಹಾನವಮಿ ದಿಬ್ಬ ಹಾಗೂ ಸುತ್ತಮುತ್ತಲ ರಾಜ ಪ್ರಾಂಗಣ (ರಾಯಲ್ ಸೆಂಟರ್) ಪ್ರದೇಶಕ್ಕೆ ನೀರೊದಗಿಸುತ್ತಿದ್ದುದು ಕಾಮಲಾಪುರ ಕೆರೆ. ಈ ಕೆರೆಯ ಮೂರು ತೂಬುಗಳು ರಾಜ ಪ್ರಾಂಗಣಕ್ಕೆ ಸಂಪರ್ಕ ಹೊಂದಿದ್ದವು. ಅಲ್ಲಿನ ರಾಣಿಯರ ಈಜುಕೊಳ, ಸಾರ್ವಜನಿಕ ಈಜುಕೊಳ, ಮೆಟ್ಟಿಲು ಪುಷ್ಕರಣಿ, ಅಷ್ಟಕೋನಾಕೃತಿಯ ಬಾವಿ, ಭೋಜನ ಶಾಲೆ ಬಳಿಯ ಬೃಹತ್ ಕಲ್ಯಾಣಿ ಹಾಗೂ ಹತ್ತಾರು ಸಂಖ್ಯೆಯಲ್ಲಿರುವ ಸಣ್ಣ ಕಲ್ಯಾಣಿ, ಕುಡಿಯುವ ನೀರಿನ ಬಾನಿ ಮತ್ತು ಬಾವಿಗಳಿಗೆ ಇದೇ ಕೆರೆಯು ವರ್ಷವಿಡೀ ನೀರುಣಿಸುತ್ತಿತ್ತು. ಇಷ್ಟು ಬೃಹತ್ ಪ್ರಮಾಣದಲ್ಲಿ ನೀರು ಹರಿಸಬೇಕಾದರೆ ಅದಕ್ಕೆ ಇದ್ದ ಆಧಾರ 'ರಾಯ' ಕಾಲುವೆ. ಕೇವಲ ಮಳೆ ನೀರಿನಿಂದ ಈ ಕೆರೆ ತುಂಬಲು ಸಾಧ್ಯವೇ ಇರಲಿಲ್ಲ.

ನಿರ್ಮಾಣ ಕಾಲ

ತನ್ನ ಹರಿವಿನುದ್ದಕ್ಕೂ ವಿಜಯನಗರ ಸಾಮ್ರಾಜ್ಯದ ವಿವಿಧ ಭಾಗಗಳನ್ನು ಹಾದು ಹೋಗುವ 'ರಾಯ' ಕಾಲುವೆಯನ್ನು ಯಾವ ಅವಧಿಯಲ್ಲಿ ನಿರ್ಮಿಸಲಾಯಿತು ಎಂಬುದಕ್ಕೆ ಶಾಸನಗಳಾಗಲೀ ಇತರೆ ದಾಖಲೆಗಳಾಗಲಿ ಲಭ್ಯವಿಲ್ಲ. ಆದರೆ ಕ್ರಿ.ಶ. 1521ರಲ್ಲಿ ರಾಮನಗಡ್ಡೆ ಬಳಿ 'ರಾಯ' ಕಾಲುವೆಗೆ ಶ್ರೀಕೃಷ್ಣದೇವರಾಯ ಅಣೆಕಟ್ಟು ನಿರ್ಮಿಸಿ ಬಗ್ಗೆ ಶಾಸನವೊಂದರಲ್ಲಿ ನಮೂದಿಸಲಾಗಿದೆ. ಆದರೆ ಇದಕ್ಕೂ ಮುನ್ನವೇ ಕಾಲುವೆ ನಿರ್ಮಾಣವಾಗಿದ್ದು ಅದಕ್ಕೆ ನೀರಿನ ಹರಿವನ್ನು ಹೆಚ್ಚಿಸಲು ಕೃಷ್ಣದೇವರಾಯ ಹೆಚ್ಚುವರಿ ಅಣೆಕಟ್ಟು ನಿರ್ಮಿಸಿರಬಹುದೆಂದು ಇತಿಹಾಸಕಾರರ ಅಭಿಪ್ರಾಯ. ಇದು ನಿಜವಿರಬಹುದು. ಏಕೆಂದರೆ ಕ್ರಿ.ಶ.1420ರಲ್ಲೇ (ಎರಡನೇ ದೇವರಾಯನ ಕಾಲ) ಕಾಮಲಾಪುರ ಕೆರೆ ನಿರ್ಮಾಣವಾಗಿದ್ದು, ಆಗ ಅದನ್ನು 'ಚಿಕ್ಕರಾಯ ಕೆರೆ' ಎಂದು ಕರೆಯಲಾಗುತ್ತಿತ್ತು. ಕೆರೆ ನಿರ್ಮಾಣವಾಗಿತ್ತು ಎಂದರೆ ಅದಕ್ಕೆ ನೀರುಣಿಸಲು ಕಾಲುವೆಯನ್ನೂ ಆಗಲೇ ಕಟ್ಟಲಾಗಿತ್ತು ಎಂಬುದು ಸ್ಪಷ್ಟ. ಹಾಗಾಗಿ ಈ ಕಾಲುವೆಯು ಎರಡನೇ ದೇವರಾಯನ ಕಾಲದಲ್ಲಿ ನಿರ್ಮಾಣವಾಗಿ ನಂತರದ ಹಲವು ಅರಸರು ಸುಧಾರಣೆ ಮಾಡಿದ್ದಾರೆ ಎನ್ನಬಹುದು. ವಿಜಯನಗರ ಅರಸರ ನೆನಪಿಗಾಗಿಯೇ ಈ ಕಾಲುವೆಯನ್ನು ಹಿಂದಿನಿಂದಲೂ 'ರಾಯ' ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

ಆ ಕಾಲದ ಜಲ ತಂತ್ರಜ್ಞಾನಕ್ಕೆ ಅತ್ಯುತ್ತಮ ಸಾಕ್ಷಿಯಾಗಿರುವ ಈ ಕಾಲುವೆಯು ವಿಜಯನಗರ ಅರಸರು ನಮಗೆ ನೀಡಿರುವ ಉಡುಗೊರೆ. ಇದು ಮುಂದಿನ ಸಾವಿರ ವರ್ಷವೂ ಹೀಗೇ ಹರಿಯುತ್ತಿರಲಿ.

ಬಿಸಿಲೂರಲ್ಲಿ ಹಚ್ಚಹಸುರಿನ...

10ನೇ ಪುಟದಿಂದ...

ರಾಜ್ಯದಲ್ಲೇ ಅತೀ ಕಡಿಮೆ ಅರಣ್ಯ ಪ್ರದೇಶ (ಶೇ 0.11) ಹೊಂದಿರುವ ವಿಜಯಪುರ ಜಿಲ್ಲೆಯಲ್ಲಿ ಅರಣ್ಯೀಕರಣಕ್ಕಾಗಿ 'ಕೋಟಿ ವೃಕ್ಷ ಅಭಿಯಾನ' ಆರಂಭಿಸಿದರು. ಈ ಅಭಿಯಾನಕ್ಕೆ ಅರಣ್ಯ ಅಧಿಕಾರಿ ಸಂತೋಷ ಆಜೂರ ಹೆಚ್ಚು ಒತ್ತು ಕೊಟ್ಟು ಅನುಷ್ಠಾನಕ್ಕಾಗಿ ಶ್ರಮಿಸಿದರು.

ಪಾಳುಬಿದ್ದಿದ್ದ 623 ಹೆಕ್ಟೇರ್ ಅರಣ್ಯ ಭೂಮಿಯಲ್ಲಿ ಆವರಿಸಿದ್ದ ಬಳ್ಳಾರಿ ಜಾಲಿಯನ್ನು ಜೆಸಿಬಿ ಮೂಲಕ ತಿಂಗಳಾನುಗಟ್ಟಲೇ ಸ್ವಚ್ಛಗೊಳಿಸಿದರು. ಉದ್ಯೋಗ ಖಾತ್ರಿ ಯೋಜನೆಯಡಿ ಸ್ಥಳೀಯರಿಗೆ ಸುಮಾರು 15 ಸಾವಿರ ಮಾನವ ದಿನ ಉದ್ಯೋಗ ಒದಗಿಸಿ, ಗಿಡಗಳನ್ನು ಹಚ್ಚಲು ಗುಂಡಿಗಳನ್ನು ತೋಡಿಸಿದರು. 2022ರ ಮಳೆಗಾಲದಿಂದ ನೆಡುತೋಪು ಬೆಳೆಸಲು ಆದ್ಯತೆ ನೀಡಲಾಯಿತು. ಕೂಡಗಿ ಎನ್‌ಟಿಪಿಸಿ ಸಹಭಾಗತ್ವದಲ್ಲಿ 53 ಸಾವಿರ ಸಸಿಗಳನ್ನು ನೆಟ್ಟು ಅರಣ್ಯೀಕರಣ ಕಾರ್ಯ ಆರಂಭಿಸಲಾಯಿತು. ಬಳಿಕ 2023ರ ಮಳೆಗಾಲದಲ್ಲಿ 44 ಸಾವಿರ ಗಿಡಗಳನ್ನು ನೆಡಲಾಯಿತು.

ವಿಜಯಪುರದ ಗಾಢ ಬಿಸಿಲಿನ ವಾತಾವರಣಕ್ಕೆ ಹೊಂದಿಕೊಳ್ಳುವ ಬೇವು, ಆಲ, ಅರಳಿ, ಅತ್ತಿ, ಬಸರಿ, ಸಿಹಿಹುಣಸೆ, ಹೊಂಗೆ, ತಪಸ್ಸಿ, ಬಿದಿರು, ಸೀತಾಫಲ, ನೆಲ್ಲಿ, ಶ್ರೀಗಂಧ, ರಕ್ತಚಂದನ, ಮಾವು, ನೇರಳೆ ಸೇರಿದಂತೆ ವಿವಿಧ ಹಣ್ಣಿನಗಿಡಗಳನ್ನು ನೆಡಲಾಯಿತು. ಗಿಡ ನೆಡುವುದು ಮಾತ್ರವಲ್ಲ, ಅವುಗಳಿಗೆ ಬೇಸಿಗೆಯಲ್ಲಿ ಹನಿ ನೀರಾವರಿ ವ್ಯವಸ್ಥೆ ಮತ್ತು ಟ್ಯಾಂಕರ್ ಮೂಲಕ ನೀರು ಹರಿಸಿ, ಸದಾ ಹಸಿರಾಗಿರುವಂತೆ ನೋಡಿಕೊಳ್ಳಲಾಯಿತು.

ಎರಡೇ ವರ್ಷದಲ್ಲಿ ಗಿಡಗಳು ಹಸಿರುಹೊದ್ದು ತೊನೆಯ ತೊಡಗಿದವು. ಈ ನೆಡುತೋಪು ಸಂರಕ್ಷಣೆಗಾಗಿ ಅರಣ್ಯ ಇಲಾಖೆಯು 22 ಕಿಲೊಮೀಟರ್ ಸುತ್ತುವರಿದು ತಂತಿಬೇಲಿಯನ್ನು ನಿರ್ಮಿಸಿ ಯಾರೂ ಈ ಕಿರುಕಾಡೊಳಗೆ ಪ್ರವೇಶಿಸದಂತೆ ಮಾಡಿದೆ.

ಮಮದಾಪುರದ ಐತಿಹಾಸಿಕ ಎರಡು ಕೆರೆಗಳ ಜೊತೆಗೆ, ಅರಣ್ಯ ಇಲಾಖೆ ತೋಡಿರುವ ನಾಲ್ಕು ಬಾವಿಗಳಲ್ಲಿ ಸಿಗುತ್ತಿರುವ ಹೇರಳ ನೀರು ಬೇಸಿಗೆ, ಬರಗಾಲದಲ್ಲೂ ಆಸರೆಯಾಗಿದೆ. ಆಜೂರ ಅವರ ವಿಶೇಷ ಪ್ರಯತ್ನದಿಂದ ಅರಣ್ಯ ಇಲಾಖೆಯು ಮಮದಾಪುರದ ನೆಡುತೋಪು ಬೆಳೆಸಲು ರಾಜ್ಯದಲ್ಲೇ ಮೊದಲ ಬಾರಿಗೆ ಹನಿ ನೀರಾವರಿ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿರುವುದು ವಿಶೇಷ. ಈಗ ಸೃಷ್ಟಿಯಾಗಿರುವ ಕಿರುಕಾಡಿಗೆ ಸುತ್ತಮುತ್ತಲಿನಿಂದ ಬಗೆ ಬಗೆ ಪಕ್ಷಿಗಳು, ನವಿಲು, ಮೊಲ, ನರಿಗಳು ಹೆಚ್ಚಿನಸಂಖ್ಯೆಯಲ್ಲಿ ಆವಾಸಸ್ಥಾನವಾಗಿಸಿಕೊಂಡಿವೆ.

ಮಮದಾಪುರದಲ್ಲಿ ಅರಣ್ಯೀಕರಣಕ್ಕಾಗಿ ಕೂಡಗಿ ಎನ್‌ಟಿಪಿಸಿ ₹ 6 ಕೋಟಿ ಸಿಎಸ್‌ಆರ್ ಅನುದಾನವನ್ನು ನೀಡಿದೆ. ಅರಣ್ಯ ಇಲಾಖೆ ₹ 1 ಕೋಟಿ ಅನುದಾನ ನೀಡಿದೆ. ಜೊತೆಗೆ ಸಚಿವ ಎಂ.ಬಿ.ಪಾಟೀಲ ಅವರು ವಿವಿಧ ಕಂಪನಿಗಳಿಂದ ₹ 50 ಲಕ್ಷ ಸಿಎಸ್‌ಆರ್ ಅನುದಾನ ಕೊಡಿಸಿದ್ದಾರೆ.

ಮಮದಾಪುರದಲ್ಲಿ ನೆಡುತೋಪು ಬೆಳಸುವ ಮುನ್ನಾ ಕಾಣುತ್ತಿದ್ದ ಬಟಾಬಯಲು –ಪ್ರಜಾವಾಣಿ ಚಿತ್ರ

'ಮಮದಾಪುರದ 623 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ 250 ಹೆಕ್ಟೇರ್ ಅನ್ನು ಕಿರುಅರಣ್ಯವಾಗಿ ಅಭಿವೃದ್ಧಿ ಪಡಿಸಲಾಗಿದೆ. ಇನ್ನುಳಿದ ಪ್ರದೇಶದಲ್ಲೂ ಹಂತ, ಹಂತವಾಗಿ ನೆಡುತೋಪು ಅಭಿವೃದ್ಧಿಗೆ ಯೋಜನೆ ರೂಪಿಸಿಕೊಳ್ಳಲಾಗಿದೆ' ಎನ್ನುತ್ತಾರೆ ಆಜೂರ.

ಸಿದ್ದೇಶ್ವರ ಶ್ರೀ ಮೀಸಲು ಅರಣ್ಯ: ವಿಜಯಪುರ ಜ್ಞಾನಯೋಗಾಶ್ರಮದ ಸಿದ್ದೇಶ್ವರ ಸ್ವಾಮೀಜಿ ತಮ್ಮ ಕೊನೆಯ ದಿನಗಳಲ್ಲಿ 'ನಿಸರ್ಗದಲ್ಲಿ ನನ್ನನ್ನು ಕಾಣಿ' ಎಂಬ ಆಶಯ ವ್ಯಕ್ತಪಡಿಸಿದ್ದರು. ಅವರ ನೆನಪಿನಲ್ಲಿ ಒಂದು ಸಾವಿರ ಎಕರೆ ಅರಣ್ಯ ಬೆಳೆಸಲು ತೀರ್ಮಾನಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮಮದಾಪುರ ಕಿರು ಅರಣ್ಯವನ್ನು 'ಸಿದ್ದೇಶ್ವರ ಶ್ರೀಗಳ ಮೀಸಲು ಅರಣ್ಯ' ಎಂದು ನಾಮಕರಣ ಮಾಡಲು ಯೋಜಿಸಲಾಗಿದೆ' ಎನ್ನುತ್ತಾರೆ ಸಚಿವ ಎಂ.ಬಿ.ಪಾಟೀಲ.

ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳಲ್ಲಿ ಸಾಧಿಸುವ ಇಚ್ಛಾಶಕ್ತಿ, ಗ್ರಾಮಸ್ಥರ ಸಹಕಾರ ಇದ್ದರೆ ಬರಡುಭೂಮಿಯಲ್ಲೂ ಹಚ್ಚಹಸಿರು, ನೀರನ್ನು ಕಾಣಬಹುದು ಎನ್ನುವುದಕ್ಕೆ ಮಮದಾಪುರ ಕಿರುಕಾಡು ನಿದರ್ಶನವಾಗಿದೆ.

ಪ್ರತಿಕ್ರಿಯೆ

ಭದ್ರಾ ಅರಣ್ಯದಲ್ಲಿ ಸುತ್ತಾಡಿದಂತಾಯಿತು...

ಝುರಿ ಜಿನುಗಿ ಕಾಮಳ್ಳಿಗಳು ಹಾಡಿದಾಗ (ಕೃಪಾಕರ ಸೇನಾನಿ, ಮೇ 19) ಲೇಖನ ಓದಿದಾಗ ಬಹಳ ಸಂತೋಷವಾಯಿತು.

ರಂಗಮ್ಮ, ಭದ್ರಾ ಅರಣ್ಯದಿಂದ ಸ್ಥಳಾಂತರಗೊಂಡ ಹಳ್ಳಿಗರ ಬದುಕಿನ ಚಿತ್ರಣ ಮತ್ತು ಮನುಷ್ಯ ನೆಲೆಸಿದ್ದ ಜಾಗದಲ್ಲಿ ಈಗ ದಟ್ಟಾರಣ್ಯವಾಗಿ ಮಾರ್ಪಾಡಾಗಿರುವ ಎಲ್ಲವೂ ಸ್ವಾರಸ್ಯಕರವಾಗಿದೆ. ಜನರು ನೆಲೆಸಿದ್ದ, ಓಡಾಡಿದ್ದ ಜಾಗಗಳಲ್ಲಿ ಮರಗಳು ಬೆಳೆದು ನಿಂತಿವೆ. ಈ ತಾಣದಲ್ಲಿ ಯಾರ ಹಂಗಿಲ್ಲದೆ ಓಡಾಡುವ ಕೆಂದಳಿಲು, ಕಾಡೆಮ್ಮೆ, ಹಕ್ಕಿಗಳ ಸಂಕುಲ ಸ್ವಚ್ಛಂದವಾಗಿ ಬದುಕುತ್ತಿವೆ. ನಾನು ಕೂಡ ಭದ್ರಾ ಅರಣ್ಯದಲ್ಲಿ ಓಡಾಡಿಕೊಂಡು ಬಂದೆ ಎನ್ನುವಷ್ಟು ಅನುಭವ ತಂದುಕೊಡ್ತು.

ಲಕ್ಷ್ಮಣ ಭಾರದ್ವಾಜ ಬೆಂಗಳೂರು

ಬರಹ ಅತ್ಯಂತ ಆತ್ಮೀಯತೆಯಿಂದ ಕೂಡಿತ್ತು. ಓದಿ ಮುಗಿಸಿದಾಗ, ಕಣ್ಣುಗಳಲ್ಲಿ ನೀರು ಜಿನುಗಿತು... ತೃಪ್ತ ಹಾಗೂ ಸಾರ್ಥಕ ಭಾವದಿಂದ. ಕೃಪಾಕರ ಸೇನಾನಿ ಅವರಿಗೆ ಧನ್ಯವಾದಗಳು.

ಶ್ಯಾಮಲಾ ಮೈಸೂರು

ಭದ್ರಾ ಅರಣ್ಯದಿಂದ ಸ್ಥಳಾಂತರಗೊಂಡ ಹಳ್ಳಿಗರ ಬದಕನ್ನು ಉತ್ತಮ ರೀತಿಯಲ್ಲಿ ರೂಪಿಸಿದ ಯುವ ಅಧಿಕಾರಿ ಯತೀಶ್‌ಕುಮಾರ್ ಅವರ ಇಚ್ಛಾಶಕ್ತಿ ಶ್ರಮಕ್ಕೆ ಅಭಿನಂದನೆಗಳು. ಅರಣ್ಯ ಇಲಾಖೆಯಲ್ಲಿ ಈಗಲೂ ಉತ್ತಮ ಅಧಿಕಾರಿಗಳು ಇದ್ದಾರೆ. ಮುಖ್ಯವಾಗಿ ಪರಿಸರ ಕಾಳಜಿ ಉಳ್ಳ ರಾಜಕೀಯ ವ್ಯಕ್ತಿಗಳು ಬೇಕೇ ಬೇಕು.

ಎಂ.ನಾಗರಾಜ ನಿವೃತ್ತ ವಲಯ ಅರಣ್ಯ ಅಧಿಕಾರಿ, ಹೊಸಪೇಟೆ

ಅರಣ್ಯದೊಳಗಿನ ಹಳ್ಳಿಗಳನ್ನು ಯಶಸ್ವಿಯಾಗಿ ಸ್ಥಳಾಂತರ ಮಾಡಿದರೆ ಕಾಡನ್ನು ಮೂಲ ಸ್ವರೂಪದಲ್ಲಿ ಕಾಯಬಹುದು ಎನ್ನುವ ಭರವಸೆ ಅತ್ಯಂತ ಮಹತ್ವದ್ದು. ಸರ್ಕಾರಗಳ ಕಣ್ಣು ತೆರೆಸಬಲ್ಲ ಬರಹವಿದು.

ಕುಚ್ಚಣ್ಣ ಶ್ರೀನಿವಾಸನ್ ಶಿಡ್ಲಘಟ್ಟ

ಸರ್ಕಾರ ಮತ್ತು ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದ ಅರಣ್ಯ ಪ್ರದೇಶಗಳ ಸಂರಕ್ಷಣೆಗೆ ಅಡ್ಡಿ ಉಂಟಾಗುತ್ತಿದೆ. ಅಂತಹ ಪ್ರದೇಶದಲ್ಲಿ ಯೋಜನೆಗಳನ್ನು ಕೈಗೊಳ್ಳುತ್ತಿರುವುದು ಅತ್ಯಂತ ದುರಂತದ ಸಂಗತಿ. ಭದ್ರಾ ಅರಣ್ಯ ಪ್ರದೇಶದಲ್ಲಿ ವನ್ಯಪ್ರಾಣಿ, ಅರಣ್ಯ ಸಂಪತ್ತು ಚಿಗುರೊಡೆದಿರುವುದು ಅತ್ಯಂತ ಸಂತಸದ ವಿಷಯ.

ವಿನಾಯಕ.ಎಂ.ಎಂ ಹಂಪಸಾಗರ-2, ಹಗರಿಬೊಮ್ಮನಹಳ್ಳಿ ತಾಲ್ಲೂಕು

ಉಪಯುಕ್ತ ಅಂಕಣ

ಜಿ.ಕೃಷ್ಣಪ್ಪ ಅವರ 'ಕುವೆಂಪು ಪದ ಸೃಷ್ಟಿ' ಏಕಕಾಲಕ್ಕೆ ಕನ್ನಡ ಕಾವ್ಯಾಭ್ಯಾಸಿಗಳಿಗೂ ಹಾಗೆಯೇ ಭಾಷಾಭ್ಯಾಸಿಗಳಿಗೂ ತುಂಬಾ ಉಪಯುಕ್ತವಾಗಿದೆ. ಅವರ ಕಾಳಜಿ ಮತ್ತು ಶ್ರಮಕ್ಕೆ ಧನ್ಯವಾದಗಳು.

ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

ಬರೆಹ ಆಪ್ತವಾಗಿದೆ. ಭದ್ರಾ ಅಡವಿಯೊಳಗೆ ಲೇಖಕರೊಟ್ಟಿಗೆ ನಾನೂ ಸುತ್ತಾಡಿದ ಅನುಭವವಾಯ್ತು.

ಶಿವಕುಮಾರ್ ಎಸಿಪಿ ರಾಯಚೂರು

ಲೇಖನ ಓದಿದಾಗ ಭರವಸೆಯ ಕೋಲ್ಮಿಂಚು ಹೊಳೆದಂತಾಯಿತು. ಭದ್ರಾ ಪುನರ್ವಸತಿ ಯೋಜನೆಯನ್ನೇ ಮಾದರಿಯನ್ನಾಗಿಸಿಕೊಂಡು ರಾಜ್ಯದ ಇತರ ಯೋಜನೆಗಳನ್ನು ಯಶಸ್ವಿಗೊಳಿಸಬಹುದು.

ಮಹಾಂತೇಶ ಗ.ಓಶಿಮಠ ಕೈಗಾ

ಕಾಮಳ್ಳಿಗಳ ಹಾಡು.. ಓದುಗರ ಹೃದಯಕ್ಕೆ ಜಿನುಗಿತು. ಕಾಡಿನ ಕಥೆ, ಅಲ್ಲಿನ ಜೀವ ಸಂಕುಲನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಭದ್ರಾ ಅರಣ್ಯದ ನಿನಾದವಾಗಿದೆ.

ಸಂಪ್ರತಿ ದೊಡ್ಡಮನಿ ಗುಳೇದಗುಡ್ಡ, ಬಾಗಲಕೋಟೆ

ಮುನ್ನೋಟ 26-05-2024 ರಿಂದ 01-06-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಬಹಳ ವ್ಯಾವಹಾರಿಕವಾಗಿ ನಡೆದುಕೊಳ್ಳುವಿರಿ. ಉತ್ತಮ ವಾಗ್ಮಿಗಳಿಗೆ ಹಾಗೂ ಸಂಗೀತಗಾರರಿಗೆ ಸೂಕ್ತ ಗೌರವ ದೊರೆಯುತ್ತದೆ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಒಡಹುಟ್ಟಿದವರು ನಿಮಗೆ ಸಾಕಷ್ಟು ಸಹಕಾರ ನೀಡುವರು. ಹಿರಿಯರ ಆಸ್ತಿ ಒದಗುವ ಅವಕಾಶಗಳಿವೆ. ಮಕ್ಕಳಿಗಾಗಿ ಹಣ ಖರ್ಚು ಮಾಡುವಿರಿ. ಅಜೀರ್ಣ ಸಂಬಂಧಿತ ತೊಂದರೆಗಳು ಕಾಣಿಸಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆದಾಯ ಮತ್ತು ಖರ್ಚು ಎರಡು ಸಮನಾಗಿರುತ್ತದೆ. ನಿಮ್ಮ ಕೆಲವು ಕೆಲಸ ಕಾರ್ಯಗಳು ತಾಯಿಗೆ ಬೇಸರ ತರಿಸಬಹುದು. ಸರ್ಕಾರಿ ಸಂಸ್ಥೆಗಳ ಭೂಮಿಯ ಅಭಿವೃದ್ಧಿ ಮಾಡಿಕೊಡುವವರಿಗೆ ಹೆಚ್ಚು ಲಾಭವಿರುತ್ತದೆ. ಅಧ್ಯಯನಶೀಲರಿಗೆ ಸ್ವಲ್ಪ ಆಸಕ್ತಿ ಕಡಿಮೆಯಾಗಬಹುದು. ಹಿತಶತ್ರುಗಳು ಹೆಚ್ಚಾಗುವ ಸಾಧ್ಯತೆಗಳಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವ್ಯವಹಾರ ಚತುರರಾಗಿರುತ್ತೀರಿ. ನಿಮ್ಮ ಶ್ರಮದಿಂದ ಆದಾಯ ಹೆಚ್ಚು ಮಾಡಿಕೊಳ್ಳಬಹುದು. ಸಂಗಾತಿಗಾಗಿ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ಉದ್ಯೋಗದ ಸ್ಥಳದಲ್ಲಿ ಸಹೋದ್ಯೋಗಿಗಳ ಬಳಿ ಸಾಲಮಾಡುವುದು ದುಬಾರಿಯಾಗಿ ಪರಿಣಮಿಸಬಹುದು. ಪ್ರೀತಿ ಪ್ರೇಮಗಳ ವಿಷಯದಲ್ಲಿ ಯಶಸ್ಸನ್ನು ಕಾಣುವಿರಿ. ಉದ್ಯೋಗದಲ್ಲಿ ಹೆಚ್ಚಿನ ಸ್ಥಾನಮಾನ ದೊರೆಯುವ ಸಾಧ್ಯತೆಯಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿರ್ಧಾರಗಳಲ್ಲಿ ದ್ವಂದ್ವವಿರುತ್ತದೆ. ದೃಢ ನಿರ್ಧಾರ ಒಳ್ಳೆಯದು. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುವಷ್ಟಿರುತ್ತದೆ. ಸರ್ಕಾರಿ ನೌಕರರಿಗೆ ಆದಾಯ ಹೆಚ್ಚುವ ಸಾಧ್ಯತೆ ಇದೆ. ನಡವಳಿಕೆಯಲ್ಲಿ ಸ್ವಲ್ಪ ಆಲಸಿತನ ಹೆಚ್ಚಿರುತ್ತದೆ. ಮಕ್ಕಳ ವಿಚಾರದಲ್ಲಿ ವಿರೋಧಾಭಾಸಗಳು ಕಂಡು ಬರುತ್ತದೆ. ಶೀತ ಸಂಬಂಧಿ ಕಾಯಿಲೆಗಳಿರುವವರು ಎಚ್ಚರ ವಹಿಸಿರಿ. ಸಂಗಾತಿಯಿಂದ ಹೆಚ್ಚು ಪ್ರಶ್ನೆಗಳ ಸುರಿಮಳೆಯ ಆಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಹಿರಿಯರಿಗೆ ಹೆಚ್ಚು ಗೌರವ ದೊರೆಯುತ್ತದೆ. ಆದಾಯವು ಕಡಿಮೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಂದ ಉದ್ಯೋಗದಲ್ಲಿ ಗಮನ ಸೆಳೆಯುವಿರಿ. ನವೀನ ಕೃಷಿಯನ್ನು ಮಾಡುವವರಿಗೆ ಲಾಭವಿದೆ. ಮಕ್ಕಳ ಏಳಿಗೆಯಲ್ಲಿ ಪ್ರಗತಿಯನ್ನು ಕಾಣಬಹುದು. ಸಂಗಾತಿ ಆರೋಗ್ಯದಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇದೆ. ಕೆಲವರಿಗೆ ಅನಿರೀಕ್ಷಿತವಾಗಿ ಮೂಳೆ ತೊಂದರೆಗಳಾಗಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಮನಸ್ಸಿನಲ್ಲಿ ಪಶ್ಚಾತಾಪದ ಭಾವನೆ ಇರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ನಡವಳಿಕೆಯ ಬಗ್ಗೆ ಸಂಗಾತಿಗೆ ಕೋಪವಿರುತ್ತದೆ. ಕೃಷಿಭೂಮಿಯನ್ನು ಅಭಿವೃದ್ಧಿ ಮಾಡಬಹುದು. ಮಕ್ಕಳ ವಿಷಯದಲ್ಲಿ ಚಿಂತೆ ಕಾಡುತ್ತದೆ. ಕೆಲವರಿಗೆ ಮೈಯಲ್ಲ ಹಿಂಡಿದಂತಾಗುವುದು. ಸಂಗಾತಿಯೊಡನೆ ಬಿರುಸಿನ ಮಾತುಗಳಾಗುವ ಸಾಧ್ಯತೆಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಬಹಳ ಬುದ್ಧಿವಂತಿಕೆಯಿಂದ ಜನರನ್ನು ಮರುಳು ಮಾಡಲು ಯತ್ನಿಸುವಿರಿ. ಆದಾಯದಷ್ಟೇ ಖರ್ಚು ಬರುವ ಸಾಧ್ಯತೆ ಇದೆ. ಚುರುಕಾಗಿ ಓಡಾಡಿ ಜನಗಳ ಗಮನ ಸೆಳೆಯಲು ಪ್ರಯತ್ನಿಸುವಿರಿ. ಕೃಷಿಯಿಂದ ಆದಾಯ ಕಡಿಮೆಯಾಗಬಹುದು. ಕೃಷಿಭೂಮಿಯ ದಾಖಲೆಗಳಲ್ಲಿ ವ್ಯತ್ಯಾಸವಾಗುವ ಸಾಧ್ಯತೆ ಇದೆ. ಮಕ್ಕಳು ನಿಮ್ಮ ಮಾತು ಕೇಳುವ ಹಂತದಲ್ಲಿ ಇರುವುದಿಲ್ಲ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಸಮಾಜದೊಂದಿಗೆ ಬಹಳ ಗೌರವಯುತವಾಗಿ ನಡೆದುಕೊಳ್ಳುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಕೆಲಸಗಳನ್ನು ಆರಂಭಿಸಲು ದ್ವಂದ್ವ ಮನಸ್ಸಿನಿಂದ ಒದ್ದಾಡುವಿರಿ. ಆಸ್ತಿ ಖರೀದಿಯ ವಿಷಯದಲ್ಲಿ ಆತುರತೆ ಬೇಡ. ಮಕ್ಕಳಿಂದ ನಿರೀಕ್ಷಿತ ಸಹಾಯ ದೊರೆಯುವುದಿಲ್ಲ. ನರ ದೌರ್ಬಲ್ಯಗಳು ಕೆಲವರನ್ನು ಕಾಡಬಹುದು. ಸಂಗಾತಿಯಿಂದ ಸಾಕಷ್ಟು ಸಹಾಯಗಳು ದೊರೆಯುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಆದಾಯವು ಕಡಿಮೆ ಇರುತ್ತದೆ. ಶ್ರಮಪಟ್ಟು ಕೆಲಸ ಮಾಡುವಿರಿ. ನಿಮ್ಮ ಬಂಧುಗಳು ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ ಮಾಡುವರು. ಸ್ಥಿರಾಸ್ತಿಯ ವ್ಯವಹಾರಗಳಲ್ಲಿ ಹೆಚ್ಚಿನ ಬಂಡವಾಳ ಹೂಡುವುದು ಬೇಡ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ. ತಲೆನೋವು ಕೆಲವರನ್ನು ಕಾಡಬಹುದು. ಸಂಗಾತಿಯಿಂದ ಮಕ್ಕಳಿಗೆ ಹೆಚ್ಚು ಅನುಕೂಲವಾಗುತ್ತದೆ. ಸಂಗಾತಿಯ ಆರೋಗ್ಯದ ಬಗ್ಗೆ ಎಚ್ಚರ ವಹಿಸಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಆದಾಯವು ಕಡಿಮೆ ಇರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಬಂಧುಗಳಿಂದ ಅಡ್ಡಿ ಬರುವ ಸಾಧ್ಯತೆ ಇದೆ. ಭೂಮಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಸಾಕಷ್ಟು ಅಭಿವೃದ್ಧಿ ಇರುತ್ತದೆ. ಚರ್ಮ ಕಾಯಿಲೆಗಳಿದ್ದವರಿಗೆ ವಾಸಿಯಾಗುವ ಸಾಧ್ಯತೆಗಳಿವೆ. ಸಂಗಾತಿಯ ಖರ್ಚು ಜಾಸ್ತಿ ಆಗಬಹುದು. ಸರ್ಕಾರಿ ಸಾಲ ದೊರೆಯುವ ಸಾಧ್ಯತೆಯಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸಮಾಜವನ್ನು ಸಮಚಿತ್ತದಿಂದ ನೋಡುವವರಿಗೆ ಗೌರವ ದೊರೆಯುತ್ತದೆ. ಆದಾಯದಲ್ಲಿ ಸಾಕಷ್ಟು ವ್ಯತ್ಯಾಸವಿರುತ್ತದೆ. ವ್ಯವಹಾರಿಕ ಬುದ್ಧಿಯಿಂದ ಹೆಚ್ಚು ಸಂಪಾದನೆ ಮಾಡಲು ಪ್ರಯತ್ನಪಡುವಿರಿ. ಮಧ್ಯವರ್ತಿ ಏಜೆಂಟರಾಗಿ ಕೆಲಸಮಾಡುವವರಿಗೆ ಆದಾಯ ಹೆಚ್ಚುತ್ತದೆ. ಕೆಲವರಿಗೆ ಶೀತಭಾದೆ ಹೆಚ್ಚಾಗುವ ಸಾಧ್ಯತೆಗಳಿವೆ. ಸಂಗಾತಿಯಿಂದ ಆರ್ಥಿಕ ಸಹಕಾರ ದೊರೆಯಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬಹಳ ಉಗ್ರತ್ವ ನಿಮ್ಮಲ್ಲಿ ಇರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮೆಲ್ಲ ಕೆಲಸ ಕಾರ್ಯಗಳಿಗೆ ಜನರ ಸಹಾಯ ಪಡೆಯುವಿರಿ. ಮಕ್ಕಳಿಗಾಗಿ ಹಣ ಖರ್ಚು ಮಾಡುವಿರಿ. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ನಿಧಾನ ಗತಿ ಇರುತ್ತದೆ. ಸಿರಾಸ್ತಿಯನ್ನು ಖರೀದಿ ಮಾಡಬೇಕೆನ್ನುವವರು ಈಗ ಮಾಡಬಹುದು. ಹಿರಿಯರ ವ್ಯಾಪಾರಗಳಲ್ಲಿ ನಿಮಗೆ ಪಾಲು ದೊರೆಯುತ್ತದೆ.

ಪದಬಂಧ 2843



ಮೇಲಿನಿಂದ ಕೆಳಕ್ಕೆ

1. ಪೂರ್ವ ಪುಣ್ಯದಿಂದ ದೊರೆಯುವ ಅಂತಸ್ತು 3
2. ಮನಸ್ಸಿಗೆ ಆಗುವ ಆತಂಕ, ತುಮುಲ 4
3. ಒಂದು ರೀತಿ ಚೆನ್ನಾಗಿ ಬೆಂದ ಅಡುಗೆ 4
4. ಒತ್ತಾಯದಿಂದ ತೆಗೆದುಕೊಂಡಿದ್ದರಲ್ಲಿ ಶಿವನ ಪಾತ್ರವಿದೆಯೇ? 3
6. ಧ್ಯಾನ ತಪಸ್ಸಗಳನ್ನು ಅನುಷ್ಠಾನದಿಂದ ಸಾಧಿಸಿದವಳು 3
8. ಪ್ರಜ್ಞಾಪೂರ್ವಕವಾಗಿ ಅರ್ಥಮಾಡಿಕೊ 3
10. ಕೊಟ್ಟ ಮಾತನ್ನು ತಪ್ಪಿ ವಿಶ್ವಾಸ ಕಳೆದುಕೊಳ್ಳುವವ 5
12. ಭುವಿಯನ್ನು ಸ್ವರ್ಗವಾಗಿಸುವ ಪ್ರಕೃತಿ 3
14. ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವವರಿಗೆ ಸಿಗುವ ಧರ್ಮದ ಮಾರ್ಕ್ಸ್ 3
17. ಹಲ್ಲಿನ ರಕ್ಷಣೆಗೆ ಗಟ್ಟಿಯಾಗಿರಬೇಕಾದ ಬುನಾದಿ 3
18. ಪ್ರಾಣದಿಂದ ಕೂಡಿದ 3
19. ಬೇಕಾಗಿರುವುದಕ್ಕಿಂತ ಹೆಚ್ಚಾದ ಬಯಕೆ ಗತಿ ಕೆಡಿಸೀತು 4
20 ಮಮತೆಯ ಜೊತೆ ಅಲ್ಪ ಖಾರ ಸೇರಿಕೊಂಡಿದೆ 4
21. ದೋಷದ ಅಪವಾದ 3
23. ಮೇಲಲ್ಲ.... 3

ಎಡದಿಂದ ಬಲಕ್ಕೆ

1. ವ್ಯಾಸಂಗಕ್ಕಾಗಿ ನಿಗಧಿಪಡಿಸಿದ ವಿಷಯ ಗ್ರಂಥ 5
3. ಶಬ್ದಗಳ ಒಟ್ಟಿಲು 5
5. ಗೆಲುವಿನ ಸಂಭ್ರಮಾಚರಣೆ 5
7. ಕೈ ಹಿಡಿಯುವಾಗ ಆಕಾಶಕಾಯಗಳಿಗೆ ಹಿಡಿಯುವ ಗ್ರಹಣ 5
9. ಬೇಡುವವ ಕೇಳುವ ಅನ್ನದ ತುತ್ತು ಹಿಂದುಮುಂದಾಗಿದೆ 3
11. ಮಾನಮಯಿ ಈ ಹೆಣ್ಣು 3
13. ಒಳ್ಳೆಯದನ್ನು ಮಾಡಿದ ಪುಣ್ಯ 3
15. ಮಳೆ ಬಿಸಿಲಿನ ಮಧ್ಯೆ ಬಾನಲ್ಲಿ ಮೂಡುವ ರಂಗಿನ ಅಂಬು 5
16. ಕೊಡಲಿ ಹಿಡಿದ ಪರಶುರಾಮ 3
18. ಸಲದಲ್ಲಿ ಎಲ್ಲವೂ ಸೇರಿದೆ 3
19. ಸಂಸ್ಕೃತದ ಈ ಎಂಟನೇ ಸಂಖ್ಯೆಗೆ ವಿಶೇಷ ಬಲವಿದೆ 3
21. ಮುದ್ರಣಕ್ಕೆ ಮುನ್ನ ತಯಾರಾದ ಕಚ್ಚಾ ನಕಲು 5
22. ಮನ ತಟ್ಟುವಂತೆ ಮೂಡಿಸುವ ಅರಿವು 5
24. ಪರಸ್ಪರ ಖಡ್ಗಗಳನ್ನು ಝಳಪಿಸಿ ಆಡುವ ಯುದ್ಧದಾಟ 5
25. ಶೃಂಗಾರ, ಸೌಂದರ್ಯ, ಸಂತೋಷದಿಂದ ಕೂಡಿದ ಕ್ಷಣಕಾಲ 5

ಪದಬಂಧ ಉತ್ತರ -2842

ಮೇಲಿಂದ ಕೆಳಕ್ಕೆ

1.ಭಾನುವಾರ 2.ಜರಾಸಂಧ 3.ದಾನಪ್ಪ 5.ಚತುರಾನನ 7.ಪರಂಜ್ಯೋತಿ 9.ಗಂಭೀರ 10.ವಿದೇಶ 11.ಕರಿನಾಗ 12.ವನಮಾನವ 14.ವಶೀಲಿ 16.ಕಲ್ಲಾರತಿ 17.ಲಕ್ಷ್ಮೀಪತಿ 19. ನಭವ

ಎಡದಿಂದ ಬಲಕ್ಕೆ

1. ಭಾರದ್ವಾಜ 4.ರಾಜೀವಲೋಚನ 6.ತುಪ್ಪದೀಪ 8.ರಸಗಂಧ 10.ವಿಧಾನ 11.ಕಲರವ 13.ನವನೀತಿ 15.ನಕುಶ 16.ಕಲಿಗಾಲ 18.ಗಜಾನನ 20. ಭವರೋಗಹರ 21. ತಿರುಪತಿ

‘ಹಯವದನದ ಪದ್ಮಿನಿ ಸತಿ ಹೋಗಬೇಕಿರಲಿಲ್ಲ’


ನೀಲಂ ಮಾನ್ ಸಿಂಗ್ ಚೌಧುರಿ

ಹೆಸರಾಂತ ರಂಗ ನಿರ್ದೇಶಕಿ ನೀಲಂ ಮಾನ್ ಸಿಂಗ್ ಚೌಧುರಿ ಅವರು ಹಿಂದಿಯ ‘ಹಯವದನ’ ವನ್ನು ನಿರ್ದೇಶಿಸಿದ್ದಾರೆ. ಈ ನಾಟಕ ಮೇ 28 ರಿಂದ ಜೂನ್ 2 ರವರೆಗೆ ಬೆಂಗಳೂರಿನ ರಂಗಶಂಕರದಲ್ಲಿ ಪ್ರದರ್ಶನಗೊಳ್ಳಲಿದೆ.

ಪ್ರತಿಭಾ ನಂದಕುಮಾರ್

ಸಂದರ್ಶನ

ಆಧುನಿಕ ಕ್ಲಾಸಿಕ್ ಎಂದು ಪರಿಗಣಿತವಾದ ಗಿರೀಶ ಕಾರ್ನಾಡರ ನಾಟಕ ಬಿ.ವಿ. ಕಾರಂತರ ನಿರ್ದೇಶನದಲ್ಲಿ ‘ಹಯವದನ’ ಮೊಟ್ಟಮೊದಲ ಪ್ರಯೋಗದಿಂದಲೇ ರಂಗಕ್ಷೇತ್ರದಲ್ಲಿ ಬಿರುಗಾಳಿ ಎಬ್ಬಿಸಿತು. ದೇಶ-ವಿದೇಶದ ಹಲವಾರು ಭಾಷೆಗಳಿಗೆ ಅನುವಾದಗೊಂಡು ಬೇರೆ ಬೇರೆ ನಿರ್ದೇಶಕರು ತಮ್ಮ ತಮ್ಮ ಧೋರಣೆಗಳಿಗನುಸಾರವಾಗಿ ನಾಟಕವನ್ನು ಅರ್ಥೈಸಿ ಪ್ರಯೋಗಿಸಿದ್ದಾರೆ, ಈಗಲೂ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಇದರ ವಿಭಿನ್ನ ಪ್ರಯೋಗಗಳೇ ಒಂದು ಶ್ರೀಮಂತ ಪರಂಪರೆ ಸೃಷ್ಟಿ ಮಾಡಿ ಒಂದು ಪ್ರತ್ಯೇಕ ಅಧ್ಯಯನ ಯೋಗ್ಯವಾದ ಸಂಗತಿಯಾಗಿದೆ.

ಈ ನಾಟಕವನ್ನು ಬಿ.ವಿ.ಕಾರಂತರೇ ಹಿಂದಿಗೆ ಅನುವಾದ ಮಾಡಿದ್ದರು. ಹಿಂದಿ ‘ಹಯವದನ’ದ ಮೊದಲ ಪ್ರಯೋಗ 1975ರಲ್ಲಿ ಸತ್ಯದೇವ್ ದುಬೆ ಅವರ ನಿರ್ದೇಶನದಲ್ಲಿ ನಡೆಯಿತು. ಅಮೋಲ್ ಪಾಲೇಕರ್, ಅಮರೀಶ್ ಪುರಿ, ಸುನಿಲ ಪ್ರಧಾನ್ ಮುಂತಾದ ಖ್ಯಾತ ನಟರು ಅಭಿನಯಿಸಿದ್ದರು. ಪ್ರಸ್ತುತ ರಂಗ ನಿರ್ದೇಶಕಿ ನೀಲಂ ಮಾನ್ ಸಿಂಗ್ ಚೌಧುರಿ ಅವರು ಹಿಂದಿಯ ‘ಹಯವದನ’ವನ್ನು ನಿರ್ದೇಶಿಸಿದ್ದಾರೆ.

ನೀಲಂ ಮಾನ್ ಸಿಂಗ್ ಚೌಧುರಿ ಅವರು ಈ ನಾಟಕದ ಪ್ರಯೋಗದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ ಎಂದು ಕೇಳಿದ್ದೆ. ಈ ಬಗ್ಗೆ ಮಾತನಾಡಬೇಕೆನ್ನುವ ಕುತೂಹಲದಲ್ಲಿ ನೀಲಂ ಅವರನ್ನು ಸಂದರ್ಶಿಸಿದಾಗ ಅವರು ಸಂಕ್ಷಿಪ್ತವಾಗಿ ಒಂದೆರಡು ಸಂಗತಿಗಳನ್ನು ಹಂಚಿಕೊಂಡರು.

- **‘ಹಯವದನ’ ದಲ್ಲಿ ಬದಲಾವಣೆ ಮಾಡಿಕೊಳ್ಳಬೇಕು ಎಂದು ನಿಮಗೆ ಅನ್ನಿಸಿತು ಎಂದರೆ ನಾಟಕದ ಬಗ್ಗೆ ನಿಮಗೆ ಏನಾದರೂ ತಕರಾರಿತ್ತೇ?**

ನೀಲಂ: ನನಗೆ ಗಿರೀಶ ಕಾರ್ನಾಡ ಅವರು ಚೆನ್ನಾಗಿ ಗೊತ್ತಿದ್ದರು. ಅವರು ಸಂಪೂರ್ಣ ಆಧುನಿಕೋತ್ತರ ಜೀವಿ ಮತ್ತು ಬುದ್ಧಿಜೀವಿ. ಆದರೆ ಅವರು ಪದ್ಮಿನಿ ಸತಿ ಹೋಗುವಂತಹ ಸಾಂಪ್ರದಾಯಿಕ ಅಂತ್ಯವನ್ನು ಏಕೆ ಆರಿಸಿಕೊಂಡರು ಎನ್ನುವುದು ನನಗೆ ನಿಗೂಢ ಪ್ರಶ್ನೆಯಾಯಿತು. ಗಿರೀಶ ಕಾರ್ನಾಡರು ‘ಹಯವದನ’ದಲ್ಲಿ ಮಾನವನ ದ್ವಂದ್ವಗಳನ್ನು, ದೇಹ ಮತ್ತು ಮನಸ್ಸಿನ ತಾಕಲಾಟವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ. ಜೀವ ಮತ್ತು ನಿರ್ಜೀವ ವಸ್ತುಗಳು ಒಂದುಗೂಡಿ ಕಾಲ್ಪನಿಕ, ನೈಜ ಮತ್ತು ಭ್ರಮೆಯ ಆಕರ್ಷಕ ಮಿಶ್ರಣವಾಗಿ ಪ್ರಸ್ತುತವಾಗಿದೆ.

ಈ ನಾಟಕ ನನ್ನ ಜೊತೆ ಮಾತನಾಡಿತು. ನಾನು ಅದಕ್ಕೆ ಸ್ಪಂದಿಸಿದೆ. ಇದೊಂದು ಆಧುನಿಕ ಕ್ಲಾಸಿಕ್ ಆದರೂ ಅದರಲ್ಲಿ ಪೌರಾಣಿಕ - ಮಿಥ್ - ಕಾಲ್ಪನಿಕ ಸಂಗತಿಗಳು ಅಂತರ್ಗವಾಗಿ ವಿಲೀನಗೊಂಡಿವೆ. ಮೊದಲು ಅದೊಂದು ಅಸಾಂಪ್ರದಾಯಿಕ ಅನುಸಂಧಾನ ಎಂದುಕೊಂಡಿದ್ದೆ. ಆದರೆ ವಾಸ್ತವವಾಗಿ ಅದೊಂದು ರಿಯಾಕ್ಷನರಿ - ಪ್ರತಿಗಾಮಿ ಧೋರಣೆ ಅನ್ನಿಸಿತು. ಹಾಗಾಗಿ ಅದು ನಾನು ನಾಟಕವನ್ನು ನೋಡುವ ವಿಧಾನಕ್ಕಿಂತ ಭಿನ್ನ ಅನ್ನಿಸಿತು. ಅದರಿಂದಾಗಿ ಸ್ವಲ್ಪ ಮಾರ್ಪಾಡಿಸಿಕೊಳ್ಳಬೇಕಾಯಿತು.

- **‘ಹಯವದನ’ದ ರಮ್ಯ ಕಾಲ್ಪನಿಕ ಚೌಕಟ್ಟನ್ನು ನೀವು ಒಪ್ಪಿಕೊಳ್ಳುವಿರಾದರೆ ಅದನ್ನು ಪ್ರಸ್ತುತದ ಕನ್ನಡಿಯಲ್ಲಿ ನೋಡಲು ಯತ್ನಿಸುವುದು ಸರಿಯೇ?**

ನೀಲಂ: ಇದೊಂದು ಸಂಕೀರ್ಣ ನಾಟಕ. ಯಾವುದೇ ಒಂದು ನಾಟಕ ಪಠ್ಯವಾಗಿ ಇದ್ದಾಗ ಒಂದನ್ನು ಹೇಳುತ್ತಿದ್ದು ಅದನ್ನು ರಂಗದ ಮೇಲೆ ಪ್ರಯೋಗಿಸಿದಾಗ ಅದು ತನ್ನನ್ನು ಪ್ರಸ್ತುತಕ್ಕೆ ಒಡ್ಡಿಕೊಳ್ಳುತ್ತದೆ. ಹಾಗಾಗಿಯೇ ನಾಟಕ ಒಂದು ಸ್ಥಿರ ಅಸ್ತಿತ್ವ ಹೊಂದಿರುವುದಿಲ್ಲ. ಅದೊಂದು ಪ್ರಯೋಗಪಠ್ಯವಾದಾಗ ಸಮಕಾಲೀನತೆಗೆ ಸ್ಪಂದಿಸುವುದು ಅನಿವಾರ್ಯವಾಗುತ್ತದೆ. ಪದ್ಮಿನಿಯ ಪಾತ್ರ ಅಂದಿನ ಕಾಲದೇಶ ವರ್ತಮಾನಗಳಲ್ಲಿ ಕಾಲೂರಿದ್ದರೂ ಅವಳ ಮಾತುಕತೆ, ನಡವಳಿಕೆ ಇವತ್ತಿನ ಸಮಕಾಲೀನ ಜಗತ್ತಿನ ಹೆಣ್ಣಿನ ನೋಟವಾಗಿದೆ. ನಾನು ದ್ವಂದ್ವವನ್ನು ಅರ್ಥ ಮಾಡಿಕೊಳ್ಳಬಲ್ಲೆ, ಹೆಣ್ಣೊಬ್ಬಳು ಇಬ್ಬರನ್ನು ಪ್ರೀತಿಸಬಹುದು ಎಂದು ನಾನು ಅರ್ಥಮಾಡಿಕೊಳ್ಳಬಲ್ಲೆ. ಆದರೆ ನನಗೆ ಅರ್ಥವಾಗದ ವಿಷಯವೆಂದರೆ ಹೆಣ್ಣು ತನ್ನ ಆಸೆಯನ್ನು ಪರಿಪೂರ್ಣವಾಗಿ ಪಡೆಯಲು ಸಾಧ್ಯವಾಗದಿದ್ದಾಗ ಅವಳು ಏಕೆ ಸಾಯಬೇಕು? ಪರಿಪೂರ್ಣತೆ ದೇವರ ಗುಣ, ಅಪೂರ್ಣತೆ ಮನುಷ್ಯರಿಗೆ ಸಹಜ ಗುಣ. ನಾವು ವಾಸ್ತವದಲ್ಲಿ ಬದುಕಲು ಕಲಿಯಬೇಕು. ಸಾವು ಇದಕ್ಕೆ ಉತ್ತರವಲ್ಲ.

- **ಕಾರಂತರು ಅತಿಮಿತ - ಮಿನಿಮಲಿಸ್ಟ್ - ರಂಗಸಜ್ಜಿಕೆಯನ್ನು ಪರಿಚಯಿಸಿದರು. ಕಾರಂತರು ನಟರೇ ರಂಗವನ್ನು ಸಿಂಗರಿಸಬೇಕು ಎಂದು ನಂಬಿದವರು. ನೀವು ರಂಗದ ಮೇಲೆ ಪಂಜಾಬಿನ ಅಲೆಮಾರಿ ಗಾಯಕರು ನಕ್ಕಾಲ್ ಗಳ ವ್ಯಾನನ್ನೇ ತಂದಿದ್ದೀರಿ...**

ನೀಲಂ: ಹೌದು. ನಾನು ಕಾರಂತರಿಂದ ಬಹಳ ಪ್ರಭಾವಿತಳಾಗಿದ್ದೇನೆ. ಅವರ ಜೊತೆ ಎರಡು ದಶಕಗಳ ಒಡನಾಟ ಇತ್ತು. ಆದರೆ ನಾನು ಅವರ ಶೈಲಿಯನ್ನು ನಕಲು ಮಾಡಿಲ್ಲ. ಪಠ್ಯವನ್ನು ನಾನು ಅರ್ಥೈಸುವ ರೀತಿಯೇ ಬೇರೆ. ಒಂದು ಮಾತು ನೀವು ಮರೆಯಬಾರದು. ಕಾರಂತರೂ ಕೂಡಾ ನಾಟಕಗಳಲ್ಲಿ ಭವ್ಯವಾದ ಸೆಟ್ಟನ್ನು ಹಾಕಿದ್ದಾರೆ. ‘ಮಾಟಿಯಾಪುರ’ ದಲ್ಲಿ ರಂಗದ ಮೇಲೆ ಒಂದು ದಟ್ಟ ಕಾಡನ್ನೇ ಸೃಷ್ಟಿ ಮಾಡಿದ್ದರು. ‘ಮೃಚ್ಛಕಟಿಕ’ದಲ್ಲಿ ರಂಗದ ಮೇಲೆ ಎಷ್ಟೊಂದು ಗಾಡಿಗಳನ್ನು ತಂದರು. ‘ಹಯವದನ’ದಲ್ಲೂ ಅವರು ಕಮಾನುಗಳು, ಜಗಲಿಗಳು ಇತ್ಯಾದಿಗಳನ್ನು ಬಳಸಿದರು. ಯಾಕೆ, ಮನೆಯಲ್ಲೇ ನಾವು ಮೇಜು ಕುರ್ಚಿ ಇತ್ಯಾದಿಗಳನ್ನು ಬಳಸುವುದಿಲ್ಲವೇ? ಒಟ್ಟಿನಲ್ಲಿ ರಂಗದ ಅನುಭೂತಿ ಮುಖ್ಯ. ಭೂಮಿಜಾ ಟ್ರಸ್ಟ್ ಮತ್ತು ಆದ್ಯಂ- ಆದಿತ್ಯ ಬಿರ್ಲಾ ಗ್ರೂಪ್ ಸೇರಿ ಈ ನಾಟಕದ ನಿರ್ಮಾಣದ ಹೊಣೆ ಹೊತ್ತಿವೆ. ಇದಕ್ಕಾಗಿ ಭಾರತದ ಉದ್ದಗಲದಿಂದ ಅದ್ಭುತ ನಟರನ್ನು ಮತ್ತು ರಂಗಕರ್ಮಿಗಳನ್ನು ಒಂದುಗೂಡಿಸಲಾಗಿದೆ. ಮೊದಲಬಾರಿಗೆ ಹಣದ ಬಗ್ಗೆ ಚಿಂತೆ ಮಾಡದೇ ರಂಗ ಪ್ರಸ್ತುತಿಯನ್ನು ಸಾಧಿಸಿದ ತೃಪ್ತಿ ನನಗಿದೆ.

- **ಅದೇ ರೀತಿ ಬಿ.ವಿ.ಕಾರಂತರ ಸಂಗೀತದಲ್ಲೂ ನೀವು ಬದಲಾವಣೆ ಮಾಡಿಕೊಂಡಿದ್ದೀರಿ...**

ನೀಲಂ: ನಾನು ಕಾರಂತರ ಸಂಗೀತದ ಸತ್ವವನ್ನು ಕದಡಲು ಹೋಗಿಲ್ಲ. ಕಾರಂತರ ಜೊತೆಗಿನ ಇಪ್ಪತ್ತೆರಡು ವರ್ಷಗಳ ಒಡನಾಟದಲ್ಲಿ ನನಗೆ ಅವರ ಸೃಜನಶೀಲ ಶಕ್ತಿಯ ಪರಿಚಯ ಚೆನ್ನಾಗಿದೆ. ಅವರೇ ನನಗೆ ಸ್ಫೂರ್ತಿ. ನಾನು ಮಾಡಿರುವುದಿಷ್ಟೇ - ಮೂಲ ಸಂಗೀತವನ್ನು ಕೆಡಿಸದೇ ಸ್ಯಾಕ್ಸೋಫೋನ್, ಜನಪದ ವಾದ್ಯಗಳು ಇತ್ಯಾದಿ ಹೊಸ ಶಬ್ದಗಳನ್ನು ಬಳಸಿದ್ದೇನೆ. ಅದು ಕಾರಂತರ ಸಂಗೀತಕ್ಕೆ ಇನ್ನಷ್ಟು ಮೆರುಗು ನೀಡಿದೆ.

ಬೆಂಗಳೂರಿನ ಜಲಯೋಧರು

ಮೆಟ್ರೊ ನಿಲ್ದಾಣದ ಗೋಡೆಯ ಮೇಲೆ ಬಾವಿ ತೋಡುವ ಜಲಯೋಧರ ಚಿತ್ರ

10ನೇ ಪುಟದಿಂದ...

ಬೆಂಗಳೂರಿನಲ್ಲಿ ಇಂಗುಬಾವಿ ಮಾಡಿಸುವವರ ಸಂಖ್ಯೆ ಹೆಚ್ಚು. ನಗರದ ಹೊರಗೆ ಸಾಮಾನ್ಯ ಬಾವಿಯನ್ನು ಜನ ಬಯಸುತ್ತಾರೆ. ಬಾವಿ ತೆಗೆದು ಅದಕ್ಕೆ ಬೇಕಾದ ರಿಂಗ್ ಹಾಗೂ ಇನ್ನಿತರ ಕೆಲಸಗಳನ್ನು ಇವರೇ ಮಾಡಿಕೊಡುತ್ತಾರೆ. ಕೆಲಸ ಇಲ್ಲದ ಸಮಯದಲ್ಲಿ ಪ್ಲಂಬ್ಲಿಂಗ್, ಕೂಲಿ, ಗಾರೆ ಕೆಲಸ ಮಾಡುತ್ತಾರೆ.

ಕಬ್ಬನ್ ಪಾರ್ಕ್, ಲಾಲ್‌ಬಾಗ್, ಜೆ.ಪಿ. ಪಾರ್ಕ್, ಮೆಟ್ರೊ ಕಂಬಗಳ ನಡುವೆ, ರಸ್ತೆ ಹಾಗೂ ರಾಜಕಾಲುವೆ ಬಳಿ-ಹೀಗೆ ಹಲವು ಕಡೆ ಅಪಾರ ಸಂಖ್ಯೆಯಲ್ಲಿ ಇಂಗುಬಾವಿಗಳನ್ನು ತೋಡಿದ್ದಾರೆ. ಬೆಂಗಳೂರಿನಲ್ಲಿ ಹತ್ತು ಲಕ್ಷ ಇಂಗುಬಾವಿಗಳನ್ನು ತೋಡಲು ಯೋಜನೆ ಹಾಕಿಕೊಂಡಿರುವ ಬಯೋಮ್ ಟ್ರಸ್ಟ್, ಇವರೊಂದಿಗೆ ಮಾತುಕತೆ ನಡೆಸಿ ಜಲ ಸಂರಕ್ಷಣೆ, ಮರುಪೂರಣ, ಮಳೆ ನೀರು ಸಂಗ್ರಹ, ಬತ್ತಿದ ಬೋರ್‌ವೆಲ್ ಪುನಶ್ಚೇತನ ಮಾಡುವುದರ ಬಗ್ಗೆ ತರಬೇತಿ ನೀಡಿದೆ. ಕೆಲಸಕ್ಕೆ ಹೋದಲ್ಲಿ ಇವರೇ ಜನರಿಗೆ ಈ ಬಗ್ಗೆ ಅರಿವನ್ನೂ ಮೂಡಿಸುತ್ತಾರೆ.

ಬೋವಿಪಾಳ್ಯ, ವಡ್ಡರಪಾಳ್ಯ ಹೀಗೆ ಬೆಂಗಳೂರಿನ ಸುತ್ತಮುತ್ತ ಬೋವಿ ಸಮುದಾಯಕ್ಕೆ ಸೇರಿದ ಸುಮಾರು ಹದಿನೈದು ಗ್ರಾಮಗಳಿವೆ. ಎಲ್ಲರದ್ದೂ ಮೂಲ ಕಸುಬು ಬಾವಿ ತೋಡುವುದೇ. ಮಹಿಳೆಯರೂ ಕೆಲಸದಲ್ಲಿ ಪುರುಷರ ಬೆನ್ನಿಗೆ ನಿಂತಿದ್ದಾರೆ. ‘ನಾನು ಎಂ.ಕಾಂ ಓದುತ್ತಿದ್ದೇನೆ. ರಜಾ ದಿನಗಳಲ್ಲಿ ಬಾವಿ ತೋಡುವ ಕೆಲಸಕ್ಕೆ ಬರುತ್ತೇನೆ. ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ನಮ್ಮ ಸಮಾಜ ಹಿಂದಿದೆ. ಸರ್ಕಾರ ನಮ್ಮ ಸಮುದಾಯದ ಅಭಿವೃದ್ಧಿ ಜೊತೆಗೆ ಮುಖ್ಯವಾಹಿನಿಗೆ ಕರೆತರಲು ಕಾಳಜಿ ವಹಿಸಬೇಕು’ ಎಂದು ತೋಡುತ್ತಿದ್ದ ಬಾವಿಯೊಳಗಿಂದಲೇ ಪ್ರದೀಪ್ ಕೂಗಿ ಹೇಳಿದರು.

ಒಂದು ಇಂಗುಬಾವಿ

ಬೆಂಗಳೂರಿನ ನೀರಿನ ಸಮಸ್ಯೆಗೆ ಮುಖ್ಯ ಪರಿಹಾರ ಇಂಗುಬಾವಿ ಎನ್ನುವುದು ವಿಶ್ವನಾಥ್ ಅವರ ಅಂಬೋಣ. ‘ಮೂರು ಅಡಿ ಸುತ್ತಳತೆಯ ಇಪ್ಪತ್ತು ಅಡಿಯ ಒಂದು ಬಾವಿಯಲ್ಲಿ ವರ್ಷಕ್ಕೆ ಸುಮಾರು ಒಂದು ಲಕ್ಷ ಲೀಟರ್ ನೀರನ್ನು ಭೂಮಿಯ ಒಳಗೆ ಇಳಿಸಬಹುದು. ಮಳೆನೀರನ್ನು ಸೋಸಿ ಇಂಗುಬಾವಿಗೆ ಇಳಿಸಿದರೆ ಭೂಮಿಯ ದಾಹ ತಣಿಸಬಹುದು. ಒಂದು ಕೊಳವೆಬಾವಿಗೆ ₹ 2-4 ಲಕ್ಷ ಖರ್ಚಾಗುತ್ತದೆ. ಆದರೆ ಇಂಗುಬಾವಿಗೆ ₹ 30-40 ಸಾವಿರ ಮಾತ್ರ ಖರ್ಚಾಗುತ್ತದೆ. ಬೆಂಗಳೂರಿನಲ್ಲಿ ಪ್ರತಿದಿನ ಸರಾಸರಿ ಮೂರು ಸಾವಿರ ದಶಲಕ್ಷ ಲೀಟರ್ ಮಳೆಯಾಗುತ್ತದೆ. 10 ಲಕ್ಷ ಇಂಗುಬಾವಿಗಳನ್ನು ಮಾಡಿದರೆ ಇದರ ಅರ್ಧದಷ್ಟು ನೀರನ್ನು ಭೂಮಿಯೊಳಗೆ ಕಳುಹಿಸಬಹುದು. ಕಾವೇರಿಯಿಂದ ಪ್ರತಿದಿನ 1,450 ದಶಲಕ್ಷ ನೀರು ಬೆಂಗಳೂರಿಗೆ ಸರಬರಾಜಾಗುತ್ತದೆ. ಅಂದರೆ, 10 ಲಕ್ಷ ಇಂಗುಬಾವಿಗಳಿಂದ ಮತ್ತೊಂದು ಕಾವೇರಿಯನ್ನೇ ಸೃಷ್ಟಿಸಬಹುದು. ಇದೇ ಕೆಲಸವನ್ನು ಬೋವಿ ಸಮುದಾಯ ಮಾಡುತ್ತಿದೆ. ಇಂಗು ಬಾವಿಗಳು ಇದ್ದಲ್ಲಿ ಈ ಬಾರಿ ನೀರಿನ ಸಮಸ್ಯೆಯೇ ಬಂದಿಲ್ಲ’ ಎಂದು ಅವರು ಹೇಳಿದರು. ಈ ಜಲಯೋಧರ ಜೊತೆಗಿನ ಹಲವು ಗಂಟೆಗಳ ಮಾತುಕತೆ ನಂತರ ಮರಳುವಾಗ ಮೆಟ್ರೊ ಗೋಡೆ ಮೇಲಿನ ಸಾಲುಗಳು ಮತ್ತೆ ಮತ್ತೆ ನೆನಪಾಗುತ್ತಲೇ ಇವೆ.

ಒಣಭೂಮಿಯೊಳಗೆ ಹರಿವ ಬಿಕ್ಕುಗಳು..
ಅಗೆದಷ್ಟೂ ಆಳಕ್ಕೆ ಸರಿವ ತರಂಗಗಳು..
ಕಲ್ಲಿನ ಪದರಗಳ ನಡು ನಡುವೆ
ನಡೆಯುತ್ತಿದೆ ಜಲಜಾತ್ರೆ, ಸದ್ದೇ ಆಗದೇ..


ಬೆಂಗಳೂರಿನ ವಸಂತನಗರದಲ್ಲಿ ಬಾವಿ ಸ್ವಚ್ಛ ಮಾಡುತ್ತಿರುವ ತಂಡ

ಒಡಿಶಾ ಮೂಲದವರು...

ಬೋವಿ ಸಮುದಾಯದವರು ಒಡಿಶಾ ಮೂಲದವರು ಎನ್ನುವುದು ಇದೇ ಸಮುದಾಯದ ದಾವಣಗೆರೆಯ ರವಿಕುಮಾರ್ ಎಸ್. ನೀಡಿದ ಮಾಹಿತಿ.

ಕೆಲಸ ಅರಸಿಕೊಂಡು ದೇಶದ ವಿವಿಧ ಭಾಗಗಳಿಗೆ ವಲಸೆ ಹೋಗಿದ್ದಾರೆ. ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರಪ್ರದೇಶ, ದೆಹಲಿ, ಹರಿಯಾಣ, ರಾಜಸ್ಥಾನ, ಹಿಮಾಚಲ, ಉತ್ತರ ಪ್ರದೇಶ ಸೇರಿದ ದೇಶದ ವಿವಿಧ ಭಾಗಗಳಲ್ಲಿ ಚದುರಿದ್ದಾರೆ. ಹಿಂದೆ ಕೋಟೆ, ಅರಮನೆ, ಕೆರೆ ನಿರ್ಮಾಣಕ್ಕೆ ಇವರನ್ನು ಬಳಸಲಾಗುತ್ತಿತ್ತು. ದೇಶದ ಪ್ರಮುಖ ಜಲಾಶಯಗಳು, ಸ್ಮಾರಕಗಳ ನಿರ್ಮಾಣದ ಹಿಂದೆ ಈ ಸಮುದಾಯದವರ ಶ್ರಮ ಇದೆ. ಚಾಮರಾಜ ಒಡೆಯರ್ ಅವರ ಕಾಲದಲ್ಲಿ ಶಿಕ್ಷಣದಲ್ಲಿ ಇವರಿಗೆ ಮೀಸಲಾತಿ ನೀಡಲಾಗಿತ್ತಂತೆ. ಕಲ್ಲು ವಡ್ಡರು, ಮಣ್ಣು ವಡ್ಡರು, ಲಕ್ಕ ವಡ್ಡರು, ಉಪ್ಪು ವಡ್ಡರು ಎಂಬ ವೃತ್ತಿ ಆಧಾರಿತ ಗುಂಪುಗಳು ಇವೆ ಎಂದು ಅವರು ಹೇಳಿದರು.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಪಳಿವೀಡು

ಪಳಿವೀಡು (ನಾ). ನಿಂದೆಯನೆಲೆ; ದೂಷಣೆಯ ಬೀಡು.
(ಪಳಿ + ಬೀಡು)

ಸೀತೆಯನ್ನು ಹುಡುಕಲು ಹೋಗಿದ್ದ ಮೈಂದ ಮಹಾವಾನರನು ಕವಿ. ಅಂಗದನು ಕರೆದಿದ್ದ ಸಭೆಗೆ ಅವನು ತನ್ನ ಪಡೆಯ ಅನುಭವವನ್ನು ವಿಶದವಾಗಿ ವಿವರಿಸುವನು. ‘ಶುದ್ಧಿ ಮೇಣ್ ಶ್ರದ್ಧೆಯಿರೆ ತುದಿಗೆ ತಪ್ಪದು ಸಿದ್ಧಿ ಸಾಧನೆಗೆ’ ಎನ್ನುವ ತನ್ನ ಅನುಭವಾಮೃತವನ್ನು ತಿಳಿಸುವನು. ಅವರು ಮರಳುಗಾಡಿನಲ್ಲಿ ತೊಳಲಾಡಿದ್ದು, ಮೃಕಂಡು ಆಶ್ರಮದ ಆಶ್ರಯ, ಸ್ವಯಂಪ್ರಭೆಯ ದಿವ್ಯಾಶ್ರಮದ ಅನುಭವ ಹೇಳುವನು. ಆ ಧರ್ಮಚಾರಿಣಿಯಿಂದ ತಾವು ಮಹೇಂದ್ರಾಚಲಕ್ಕೆ ಬಂದಿರುವುದಾಗಿ ಸ್ಪಷ್ಟಪಡಿಸುವನು. ನಿರಾಶೆ ತೊಲಗಲಿ, ಹೇಡಿತನದ ಭಾವನಾಶವಾಗಲಿ, ನಿಂದನೆಯ ನೆಲೆ ಇಲ್ಲವಾಗಲಿ, ಉತ್ಸಾಹಕ್ಕೆ ಕೋಡು ಮೂಡಲಿ ಎಂದು ಆಶಾಭಾವನೆ ವ್ಯಕ್ತಪಡಿಸುವನು.

ಕುವೆಂಪು ಅವರು ‘ನಿಂದನೆಯನೆಲೆ’ ಗೆ ‘ಪಳಿವೀಡು’ ಎಂಬ ಪದ ಬಳಸಿ ಅದರ ಭಾವವನ್ನು ಹಳಗನ್ನಡದಲ್ಲಿ ಅಭಿವ್ಯಕ್ತಿಸಿದ್ದಾರೆ.

ತೊಲಗುಗೆ ನಿರಾಶೆ. ಪೇಡಿತನಮಂ
ಕೊಲ್ಗೆ ಬಗೆ, ಸಾಲ್ಗುಮಾ ಪಳಿವೀಡು; ಸೋಲ್ಮನಂ.
ಮೂಡುಗುರ್ಕಿಗೆ ಕೋಡು. ಬರ್ಕೆಮ ವಿಜಯ ಬುದ್ಧಿ.

ಬರ್ದಿಲವಟ್ಟೆ

ಬರ್ದಿಲವಟ್ಟೆ (ನಾ). ಸ್ವರ್ಗದ ದಾರಿ; ದೇವಲೋಕದ ಮಾರ್ಗ, ಆಕಾಶ
(ಬರ್ದಿಲ + ಬಟ್ಟೆ)

ಹನುಮಂತನು ಆಕಾಶ ಮಾರ್ಗದಲ್ಲಿ ಸಾಗರೋಲ್ಲಂಘನವನ್ನು ಮಾಡುತ್ತಿರುತ್ತಾನೆ. ಅವನು ದೂರದ ಆಕಾಶದಲ್ಲಿ ಚುಕ್ಕಿಯಂತಿರುತ್ತಾನೆ. ರಾವಣನ ಆಜ್ಞೆಯ ಕಡಲ ಕಾವಲುಗಾರ್ತಿ ಛಾಯಾಗ್ರಹಿ ರಾಕ್ಷಸಿ ಸಿಂಹಿಕೆಯು ಅವನನ್ನು ತಿಳಿಯುತ್ತಾಳೆ.

ದೇವತೆಗಳಲೋಕ ಬರ್ದಿಲ. ಆ ಬಟ್ಟೆ-ಹಾದಿಯಲ್ಲಿ ಆಕಾಶದಲ್ಲಿ ಸಾಗುತ್ತಿದ್ದವನು ಆಂಜನೇಯ. ಆ ಮಾರ್ಗವನ್ನು ಚಿತ್ರಿಸುವಾಗ ಕವಿಯು ‘ಬರ್ದಿಲವಟ್ಟೆ’ ಎಂಬ ಹೊಸ ಪದವನ್ನು ಆ ದಾರಿಗೆ ಪಡಿಮೂಡಿಸಿದ್ದಾರೆ

ಬರ್ದಿಲವಟ್ಟೆಯೊಳ್ಕೆ ತರುತಲಿರ್ದ ಹನುಮನಂ,
ದೂರದಾಕಾಶದೊಳ್ ಚುಕ್ಕಿಯೋಲಿರ್ದನಂ,
ತಿಳಿದಳಾ ಸಿಂಹಿಕೆ, ದಶಗ್ರೀವನಾಜ್ಞೆಯಿಂ
ಕಡಲ ಕಾವಲುಗಾರ್ತಿ, ಕಾಮರೂಪಿಣಿ, ಕಾಳಿ
ಛಾಯಾಗ್ರಾಹಿ ದನುಜೆ.

ಕಲಾವಿದರ ತಾಯಿ ‘ಯಕ್ಷಧ್ರುವ’

10ನೇ ಪುಟದಿಂದ...

‘ಕಲಾವಿದರಿಗೆ ರಂಗ ಮತ್ತು ರಂಗದಾಚೆಗಿನ ಬದುಕು ಎರಡೂ ಸವಾಲೇ. ನವೆಂಬರ್‌ನಿಂದ ಆರಂಭವಾಗಿ ಮೇನಲ್ಲಿ ತಿರುಗಾಟ ಮುಕ್ತಾಯಗೊಂಡ ನಂತರ ಮುಂಬೈಗೆ ತೆರಳಿ ಹೋಟೆಲ್‌ನಲ್ಲಿ ಗ್ಲಾಸ್ ತೊಳೆಯುವ, ಅಡುಗೆ ಮಾಡುವ ಕಲಾವಿದರನ್ನು ಕಂಡಿದ್ದೇನೆ. ಒಂದೊಮ್ಮೆ ಅವರಿಗೆ ಅನಾರೋಗ್ಯವಾದರೆ, ಆರ್ಥಿಕ ಚೈತನ್ಯ ಇಲ್ಲದೆ ಅಸಹಾಯಕರಾಗುತ್ತಾರೆ. ರಂಗದಲ್ಲಿ ವೇಷ ನೋಡಿ, ಅಭಿಮಾನಪಡುವವರು ಹಲವರು. ಆದರೆ, ಕಷ್ಟದಲ್ಲಿದ್ದಾಗ ನೆರವಿಗೆ ಬರುವವರು ವಿರಳ. ಇದನ್ನು ಕಣ್ಣಾರೆ ಕಂಡ ಮೇಲೆ ಕಲಾವಿದರ ಬೆನ್ನಿಗೆ ನಿಲ್ಲಬೇಕೆಂಬ ದೃಢ ಮನಸ್ಸು ಮಾಡಿದಾಗ, ಅಭಿಮಾನಿಗಳು ನನ್ನ ಕೈಹಿಡಿದರು’ ಎನ್ನುತ್ತಾರೆ ಸತೀಶ್ ಶೆಟ್ಟಿ ಪಟ್ಲ.

ಪಟ್ಲ ಫೌಂಡೇಷನ್‌ನಿಂದ ಕಲಾವಿದರಿಗೆ ವಿಮೆ ನೋಂದಣಿ ಅಭಿಯಾನ.

ಯಕ್ಷ ಕಲಾವಿದರ ಜೊತೆ ರಂಗಭೂಮಿ, ದೈವ ನರ್ತನ ಕಲಾವಿದರಿಗೂ ಸೇವಾಯಾನ ವಿಸ್ತರಿಸಿರುವ ಫೌಂಡೇಷನ್, ಈ ಬಾರಿ ಕಂಬಳ ಕಲಾವಿದರನ್ನೂ ಯೋಜನೆಯೊಳಗೆ ಸೇರಿಸಿಕೊಂಡಿದೆ. ‘ಪಟ್ಲ ಫೌಂಡೇಷನ್ ಎಂಬ ಆಲದಮರದ ಕೊಂಬೆಗಳು ವಿಸ್ತಾರಗೊಂಡಿವೆ. 39ಕ್ಕೂ ಹೆಚ್ಚು ಘಟಕಗಳು ಕಲಾವಿದರ ಪಾಲಿನ ಕಲ್ಪತರುಗಳಾಗಿವೆ. ಕಲಾವಿದರಿಗಾಗಿ ಮಿಡಿಯುವ ಪಟ್ಲರು, ಅವರ ಬಿನ್ನಹಕ್ಕೆ ತಲೆಬಾಗುವ ಅಭಿಮಾನಿಗಳು ಇದ್ದಾರೆ’ ಎನ್ನುತ್ತಾರೆ ಹವ್ಯಾಸಿ ಕಲಾವಿದ ಶಿವರಾಮ್ ಪಣಂಬೂರು.

‘ಕಲೆ ನನ್ನ ಪೊರೆವ ತಾಯಿ. ಕಲಾವಿದನಾಗಿ, ಸಹೃದಯ ಜೀವಿಯಾಗಿ ಕಲಾವಿದರ ನೋವು, ನೆರವಾದ ದಾನಿಗಳು ಎರಡೂ ಕಡೆಗಳನ್ನು ಸರಿದೂಗಿಸಬೇಕಾಗಿದೆ. ಈ ನಡುವೆ ಮೇಳದ ಯಜಮಾನನಾಗಿ, ಪ್ರಧಾನ ಭಾಗವತನಾಗಿ ಕಲಾಭಿಮಾನಿಗಳಿಗೆ ನ್ಯಾಯ ನೀಡುವುದು ಕರ್ತವ್ಯ. ನನಗೆ ಕಲಾವಿದರ ಋಣ ಇಲ್ಲ, ಆದರೆ, ದಾನಿಗಳ ಋಣ ಇದೆ. ನಮ್ಮ ಕಲಾವಿದರಿಗಾಗಿ ನಾನು ದಾನಿಗಳಿಗೆ ಋಣಿಯಾಗಿರಲೇ ಬೇಕು. ₹10 ಸಾವಿರದಿಂದ ಕೋಟಿವರೆಗೂ ಟ್ರಸ್ಟ್‌ಗೆ ದಾನ ನೀಡಿದವರಿದ್ದಾರೆ. ಅಸಂಖ್ಯ ದಾನಿಗಳ ಪ್ರೀತಿ ಉಳಿಸಿಕೊಳ್ಳಬೇಕಾಗಿದೆ’ ಎನ್ನುತ್ತಾರೆ ಸತೀಶ್ ಶೆಟ್ಟಿ.

ಸಮಾಜದಲ್ಲಿ ಖ್ಯಾತಿ ಗಳಿಸಿದವರು ನೂರಾರು ಸಂಖ್ಯೆಯಲ್ಲಿದ್ದಾರೆ. ಅವರೆಲ್ಲ ‘ಪಟ್ಲ’ ಅವರ ರೀತಿ ಅಸಹಾಯಕರ ಬಗೆಗೆ ಮಮಕಾರ ತೋರುವುದು ತೀರಾ ವಿರಳ. ಹಾಗೆಯೇ ದಾನಿಗಳು ಅಭಿಮಾನದಿಂದ ನೀಡಿದ ಪ್ರತಿ ಪೈಸೆಯನ್ನು ಪ್ರಾಮಾಣಿಕವಾಗಿ ವಿನಿಯೋಗ ಮಾಡಿರುವುದೂ ವಿಶೇಷ.

ಕಥೆ
ಪ್ರೇಮಕುಮಾರ್ ಹರಿಯಬ್ಬೆ ಅವರ
ನನ್ನದು ಅಲ್ಲ, ನಿನ್ನದು ಅಲ್ಲ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸ್ಮಿತಾ ಅಮೃತರಾಜ್. ಸಂಪಾಜೆ ಅವರ
ಮಳೆ ಚಿತ್ರಗಳು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಮೊದಲ ಓದು

ಹೊಸ್ತೋಟ ಭಾಗವತರು ಈಗ ‘ಯಕ್ಷಹಂಸ’

ನಿವೃತ್ತ ಪ್ರಾಧ್ಯಾಪಕ ವಿಜಯ ನಳಿನೀ ರಮೇಶ ಅವರು ಹೊಸ್ತೋಟ ಮಂಜುನಾಥ ಭಾಗವತರ ಕುರಿತಾಗಿ ‘ಯಕ್ಷಹಂಸ’ ಎಂಬ ಸಂಸ್ಮರಣ ಗ್ರಂಥವನ್ನು ಹೊರತಂದಿದ್ದಾರೆ. ಇವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡ ಈ ಕೃತಿಯಲ್ಲಿ ಹೊಸ್ತೋಟದವರ ಕುರಿತಾಗಿ 70ಕ್ಕೂ ಹೆಚ್ಚು ಲೇಖನಗಳಿವೆ. ‘ಸಿದ್ಧಾಂತ ನಿರ್ವಚನ’, ‘ನವ ನಿರ್ಮಾಣ’, ‘ವಿಸ್ತರಣ’ ಮತ್ತು ‘ಸಂಸ್ಮರಣ’ ಹೆಸರಲ್ಲಿ ನಾಲ್ಕು ಭಾಗಗಳನ್ನೊಳಗೊಂಡ ಈ ಕೃತಿ ಸಂಗ್ರಹ ಯೋಗ್ಯವಾಗಿದೆ. ಹೊಸ್ತೋಟ ಭಾಗವತರ ಬದುಕಿನ ಸಮಗ್ರ ಚಿತ್ರವನ್ನು ಪರಿಚಯಿಸುವ ಕೃತಿ ಯಕ್ಷಪ್ರಪಂಚದ ಒಂದು ಮೈಲುಗಲ್ಲಾಗಿದೆ.

ಯಕ್ಷಗಾನ ಜಗತ್ತಿನಲ್ಲಿ ಕೆರೆಮನೆ ಶಿವರಾಮ ಹೆಗಡೆಯೆಂದರೆ ಜನ ಇಂದಿಗೂ ನತಮಸ್ತಕರಾಗುತ್ತಾರೆ. ಅಂತಹ ಘನ ವ್ಯಕ್ತಿತ್ವ ಅವರದು. ಕೆರೆಮನೆ ಕಲಾವಿದರಲ್ಲಿ ಅವರು ಮೂರು ತಲೆಮಾರಿನ ಹಿಂದಿನ ಹಿರಿಯ ಕಲಾವಿದರು. ಎಷ್ಟೋ ಜನಕ್ಕೆ ಅವರ ಬಗ್ಗೆ ಗೊತ್ತಿಲ್ಲ. ಸುದೈವಕ್ಕೆ ಹೊಸ್ತೋಟದವರು ಶಿವರಾಮ ಹೆಗಡೆಯವರ ಆತ್ಮೀಯ ಒಡನಾಡಿಗಳಗಿದ್ದರು. ಹೆಚ್ಚೂ ಕಡಿಮೆ ಅವರ ಶಿಷ್ಯರಂತಿದ್ದರು. ಅವರಿಂದ ತಾನು ಹೇಗೆ ಸ್ಫೂರ್ತಿ ಪಡೆದೆ ಎಂಬುದನ್ನು ವಿವರಿಸುತ್ತಾ ಅಲ್ಲಲ್ಲಿ ಶಿವರಾಮ ಹೆಗಡೆಯವರ ವ್ಯಕ್ತಿಚಿತ್ರವನ್ನೂ ಮಾಡಿಕೊಟ್ಟಿದ್ದಾರೆ.

ಅದು ಅವರೇ ರಚಿಸಿದ ‘ಯಕ್ಷಲೋಕದ ಧ್ರುವತಾರೆ’ ಎಂಬ ಕಿರುಹೊತ್ತಿಗೆಯಲ್ಲಿ ದಾಖಲಾಗಿದೆ. ಶಿವರಾಮ ಹೆಗಡೆಯವರು ದೊಡ್ಡ ಕಲಾವಿದರಾಗಿದ್ದರು. ‘1950ರಲ್ಲಿ ಶುಲ್ಕ ಪಡೆದು ಪ್ರವೇಶ ನೀಡಿ ಪ್ರದರ್ಶನ ನೀಡುವ ನಾಟಕ ಕಂಪನಿಗಳ ಪ್ರಭಾವದಿಂದ ಬಯಲಾಟವನ್ನು ಟಿಕೆಟಿನ ಸರಕಾಗಿಸಿ ಸಾಹಸ ಕಾಣಿಸಿದ ಮಹತ್ಸಾಧನೆ ಶಿವರಾಮ ಹೆಗಡೆಯವರದ್ದು’ ಎಂದು ಹೊಸ್ತೋಟದವರು ಅವರ ಸಾಹಸೋದ್ಯಮವನ್ನು ಬಣ್ಣಿಸುತ್ತಾರೆ.

ಹೊಸ್ತೋಟದವರ ಶಿಸ್ತು, ಬದ್ಧತೆ, ನಿರ್ದೇಶನದ ಮಹತ್ವ, ನಿದೇಶನದಲ್ಲಿ ಮೆರೆದ ಅವರ ಸೃಷ್ಟಿಶೀಲತೆ, ಕವಿತ್ವ, ನಿಸ್ಪೃಹತೆ, ಅವರು ರಚಿಸಿದ ಕೃತಿಗಳು, ಅವರ ಹಾಸ್ಯಮನೋಭಾವ, ವಿಕ್ಷಿಪ್ತತೆ, ಸಿಟ್ಟು, ಸೆಡವು, ಮೃದುತ್ವ, ಅಮಾಯಕತನ-ಹೀಗೆ ಹಲವು ಹದಿನೆಂಟು ವಿಚಾರಗಳು ಹಾಸುಹೊಕ್ಕಾಗಿ ನಮ್ಮನ್ನು ಬೆರಗುಗೊಳಿಸುತ್ತದೆ ಈ ಕೃತಿ.

ಈ ಎಲ್ಲ ಸಂಗತಿಗಳಿಂದ ಈ ಕೃತಿಯ ಮೈದುಂಬಿಸಿದವರು 70ಕ್ಕೂ ಹೆಚ್ಚು ಲೇಖಕರು. ಕಲಾವಿದರು, ಸಾಹಿತಿಗಳು, ಭಾಗವತರ ಒಡನಾಡಿಗಳು ಮತ್ತು ಅವರ ಬಗ್ಗೆ ಗೊತ್ತಿದ್ದವರು-ಅವರೆಲ್ಲರೂ ಲೇಖನ ಬರೆದು ಹೊಸ್ತೋಟದವರ ಯಶಸ್ಸು, ಕೀರ್ತಿಯನ್ನು ಅಜರಾಮರವಾಗಿಸಿದ್ದಾರೆ. ಅವರನ್ನೆಲ್ಲಾ ಕಲೆಹಾಕಿ, ಅವರಿಂದ ಲೇಖನ ಬರೆಯಿಸಿ ಬೃಹತ್ ಸಂಪುಟವೊಂದನ್ನು ಹೊರತಂದ ವಿಜಯನಳಿನೀ ರಮೇಶ ಅವರು ಅಭಿನಂದನಾರ್ಹರು. ಇಲ್ಲಿನ ಲೇಖಕರು ಹೊಸ್ತೋಟದವರ ಭೂಮ ವ್ಯಕ್ತಿತ್ವವನ್ನು ಸಾದ್ಯಂತವಾಗಿ, ಚಿತ್ತಾಕರ್ಷಕವಾಗಿ, ಹೃದ್ಯವಾಗಿ ಬರೆದು ಓದುಗನ ಕ್ಷಿತಿಜವನ್ನು ವಿಸ್ತರಿಸಿದ್ದಾರೆ. ‘ತನ್ನ ಜನ್ಮವೇ ಯಕ್ಷಗಾನಕ್ಕಾಗಿ ಇದೆ ಎಂದು ಬಲವಾಗಿ ನಂಬಿಕೊಂಡ ಹಾಗೂ ಆ ನಂಬಿಕೆಗೆ ಕೊಂಚವೂ ವ್ಯತಿರಿಕ್ತವಾಗದಂತೆ ನಡೆದುಕೊಂಡ ಅಪೂರ್ವ ಚೇತನ ನಮ್ಮ ನಡುವೆ ಬದುಕಿ ಬಾಳಿತು. ಹೀಗೂ ಬದುಕಬಹುದು ಎಂಬ ಸಾಧ್ಯತೆಯನ್ನು ಕಾಣಿಸಿತು’ (ಪುಟ-467) ಎಂದು ಅಚ್ಚರಿಯ ಉದ್ಗಾರವೆತ್ತಿದ ಪ್ರಜ್ಞಾ ಮತ್ತಿಹಳ್ಳಿ.

‘ನೋಡಿ ಹೇಗಿದೆ! ಹೆತ್ತವರು ಜತೆಗಿಲ್ಲ. ಮಾಡಿಟ್ಟ ಆಸ್ತಿಯಿಲ್ಲ. ವಾಸಕ್ಕೆ ಮನೆಯಿಲ್ಲ. ಖರ್ಚಿಗೆ ಹಣವಿಲ್ಲ. ಅಷ್ಟಕ್ಕೂ ಇವೆಲ್ಲವೂ ಬೇಕೇ ಇರಲಿಲ್ಲ. ಹೇಗೋ ಆ ಭಗವಂತ ಕಾಲಕ್ಕೆ ಸರಿಯಾಗಿ ಏನನ್ನಾದರೂ ಯಾರನ್ನಾದರೂ ಒದಗಿಸಿಬಿಡುತ್ತಿದ್ದ. ಮನುಷ್ಯನಿಗೆ ಸಂಬಂಧ ಪ್ರೀತಿಗಾಗಿಯೂ ಬೇಕು; ಜಗಳಕ್ಕಾಗಿಯೂ ಬೇಕು. ಪ್ರೀತಿ ಇಲ್ಲದಾಗ ಕೋಪ ತೋರಿಸುವುದಾದರೂ ಎಲ್ಲಿ? ಪ್ರೀತಿ ಮತ್ತು ಕೋಪ ಬೆಲೆ ಕಟ್ಟಲಾಗದಂತಹ ಭಾವನೆಗಳು. ಇದನ್ನೇ ಜಯಿಸಿದವರು ಪ್ರಪಂಚವನ್ನೇ ಗೆಲ್ಲಬಲ್ಲರು’ ಎಂದು ಹೊಸ್ತೋಟದವರ ಬಗೆಗಿನ ಯಥಾರ್ಥವನ್ನೇ ಬಿಚ್ಚಿಟ್ಟ ಮತ್ತು ಅದರಲ್ಲಿ ಜೀವನದ ಸಾರವನ್ನೇ ಹುದುಗಿಸಿಟ್ಟ ಮಮತಾ ಜಿ. ಅನೇಕ ಅವರ ಮಾತುಗಳನ್ನು ಇಲ್ಲಿ ದಾಖಲಾರ್ಹ.

(ಲೇಖನದ ಪೂರ್ಣ ಪಾಠಕ್ಕೆ prajavani.net ನೋಡಿ)



ಪು: 528
₹550

ಯಕ್ಷಹಂಸ
ಪ್ರಧಾನ ಸಂಪಾದಕರು: ಡಾ.ವಿಜಯನಳಿನೀ ರಮೇಶ
ಪ್ರ: ವಿಕಿ ಬುಕ್ಸ್

ಸಂಘದ ಸಿದ್ಧಾಂತಗಳನ್ನು ಪ್ರಶ್ನಿಸುತ್ತ...

ಸಂಘಪರಿವಾರದಿಂದ ಹೊರಬಂದು ಆ ಅನುಭವವನ್ನು ಕಟ್ಟಿಕೊಡುವ ಅನೇಕ ಲೇಖಕರು ಸಿಗಬಹುದು. ಆದರೆ, ಲೇಖಕಿಯರು ಇಲ್ಲವೇ ಇಲ್ಲ. ಈ ಕೃತಿಯ ಮೂಲಕ ಅಂಥ ಕೊರತೆ ಇಲ್ಲವಾಗಿದೆ. ಪುರುಷರ ದೃಷ್ಟಿಕೋನ ಮತ್ತು ಮಹಿಳೆಯರ ದೃಷ್ಟಿಕೋನಗಳು ಭಿನ್ನವಾಗಿರುತ್ತವೆ. ಅಂಥ ಭಿನ್ನತೆಯೇ ಈ ಕೃತಿಯ ಸಕಾರಾತ್ಮಕ ಅಂಶ.

ಬಾಲ್ಯದಲ್ಲಿ ಆರ್‌ಎಸ್‌ಎಸ್‌ನ ಪ್ರಭಾವಕ್ಕೊಳಗಾಗಿ, ಮನೆಯವರ ಹಾಗೂ ಶಿಕ್ಷಕರ ವಿರೋಧದ ನಡುವೆಯೂ ಸಂಘದ ಪರವಾಗಿ ಕೆಲಸ ಮಾಡಿದ್ದ ಲೇಖಕಿಗೆ ಅದರಿಂದ ಹೊರ ಬಂದಾಗ ಸಮಾಜ ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸಂಘಪರಿವಾರದ ನಡವಳಿಕೆಯ ವ್ಯತ್ಯಾಸಗಳು ಗಂಭೀರವಾಗಿ ಕಾಡಿದ್ದರಿಂದ ಅದು ಅಂಕಿ ಅಂಶಗಳ ಸಹಿತ ಪುಸ್ತಕರೂಪದಲ್ಲಿ ಹೊರಬಂದಿದೆ.

ಪುಸ್ತಕದಲ್ಲಿ ಐದು ಭಾಗಗಳಿವೆ. ಲೇಖಕಿಯ ಆರ್‌ಎಸ್‌ಎಸ್ ಜೊತೆಗಿನ ಒಡನಾಟ, ಸಂಘ ಪರಿವಾರ ಮತ್ತು ಹಿಂದುತ್ವ, ಹಿಂದುತ್ವ ಮತ್ತು ಹಿಂದು ರಾಷ್ಟ್ರ ವಿಚಾರಗಳ ಸಮಂಜಸತೆ, ಹಿಂದೂ ರಾಷ್ಟ್ರ ನಿರ್ಮಾಣದೆಡೆಗೆ ಆರ್‌ಎಸ್‌ಎಸ್ ಪ್ರಾಯೋಜಿತ ಬಿಜೆಪಿ ಸರ್ಕಾರದ ನಡೆಗಳು ಮುಂತಾದ ವಿಚಾರಗಳನ್ನು ಪುರಾವೆ ಸಹಿತ ದಾಖಲಿಸುವ ಪ್ರಯತ್ನ ಮಾಡಿದ್ದಾರೆ. ಕೊನೆ ಭಾಗದಲ್ಲಿ ದೇಶದ ಭವಿಷ್ಯದ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಲೇ ಲೇಖಕಿ ದೇಶದ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗುತ್ತಾರೆ. ಕೊನೆಯಲ್ಲಿ ಪ್ರಧಾನಿ ಮೋದಿಯರಿಗೆ ಬರೆದ ಪತ್ರ ಪುಸ್ತಕದ ವಿಶೇಷ.

ರಾಜ್ಯದಲ್ಲಿ ಸಂಘಪರಿವಾದ ಪ್ರಯೋಗ ಶಾಲೆ ಎನಿಸಿಕೊಂಡಿರುವ ಕರಾವಳಿಯಲ್ಲಿ ಸಂಘದ ಬೇರುಗಳನ್ನು ಊರಿದ್ದು, ತಳಸಮುದಾಯದ ಯುವಕರನ್ನು ಗುರಿಯಾಗಿಸಿಕೊಂಡು ಕೋಮುವಾದವನ್ನು ಬಿತ್ತಿದ ಬಗೆ ದಾಖಲಾಗಿದೆ. ಬಾಬರಿ ಧ್ವಂಸದ ವೇಳೆ ಹಿಂದುಳಿದ ವರ್ಗದ ಯುವಕರನ್ನು ಪ್ರಚೋದಿಸಿ, ತಾವು ತಪ್ಪಿಸಿಕೊಂಡಿದ್ದು, ಸ್ವಂತ ಊರಲ್ಲೇ ಮುಗ್ಧ ಜನರ ನಡುವೆ ಹೊಡೆದಾಡಿಕೊಳ್ಳುವಂಥ ವಾತಾವರಣ ಸೃಷ್ಟಿ ಮಾಡಿದ್ದನ್ನು ಲೇಖಕಿ ವಿಷಾದದಿಂದ ನುಡಿದಿದ್ದಾರೆ. ಪ್ರಧಾನಿಯವರ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಲೇ ಪುಸ್ತಕಕ್ಕೆ ಅಡಿಯಿಡುವ ಲೇಖಕಿ, ಮಧ್ಯೆ ಭಯ ಮತ್ತ ಆತಂಕ ವ್ಯಕ್ತಪಡಿಸಿಸಿ, ಕೊನೆಯಲ್ಲಿ ದಾರ್ಶನಿಕರ ದಾಟಿಯಲ್ಲಿ ಮಾತನಾಡುತ್ತಾರೆ. ಸಂಘಪರಿವಾರದಲ್ಲಿ ಮಹಿಳೆಯರು, ದಲಿತರು, ಹಿಂದುಳಿದ ವರ್ಗ ಹಾಗೂ ಆದಿವಾಸಿಗಳನ್ನು ಹೇಗೆ ನಡೆಸಿಕೊಳ್ಳಲಾಗುತ್ತದೆ, ತುರ್ತು ಪರಿಸ್ಥಿತಿಯ ಲಾಭ ಪಡೆದು ಆರ್‌ಎಸ್‌ಎಸ್ ರಾಜಕೀಯಕ್ಕಾಗಿ ಪ್ರವರ್ಧಮಾನಕ್ಕೆ ಬಂದಿದ್ದು ಹೇಗೆ ಎನ್ನುವುದನ್ನು ತಿಳಿಯಲು ಪುಸ್ತಕ ಓದಬೇಕು.



ಪು: 264
₹250

ಹಿಂದು ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು
ಲೇ: ಲತಾಮಾಲ
ಪ್ರ: ಅಭಿರುಚಿ
ಸಂ:9980560013

ಸಪೋನ್ ನೆಪ ವೈವಿಧ್ಯತೆಯ ಜಪ

ಸಿಕ್ಕಿಂನಲ್ಲಿ ನಡೆದ ಹಬ್ಬವೊಂದರ ದೃಶ್ಯ

ಪ್ರವಾಸ ಹೊರ ಮತ್ತು ಒಳ ಜಗತ್ತನ್ನು ವಿಸ್ತರಿಸುತ್ತದೆ. ಹೊಸ ಅನುಭವಗಳನ್ನು ನೀಡುತ್ತದೆ. ದೇಶ, ಭಾಷೆ, ಬಣ್ಣ, ಧರ್ಮ, ಸಮಾಜ ಇತ್ಯಾದಿಗಳನ್ನು ತಿಳಿಯುವ ಒಳಗಣ್ಣನ್ನು ಕೊಡುತ್ತದೆ. ಇಂಥ ಸುತ್ತಾಟದಲ್ಲಿ ಲೇಖಕಿಯ ಒಳಮನಸ್ಸಿಗೆ ತಟ್ಟಿದ ಆಪ್ತ ಘಟನೆ ಇಲ್ಲಿದೆ.

ಸೂರ್ಯಾಸ್ತದ ಸಂದರ್ಭದಲ್ಲಿ ಕೇಬಲ್ ಕಾರ್‌ನೊಳಗಿಂದ ಗ್ಯಾಂಗ್‌ಟಾಕ್ ನಗರ ಹೀಗೆ ಕಾಣುತ್ತದೆ...

ಶೈಲಾ ವಿ.ಹೆಚ್.

ನಾವು ದಂಪತಿ ಗ್ಯಾಂಗ್‌ಟಾಕ್‌ಗೆ ಹೋಗಿದ್ದೆವು. ಅದು ಚೀನಾದ ಗಡಿಗೆ ತಾಗಿರುವ ಸಿಕ್ಕಿಂನ ರಾಜಧಾನಿ. ಹೋಟೆಲ್ ಒಳಗೆ ಕಾಲಿಡುತ್ತಲೇ ಹುಡುಗನೊಬ್ಬ ಸ್ವಾಗತಿಸಿದನು. ಸೋಫಾದ ಕಡೆಗೆ ಕೈ ತೋರಿಸಿ ಹಿಂದಿಯಲ್ಲಿ 'ಕುಳಿತು ಕೊಳ್ಳಿ' ಎಂದ. 'ಅರೆರೇ.. ಚೀನಾದಿಂದ ಇಲ್ಲಿಗೆ ಕೆಲಸಕ್ಕೆ ಬರುತ್ತಾರೆಯೆ? ಎಷ್ಟು ಚಂದ ಹಿಂದಿ ಕಲಿತು ಮಾತಾಡುತ್ತಾನೆ' ಎಂದು ಆಶ್ಚರ್ಯವಾಯಿತು.

ಪತಿ ರಾಜಾರಾಮ್ ಅವರಿಗೆ ರಾತ್ರಿಯ ಊಟದ ಚಿಂತೆ ಉದ್ಭವಿಸಿತು. 'ನಿಮ್ಮ ಹೋಟೆಲ್‌ನಲ್ಲಿ ಸೌತ್ ಇಂಡಿಯನ್ ಊಟ ಇದೆಯೋ' ಎಂದು ಕೇಳಿದರು. 'ಸೌತ್ ಇಂಡಿಯನ್ ಊಟ ಬೇಕಾದರೆ ಇಲ್ಲೇ ಹತ್ತಿರ ಮಾರ್ವಾಡಿ ಹೋಟೆಲ್ ಇದೆ, ಅಲ್ಲಿಗೆ ಹೋಗಬಹುದು' ಎಂದರು. ನಮಗೆ ಖುಷಿ ಆಯಿತು.

ರಾತ್ರಿ ಊಟಕ್ಕೆ ಮಾರ್ವಾಡಿ ಹೋಟೆಲಿಗೆ ಹೋದೆವು. ಅಲ್ಲಿ ಕೆಲಸದವರು, ಮ್ಯಾನೇಜರ್ ಎಲ್ಲರೂ ಭಾರತೀಯರಂತೆ ಕಂಡರು. ಊಟಕ್ಕೆ ಅನ್ನ, ಮೊಸರು, ಸಾಂಬಾರ್ ಇದ್ದುದರಿಂದ ಖುಷಿಯಾಗಿ ಊಟ ಮಾಡಿದೆವು. ಅಲ್ಲಿಯವರೆಗೆ ಎಲ್ಲವೂ ಚೆನ್ನಾಗಿಯೇ ಇತ್ತು.

ಮರುದಿನ ಬೆಳಗ್ಗೆ ಹೊಟೇಲಿನಲ್ಲಿ ತಿಂಡಿಗಾಗಿ ಕಾಫಿ ಟೇಬಲ್‌ಗೆ ಹೋಗಿ ಕುಳಿತೆವು. ಮೆನು ಕಾರ್ಡ್ ನೋಡಿದಾಗ ಎಲ್ಲಾ ಉತ್ತರ ಭಾರತದ ತಿಂಡಿಗಳೇ ಇದ್ದವು. ಪರೋಟ, ರೋಟಿ, ನಾನ್, ಚೋಲೆ ಬಟೂರ, ಕೊನೆಯಲ್ಲಿ ಪೂರಿ ಚೋಲೆ ಇತ್ತು. ಪತಿಗೆ ಉತ್ತರ ಭಾರತದ ತಿಂಡಿಗಳು ಇಷ್ಟವಾಗದ ಕಾರಣ ಪೂರಿ ಆರ್ಡರ್ ಮಾಡೋಣ ಎಂದು ಮಾತಾಡಿಕೊಂಡೆವು. ಅಷ್ಟರಲ್ಲೇ ಎದುರು ಟೇಬಲ್ಲಿಗೆ ಪೂರಿ ಬಂತು. ಅದನ್ನು ನೋಡುತ್ತಿದ್ದಂತೆ ನನ್ನ ಪತಿಗೆ ಗಾಬರಿ ಆಯಿತು. ಏಕೆಂದರೆ, ಆ ಪೂರಿ ಅಲ್ಲಿನ ರೊಟ್ಟಿಯಷ್ಟೇ ದಪ್ಪವಾಗಿತ್ತು. 'ಅಯ್ಯೋ ಮಾರಾಯ್ತಿ, ಈ ಪೂರಿ ಹೇಗೆ ತಿನ್ನುವುದು' ಎಂದು ಗಾಬರಿಯಾದರು.

ನನಗೆ ಉಪಾಯ ಹೊಳೆಯಿತು. 'ಸೀದಾ ಅಡುಗೆ ಮನೆಗೆ ಹೋದೆ. ಅಲ್ಲಿ ಒಬ್ಬ ಚೀನಾದವನಂತೆ ನಿಂತಿದ್ದ. ನಗುತ್ತಾ ಹಿಂದಿಯಲ್ಲಿ ಹೆಸರು ಕೇಳಿದೆ. ಅವನು ಪ್ರತಿಯಾಗಿ ನಕ್ಕು 'ಸಪೋನ್' ಎಂದ.

'ನಿನ್ನ ಹೆಸರು ಸುಂದರವಾಗಿದೆ, ಬಂಗಾಳ ಕಡೆಯವನಾ'ಎಂದು ಕೇಳಿದೆ. 'ಇಲ್ಲ, ನಾನು ಇಲ್ಲಿಯವನೇ' ಎಂದ. 'ನಿನ್ನ ಹೆಸರು ಕೇಳಿ ಹಾಗೆ ಅಂದುಕೊಂಡೆ' ಎಂದಾಗ,

ಸಪೋನ್

'ನನ್ನ ಹೆಸರಿನ ಅರ್ಥ ನಿಮಗೆ ಗೊತ್ತಾಯ್ತಾ?'ಎಂದ. 'ಓಹೋ, ಡ್ರೀಮ್ ಎಂದಲ್ಲವೇ?'ಕೇಳಿದೆ. 'ಹೌದು' ಎಂದು ಸಂತೋಷಪಟ್ಟ. 'ನನ್ನ ಅಮ್ಮ ಬಂಗಾಳದ ಹತ್ತಿರದ ಅಸ್ಸಾಮಿನವಳು. ಅವಳು ಪ್ರೀತಿಯಿಂದ ಇಟ್ಟ ಹೆಸರು. ನನ್ನ ತಂದೆ ಇಲ್ಲಿಯವರೇ' ಎಂದ.

ಆಗ ನನ್ನ ಬೇಡಿಕೆ ಮುಂದಿಟ್ಟೆ. 'ಪತಿಗೆ ಇಲ್ಲಿಯ ತಿಂಡಿಗಳಲ್ಲಿ ಪೂರಿ ಮಾತ್ರ ತಿನ್ನಬಹುದಾಗಿದೆ. ಆದರೆ ನೀವು ಮಾಡುವ ಪೂರಿ ತುಂಬಾ ದಪ್ಪವಾಗಿದೆ. ಅವರಿಗೆ ವಯಸ್ಸಾಗಿದೆ, ಆದ್ದರಿಂದ ಅದನ್ನು ತಿನ್ನುವುದು ಕಷ್ಟ. ಸ್ವಲ್ಪ ತೆಳ್ಳಗೆ ಮಾಡಿಕೊಡಲು ಆಗಬಹುದಾ?' ಎಂದು ಕೇಳಿದೆ. 'ಇಲ್ಲ, ನಾವು ಹೀಗೇ ಮಾಡಬೇಕು, ಇಲ್ಲದಿದ್ದರೆ ಮ್ಯಾನೇಜರ್ ಕೋಪ ಮಾಡಿಕೊಳ್ಳುತ್ತಾರೆ' ಎಂದ. 'ಮ್ಯಾನೇಜರ್‌ಗೆ ಹೇಳುವುದು ಬೇಡ. ನಾನೇ ತೆಳ್ಳಗಿನ ಪೂರಿ ಲಟ್ಟಿಸಿಕೊಡುತ್ತೇನೆ. ಎಣ್ಣೆಯಲ್ಲಿ ಹಾಕಿ ನೀವೇ ಕರಿದುಬಿಡಿ. ಮ್ಯಾನೇಜರ್ ಬರುವುದರೊಳಗೆ ತಿಂದುಬಿಡುತ್ತೇವೆ. ಪ್ಲೀಸ್...'ಎಂದೆ, ಆತ ಒಪ್ಪಿದ.

ಮನೆಯಲ್ಲಿ ಮಾಡುವಂತಹ ಪೂರಿಯನ್ನು ಮಾಡಿ ವೇಟರ್ ಕೈಯಲ್ಲಿ ಕೊಟ್ಟು ಕಳಿಸಿದೆ. ಖುಷಿಯಿಂದ ನಾವಿಬ್ಬರೂ ಪೂರಿ ಚೋಲೆ ತಿಂದು ಕಾಫಿ ಕುಡಿದು ಹೊರಟೆವು. ಗುಡ್ಡಗಾಡು ನಗರವಾದ ಗ್ಯಾಂಗ್‌ಟಾಕ್‌ನ ಹಲವು ಜಾಗಗಳನ್ನು ಕಾಲ್ನಡಿಗೆಯಲ್ಲೇ ಸುತ್ತಾಡಿ, ತುಸುದೂರದ ಬಹುಎತ್ತರದ ಶಿಖರಕ್ಕೆ ರೋಪ್ ವೇ ಕ್ಯಾಬಿನ್‌ನಲ್ಲಿ ಕುಳಿತು ಸಾಗಿದ್ದಾಯಿತು. ರಾತ್ರಿ ಮಾರ್ವಾಡಿ ಹೋಟೆಲ್ ಊಟ ಮಾಡಿದೆವು.

ಮರುದಿನ ಬೆಳಿಗ್ಗೆ ಅದೇ 'ಪೂರಿ' ಪುನರಾವರ್ತನೆ ಮಾಡಿದೆವು.

ಮೂರನೆಯ ದಿನ ಜೀಪು ಬಂದು ಬೆಳಗಿನ ಜಾವ ನಮ್ಮನ್ನು ಕರೆದುಕೊಂಡು ಹೊರಟುಬಿಟ್ಟಿತ್ತು. ಆ ದಿನ ನಾತುಲಾ ಪಾಸ್ ಎನ್ನುವ ಚೀನಾ ಗಡಿಯ ಪ್ರದೇಶಕ್ಕೆ ಹೋಗಿದ್ದೆವು. ನೋಡಬೇಕಾದ ಜಾಗವನ್ನೆಲ್ಲಾ ನೋಡಿ ರಾತ್ರಿ ಮತ್ತದೇ ಮಾರ್ವಾಡಿ ಹೋಟೆಲಿಗೆ ಹೋಗಿ ಊಟ ಮಾಡಿದೆವು. ಅಲ್ಲಿಂದ ನಡೆದುಕೊಂಡು ನಮ್ಮ ಹೋಟೆಲ್ ಕಡೆ ಬರುತ್ತಾ ಇದ್ದೆವು. ಆಗ ಮೂರು ಜನ ಯುವಕರು ನಮ್ಮ ದಿಕ್ಕಿಗೆ ನಡೆದುಕೊಂಡು ಬರುತ್ತಿದ್ದರು. ಕತ್ತಲೆ ಬೇರೆ. ಅವರು ನಮ್ಮನ್ನು ಸಮೀಪಿಸುತ್ತಿದಂತೆಯೇ ಮಧ್ಯದಲ್ಲಿದ್ದ ಹುಡುಗನ ಮುಖದ ಮೇಲೆ ನಗು ಕಾಣಿಸಿತು. ಆತನ ಕಣ್ಣು ಪೂರ್ತಿ ಮುಚ್ಚಿದಂತೆ ಕಂಡರೂ ಮುಖದಲ್ಲಿದ್ದ ನಗುವಿನ ಆತ್ಮೀಯತೆ ಅನುಭವಕ್ಕೆ ಬಂದಿತು. ಆತ ನಮ್ಮ ಕಡೆಗೆ ಹೆಜ್ಜೆ ಹಾಕುತ್ತಾ ಬಂದನು. ಥಟ್ಟನೆ ನನಗೆ ಅವನ ಗುರುತು ಸಿಕ್ಕಿಬಿಟ್ಟಿತ್ತು. ಸ್ವಲ್ಪ ಹತ್ತಿರ ಬಂದ ಕೂಡಲೇ 'ಸಪೋನ್'!.. ಕೆಲಸ ಮುಗಿಸಿ ಮನೆಗೆ ಹೊರಟುಬಿಟ್ಟೆಯಾ' ಎಂದು ಕೇಳಿದೆ.

ಪ್ರವಾಸ ಕಥನ

ಅಷ್ಟು ಕೇಳಿದ್ದೇ ನೋಡಿ, ಅವನಿಗೆ ಏನಾಯಿತು ಎಂದು ಕಣ್ಣು ಬಿಟ್ಟು ನೋಡುವಂತಾಯಿತು. ತಲೆಯನ್ನು ಅತ್ತ ಇತ್ತ ಕುಣಿಸಿದ. ತನ್ನ ಕಿವಿಗಳನ್ನು ತಾನೇ ಎಳೆದುಕೊಂಡ. ಕೈ ಎರಡು ಮುಷ್ಟಿ ಕಟ್ಟಿ ಮೇಲೆ ಕೆಳಗೆ ಆಡಿಸಿದ. 'ನಿಮಗೆ ನನ್ನ ಗುರುತು ಸಿಕ್ಕಿ ಬಿಟ್ಟಿತು, ನಿಮಗೆ ನನ್ನ ಗುರುತು ಸಿಕ್ಕಿಬಿಟ್ಟಿತು.' ಎನ್ನುತ್ತಾ ಕುಪ್ಪಳಿಸಿ, ಉಲ್ಲಾಸ ತುಂಬಿದ ಅವನ ಧ್ವನಿ ಉಕ್ಕೇರಿ ಹೊರಗೆ ಬಂತು. 'ದಕ್ಷಿಣದವರು ಯಾರೂ ನಮ್ಮನ್ನು ಗುರುತು ಹಿಡಿಯುವುದಿಲ್ಲ. ನೀವು ನನ್ನ ಗುರುತು ಹಿಡಿದೇ ಬಿಟ್ಟಿರಿ' ಅಂದ. ಅವನ ಕುಣಿತ ನೋಡಿ ನನ್ನ ಪತಿ 'ಆಯ್ತು..ಆಯ್ತು' ಎಂದು ಅವನ ಬೆನ್ನು ಚಪ್ಪರಿಸಿ 'ಲೇಟಾಗುತ್ತಿದೆ, ಬೇಗ ಮನೆ ಸೇರಿಕೋ' ಎಂದು ಕಳಿಸಿದರು.

ಮರುದಿನ ಬೆಳಿಗ್ಗೆ ನಮ್ಮ ಲಗೇಜ್ ತೆಗೆದುಕೊಂಡು ಡಾರ್ಜಿಲಿಂಗ್‌ಗೆ ಹೊರಡಲು ಬಂದೆವು. ಕಾಫಿ ಟೇಬಲ್ಲಿಗೆ ಹೋಗಿ ಕುಳಿತುಕೊಂಡರೆ 'ಸಪೋನ್' ನಮಗೆ ಬೇಕಾದ ಪುಟ್ಟ ಪುಟ್ಟ ಪೂರಿ ಚೋಲೆಯನ್ನು ತಾನೇ ಪ್ಲೇಟಲ್ಲಿ ತಂದು ಇಟ್ಟ. ಮುಖದಲ್ಲಿ ನಗು ತುಂಬಿತ್ತು. ಬಳಿಕ ಬಿಲ್ ಕೊಟ್ಟ ಕೂಡಲೇ ನಮ್ಮ ಹಿಂದೆ ಬಂದು 'ಹೊರಟು ಬಿಟ್ಟಿದ್ದೀರಿ. ಎರಡು ದಿನ ಇದ್ದರೆ ಚೆನ್ನಾಗಿತ್ತು' ಪ್ರೀತಿಯಿಂದಲೇ ಕೇಳಿದ. ಯಾವ ಜನುಮದ ನೆಂಟನೋ ಅಂದುಕೊಂಡೆ. 'ಇದೇ ಕೊನೆ ಏನಲ್ಲ, ಮತ್ತೆ ಬರುತ್ತೇವೆ, ಯೋಚನೆ ಮಾಡಬೇಡ' ಅಂದೆ. 'ನಮ್ಮ ಬೆಂಗಳೂರನ್ನು ನೋಡಲು ನೀನು ಬಾ' ಎಂದು ಪ್ರೀತಿಯಿಂದ ಆಹ್ವಾನವಿತ್ತು ಹೊರಟೆವು. ಅವನ ಆ ಕಿರಿದಾದ ಕಣ್ಣುಗಳಲ್ಲಿ ನಮಗೆ ವಿದಾಯ ಹೇಳುವಾಗ ವಿಷಾದ ಕಂಡಿತು.

ನಮ್ಮ ಮನತಟ್ಟಿದ ಈ ಘಟನೆ ಈಗ ನೆನಪಾದದ್ದು ಏಕೆ? ಕಾರಣವಿಷ್ಟೆ. ಇತ್ತೀಚೆಗೆ ಸ್ಯಾಮ್ ಪಿತ್ರೋಡಾ ಹೇಳಿದರಲ್ಲ, ಇಂಡಿಯಾದಲ್ಲಿ ಪೂರ್ವದವರು ಚೀನಾದವರ ಹಾಗೆ ಕಾಣುತ್ತಾರೆ. ದಕ್ಷಿಣದವರು ಆಫ್ರಿಕಾದವರಂತೆ, ಪಶ್ಚಿಮದವರು ಅರಬರ ತರಹಾ, ಉತ್ತರದವರು ಯೂರೋಪಿನವರ ರೀತಿ ಕಾಣುತ್ತಾರೆ ಎಂದು.. ನಾವು ಹೇಗೆ ಹೇಗೋ ಕಾಣುತ್ತಿರಬಹುದು. ಆದರೆ ದೇಶ ಒಂದೇ; ಮಾನವೀಯತೆಯಲ್ಲಿ ಒಂದೇ ತರಹದ ಮನುಷ್ಯತ್ವ ಇಟ್ಟುಕೊಂಡವರು. ಕಾಶ್ಮೀರದ ಶೃಂಗದಿಂದ ಹಿಡಿದು ಕನ್ಯಾಕುಮಾರಿ ಸಮುದ್ರತೀರದವರೆಗೆ ಓಡಾಡಿದ್ದೇವೆ. ರೂಪ, ಬಣ್ಣ, ಭಾಷೆ, ಊಟ, ತಿಂಡಿ ವಿಷಯಗಳಲ್ಲಿ ವ್ಯತ್ಯಾಸವಿದೆಯೇ ಹೊರತು, ಪ್ರೀತಿಯಿಂದ ಒಬ್ಬರನ್ನೊಬ್ಬರು ಕಾಣುವ ಆತ್ಮೀಯತೆಯ ಏಕತೆಗೆ ಬೆಲೆ ಕಟ್ಟಲಾಗದು. ❖

ಚಿತ್ರ: ಕೆ.ಎಸ್. ರಾಜಾರಾಮ್

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ದಶ್ಶ ಚಕ್ಕ ಕೇಳಿಶಪ್ಪ ಕಥೆಯ — ಚಟಪಟ ಸುಟ್ಟ ಗಾಳಿಪಟ!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗಣಿತದಲ್ಲಿ ಗರ್ದಿ ಗಮ್ಮತ್ತು

ರಜಾ–ಮಜಾ ಚಟುವಟಿಕೆಗಳು

1. ಒಂದರಿಂದ ತೊಂಬತ್ತೊಂಬತ್ತರವರೆಗೆ ಸಂಖ್ಯೆಗಳನ್ನು ಬರೆಯಿರಿ (One-Two-Three ಹೀಗೆ). ಅದರಲ್ಲಿ 'ABCD' ಒಂದೂ ಇಲ್ಲ. ಈಗ ನಿಮ್ಮ ಗೆಳೆಯನಿಗೆ ಸವಾಲು ಹಾಕಿ. 2 ನಿಮಿಷದಲ್ಲಿ 'ABCD' ಇಲ್ಲದ ಪದ ಹೇಳು ಎಂದು. ಕೆಲವು ಪದಗಳನ್ನಷ್ಟೇ ಆತನಿಗೆ ಹೇಳಲು ಸಾಧ್ಯ. ನೀನು 1-99ರವರೆಗೆ ಹೇಳು...ಸವಾಲನ್ನು ಗೆಲ್ಲು...
2. ಹೀಗೆ ಬರೆದ 1-99 ಇಂಗ್ಲಿಷ್ ಪದ ಒಮ್ಮೆ ಗಮನಿಸು. ಮುಂದಿನ ಸಂಖ್ಯೆಯಲ್ಲಿ ಹಿಂದಿನ ಒಂದು ಅಕ್ಷರ ಬಂದೇ ತೀರಿದೆ. One-Two-Three-Four- ಇಲ್ಲಿ Twoನಲ್ಲಿ Oneನ 'O', Threeಯಲ್ಲಿ 'T' ಇದೆ. Fourನಲ್ಲಿ 'R' ಇದೆ ಗಮನಿಸು.

ಪಂಚಕ್ವಿಜ್ಜಾಯ

1. ಗಂಗಾವತರಣ–ಇದು ಯಾರ ಕೃತಿ?
2. ಕಿಂದರಿಜೋಗಿ ಕೃತಿಯ ಲೇಖಕರು ಯಾರು?
3. ಚೋಮನದುಡಿ ಇದು ಯಾರ ಕಾದಂಬರಿ?
4. ಗ್ರಾಮಾಯಣ–ಇದು ಯಾರ ಕೃತಿ?
5. ಹಾವು ಹಿಡಿದವರು–ಇದು ಯಾರ ಕೃತಿ?

ಸಿನಿ ಸ್ವಾರಸ್ಯ

ಇಲ್ಲಿ ಕೊಟ್ಟಿರುವ ಸ್ವರಾಕ್ಷರದಿಂದ ಪ್ರಾರಂಭವಾಗುವ ಯಾವುದಾದರೂ ಒಂದು ಸಿನಿಮಾ ಹೆಸರು ಬರೆಯಿರಿ.

1.	ಅ	
2.	ಆ	
3.	ಇ	
4.	ಈ	
5.	ಉ	
6.	ಊ	
7.	ಋ	
8.	ಎ	
9.	ಏ	
10.	ಐ	

'ಮೇ' ಪದ ಆಟ

ಇಲ್ಲಿ ಕೊಟ್ಟಿರುವ 'ಮೇ' ಅಕ್ಷರಕ್ಕೆ ಅಕ್ಷರಪಟ್ಟಿಯಿಂದ ಕೆಲವು ಅಕ್ಷರ ಆರಿಸಿ ಸೇರಿಸಿ ಅರ್ಥಬದ್ಧ ಪದರಚಿಸಿ.

ಅಕ್ಷರ ಪಟ್ಟಿ					
ನ	ಳ	ಲ	ಲೆ	ಯ	ತ್ರಿ
ಧ	ಕೆ	ಕೆ	ಸ್ಸು	ಬ	ರು
ಘಾ	ವಿ	ಧಾ	ಣ	ಕೃ	ತಿ

1	ಮೇ
2	ಮೇ
3	ಮೇ
4	ಮೇ
5	ಮೇ
6	ಮೇ
7	ಮೇ
8	ಮೇ
9	ಮೇ

ಇಂಗ್ಲಿಷ್‌ನಲ್ಲಿ ವಿನೋದ

ಇಲ್ಲಿ ಕೊಟ್ಟಿರುವ 'Y' ಅಕ್ಷರದ ಹಿಂದೆ ಇನ್ನೆರಡು ಇಂಗ್ಲಿಷ್ ಅಕ್ಷರ ಸೇರಿಸಿ ಪದ ಮಾಡಿ.

1			Y
2			Y
3			Y
4			Y
5			Y
6			Y
7			Y
8			Y
9			Y
10			Y

ಪ್ರಾಸಪದ ಬಂಧ

ಅಕ್ಷರ ಪಟ್ಟಿ			
ಸ	ಗಂ	ಹೇ	ಹ
ಹ	ಕೊ	ಭ	ಭೂ
ಕೇ	ಬಂ	ಕ	ಕೊ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

1

	ಮಿ	ತಿ
	ಮಿ	ತಿ

2

	ಗಾ	ಳ
	ಗಾ	ಳ

3

	ಪ್ಪ	ಳ
	ಪ್ಪ	ಳ

4

	ರ	ಳ
	ರ	ಳ

5

	ಡ	ಗು
	ಡ	ಗು

6

	ರಾ	ಟೆ
	ರಾ	ಟೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದಬಂಧ: 1.ಆಕಾಶ–ಪ್ರಕಾಶ 2.ಕಾಳಗ–ಬಳಗ 3.ಅಗಳಿ–ಚಿಗಳಿ 4.ಪಣತಿ–ಗಣತಿ 5.ಅರಸು–ಹೊರಸು 6.ಹೋರಾಡು–ಚೀರಾಡು

ಮೋಜಿನ ಇಂಗ್ಲಿಷ್: 1.Write-Right 2.Or-Are 3.Line-Lion 4.Know-No 5.Dear-Deer 6.Tail-Tale 7.Rule-Rool 8.Male-Mail 9.Sell-Cell 10.Hear-Here

ಜಾಣಪದ ಆಟ: 1.ಕರದಂಟು 2.ಕರವಸ್ತ್ರ 3.ಕರದಾತ 4.ಕರಣಿಕ 5.ಕರಟಕ 6.ಕರಕಲು 7.ಕರಗತ 8.ಕರಭಾರ 9.ಕರಬೂಜ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ವೈಷ್ಣವಿ ಬನ್ನಿಗಿಡದ
ಶಿರೋಳ

ಚಾರ್ವಿ ಎಚ್.ಚರಣ್
ಬೆಂಗಳೂರು

ಸಮರ್ಥ್ ಮೇಟಿ
ಬಳ್ಳಾರಿ

ನಂದಿತಾ ಎಸ್.ಎಂ.
ಬೆಂಗಳೂರು

ಅಮೃತ ಬಿ. ಆರ್,
ಬಸವಾಪಟ್ಟಣ

ಶ್ರೇಯಾ ಎಂ.
ವಿಜಯಪುರ

17ನೇ ಐಪಿಎಲ್ ಫೈನಲ್ ಇಂದು • ಕೋಲ್ಕತ್ತ ನೈಟ್ ರೈಡರ್ಸ್–ಸನ್‌ರೈಸರ್ಸ್ ಹೈದರಾಬಾದ್ ಹಣಾಹಣಿ

ಮದಗಜಗಳ ಸೆಣಸಿಗೆ ಸಿದ್ಧವಾದ ಚೆನ್ನೈ

ಪ್ರಜಾವಾಣಿ ವಾರ್ತೆ

ಚೆನ್ನೈ: ಚೆಪಾಕ್ ಕ್ರೀಡಾಂಗಣದ ಮುಖ್ಯದ್ವಾರ ಮುಂಭಾಗದಲ್ಲಿ ಸಾಗುವಾಗ ಪ್ಯಾಟ್ ಕಮಿನ್ಸ್ ಮತ್ತು ಶ್ರೇಯಸ್ ಅಯ್ಯರ್ ಅವರಿಬ್ಬರೂ ಇರುವ ದೊಡ್ಡ ಚಿತ್ರ ಹಾಗೂ 'ಐಪಿಎಲ್ ಫೈನಲ್-2024' ಎಂಬ ಒಕ್ಕಣೆ ಗಮನ ಸೆಳೆಯಿತು. ಅದೂ ಶುಕ್ರವಾರದಂದು!

ಹೌದು; ಎರಡನೇ ಕ್ವಾಲಿಫೈಯರ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವು ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸುವ ಮುನ್ನವೇ ಈ ಪೋಸ್ಟರ್ ಇಲ್ಲಿ ಕಾಣಿಸಿಕೊಂಡಿತ್ತು. ಇಂತಹದೊಂದು ಹೋರ್ಡಿಂಗ್ ಸಿದ್ಧಗೊಳಿಸುವ ಕಲಾವಿದನಿಗೆ 'ದಿವ್ಯದೃಷ್ಟಿ'ಯೇ ಇರಬೇಕು. ಸನ್‌ರೈಸರ್ಸ್ ತಂಡವು 36 ರನ್‌ಗಳಿಂದ ರಾಜಸ್ಥಾನ ರಾಯಲ್ಸ್ ಎದುರು ಗೆದ್ದು ಫೈನಲ್ ಪ್ರವೇಶಿಸಿತು.

ಇದೀಗ ಭಾನುವಾರ ಸನ್‌ರೈಸರ್ಸ್ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ಬಳಗವನ್ನು ಎದುರಿಸಲಿದೆ. ಮೊದಲ ಕ್ವಾಲಿಫೈಯರ್‌ನಲ್ಲಿಯೂ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಆಗ ಪ್ಯಾಟ್ ಕಮಿನ್ಸ್ ಬಳಗವು ಸೋತಿತ್ತು. ಈ ಬಾರಿಯ ಟೂರ್ನಿಯ ಲೀಗ್ ಹಂತದಲ್ಲಿ ನಿರಂತರವಾಗಿ ಅಬ್ಬರಿಸುತ್ತಲೇ ಈ ಹಂತಕ್ಕೆ ಬಂದಿರುವ ಎರಡು ತಂಡಗಳು ಇವು. ಲೀಗ್ ಹಂತದಲ್ಲಿಯೂ ಎರಡೂ ತಂಡಗಳು ಪರಸ್ಪರ ಎದುರಿಸುವ ಮೂಲಕವೇ ಅಭಿಯಾನ ಆರಂಭಿಸಿದ್ದವು. ಸುಮಾರು ಎರಡು ತಿಂಗಳು ನಡೆದ ಟೂರ್ನಿಯಲ್ಲಿ ಸತತವಾಗಿ ತಮ್ಮ ಸಾಮರ್ಥ್ಯ ಕಾಯ್ದುಕೊಂಡು ಅಂಕಪಟ್ಟಿಯಲ್ಲಿ ಮೊದಲೆರಡು ಸ್ಥಾನಗಳನ್ನು ಗಳಿಸಿದ್ದವು.

ಆ ಎಲ್ಲ ಶ್ರಮಕ್ಕೆ ಪ್ರಶಸ್ತಿ ಹೊಳಪು ತುಂಬುವ ಸಮಯ ಬಂದಿದೆ. ಕೋಲ್ಕತ್ತ ತಂಡವು ಮೂರನೇ ಹಾಗೂ ಸನ್‌ರೈಸರ್ಸ್ ಎರಡನೇ ಪ್ರಶಸ್ತಿ ಜಯಿಸುವ ಛಲದಲ್ಲಿವೆ.

ಸನ್‌ರೈಸರ್ಸ್ ನಾಯಕ ಕಮಿನ್ಸ್ ಅವರಿಗೆ ಇದು ಅದೃಷ್ಟದ ವರ್ಷ. ಬೌಲಿಂಗ್ ಮತ್ತು ಬ್ಯಾಟಿಂಗ್ ಜೊತೆಗೆ ನಾಯಕತ್ವದಲ್ಲಿಯೂ ಯಶಸ್ಸು ಸಾಧಿಸಿದ್ದಾರೆ. ಹೋದ ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್ ಜಯಿಸಿದ್ದ ಆಸ್ಟ್ರೇಲಿಯಾ ತಂಡವನ್ನು ಕಮಿನ್ಸ್ ಮುನ್ನಡೆಸಿದ್ದರು. ಆ ಟೂರ್ನಿಯ ಫೈನಲ್ ಪಂದ್ಯದಲ್ಲಿ ಮಿಂಚಿದ್ದ ಟ್ರಾವಿಸ್ ಹೆಡ್, ಸನ್‌ರೈಸರ್ಸ್ ತಂಡದಲ್ಲಿಯೂ ಮಿಂಚುತ್ತಿದ್ದಾರೆ.

ಅಲ್ಲದೇ ಪಟಾಕಿಯಂತೆ ಸಿಕ್ಸರ್, ಬೌಂಡರಿ ಸಿಡಿಸುವ ಯುವತಾರೆ ಅಭಿಷೇಕ್ ಶರ್ಮಾ ಮತ್ತು ಹೆಡ್ ಸನ್‌ರೈಸರ್ಸ್ ತಂಡಕ್ಕೆ ಅಬ್ಬರದ ಆರಂಭ ನೀಡುವ ಸಮರ್ಥರು. ಇವರಿಬ್ಬರಲ್ಲದೇ ಏಡನ್ ಮರ್ಕರಂ, ಹೆನ್ರಿಚ್ ಕ್ಲಾಸೆನ್, ಅಬ್ದುಲ್ ಸಮದ್, ನಿತೀಶ್ ರೆಡ್ಡಿ ಹಾಗೂ ರಾಹುಲ್ ತ್ರಿಪಾಠಿ ಅವರ ಬೀಸಾಟದಿಂದಾಗಿ ಐಪಿಎಲ್‌ನಲ್ಲಿ ರನ್ ಗಳಿಕೆಯ ದೊಡ್ಡ ದಾಖಲೆಗಳನ್ನು ಈ ಬಾರಿ ಮಾಡಿರುವ ತಂಡವಿದು. ಎರಡನೇ ಕ್ವಾಲಿಫೈಯರ್‌ನಲ್ಲಿ ಬೌಲಿಂಗ್ ಪಡೆಯೂ ತನ್ನ ಸಂಪೂರ್ಣ ಸಾಮರ್ಥ್ಯ ಮೆರೆಯಿತು. ಶಾಬಾಜ್ ಅಹಮದ್, ಅಭಿಷೇಕ್, ನಾಯಕ ಕಮಿನ್ಸ್ ಹಾಗೂ ಟಿ. ನಟರಾಜನ್ ಎದುರಾಳಿ ಬ್ಯಾಟರ್‌ಗಳಿಗೆ ಸಿಂಹಸ್ವಪ್ನರಾದರು.

ಆದರೆ ಕೋಲ್ಕತ್ತ ತಂಡವೇನೂ ಕಮ್ಮಿಯಿಲ್ಲ. ಮೆಂಟರ್ ಗೌತಮ್ ಗಂಭೀರ್ ಹಾಗೂ ಕೋಚ್ ಚಂದ್ರಕಾಂತ್ ಪಂಡಿತ್ ಅವರ ತಂತ್ರಗಾರಿಕೆಯನ್ನು ಅಚ್ಚುಕಟ್ಟಾಗಿ ಜಾರಿಗೊಳಿಸುವ ಕಲೆಯನ್ನು ಶ್ರೇಯಸ್ ಕರಗತ ಮಾಡಿಕೊಂಡಿದ್ದಾರೆ.

ಆಲ್‌ರೌಂಡರ್ ಸುನಿಲ್ ನಾರಾಯಣ ಅವರು ಆರಂಭಿಕ ಬ್ಯಾಟರ್ ಹಾಗೂ ಸ್ಪಿನ್ನರ್ ಆಗಿ ಗೆಲುವಿನ ರೂವಾರಿಯಾಗಬಲ್ಲರು. ಚೆನ್ನೈ ಅಂಗಳದ ಗುಣವನ್ನು ಬಳಸಿಕೊಂಡು ತಮ್ಮ ಸ್ಪಿನ್ ಅಸ್ತ್ರಗಳನ್ನು ಪರಿಣಾಮಕಾರಿಯಾಗಿ ಪ್ರಯೋಗಿಸಲು ವರುಣ್ ಚಕ್ರವರ್ತಿ ಕೂಡ ಸಿದ್ಧವಾಗಿದ್ದಾರೆ. ಅವರಲ್ಲದೇ ಈ ಟೂರ್ನಿಯ ಅತ್ಯಂತ ದುಬಾರಿ ಮೌಲ್ಯ ಪಡೆದ ಆಟಗಾರ, ವೇಗಿ ಮಿಚೆಲ್ ಸ್ಟಾರ್ಕ್ ತಮ್ಮ ಆಸ್ಟ್ರೇಲಿಯನ್ ಮಿತ್ರ ಕಮಿನ್ಸ್‌ಗೆ ಚಳ್ಳೇಹಣ್ಣು ತಿನ್ನಿಸಲು ಸಿದ್ಧರಾಗಿದ್ದಾರೆ.

ಬ್ಯಾಟಿಂಗ್ ವಿಭಾಗದಲ್ಲಿ ಶ್ರೇಯಸ್, ಗುರ್ಬಾಜ್, ವೆಂಕಟೇಶ್ ಅಯ್ಯರ್, ರಮಣದೀಪ್ ಸಿಂಗ್, ರಿಂಕು ಸಿಂಗ್, ಅಂಗಕ್ರಿಷ್ ರಘುವಂಶಿ ಹಾಗೂ ಆ್ಯಂಡ್ರೆ ರಸೆಲ್ ಅವರಂತಹ ಬಲಾಢ್ಯರು ಇನಿಂಗ್ಸ್ ಕಟ್ಟಬಲ್ಲರು.

ಒಟ್ಟಿನಲ್ಲಿ ವಾರಾಂತ್ಯದ ದಿನದಂದು ಚೆನ್ನೈ ಅಂಗಳದಲ್ಲಿ ಉಭಯ ತಂಡಗಳು ಪ್ರಶಸ್ತಿಗಾಗಿ 'ಮದಗಜ'ಗಳಂತೆ ಹೋರಾಟ ಮಾಡುವ ನಿರೀಕ್ಷೆ ಗರಿಗೆದರಿದೆ.



ಪ್ರಶಸ್ತಿ ಮೊತ್ತ
- ವಿಜೇತರು ₹20ಕೋಟಿ
- ರನ್ನರ್ಸ್‌ಅಪ್ ₹13 ಕೋಟಿ
- ತೃತೀಯ ₹ 7ಕೋಟಿ
- ಚತುರ್ಥ ₹ 6.5ಕೋಟಿ

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ಆಟಗಾರರ ಸಾಧನೆಗಳು

ಕೋಲ್ಕತ್ತ

ಆ್ಯಂಡ್ರೆ ರಸೆಲ್ (ಆಲ್‌ರೌಂಡರ್)
ಪಂದ್ಯ 14 • ರನ್ 222 • ಅರ್ಧಶತಕ 1
ಸ್ಟ್ರೈಕ್‌ರೇಟ್ 185 • ವಿಕೆಟ್ 16

ವರುಣ್ ಚಕ್ರವರ್ತಿ (ಸ್ಪಿನ್ನರ್)
ಪಂದ್ಯ 14 • ವಿಕೆಟ್ 20

ಮಿಚೆಲ್ ಸ್ಟಾರ್ಕ್ (ಎಡಗೈ ವೇಗಿ)
ಪಂದ್ಯ 13 • ವಿಕೆಟ್ 15

ಶ್ರೇಯಸ್ ಅಯ್ಯರ್ (ನಾಯಕ)
• ಪಂದ್ಯ 13 • ರನ್ 345
• ಅರ್ಧಶತಕ 2 • ಸ್ಟ್ರೈಕ್‌ರೇಟ್ 146.18

ಕೋಲ್ಕತ್ತ
ಸುನಿಲ್ ನಾರಾಯಣ್ (ಆಲ್‌ರೌಂಡರ್)
- ಪಂದ್ಯ 13
- ರನ್ 482
- ಶತಕ 1
- ಅರ್ಧಶತಕ 3
- ಸ್ಟ್ರೈಕ್‌ರೇಟ್ 179.85
- ವಿಕೆಟ್ 16

ಹೈದರಾಬಾದ್

ಟಿ. ನಟರಾಜನ್ (ವೇಗಿ)
ಪಂದ್ಯ 13 • ವಿಕೆಟ್ 19

ಪ್ಯಾಟ್ ಕಮಿನ್ಸ್ (ನಾಯಕ/ಬೌಲರ್)
ಪಂದ್ಯ 15 • ವಿಕೆಟ್ 17

ಹೆನ್ರಿಚ್ ಕ್ಲಾಸೆನ್ (ಬ್ಯಾಟರ್)
- ಪಂದ್ಯ 15
- ರನ್ 463
- ಅರ್ಧಶತಕ 4
- ಸ್ಟ್ರೈಕ್‌ರೇಟ್ 176.05

ಟ್ರಾವಿಸ್ ಹೆಡ್ (ಬ್ಯಾಟರ್)
ಪಂದ್ಯ 14 • ರನ್ 567

ಅಭಿಷೇಕ್ ಶರ್ಮಾ (ಆಲ್‌ರೌಂಡರ್)
- ಪಂದ್ಯ 15
- ರನ್ 482
- ಅರ್ಧಶತಕ 3
- ಸ್ಟ್ರೈಕ್‌ರೇಟ್ 207.75
- ವಿಕೆಟ್ 2

ಮಳೆಯಿಂದಾಗಿ ಕೆಕೆಆರ್ ಅಭ್ಯಾಸಕ್ಕೆ ತಡೆ

ಚೆನ್ನೈ (ಪಿಟಿಐ): ಶನಿವಾರ ಮಳೆ ಸುರಿದ ಕಾರಣ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನೆಟ್ಸ್ ಅಭ್ಯಾಸವು ರದ್ದಾಯಿತು.

ಸಂಜೆ ಹೊತ್ತಿನಲ್ಲಿ ಕೋಲ್ಕತ್ತ ತಂಡದ ಆಟಗಾರರು ವಾರ್ಮ್ ಅಪ್ ನಡೆಸಿದರು. ಆಗ ಮಳೆ ಆರಂಭವಾಯಿತು. ನಂತರ ಅವರೆಲ್ಲರೂ ಒಳಾಂಗಣದಲ್ಲಿ ಅಭ್ಯಾಸ ನಡೆಸಬೇಕಾಯಿತು.

ಮೈದಾನದ ಸಿಬ್ಬಂದಿಯು ಪಿಚ್‌ಗಳಿಗೆ ಕವರ್ಸ್ ಹಾಕಿದರು.

ಪಂದ್ಯ ನಡೆಯಲಿರುವ ಭಾನುವಾರ ಮಳೆ ಸುರಿಯುವ ಕುರಿತು ಹವಾಮಾನ ಇಲಾಖೆಯು ಖಚಿತಪಡಿಸಿಲ್ಲ. ಆದರೆ ಬಂಗಾಳ ಕೊಲ್ಲಿಯಲ್ಲಿ ಬೀಸುತ್ತಿರುವ ಚಂಡಮಾರುತದ ಪರಿಣಾಮ ಇಲ್ಲಿಯೂ ಮಳೆ ಆಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಇಂಗ್ಲೆಂಡ್ ಕನಸು ನನಸಾದ ಕ್ಷಣ...

ಟಿ20 ವಿಶ್ವಕಪ್ ಮೆಲುಕು

ಐಸಿಸಿ ಟಿ20 ಎರಡನೇ ವಿಶ್ವಕಪ್ ಟೂರ್ನಿ (2009 ಜೂನ್ 5–21) ಮುಗಿದು ಕೇವಲ 10 ತಿಂಗಳು ಕಳೆಯುವಷ್ಟರಲ್ಲಿ ಮೂರನೇ ಟಿ20 ವಿಶ್ವಕಪ್ (2010, 30 ಏಪ್ರಿಲ್ – 16 ಮೇ) ನಡೆಯಿತು. 2011ರಲ್ಲಿ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿ ನಿಗದಿಯಾಗಿದ್ದುದು ಇದಕ್ಕೆ ಕಾರಣ. ವೆಸ್ಟ್ ಇಂಡೀಸ್‌ನ ಮೂರು ತಾಣಗಳಲ್ಲಿ– ಬ್ರಿಜ್‌ಟೌನ್ (ಬಾರ್ಬಾಡೋಸ್), ಪ್ರಾವಿಡೆನ್ಸ್ (ಗಯಾನ) ಮತ್ತು ಗ್ರಾಸ್ ಐಲ್ (ಸೇಂಟ್ ಲೂಸಿಯಾ)ನಲ್ಲಿ ಪಂದ್ಯಗಳು ನಡೆದವು.

ಇಂಗ್ಲೆಂಡ್ ತಂಡದವರು ಇಲ್ಲಿ ಟ್ರೋಫಿ ಎತ್ತುವ ಮೂಲಕ ಐಸಿಸಿಯ ಟೂರ್ನಿಯೊಂದನ್ನು ಗೆಲ್ಲುವ ದೀರ್ಘಕಾಲದ ಕನಸನ್ನು ನನಸು ಮಾಡಿಕೊಂಡರು. ಏಷ್ಯಾ ಹೊರತಾದ ತಂಡ ಮೊದಲ ಸಲ ಚುಟುಕು ವಿಶ್ವಕಪ್‌ನಲ್ಲಿ ಚಾಂಪಿಯನ್ ಆಯಿತು. ಮೊದಲೆರಡು ವಿಶ್ವಕಪ್‌ಗಳಲ್ಲಿ ಕ್ರಮವಾಗಿ ಭಾರತ ಮತ್ತು ಪಾಕಿಸ್ತಾನ ಚಾಂಪಿಯನ್ ಆಗಿದ್ದವು.

ಅಫ್ಗಾನಿಸ್ತಾನ ಇದೇ ಮೊದಲ ಬಾರಿ ಪ್ರಮುಖ ಟೂರ್ನಿಯೊಂದರಲ್ಲಿ ಆಡುವ ಅವಕಾಶ ಪಡೆಯಿತು. ಅರ್ಹತಾ ಟೂರ್ನಿಯ ಫೈನಲ್‌ನಲ್ಲಿ ಆ ತಂಡ, ಐರ್ಲೆಂಡ್ ಮೇಲೆ ಜಯಗಳಿಸಿತ್ತು. ಎರಡೂ ತಂಡಗಳು ವಿಶ್ವಕಪ್‌ನಲ್ಲಿ ಆಡಿದವು.

ಸುರೇಶ್ ರೈನಾ
ಎಎಫ್‌ಪಿ ಚಿತ್ರ

- ಮೂರನೇ ವಿಶ್ವಕಪ್: 2010
- ಆತಿಥ್ಯ: ವೆಸ್ಟ್ ಇಂಡೀಸ್
- ವಿಜೇತ ತಂಡ: ಇಂಗ್ಲೆಂಡ್
- ರನ್ನರ್ ಅಪ್: ಆಸ್ಟ್ರೇಲಿಯಾ
- ಪಂದ್ಯಗಳು: 27
- ಸರಣಿ ಶ್ರೇಷ್ಠ: ಕೆವಿನ್ ಪೀಟರ್ಸನ್ (ಇಂಗ್ಲೆಂಡ್)
- ಶ್ರೇಷ್ಠ ಬ್ಯಾಟರ್: ಮಹೇಲ ಜಯವರ್ಧನೆ (ಶ್ರೀಲಂಕಾ, 302 ರನ್)
- ಶ್ರೇಷ್ಠ ಬೌಲರ್: ಡರ್ಕ್ ನ್ಯಾನೆಸ್ (ಆಸ್ಟ್ರೇಲಿಯಾ, 14 ವಿಕೆಟ್)

ಪ್ರಮುಖ ಅಂಶಗಳು

- ಧೋನಿ ಸತತ ಮೂರನೇ ಬಾರಿ ಟಿ20 ವಿಶ್ವಕಪ್ ನಾಯಕರಾಗಿದ್ದರು. ಮೊದಲ ಆವೃತ್ತಿಯ ವಿಜೇತ ಭಾರತ ಮತ್ತೊಮ್ಮೆ ಸೂಪರ್ 8 ಹಂತದಲ್ಲಿ ಮುಗ್ಗರಿಸಿತು. ಆಡಿದ ಮೂರೂ ಪಂದ್ಯಗಳಲ್ಲಿ ಸೋಲನುಭವಿಸಿತು.
- ಸುರೇಶ್ ರೈನಾ, 'ಸಿ' ಗುಂಪಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 101 (60 ಎಸೆತ) ರನ್ ಬಾರಿಸಿದರು. ಇದು ಟಿ20 ಅಂತರರಾಷ್ಟ್ರೀಯ ಪಂದ್ಯದಲ್ಲಿ ಭಾರತ ಆಟಗಾರನೊಬ್ಬನ ಮೊದಲ ಶತಕ.
- ಮೇ 16ರಂದು ನಡೆದ ಫೈನಲ್‌ನಲ್ಲಿ, ಮೈಕೆಲ್ ಕ್ಲಾರ್ಕ್ ಆಸ್ಟ್ರೇಲಿಯಾ ಮೊದಲು ಬ್ಯಾಟಿಂಗ್ ಮಾಡಿ 6 ವಿಕೆಟ್‌ಗೆ 147 ರನ್ ಹೊಡೆಯಿತು. 8 ರನ್‌ಗೆ 3 ವಿಕೆಟ್ ಕಳೆದುಕೊಂಡಾಗ ಡೇವಿಡ್ ಹಸ್ಸಿ 59 (54ಎ) ಅರ್ಧ ಶತಕ ಬಾರಿಸಿ ಕುಸಿತ ತಪ್ಪಿಸಿದ್ದರು. ಪಾಲ್ ಕಾಲಿಂಗ್‌ವುಡ್ ನೇತೃತ್ವದ ಇಂಗ್ಲೆಂಡ್ ಇನ್ನೂ ಮೂರು ಓವರ್ ಬಾಕಿಯಿರುವಂತೆ 3 ವಿಕೆಟ್‌ಗೆ 148 ರನ್ ಹೊಡೆಯಿತು. ಕ್ರೆಗ್ ಕಿಸ್ವೆಟರ್ 63 (49ಎ) ಅರ್ಧ ಶತಕ ಬಾರಿಸಿ ಪಂದ್ಯದ ಆಟಗಾರ ಎನಿಸಿದರು.

ಆಧಾರ: ಕ್ರೀಡಾ ವೆಬ್‌ಸೈಟ್‌ಗಳು

ಪ್ಯಾರಾ ಅಥ್ಲೆಟಿಕ್ಸ್: ಸಿಮ್ರಾನ್‌ಗೆ ಸ್ವರ್ಣ

ಕೊಬೆ, ಜಪಾನ್ (ಪಿಟಿಐ): ಭಾರತದ ಅಥ್ಲೀಟ್‌ಗಳು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಅಭಿಯಾನವನ್ನು ಅಭೂತಪೂರ್ವ ಯಶಸ್ಸಿನೊಂದಿಗೆ ಮುಗಿಸಿದರು. ದಾಖಲೆಯ 17 ಪದಕದೊಂದಿಗೆ ಭಾರತ ಪದಕ ಪಟ್ಟಿಯಲ್ಲಿ ಆರನೇ ಸ್ಥಾನ ಪಡೆಯಿತು. ಕೂಟದ ಕೊನೆಯ ದಿನ ದೆಹಲಿಯ ಓಟಗಾರ್ತಿ ಸಿಮ್ರಾನ್ ಶರ್ಮಾ ಸ್ವರ್ಣ ಗೆದ್ದರು.

ಮಹಿಳೆಯರ 200 ಮೀಟರ್ (ಟಿ12) ಸ್ಪರ್ಧೆಯಲ್ಲಿ ಸಿಮ್ರಾನ್ 24.95 ಸೆಕೆಂಡುಗಳಲ್ಲಿ ಗುರಿ ತಲುಪಿ ಅಗ್ರಸ್ಥಾನಿಯಾದರು. ಡೊಮಿನಿಕಾದ ಡಾರ್ಲೆನಿಸ್ ಡೆ ಲಾ ಸೆವೆರಿನೊ (25.08 ಸೆ) ಮತ್ತು ಲೋರೆನ್ ಗೋಮ್ಸ್ ಡಿ ಅಗುಯಾರ್ (25.40) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಮಹಿಳಾ ಕಾಂಪೌಂಡ್ ತಂಡಕ್ಕೆ ಚಿನ್ನ

ಯೆಚಿಯಾನ್, ದಕ್ಷಿಣ ಕೊರಿಯಾ (ಪಿಟಿಐ): ಜ್ಯೋತಿ ಸುರೇಖಾ ವೆನ್ನಂ, ಪರ್ಣೀತ್ ಕೌರ್ ಮತ್ತು ಅದಿತಿ ಸ್ವಾಮಿ ಅವರನ್ನು ಒಳಗೊಂಡ ಭಾರತ ಮಹಿಳಾ ಕಾಂಪೌಂಡ್ ತಂಡವು ಸತತ ಮೂರನೇ ಆರ್ಚರಿ ವಿಶ್ವಕಪ್‌ನಲ್ಲಿ (ಸ್ಟೇಜ್ 2) ಚಿನ್ನದ ಪದಕವನ್ನು ಗೆದ್ದುಕೊಂಡರೆ, ಭಾರತದ ಮಿಶ್ರ ತಂಡವು ಬೆಳ್ಳಿಗೆ ತೃಪ್ತಿಪಟ್ಟಿತು.

ಶನಿವಾರ ನಡೆದ ಫೈನಲ್ ಸ್ಪರ್ಧೆಯಲ್ಲಿ ವಿಶ್ವ ಅಗ್ರಮಾನ್ಯ ಭಾರತ ತಂಡವು 232– 226 ಅಂತರದಿಂದ ಹಜಾಲ್ ಬುರುನ್, ಅಯ್ಸೆ ಬೆರಾ ಸುಜರ್ ಮತ್ತು ಬೇಗಮ್ ಯುವಾ ಅವರನ್ನು ಒಳಗೊಂಡ ಟರ್ಕಿ ತಂಡವನ್ನು ಮಣಿಸಿತು. ಜ್ಯೋತಿ, ಪರ್ಣೀತ್ ಮತ್ತು ವಿಶ್ವ ಚಾಂಪಿಯನ್ ಅದಿತಿ ಈ ಮೂಲಕ ವಿಶ್ವಕಪ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಚಿನ್ನದ ಸಾಧನೆ ಮೆರೆದರು.

'ಈ ಸಾಧನೆಯನ್ನು ನಿಜಕ್ಕೂ ನಂಬಲಾಗುತ್ತಿಲ್ಲ. ನಾವೆಲ್ಲರೂ ಸ್ಥಿರ ಪ್ರದರ್ಶನ ನೀಡುತ್ತಿದ್ದೇವೆ. ಹೀಗಾಗಿ, ಪದಕ ಗೆಲ್ಲಲು ಸಾಧ್ಯವಾಯಿತು' ಎಂದು ಅದಿತಿ ಪ್ರತಿಕ್ರಿಯಿಸಿದರು. ಏಷ್ಯನ್ ಕ್ರೀಡಾಕೂಟದ ಚಾಂಪಿಯನ್ ಜ್ಯೋತಿ ಜ್ಯೋತಿ ಮತ್ತು ಪ್ರಿಯಾಂಶು ಅವರನ್ನು ಒಳಗೊಂಡ ಮಿಶ್ರ ತಂಡವು ಎರಡು ಪಾಯಿಂಟ್ಸ್‌ಗಳಿಂದ ಅಗ್ರಸ್ಥಾನ ಕಳೆದುಕೊಂಡಿತು. ಅಮೆರಿಕದ ಒಲಿವಿಯಾ ಡೀನ್ ಮತ್ತು ಸಾಯರ್ ಸುಲ್ಲಿವನ್ 155–153 ಅಂತರದಿಂದ ಚಿನ್ನ ಗೆದ್ದರು.

ಚಿನ್ನ ಗೆದ್ದ ಭಾರತ ಮಹಿಳಾ ಕಾಂಪೌಂಡ್ ಆರ್ಚರಿ ತಂಡದ ಸ್ಪರ್ಧಿಗಳಾದ ಅದಿತಿ ಸ್ವಾಮಿ, ಜ್ಯೋತಿ ಸುರೇಖಾ ವೆನ್ನಂ ಮತ್ತು ಪರ್ಣೀತ್ ಕೌರ್ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಫೈನಲ್‌ಗೆ ಸಿಂಧು ಲಗ್ಗೆ

ಕ್ವಾಲಾಲಂಪುರ (ಪಿಟಿಐ): ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ಪಿ.ವಿ.ಸಿಂಧು ಶನಿವಾರ ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯ ಸಿಂಗಲ್ಸ್‌ನಲ್ಲಿ ಥಾಯ್ಲೆಂಡ್‌ನ ಬುಸಾನನ್ ಒಂಗ್ಬಾಮ್‌ರುಂಗ್ಫಾನ್ ಅವರನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಹಾಕಿದರು.

ಎರಡು ವರ್ಷಗಳಿಂದ ಪ್ರಶಸ್ತಿಯ ಬರ ಎದುರಿಸುತ್ತಿರುವ ಐದನೇ ಶ್ರೇಯಾಂಕದ ಸಿಂಧು, 13-21, 21-16, 21-12 ರಿಂದ ವಿಶ್ವ ರ‍್ಯಾಂಕಿಂಗ್‌ನಲ್ಲಿ 20ನೇ ಸ್ಥಾನದಲ್ಲಿರುವ ಬುಸಾನನ್ ಅವರನ್ನು ಹಿಮ್ಮೆಟ್ಟಿಸಿದರು. ಆಕ್ಸಿಯಾಟಾ ಅರೆನಾದಲ್ಲಿ ಸಿಂಧು ಎದುರಾಳಿ ಆಟಗಾರ್ತಿಯನ್ನು ಮಣಿಸಲು 88 ನಿಮಿಷ ತೆಗೆದುಕೊಂಡರು.

2022ರಲ್ಲಿ ಸಿಂಗಪುರ ಓಪನ್ ಕಿರೀಟ ಮುಡಿಗೇರಿಸಿಕೊಂಡ ಬಳಿಕ ಭಾರತದ 26 ವರ್ಷದ ಆಟಗಾರ್ತಿ ಯಾವುದೇ ಪ್ರಶಸ್ತಿಯನ್ನು ಗೆದ್ದಿಲ್ಲ. ಕಳೆದ ವರ್ಷ ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್‌ನಲ್ಲಿ ರನ್ನರ್ ಅಪ್ ಆಗಿದ್ದರು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು, ಈ ಬಾರಿ ಪ್ಯಾರಿಸ್‌ನಲ್ಲಿ ನಡೆಯುವ ಒಲಿಂಪಿಕ್ಸ್‌ನಲ್ಲಿ ಮೂರನೇ ಪದಕದ ಮೇಲೆ ಕಣ್ಣಿಟ್ಟಿದ್ದಾರೆ. ಬಹುಕಾಲದ ಬಳಿಕ ಲಯಕ್ಕೆ ಮರಳಿರುವ ವಿಶ್ವದ 15ನೇ ರ‍್ಯಾಂಕ್‌ನ ಆಟಗಾರ್ತಿ, ಫೈನಲ್ ಹಣಾಹಣಿಯಲ್ಲಿ ಚೀನಾದ ವಾಂಗ್ ಝಿ ಯಿ ಅವರನ್ನು ಎದುರಿಸಲಿದ್ದಾರೆ.



ಗೆಲುವಿನ ಸಂಭ್ರಮದಲ್ಲಿ ಭಾರತದ ಪಿ.ವಿ. ಸಿಂಧು –ಎಕ್ಸ್ ಚಿತ್ರ

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ ಇಂದಿನಿಂದ

ಭಾವನಾತ್ಮಕ ವಿದಾಯಕ್ಕೆ ಸಜ್ಜಾದ ನಡಾಲ್

ಪ್ಯಾರಿಸ್ (ಎಎಫ್‌ಪಿ): ಸ್ಪೇನ್‌ನ ಮಹಾನ್ ಆಟಗಾರ ರಫೇಲ್ ನಡಾಲ್ ಅವರು ರೋಲಂಡ್ ಗ್ಯಾರೋಸ್‌ನಲ್ಲಿ ಬಹುತೇಕ ಕೊನೆಯ ಬಾರಿ ಆಡಲಿದ್ದಾರೆ. ಭಾನುವಾರ ಆರಂಭವಾಗುವ ಫ್ರೆಂಚ್ ಓಪನ್ ಟೂರ್ನಿಯಲ್ಲಿ ಅವರ 14 ಸಿಂಗಲ್ಸ್ ಪ್ರಶಸ್ತಿಗಳ ಸಾಲಿಗೆ ಇನ್ನೊಂದು ಸೇರುವ ಸಾಧ್ಯತೆ ಕ್ಷೀಣ. ಆದರೆ ಇಲ್ಲಿ ಅವರ ವರ್ಚಸ್ಸು ಮತ್ತು ದಾಖಲೆಯನ್ನು ಭವಿಷ್ಯದಲ್ಲಿ ಬೇರಾವುದೇ ಆಟಗಾರ ಸರಿಗಟ್ಟುವ ಸಾಧ್ಯತೆ ದೂರ.

22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಒಡೆಯ ನಡಾಲ್ 2005ರಲ್ಲಿ ಮೊದಲ ಸಲ ಇಲ್ಲಿ ಗೆದ್ದಾಗ ಅವರಿಗೆ ಹದಿಹರೆಯ. ಇನ್ನು 9 ದಿನಗಳಲ್ಲಿ (ಜೂನ್ 3) ಅವರು 38ನೇ ವರ್ಷಕ್ಕೆ ಕಾಲಿಡಲಿದ್ದಾರೆ.

ವಿಶ್ವದ ಅಗ್ರಮಾನ್ಯ ಆಟಗಾರನಾಗಿದ್ದ ಅವರು ಗಾಯಾಳಾದ ನಂತರ ಈಗ 276ನೇ ಸ್ಥಾನಕ್ಕೆ ಕುಸಿದಿದ್ದಾರೆ. ಈ ಬಾರಿಯ ಫ್ರೆಂಚ್ ಓಪನ್‌ನಲ್ಲಿ ಅವರು ಶ್ರೇಯಾಂಕರಹಿತ ಆಟಗಾರ.

ಸೋಮವಾರ ಮೊದಲ ಸುತ್ತಿನಲ್ಲಿ ಅವರಿಗೆ ಬಲಿಷ್ಠ ಆಟಗಾರ– ವಿಶ್ವದ ನಾಲ್ಕನೇ ಕ್ರಮಾಂಕದ ಅಲೆಕ್ಸಾಂಡರ್ ಜ್ವರೇವ್ (ಜರ್ಮನಿ) ಎದುರಾಗಿದ್ದಾರೆ.

ಇನ್ನೊಬ್ಬ ಘಟಾನುಘಟಿ ಆಟಗಾರ, 24 ಬಾರಿಯ ಗ್ರ್ಯಾಂಡ್‌ಸ್ಲಾಮ್ ವಿಜೇತ ನೊವಾಕ್ ಜೊಕೊವಿಚ್ ಅವರು ಮೂರು ಬಾರಿ ಫ್ರೆಂಚ್ ಓಪನ್ ಗೆದ್ದಿದ್ದಾರೆ. ಆದರೆ 37 ವರ್ಷದ ಸರ್ಬಿಯಾದ ಆಟಗಾರ ಈ ವರ್ಷ ಯಾವುದೇ ಪ್ರಮುಖ ಪ್ರಶಸ್ತಿ ಗೆದ್ದುಕೊಂಡಿಲ್ಲ.

ವಿಶ್ವದ ಎರಡನೇ ನಂಬರ್ ಆಟಗಾರ ಹಾಗೂ ಆಸ್ಟ್ರೇಲಿಯನ್ ಓಪನ್ ಚಾಂಪಿಯನ್ ಯಾನಿಕ್ ಸಿನ್ನರ್ ಅವರಿಗೆ ಮೊದಲ ಸುತ್ತಿನ ಎದುರಾಳಿ ಅಮೆರಿಕದ ಕ್ರಿಸ್ ಯುಬ್ಯಾಂಕ್ಸ್. ಇಲ್ಲಿ ಉತ್ತಮ ಪ್ರದರ್ಶನ ನೀಡಿದಲ್ಲಿ ಸಿನ್ನರ್ ಅವರಿಗೆ ಜೊಕೊವಿಚ್ ಅವರನ್ನು ಹಿಂದಿಕ್ಕಲು ಅವಕಾಶವಿದೆ. ಮೂರನೇ ಕ್ರಮಾಂಕದ ಆಟಗಾರ ಕಾರ್ಲೋಸ್ ಅಲ್ಕರಾಝ್ ಅವರಿಗೆ ಕ್ವಾಲಿಫೈಯರ್, ಅಮೆರಿಕದ ಜೆ.ಜೆ.ವೋಲ್ಫ್ ಎದುರಾಳಿ.

'ನಿವೃತ್ತಿ ಪಕ್ಕಾ ಎನ್ನಲಾರೆ': 'ಈ ಬಾರಿಯದ್ದು ನನ್ನ ಕೊನೆಯ ಫ್ರೆಂಚ್ ಓಪನ್ ಎಂದು ನೂರಕ್ಕೆ ನೂರರಷ್ಟು ಖಚಿತವಾಗಿ ಹೇಳಲಾರೆ. ಸದ್ಯ ನಾನು ಆಟವನ್ನು ಆಸ್ವಾದಿಸುತ್ತಿದ್ದೇನೆ' ಎಂದು ಟೂರ್ನಿಗೆ ಪೂರ್ವಭಾವಿಯಾಗಿ ನಡಾಲ್ ಸೂಚ್ಯವಾಗಿ ಹೇಳಿದ್ದಾರೆ.

ಶ್ವಾಂಟೆಕ್ ಫೆವರೀಟ್: ಮಹಿಳಾ ಸಿಂಗಲ್ಸ್‌ನಲ್ಲಿ ಪೋಲೆಂಡ್‌ನ ಇಗಾ ಶ್ವಾಂಟೆಕ್, ತಮ್ಮ ನಾಲ್ಕನೇ ಫ್ರೆಂಚ್ ಓಪನ್ ಪ್ರಶಸ್ತಿಯ ನಿರೀಕ್ಷೆಯೊಂದಿಗೆ ಕಣಕ್ಕಿಳಿಯಲಿದ್ದಾರೆ. ಅವರ ಹಾದಿಗೆ ಸದ್ಯ ತೊಡಕಾಗಬಲ್ಲ ಆಟಗಾರ್ತಿ ಎಂದರೆ ಬೆಲಾರಸ್‌ನ ಅರಿನಾ ಸಬಲೆಂಕಾ.

ಹಾಲಿ ಆಸ್ಟ್ರೇಲಿಯನ್ ಓಪನ್ ಚಾಂಪಿಯನ್ ಆಗಿರುವ ಸಬಲೆಂಕಾ ಕಳೆದ ಆರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಕಡೇಪಕ್ಷ ಸೆಮಿಫೈನಲ್ ತಲುಪಿದ್ದಾರೆ.



ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ನಡಾಲ್
ಎಎಫ್‌ಪಿ ಚಿತ್ರ

ವಿಶ್ವ ಬಾಕ್ಸಿಂಗ್: ಅಭಿಮನ್ಯು ಮುನ್ನಡೆ

ಬ್ಯಾಂಕಾಕ್ (ಪಿಟಿಐ): ರಾಷ್ಟ್ರೀಯ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತ ಅಭಿಮನ್ಯು ಲೂರಾ, ಒಲಿಂಪಿಕ್ಸ್ ಬಾಕ್ಸಿಂಗ್ ವಿಶ್ವ ಕ್ವಾಲಿಫೈಯರ್ ಟೂರ್ನಿಯಲ್ಲಿ ಬಲ್ಗೇರಿಯಾದ ಕ್ರಿಸ್ಟಿಯಾನ್ ನಿಕೊಲವ್ ಅವರನ್ನು ಮಣಿಸಿ ಎರಡನೇ ಸುತ್ತಿಗೆ ಮುನ್ನಡೆದರು.

ಶನಿವಾರ ನಡೆದ ಪುರುಷರ 80 ಕೆಜಿ ವಿಭಾಗದ ಮೊದಲ ಸುತ್ತಿನ ಹಣಾಹಣಿಯಲ್ಲಿ ಭಾರತದ 21 ವರ್ಷದ ವಯಸ್ಸಿನ ಬಾಕ್ಸರ್ ಲೂರಾ 3–0ಯಿಂದ ಹತ್ತು ಬಾರಿಯ ಬಲ್ಗೇರಿಯನ್ ರಾಷ್ಟ್ರೀಯ ಚಾಂಪಿಯನ್ ನಿಕೊಲವ್ ಅವರನ್ನು ಮಣಿಸಿದರು.

ಶುಕ್ರವಾರ 57 ಕೆಜಿ ವಿಭಾಗದಲ್ಲಿ ಸಚಿನ್ ಸಿವಾಚ್ ಅವರು ನ್ಯೂಜಿಲೆಂಡ್‌ನ ಅಲೆಕ್ಸ್ ಮುಕುಕಾ ವಿರುದ್ಧ ಜಯಗಳಿಸಿ ಭಾರತದ ಗೆಲುವಿನ ಖಾತೆ ತೆರೆದಿದ್ದರು.

ಎರಡನೇ ಕ್ವಾಲಿಫೈಯರ್ ಟೂರ್ನಿಯಲ್ಲಿ ಭಾರತ ಏಳು ಪುರುಷರು ಮತ್ತು ಮೂರು ಮಹಿಳಾ ಬಾಕ್ಸರ್‌ಗಳು ಸ್ಪರ್ಧಿಸುತ್ತಿದ್ದಾರೆ.